ರಂಜನೆ ಬೋಧನೆ ಪ್ರಬೋಧನೆ


ಲಂಕೇಶ್

ಅಕ್ಟೋಬರ್ 17, 2012 ಪುಟ 20 ರೂ. 14/-



ಇತಿಹಾಸ ಬರೆದ ಅಂಗತ್ವ ಅಲ್ಪಸಂಖ್ಯಾತೆ

ಕಾವೇರಿ ಅನ್ಯಾಯ



ಅವಿವೇಕಿ ಶೆಟ್ಟರ್ ವಂಚಕ ಕಾಂಗ್ರೆಸ್




ಈಶ್ವರಿ ಮಳ್ಳ ಅಳಿಯ ಗೋಮಾಳ ಕಳ್ಳ



TSS 101 ಕೋಟಿ




ಗಡ್ಕರಿಯ ಮುಖವಾಡ ಕಳಚಿ ಬಿತ್ತು



ರಾಣೆಬೆನ್ನೂರು ಕಾಂಗ್ರೆಸ್‌ಗೆ ಕೋಳಿವಾಡನೇ ಪಾಯಿಸನ್

ಎರಡು ಹೊಸ ಪುಸ್ತಕಗಳು



ಮಾವೋವಾದಿ ಚಳವಳಿಯ ವಿಮರ್ಶೆ

ನಮ್ಮ ತಂಡದಿಂದ ಶೀಘ್ರದಲ್ಲೇ ಎರಡು ಹೊಸ ಪುಸ್ತಕಗಳು ನಿಮ್ಮ ಕೈ ಸೇರಲಿವೆ.



ಇದರಲ್ಲಿ ಮೊದಲನೆಯ ಪುಸ್ತಕದ ಶೀರ್ಷಿಕೆ 'ಭಾರತದ ಕ್ರಾಂತಿ ಹಾಗೂ ಮಾವೋವಾದಿ ಚಳವಳಿ'! ಸುಮಾರು ಮುನ್ನೂರು ಪುಟಗಳಷ್ಟಾಗ ಬಹುದಾದ ಈ ಪುಸ್ತಕವು ಮಾರ್ಕ್ಸ್‌ವಾದ ಲೆನಿನ್‌ವಾದ ಹಾಗೂ ಮಾವೋವಾದದ ಚಾರಿತ್ರಿಕ ಹಿನ್ನೆಲೆ, ಅವು ಬೆಳೆದು ವಿಕಾಸಗೊಂಡ ರೀತಿಯನ್ನು ವಿವರಿಸಿದೆ. ಬಹಳ ಮುಖ್ಯವಾಗಿ ಇಂಡಿಯಾ ದೇಶದಲ್ಲಿ ಈ ವಿಚಾರಧಾರೆ ಬೆಳೆದುಬಂದ ಬಗೆ, ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು ಹಾಗೂ ಎಡಪಂಥೀಯ ಸಶಸ್ತ್ರ ಹೋರಾಟಗಳ ಇತಿಹಾಸ ಹಾಗೂ ವರ್ತಮಾನದ ಸಾಧನೆ-ವೈಫಲ್ಯಗಳನ್ನು, ಏಳು-ಬೀಳು ಗಳನ್ನು ದಾಖಲಿಸಿರುವ ಒಂದು ಅಪರೂಪದ ಪುಸ್ತಕವಾಗಲಿದೆ.

ಕನ್ನಡದಲ್ಲಿ ಮಾರ್ಕ್ಸ್‌ವಾದಿ ಸಿದ್ಧಾಂತಕ್ಕೆ ಸಂಬಂಧಿಸಿದ ಅನೇಕ ಪುಸ್ತಕಗಳು ಇವೆಯಾದರೂ ಕೆಲವಂತೂ ಕಬ್ಬಿಣದ ಕಡಲೆ. ಇನ್ನು ನಕ್ಸಲೈಟ್ ಅಥವಾ ಮಾವೋವಾದಿ ಸಿದ್ಧಾಂತ ಹಾಗೂ ಹೋರಾಟಗಳನ್ನು ಕುರಿತಂತೆ ಕನ್ನಡದಲ್ಲಿ ಕೆಲವು ಪುಸ್ತಕಗಳಿವೆ. ಲೇಖನ, ಚರ್ಚೆಗಳು ಇಲ್ಲಿ ಹೊಸದೇನೂ ಅಲ್ಲ. ಈಗಿನ ಹೊಸ ಪುಸ್ತಕ ಮಾವೋವಾದಿ ಹೋರಾಟ ಕುರಿತಂತೆ ಇನ್ನಷ್ಟು ಆಳವಾದ ಹಾಗೂ ಹೊಸ ಆಯಾಮಗಳ ನೆಲೆಯಲ್ಲಿ ವಿವರವಾಗಿ ಚರ್ಚಿಸುವ ಉದ್ದೇಶ ಹೊಂದಿದೆ. ಚಾರು ಪ್ರಕಾಶನದಿಂದ ಪ್ರಕಟವಾಗಲಿರುವ ಈ ಪುಸ್ತಕವು ಇಂಡಿಯಾದ ಜನರ ಹೋರಾಟದ ರಾಜಕೀಯ ಹಾಗೂ ಮಾವೋವಾದಿ ಚಳವಳಿ ಕುರಿತಂತೆ ಕರ್ನಾಟಕದ ಜನತೆಯೊಂದಿಗೆ ಹೊಸ ಸಂವಾದ ಹುಟ್ಟುಹಾಕುವ ಆಶಯ ಹೊಂದಿದೆ.



ಭೂಗತ ರಾಜಕೀಯ ಕಾರ್ಯಕರ್ತರೊಬ್ಬರು ಬರೆದಿರುವ ಪುಸ್ತಕ ಇದು! ಹಾಗಾಗಿ ಮಾರ್ಕ್ಸಿಸ್ಟ್ ಸಿದ್ಧಾಂತ, ಆಚರಣೆ ಗಳು ಹಾಗೂ ಮಾವೋವಾದಿ ಚಳವಳಿ ಕುರಿತಂತೆ ವಿಭಿನ್ನವಾದ, ಸರಳ ನಿರೂಪಣೆ ಯ ತರ್ಕ-ವಿಶ್ಲೇಷಣೆಗಳ ಪುಸ್ತಕ ಇದಾಗಲಿದೆ ಎಂಬುದನ್ನಷ್ಟೇ ಈಗ ಹೇಳಲು ಸಾಧ್ಯ.

ಆಕ್ಟೋಬರ್ 20 ರಂದು ಬೆಂಗ ಳೂರಿನಲ್ಲಿ ಈ ಪುಸ್ತಕ ಬಿಡುಗಡೆಯಾಗಲಿದೆ.

ಕಲ್ಕುಳಿ ವಿಠಲ ಹೆಗ್ಡೆಯವರ ಪುಸ್ತಕ

ಗೆಳೆಯ ಕಲ್ಕುಳಿ ವಿಠಲ ಹೆಗ್ಡೆಯವರ ಬರವಣಿಗೆಯ ಸಾಮರ್ಥ್ಯ ಹಾಗೂ ಸಾಧ್ಯತೆಗಳನ್ನು ತೋರುವ 'ಮಂಗನ ಬ್ಯಾಟೆ' ಪುಸ್ತಕ ಬರುವ ನವೆಂಬರ್ 3 ರ ಸಂಜೆ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ಬಿಡುಗಡೆಯಾಗುತ್ತಿದೆ. ಕಳೆದ ಮೂರು ದಶಕಗಳಿಂದ ಮಲೆನಾಡಿನಲ್ಲಿ ಸಾಮಾಜಿಕ ನ್ಯಾಯದ, ಪರಿಸರ ರಕ್ಷಣೆಯ, ಜನಪರ ಕಾಳಜಿಗಳ ಹೋರಾಟದಲ್ಲಿ ಇರುವ ವಿಠಲ್ ಒಬ್ಬ ಬರಹಗಾರನಾಗಿಯೂ ಈಗ ತಮ್ಮನ್ನು reinvent ಮಾಡಿಕೊಳ್ಳಲು ಹೊರಟಿರುವುದು ಖುಷಿ ತರುತ್ತಿದೆ. ಕಳೆದ ಅರ್ಧ ಶತಮಾನದ ಮಲೆನಾಡಿಗರ ಕೃಷಿ-ಆರ್ಥಿಕತೆ-ಸಾಮಾಜಿಕ ಹಾಗೂ ರಾಜಕೀಯ ಬದುಕಿನ ಚಲನೆಗಳ ನಾಡಿಮಿಡಿತ ವಿಠಲ್‌ಗೆ ನೇರ ಅನುಭವಿಸಿಯೇ ಗೊತ್ತಿದೆ. ಅಂತವರೊಬ್ಬರ ಕೈಗೆ ಈಗ ಲೇಖನಿಯೂ ಬಂದರೆ ಅದು ಖಂಡಿತಾ ಖಾಲಿ ಇರುವ ಸ್ಥಳವನ್ನು ತುಂಬಿದಂತೆ.

ಲಂಕೇಶ್‌ನಲ್ಲಿ 'ಮಂಗನ ಬ್ಯಾಟೆ' ಸೀರಿಯಲ್ಲಾಗಿ ಪ್ರಕಟವಾಗುತ್ತಿದ್ದಾಗಲೇ ನಮ್ಮ ಓದುಗರು ಮೆಚ್ಚಿಕೊಂಡಿದ್ದರು. ಅದೀಗ ಕೊಂಚ ವಿಸ್ತಾರಗೊಂಡು ಲಂಕೇಶ್ ಪ್ರಕಾಶನದಿಂದ ಪುಸ್ತಕವಾಗಿ ಬರುತ್ತಿದೆ. ಕಲಾವಿದ ಶೇಖರ್ ಅವರ ಚಿತ್ರಗಳು ಈ ಪುಸ್ತಕಕ್ಕೆ ಇನ್ನಷ್ಟು ಜೀವ ನೀಡಿವೆ. 'ಮಂಗನ ಬ್ಯಾಟೆ' ನವೆಂಬರ್ 3 ರಂದು ನಿಮ್ಮ ಕೈ ಸೇರಲಿದೆ.

ತೇರಳಿ ಶೇಖರ್ ಎಂಬ ಸಾಹಿತ್ಯ ಸೇತುವೆ

ಕನ್ನಡ ಹಾಗೂ ಮಲೆಯಾಳಿ ಸಾಹಿತ್ಯ ವಿನಿಮಯದ ಅನೇಕ ಸೇತುವೆಗಳು ಈಗಾಗಲೇ ಇವೆ. ಕಮಲಾ ದಾಸ್, ತಕಜಿ ಶಿವಶಂಕರ ಪಿಳ್ಳೈ, ಕುರುಪ್, ಇಂದು ಮೆನನ್, ಕೇಶವದೇವ್, ಎಂ.ಟಿ. ವಾಸುದೇವನ್ ನಾಯರ್‌ರ ಬರಹಗಳು ಕನ್ನಡಕ್ಕೂ ಹಾಗೂ ಕನ್ನಡದ ಲಂಕೇಶ್, ತೇಜಸ್ವಿ, ಅನಂತಮೂರ್ತಿ, ದೇವನೂರು, ಕಾರಂತ, ಆಲನಳ್ಳಿ, ಸಾರಾ, ವೈದೇಹಿ, ನೇಮಿಚಂದ್ರ, ನಿರಂಜನ ಕೃತಿಗಳು ಮಲೆಯಾಳಕ್ಕೂ ಅನುವಾದಗೊಂಡಿವೆ. ಇಲ್ಲಿ ಸಾಹಿತ್ಯದ ಸೇತುವೆಗಳಂತೆ ಅನುವಾದದ ಕೆಲಸ ಮಾಡುತ್ತಿರುವ ಉತ್ಸಾಹಿ ಪ್ರತಿಭಾವಂತರ ಗುಂಪೇ ಇದೆ. ಕೆ.ಕೆ. ನಾಯಕ್, ಡಾ. ಅಶೋಕ್ ಕುಮಾರ್ ಹಂಪಿ ವಿವಿಯ ಡಾ. ಮೋಹನ್ ಕುಮಾರ್, ಬಿ.ಕೆ. ತಿಮ್ಮಪ್ಪ, ಪಾರ್ವತಿ ಐತಾಳ್, ನಾ. ದಾಮೋದರ ಶೆಟ್ಟಿ, ಕೆ.ಕೆ. ಗಂಗಾಧರ್ ಮುಂತಾದವರ ಜೊತೆಯಲಿ ಮಿಂಚುತ್ತಿರುವ ಮತ್ತೋರ್ವ ಯುವ ಬರಹಗಾರ ತೇರಳಿ ಎನ್. ಶೇಖರ್.



ಲಂಕೇಶ್ ಬಳಗದ ಮಿತ್ರ ಶೇಖರ್ ಇರುವುದು ಕೇರಳದಲ್ಲಿ, ಅನೇಕ ವರ್ಷ ಕರ್ನಾಟಕದಲ್ಲೇ ಇದ್ದ ಶೇಖರ್‌ಗೆ ಇಲ್ಲೂ ಅಸಂಖ್ಯ ಸಾಹಿತಿ ಮಿತ್ರರಿದ್ದಾರೆ. ಸ್ವತಃ ಚೆನ್ನಾಗಿ ಪದ್ಯ ಬರೆಯುವ ಶೇಖರ್‌ಗೆ ಈ ಸಾಹಿತ್ಯ ಸೇತುವೆಯ ಕೆಲಸವೂ ಪ್ರಿಯವಾದದ್ದೇ. ಮೊನ್ನೆ ಲಂಕೇಶ್ ಕಚೇರಿಗೆ ಬಂದಿದ್ದ ಶೇಖರ್ ಕನ್ನಡದ ಹೊಸ ಬರಹಗಾರ್ತಿಯರ ವಿಭಿನ್ನ ಅಭಿವ್ಯಕ್ತಿಗಳ ಕವನಗಳನ್ನು ಆರಿಸಿ ಮಲೆಯಾಳಂ [illegible] ಅನುವಾದಿಸಿ ಸಂಕಲನವೊಂದನ್ನು ಪ್ರಕಟಿಸುವ ಬ[illegible] ಪ್ರಸ್ತಾಪಿಸಿದರು. ನಾವು ನಮ್ಮ ಗಮನಕ್ಕೆ ಬಂದಿರುವ ಕೆ[illegible] ಕವಿಯತ್ರಿಯರ ಬಗ್ಗೆ ಹೇಳಿದೆವು. ಇಲ್ಲಿ ಇದರ ಬ[illegible] ಹೇಳುತ್ತಿರುವುದೇಕೆಂದರೆ ನೀವೂ ಸಹ ಅಂತಹ ತಾಜಾ ಅನಿಸುವ ಕವನಗಳ ಬಗ್ಗೆ ಭಿನ್ನವಾ[illegible] ಬರೆಯುತ್ತಿರುವ ಯುವ ಲೇಖಕಿಯರ ಬ[illegible] ಶೇಖರ್‌ಗೆ ನೇರವಾಗಿ ತಿಳಿಸಲೂಬಹುದು. ಶೇಖರ್ ತರದ ಸಾಹಿತ್ಯ ಸೇತುವೆಯನ್ನು ಹಾದು ನಮ್ಮ ಬರಹಗಾರರೂ ಮಲೆಯಾಳ ದೇಶ[illegible] ಸಾಹಿತ್ಯ ಜಗತ್ತನ್ನು ತಲುಪಲಿ ಅಲ್ಲವೆ.

ಆಸಕ್ತರು ಶೇಖರ್‌ರ ಫೋನ್ **09400230154** ಗೆ ಮಾತನಾಡಿ[illegible]

● ಪಾರ್ವತೀಶ[illegible]





ನಮ್ಮ ಪೈ ಮಾಮ ಮತ್ತು ಬ್ಯಾರಿಯ ಅಂಗಡಿಯೂ... ನಮ್ಮದಲ್ಲದ ಶಾಪಿಂಗ್ ಮಾಲುಗಳೂ...

ಬಹುರಾಷ್ಟ್ರೀಯ ಬಂಡವಾಳಶಾಹಿಗಳು ಎಸೆಯುವ ಬಿಸ್ಕತ್ತಿಗೆ ನಾಲಿಗೆ ಹೊರಚಾಚಿ ಜೊಲ್ಲು ಸುರಿಸುತ್ತಿರುವ ನಮ್ಮ ಆಳುವ ಮಂದಿ ಚಿಲ್ಲರೆ ಮಾರುಕಟ್ಟೆಯಲ್ಲಿ ವಿದೇಶಿ ನೇರ ಬಂಡವಾಳಗಾರರನ್ನು ತಂದು ನಮ್ಮ ಬೀದಿಗಳಲ್ಲಿರುವ ಪೈ ಮಾಮನ ದಿನಸಿ ಅಂಗಡಿಯನ್ನು, ಬ್ಯಾರಿಯ ತರಕಾರಿ ಅಂಗಡಿಯನ್ನು, ಮರಕಾಲ್ತಿಯ (ಮೀನುಗಾರ ಮಹಿಳೆ) ಮೀನಿನ ಬುಟ್ಟಿಯನ್ನು ಕಿತ್ತುಕೊಳ್ಳುವ ಹುನ್ನಾರದಲ್ಲಿದ್ದಾರೆ. ನಮ್ಮ ದೇಶದವರೇ ಆದ ಬಂಡವಾಳಶಾಹಿ ಕುಳಗಳು ಅಥವಾ ಅಮೆರಿಕದ ವಾಲ್‌ಮಾರ್ಟ್ ಎಂಬ ಸೈತಾನನ ಕುನ್ನಿಗಳು ನಮ್ಮ ಸುತ್ತಮುತ್ತಲಿನ ಪೈ ಮಾಮುಗಳನ್ನು, ಬ್ಯಾರಿಗಳನ್ನು, ಮರಕಾಲ್ತಿಯರನ್ನು ಈಗಾಗಲೇ ಅರ್ಧ ಕೊಂದು ಬಿಟ್ಟಿದ್ದಾರೆ. ವಾಲ್‌ಮಾರ್ಟ್‌ನ ಮರಿಗಳು ಅಥವಾ ಶಾಪಿಂಗ್ ಮಾಲ್‌ಗಳು ಹೇಗೆ ನಮ್ಮಿಂದ ನಮ್ಮತನವನ್ನು ಕಸಿದುಕೊಂಡಿದೆ ಎಂದು ನೋಡೋಣ.

ನಾವು ನಮ್ಮ ಬೀದಿಯ ಕೊನೆಯಲ್ಲಿರುವ ಪೈ ಮಾಮನ ದಿನಸಿ ಅಂಗಡಿಗೆ ದಿನಸಿ ಖರೀದಿಸಲು ಹೋದಾಗ ಆ ಪೈ ಮಾಮನೋ ಅಥವಾ ಆವನಂಗಡಿಯ ಸಾಮಾನು ಕಟ್ಟುವ ಹುಡುಗನೋ ನಮ್ಮನ್ನು ಒಂದು ನಗೆ ಚಟಾಕಿಯೊಂದಿಗೆ ಅಥವಾ ತಮಾಷೆಯ ಮಾತಿನೊಂದಿಗೆ ಸ್ವಾಗತಿಸುತ್ತಾನೆ. ಅವರ ನಗೆ ಚಟಾಕಿಗೆ ನಾವೂ ಒಂದು ನಗೆ ಚಟಾಕಿ ಹಾರಿಸಿ ಅವರೊಳಗೊಂದಾಗಿ ಬಿಟ್ಟು ಆತ್ಮೀಯತೆಯೊಂದಿಗೆ ವ್ಯಾಪಾರ ಶುರು ಮಾಡುತ್ತೇವೆ.

ಪೈ ಮಾಮನ ಅಂಗಡಿಗೆ ಬದಲಾಗಿ ಶಾಪಿಂಗ್ ಮಾಲ್‌ಗೆ ತೆರಳುವಾಗ ಇನ್ನೇನು ನಾವು ಮಾಲ್‌ನ ಮೆಟ್ಟಿಲು ಹತ್ತುತ್ತಿರಬೇಕಾದರೆ ಸೆಕ್ಯೂರಿಟಿ ಗಾರ್ಡ್ ನಮ್ಮ ಬ್ಯಾಗ್‌ಗಳನ್ನು ಕಿತ್ತುಕೊಂಡು ಹೊರಗಿರಿಸುತ್ತಾನೆ. ತನ್ಮೂಲಕ ಪ್ರತಿಯೋರ್ವ ಗ್ರಾಹಕನಲ್ಲೂ ಮಾಲ್‌ಗಳ ಧಣಿಗಳು ಕಳ್ಳನನ್ನು ಹುಡುಕುತ್ತಾರೆ.

ಪೈ ಮಾಮನ ಅಂಗಡಿಯಲ್ಲಿ ಅಂಗಡಿಯ ನೌಕರರು ನಾವು ಕೇಳಿದ್ದನ್ನು ತಂದು ಕೊಡುತ್ತಾರೆ. ಸ್ಯಾಂಪಲ್ ನೋಡಲು ಒಂದು ಹಿಡಿಯಲ್ಲಿ ಅಕ್ಕಿಬೇಳೆಯನ್ನು ತಂದುತೋರಿಸುತ್ತಾನೆ. ಮಾಲ್‌ಗಳಲ್ಲಿ ನಾವು ದುಡ್ಡು ಕೊಟ್ಟು ದಿನಸಿ ಖರೀದಿಸುತ್ತೇವಾದರೂ ನಾವೇ ತಿರುಗಾಡಿ ನಮಗೆ ಬೇಕಾದುದನ್ನು ಎತ್ತಿಕೊಂಡು ಬರಬೇಕು. ಅಲ್ಲಿ ನಮಗೆ ನಾವು ಖರೀದಿಸ ಬಯಸುವ ದಿನಸಿಯ ಗುಣಮಟ್ಟ ಪರೀಕ್ಷಿಸಲು ಅವಕಾಶವಿಲ್ಲ. ಅವರು ಪ್ಯಾಕ್ ಮಾಡಿ ಇಟ್ಟಿದ್ದನ್ನು ಕೋಡಂಗಿಯಂತೆ ಎತ್ತಿಕೊಂಡು ಬರಬೇಕು.

ಪೈ ಮಾಮನ ಅಂಗಡಿಯಲ್ಲಿ ನಾವು ದಿನಸಿ ಖರೀದಿಸುತ್ತಲೇ ಪೈ ಮಾಮನೊಂದಿಗೆ ನಾವು ನಮ್ಮ ಕಷ್ಟಸುಖಗಳನ್ನು ಹಂಚಿಕೊಳ್ಳುತ್ತೇವೆ. ಆತನೂ ತನ್ನ ಕಷ್ಟಸುಖಗಳನ್ನು ನಮ್ಮೊಂದಿಗೆ ಹಂಚಿಕೊಳ್ಳುತ್ತಾನೆ. ಮಾಲ್‌ಗಳಲ್ಲಿ ಸಮವಸ್ತ್ರ ತೊಟ್ಟ ಸೇಲ್ಸ್‌ಮ್ಯಾನ್, ಸೇಲ್ಸ್‌ಗರ್ಲ್‌ಗಳು ಕೃತಕ ನಗುವಿನೊಂದಿಗೆ ಸಾರ್ ಸಾರ್ ಎಂಬ ನಾವು ಬಯಸದ ಗೌರವದೊಂದಿಗೆ ಪಕ್ಕಾ ವ್ಯಾಪಾರಿ ಶೈಲಿಯಲ್ಲಿ ಮಾತನಾಡುತ್ತಾರೆ. ಶಾಪಿಂಗ್ ಮಾಲ್‌ಗಳಲ್ಲಿ ನಾವು ಆ ಮಾಲ್‌ಗೆ ಗ್ರಾಹಕರಷ್ಟೇ ಹೊರತು ಅದರಾಚೆಗಿನ ಮನುಷ್ಯ ಸಂಬಂಧಕ್ಕೆ ಅಲ್ಲಿ ಯಾವ ಬೆಲೆಯೂ ಇರುವುದಿಲ್ಲ.

ಪೈ ಮಾಮನ ದಿನಸಿ ಅಂಗಡಿಯ ಕೌಂಟರ್‌ನ ಮುಂದಿನ ಸಾಲಿನಲ್ಲಿಟ್ಟ ಭರಣಿಗೆ ಪೈ ಮಾಮನ ಅನುಮತಿಯಿಲ್ಲದೇ ಕೈ ಹಾಕಿ ನಾಲ್ಕು ಕಡಲೇಕಾಯಿಗಳನ್ನು ಬಾಯಿಗೆಸೆಯುತ್ತೇವೆ. ಶಾಪಿಂಗ್ ಮಾಲ್‌ಗಳಲ್ಲಿ ಹಾಗೆ ನಮ್ಮ ಕೈಗೆಟಕುವಂತೆ ಯಾವುದೇ ತಿನಿಸುಗಳನ್ನೂ ಇರಿಸುವುದಿಲ್ಲ. ಅಲ್ಲಿ ನಾವು ನಮ್ಮಲ್ಲಿಲ್ಲದ, ನಮ್ಮ ಸಹಜ ಗುಣವೇ ಅಲ್ಲದ ಡೀಸೆನ್ಸಿಯನ್ನು ಪಾಲಿಸುತ್ತೇವೆ ಅಥವಾ ಅಲ್ಲಿನ ವಾತಾವರಣ ನಮ್ಮಿಂದ ಅಂತಹ ಡೀಸೆನ್ಸಿಯನ್ನು ಮೆಂಟೈನ್ ಮಾಡಿಸುತ್ತದೆ.



ಪೈ ಮಾಮನ ಅಂಗಡಿಯಲ್ಲಿ ಹಿಂದಿನ ಬಾರಿ ಖರೀದಿಸಿದ ಸಾಮಾನು ಕಳಪೆಯಿತ್ತೆಂದು ನಾವು ಪೈ ಮಾಮನನ್ನು ನೇರವಾಗಿ ತರಾಟೆಗೆ ತೆಗೆದುಕೊಳ್ಳುತ್ತೇವೆ. ಅಥವಾ ಹಾಗೆ ಆತನ ದಿನಸಿಯ ಗುಣಮಟ್ಟವನ್ನು ವಿಮರ್ಶಿಸಲು ನಮಗೆ ಮುಕ್ತ ಹಕ್ಕಿದೆ. ಆದರೆ ಶಾಪಿಂಗ್ ಮಾಲ್‌ನಲ್ಲಿ ನಮ್ಮ ವಿಮರ್ಶೆಗೆ ಅವಕಾಶವೇ ಇಲ್ಲ. ಕೆಲವೆಡೆ ದೂರುಪೆಟ್ಟಿಗೆಗಳಿರುತ್ತವೆ. ನಮ್ಮ ದೂರುಗಳನ್ನು ಬರೆದು ಆ ಪೆಟ್ಟಿಗೆಗೆ ಹಾಕಬೇಕು. ಆ ದೂರುಪೆಟ್ಟಿಗೆಗೆ ದೂರು ಬರೆದು ಹಾಕುವುದಕ್ಕೂ ಕಸದಬುಟ್ಟಿಗೆ ಹಾಕುವುದಕ್ಕೂ ಯಾವುದೇ ವ್ಯತ್ಯಾಸವಿಲ್ಲ.

ಪೈ ಮಾಮನ ಅಂಗಡಿಯಿಂದ ಖರೀದಿಸಿದ ದಿನಸಿ ಕಳಪೆಯಿತ್ತೆಂದಾದರೆ ಅದನ್ನು ನಾವು ಯಾವ ಮುಲಾಜೂ ಇಲ್ಲದೇ ಹಿಂದಿರುಗಿಸುತ್ತೇವೆ. ಹಾಗೆ ಹಿಂದಿರುಗಿಸುವ ಗ್ರಾಹಕನ ಹಕ್ಕನ್ನು ಪೈ ಮಾಮ ಮಣ್ಣಿಸುತ್ತಾನೆ. ಶಾಪಿಂಗ್ ಮಾಲ್‌ಗಳು ನಮಗೆ ನೀಡುವ ಬಿಲ್ಲುಗಳ ತಳಭಾಗದಲ್ಲಿ 'ಒಮ್ಮೆ ಖರೀದಿಸಿದ ಮಾಲುಗಳನ್ನು ವಾಪಾಸು ಪಡೆಯಲಾಗುವುದಿಲ್ಲ. ಅಥವಾ ಬದಲು ಮಾಡಲಾಗುವುದಿಲ್ಲ' ಎಂದು ನಮೂದಿಸಿ ಗ್ರಾಹಕನ ಹಕ್ಕನ್ನು ಮಾಲ್‌ಗಳು ಸಾರಾಸಗಟಾಗಿ ಉಲ್ಲಂಘಿಸುತ್ತವೆ.

ಬ್ಯಾರಿಯ ತರಕಾರಿ, ಹಣ್ಣುಹಂಪಲುಗಳ ಅಂಗಡಿಯ ಬಾಗಿಲ ಬಳಿ ಹೋಗುತ್ತಲೇ ದ್ರಾಕ್ಷಿ ಗೊಂಚಲಿನಿಂದ ಎರಡು ದ್ರಾಕ್ಷಿಗಳನ್ನೋ, ನೆಲ್ಲಿಕಾಯಿಯ ರಾಶಿಯಿಂದ ಒಂದು ನೆಲ್ಲಿಕಾಯಿಯನ್ನು ಬ್ಯಾರಿಯ ಅನುಮತಿ ಕೇಳದೇ ಬಾಯಿಗೆ ಹಾಕುತ್ತೇವೆ. ಬ್ಯಾರಿಯ ಅಂಗಡಿಯಲ್ಲಿ ಒಂದು ಕಿಲೋ ಬಾಳೆಹಣ್ಣಿಗೆ 40 ರೂಪಾಯಿ ಅಂದರೆ ಅಲ್ಲಿ ಚೌಕಾಸಿ ಮಾಡಲು ನಾವು ಹಿಂದೆ ಮುಂದೆ ನೋಡುವುದೇ ಇಲ್ಲ. ಒಂದು ಕಿಲೋ ಬಾಳೆಹಣ್ಣು ಖರೀದಿಸುವಾಗ ತೂಕದಲ್ಲಿ 75 ಗ್ರಾಂ ಜಾಸ್ತಿ ತೂಗಿದರೆ ಬ್ಯಾರಿ ನಮ್ಮಿಂದ ಒಂದು ಕಿಲೋ ಹಣ್ಣಿನ ಕ್ರಯ ಮಾತ್ರ ತೆಗೆದುಕೊಳ್ಳುತ್ತಾನೆ. ಶಾಪಿಂಗ್ ಮಾಲ್‌ಗಳಲ್ಲಿ ಕಂಪ್ಯೂಟರೈಸ್ಡ್ ಬಿಲ್. ಅಲ್ಲಿ ಚೌಕಾಸಿಗೆ ಅವಕಾಶವೇ ಇಲ್ಲ. ಅಲ್ಲಿ ಪ್ರತೀ ಗ್ರಾಂಗೂ ಬೆಲೆ ವಿಧಿಸಲಾಗುತ್ತದೆ.

ಬ್ಯಾರಿಯ ಅಂಗಡಿಯಲ್ಲಿ ನಾವು ಖರೀದಿಸಿದ ಸಾಮಾನುಗಳ ಒಟ್ಟು ಮೊತ್ತ ನೂರಾಐದು ರೂಪಾಯಿಯಾದರೆ ನಾವು ಯಾವ ಮುಲಾಜೂ ಇಲ್ಲದೇ ನೂರರ ನೋಟೊಂದನ್ನು ನೀಡಿ ಬರುತ್ತೇವೆ. ಬ್ಯಾರಿ ಐದು ರೂಪಾಯಿಗಾಗಿ ನಮ್ಮನ್ನು ತಡೆದು ನಿಲ್ಲಿಸುವುದಿಲ್ಲ. ಮಾಲ್‌ಗಳಲ್ಲಿ ಕಂಪ್ಯೂಟರೈಸ್ಡ್ ಬಿಲ್ಲಿಂಗ್ ಸಿಸ್ಟಂ ಇರುವುದರಿಂದ ಪೈಸೆಯಿಂದ ಪೈಸೆಗೆ ಲೆಕ್ಕ ಹಿಡಿಯುತ್ತಾರೆ. ನಮ್ಮ ಒಟ್ಟು ಖರೀದಿಯ ಮೊತ್ತ ನೂರು ರೂಪಾಯಿ ಹನ್ನೆರಡು ಪೈಸೆಯಾದರೆ ನಮ್ಮಿಂದ ನೂರಾ ಒಂದ[illegible] ರೂಪಾಯಿ ಪಡೆಯಲಾಗುತ್ತದೆ. ನಮ್ಮಲ್ಲಿ ಒಂದು ರೂಪಾಯಿ ಚಿಲ್ಲರೆ ಇರದಿದ್ದಾಗ ನೂರರ ಇನ್ನೊಂದು ನೋಟು ನೀಡಿದ[illegible] 99 ರೂಪಾಯಿ ಚಿಲ್ಲರೆ ವಾಪಾಸು ನೀಡುತ್ತಾರೆ. ನೂರು ರೂಪಾಯಿ ಹನ್ನೆರಡು ಪೈಸೆ ಒಟ್ಟು ಬಿಲ್ ಆದರೆ ನಮ್ಮಿಂ[illegible] ನೂರಾಒಂದು ರೂಪಾಯಿ ತೆಗೆದುಕೊಳ್ಳಲಾಗುತ್ತದೆ. ಅವ[illegible] ಹನ್ನೆರಡು ಪೈಸೆಗೂ ಬೆಲೆಯಿದೆ. ಆದರೆ ನಮ್ಮ 8[illegible] ಪೈಸೆಗೆ ಯಾವ ಬೆಲೆಯೂ ಇಲ್ಲ.

ಬ್ಯಾರಿಯ ಅಂಗಡಿಗೋ ಪೈ ಮಾಮನ ಅಂಗಡಿಗೋ ತೆರಳುವಾಗ ಕೊಂಡು ಹೋದ ದುಡ್ಡು ಕಡಿಮೆಯಾದ[illegible] ಬಾಕಿ ನಾಳೆ ಕೊಡ್ತೇನೆ ಎಂದು ಮುಜುಗರವಿಲ್ಲದ[illegible] ಹೇಳುತ್ತೇವೆ. ಪೈ ಮಾಮನ ಗಲ್ಲದ ಮೇಲೆ ಎ[illegible] ಕಾಣುವಂತೆ 'ಸಾಲ ಸ್ನೇಹದ ಕತ್ತರಿ' ಎಂದು ಬರೆದಿದ್ದರ[illegible] ಕೆಲವೊಮ್ಮೆ ಖಾಲಿ ಜೇಬಿನೊಂದಿಗೆ ಹೋಗಿ ನಾಳೆಯೋ ನಾಡಿದ್ದೋ ಕೊಡ್ತೇನೆ ಎಂದು 'ಸ್ನೇಹಕ್ಕೆ ಕತ್ತರಿ' ಎಂ[illegible] ಬರೆದ ಕತ್ತರಿಯನ್ನು ಆಚೆ ತಳ್ಳಿ ಸಾಲ ಪಡೆದೂ ಸ್ನೇ[illegible] ಉಳಿಸುತ್ತೇವೆ. ಶಾಪಿಂಗ್ ಮಾಲ್‌ಗಳಲ್ಲಿ ಇದು ಅಸಾಧ್ಯ ಕೆಲಸ.

ಪೈ ಮಾಮನ ಅಂಗಡಿಯ ಹುಡುಗ ನಮ್ಮ ದಿನ[illegible] ತುಂಬಿದ ಚೀಲವನ್ನು ಎತ್ತಿಕೊಂಡು ಬಂದು ಆಟೋದ[illegible] ಇಡುತ್ತಾನೆ. ಶಾಪಿಂಗ್ ಮಾಲ್‌ನಲ್ಲಿ ಗ್ರಾಹಕ ಹಣ್ಣು ಹ[illegible] ಮುದುಕನಾದರೂ, ಅಂಗವಿಕಲನಾದರೂ ಸ್ವತಃ ತ[illegible] ಚೀಲವನ್ನು ತಾನೇ ಎತ್ತಿಕೊಂಡು ತಂದ[illegible] ಆಟೋದಲ್ಲಿರಿಸಬೇಕು.

ಬ್ಯಾರಿಯ, ಪೈ ಮಾಮನ ಅಂಗಡಿಯಲ್ಲಿ ನಮ್ಮೊಂದಿ[illegible] ಯಾವುದೇ ರೀತಿಯ ಕೃತಕ ಭಾಷೆಯನ್ನೂ ಬಳಸದೆಯ[illegible] ತಮಾಷೆ ಮಾಡುತ್ತಾ ನಗೆಚಟಾಕಿ ಹಾರಿಸುತ್ತಾ ನಮ್ಮ[illegible] ಸಹಜ ಗೌರವದಿಂದ ಕಾಣುತ್ತಾರೆ. ಶಾಪಿಂಗ್ ಮಾಲ್‌ಗಳ[illegible] ಪ್ರತಿಯೊಬ್ಬ ಗ್ರಾಹಕನಲ್ಲೂ ಕಳ್ಳನನ್ನು ಹುಡುಕುವ ಮೂರ[illegible] ಕಣ್ಣು (ಸಿ.ಸಿ.ಕ್ಯಾಮೆರಾ) ಇರುತ್ತದೆ.

ಇನ್ನು ನಾವು ಮೀನು ಮಾರುಕಟ್ಟೆಗೆ ಹೋಗಿ ಅ[illegible] ಮರಕಾಲ್ತಿಯೊಂದಿಗೆ (ಮೀನುಗಾರ ಮಹಿಳೆ) ಚೌಕಾ[illegible] ಮಾಡುವುದಲ್ಲದೇ 50 ರೂಪಾಯಿಗೆ 5 ಬಂಗುಡೆ ಎಂ[illegible] ಹೇಳಿದ್ದರೂ ಚೌಕಾಸಿ ಮಾಡಿ ಬೆಲೆ ನಿಗದಿಗೊಳಿ[illegible] ಬಳಿಕವೂ ಒಂದು ಚಿಕ್ಕ ಬಂಗುಡೆ ಹಾಕಿ ಅಕ್ಕಾ ಎಂ[illegible] ಆಕೆಯ ತಲೆ ತಿಂದು ಒಂದು ಬಂಗುಡೆ ಹೆಚ್ಚು[illegible] ಹಾಕಿಸ್ಕೊಂಡು ಬರುತ್ತೇವೆ. ಶಾಪಿಂಗ್ ಮಾಲ್‌ಗಳ ಫ್ರಿ[illegible] ಮೀಟ್ ಸೆಕ್ಷನ್‌ನ ಶೀತಕದಲ್ಲಿಟ್ಟ ಮೀನನ್ನು ಯಾವ ಮಾತ[illegible] ಆಡದೇ ತೆಪ್ಪಗೆ ಹಿಡ್ಕೊಂಡು ಅದರ ಪೊಟ್ಟಣದ ಹೊರ[illegible] ನಮೂದಿಸಲ್ಪಟ್ಟ ಮೊತ್ತ ನೀಡಿ ಬರುತ್ತೇವೆ.

ಹೀಗೆ ಪೈ ಮಾಮನ ದಿನಸಿ, ಬ್ಯಾರಿಯ ತರಕ[illegible] ಹಣ್ಣು ಹಂಪಲು, ಮರಕಾಲ್ತಿ ಅಕ್ಕನ ಮೀನು ಖರೀದಿಯ[illegible] ಮನುಷ್ಯತ್ವ, ಪ್ರೀತಿ, ವಿಶ್ವಾಸ, ತಮಾಷೆ, ನಮ್ಮತನ ಮ[illegible] ಗ್ರಾಹಕನ ಹಕ್ಕು ಎಲ್ಲವೂ ಇದೆ. ಆದರೆ ಶಾಪಿಂಗ್ ಮಾಲ್‌ಗಳಲ್ಲಿ ಈ ಮೇಲಿನ ಪದಗಳನ್ನು ಗೇಟ್‌ನಿಂದ ಹೊರಗಟ್ಟಿ ಬಿಟ್ಟಿರುತ್ತಾರೆ....



● ಇಸ್ಮತ್ ಫಜೀರ್


ದೈಹಿಕ ಸೌಂದರ್ಯ ಮತ್ತು ಧಾರ್ಮಿಕ ನಂಬಿಕೆ

ಇತ್ತೀಚೆಗೆ ಇಂಟರ್‌ನೆಟ್‌ನಲ್ಲಿ ಯಾರೋ ಒಬ್ಬ ಓರ್ವ ಯುವತಿಯ ಫೋಟೊ ಒಂದನ್ನು ಹಾಕಿ "ಇದನ್ನು ಹೇಗೆ ಅರ್ಥಮಾಡಿಕೊಳ್ಳುವುದೆಂದು ನನಗೆ ಗೊತ್ತಾಗಲಿಲ್ಲ" ಎಂದು ವರದಿ ಬರೆದಿದ್ದ. ಆತನ ಗೊಂದಲಕ್ಕೆ ಕಾರಣ ಆ ಹುಡುಗಿಯ ಮುಖದ ಮೇಲಿದ್ದ ದಟ್ಟವಾದ ಕೂದಲು. ಸೌಂದರ್ಯ ಕುರಿತು ಸಾಮಾನ್ಯ ಜನರ ಅಭಿಪ್ರಾಯ ಮತ್ತು ಜನರ ನಿರೀಕ್ಷೆಗೆ ಬೆಲೆ ಕೊಡದ ಆ ಯುವತಿ ತನ್ನ ಸಿಖ್ ಧರ್ಮದ ನಂಬಿಕೆಯಂತೆ ತನ್ನ ಮುಖದ ಮೇಲಿರುವ ಕೂದಲನ್ನು ಬೋಳಿಸಿಕೊಂಡಿರಲಿಲ್ಲ. ಸಹಜವಾಗಿಯೇ ಇದು ಆ ವ್ಯಕ್ತಿಗೆ ವಿಚಿತ್ರವಾಗಿ ಕಂಡಿತ್ತು.

ಆತ ಈ ಫೋಟೋವನ್ನು ಹಾಕಿದ ನಂತರ ಅದರಲ್ಲಿರುವ ಯುವತಿಯ ಧಾರ್ಮಿಕ ನಂಬಿಕೆಯನ್ನು ಬೆಂಬಲಿಸುತ್ತ ಮತ್ತು ಅದನ್ನು ಲೇವಡಿ ಮಾಡಿದ ವ್ಯಕ್ತಿಯ ಅಸೂಕ್ಷ್ಮತೆಯನ್ನು ಖಂಡಿಸುತ್ತಾ ಹಲವಾರು ಪ್ರತಿಕ್ರಿಯೆಗಳು ಬಂದವು. ಹಾಗೆಯೇ ಆಕೆಯನ್ನು ತಮಾಷೆ ಮಾಡಿದವರಿಗೂ ಕೊರತೆ ಇರಲಿಲ್ಲ. ಆಕೆಯ ಸುತ್ತ ಎಲ್ಲ ತರಹದ ಅಭಿಪ್ರಾಯಗಳು ವ್ಯಕ್ತವಾಗುತ್ತಿರುವಾಗಲೇ ಆ ಯುವತಿಯೇ ತನ್ನ ಅಭಿಪ್ರಾಯವನ್ನು ದಾಖಲಿಸಿದಳು. ಆಕೆ ಅದೆಷ್ಟು ವಿಶಾಲಮನಸ್ಸಿನ, ದೃಢ ನಂಬಿಕೆಯ, ಸಂವೇದನಾಶೀಲ ಯುವತಿ ಎಂದರೆ ಆಕೆಯನ್ನು ಎಲ್ಲರೂ ಹಾಡಿಹೊಗಳಿದರು.

ಆ ಯುವತಿಯ ಪ್ರತಿಕ್ರಿಯೆ ಹೀಗಿತ್ತು:

"ಹಾಯ್ ಗೆಳೆಯರೆ. ನಾನು ಬಲ್‌ಪ್ರೀತ್ ಕೌರ್. ಆ ಫೋಟೋದಲ್ಲಿರುವ ಹುಡುಗಿ. ನನ್ನ ಸ್ನೇಹಿತರು ಫೇಸ್‌ಬುಕ್‌ನಲ್ಲಿ ಈ ಫೋಟೋದ ಬಗ್ಗೆ ನನ್ನ ಗಮನ ಸೆಳೆಯುವ ತನಕ ಈ ಕುರಿತು ನನಗೆ ಗೊತ್ತಿರಲಿಲ್ಲ. ಈ ಫೋಟೊವನ್ನು ತೆಗೆದವರು ನನ್ನನ್ನು ಕೇಳಿದ್ದರೆ ನಾನು ಸ್ಮೈಲ್ ಮಾಡಿ ಸಹಕರಿಸುತ್ತಿದ್ದೆ. ಈ ಫೋಟೋಗೆ ಬಂದಿರುವ ನಕಾರಾತ್ಮಕ ಮತ್ತು ಸಕಾರಾತ್ಮಕ ಪ್ರತಿಕ್ರಿಯೆಗಳನ್ನು ಓದಿ ನನಗೆ ಮುಜುಗರವಾಗಲಿ, ಅವಮಾನವಾಗಲಿ ಆಗಿಲ್ಲ. ಯಾಕೆಂದರೆ ನಾನು ಇರುವುದೇ ಹೀಗೆ. ಹೌದು, ನಾನು ಧರ್ಮದ ದೀಕ್ಷೆ ಪಡೆದಿರುವ, ಮುಖದ ಮೇಲೆ ಕೂದಲನ್ನು ಹೊಂದಿರುವ ಸಿಖ್ ಮಹಿಳೆ. ನಾನು ಇತರೆ ಮಹಿಳೆಯರಿಗಿಂತ ಭಿನ್ನವಾಗಿ ಕಾಣುವುದರಿಂದ ನನ್ನ ಲಿಂಗದ ಬಗ್ಗೆ ಹಲವರಿಗೆ ಅನುಮಾನ ಮೂಡುತ್ತದೆ ಎಂಬುದನ್ನು ನಾನು ಬಲ್ಲೆ. ಅದರೆ ಧರ್ಮದೀಕ್ಷೆ ಪಡೆದಿರುವ ಸಿಖ್ಖರು ಈ ದೇಹವನ್ನು ದೇವರೇ ನಮಗೆ ಕೊಟ್ಟಿದ್ದೆಂದೂ, ಈ ದೇಹ ಪವಿತ್ರವೆಂದೂ (ಒಂದು ರೀತಿಯಲ್ಲಿ ಇದು ಲಿಂಗರಹಿತ ದೇಹ), ಇದನ್ನು ದೇವರು ಕೊಟ್ಟಂತೆಯೇ ಕಾಪಾಡಿಕೊಳ್ಳಬೇಕೆಂದೂ ನಂಬಿದ್ದೇವೆ. ಹೇಗೆ ಮಕ್ಕಳು ತಮಗೆ ಜನ್ಮ ನೀಡಿದ ತಂದೆ/ತಾಯಿಯನ್ನು ತಿರಸ್ಕರಿಸುವುದಿಲ್ಲವೋ, ಹಾಗೆಯೇ ಸಿಖ್ಖರು ದೇವರು ಕೊಟ್ಟಿರುವ ದೇಹವನ್ನು ತಿರಸ್ಕರಿಸುವುದಿಲ್ಲ. "ನಾನು, ನನ್ನದು" ಎಂಬ ಭಾವನೆಯಲ್ಲಿ ನಮ್ಮ ದೇಹವನ್ನು ಒಂದು ಪರಿಕರದಂತೆ ಬದಲಾಯಿಸುತ್ತಾ ಹೋದರೆ ನಾವು ನಮ್ಮ ಒಳಗೇ ನಮ್ಮ ಅಹಂ ಮತ್ತು ದೈವತ್ವದ ನಡುವೆ ಬಿರುಕನ್ನು ಮೂಡಿಸಿಕೊಳ್ಳುತ್ತೇವೆ. ಸೌಂದರ್ಯದ ಬಗ್ಗೆ ಸಮಾಜದ ಪರಿಕಲ್ಪನೆಯನ್ನು ಮೀರಿ ನಿಲ್ಲುವ ಮೂಲಕ ನಾನು ನನ್ನ ಕೃತ್ಯಗಳ ಬಗ್ಗೆ ಹೆಚ್ಚು ಗಮನಹರಿಸಲು ನನಗೆ ಸಾಧ್ಯ ಎಂದು ನಾನು ನಂಬಿದ್ದೇನೆ. ನನ್ನ ಚಿಂತನೆ, ವರ್ತನೆ ಮತ್ತು ಕೃತ್ಯಗಳು ನನ್ನ ಈ ದೇಹದ ವಿನ್ಯಾಸಕ್ಕಿಂತ ಮೌಲ್ಯಯುತವಾದದ್ದೆಂದು ಭಾವಿಸಿದ್ದೇನೆ.



ಎಷ್ಟೇ ಆದರೂ ಕೊನೆಗೂ ಈ ದೇಹ ಬೂದಿ ಆಗುವುದರಿಂದ ಇದರ ಬಗ್ಗೆ ಯಾಕಷ್ಟು ಚಡಪಡಿಸಬೇಕು? ನಾನು ಸತ್ತ ನಂತರ ಯಾರೂ ನಾನು ಹೇಗಿದ್ದೆ ಎಂದು ನೆನಪಿನಲ್ಲಿಟ್ಟುಕೊಳ್ಳುವುದಿಲ್ಲ. ಅಷ್ಟೇ ಯಾಕೆ, ನನ್ನ ಮಕ್ಕಳೂ ನನ್ನ ದನಿಯನ್ನೂ ಮರೆತುಬಿಡುತ್ತಾರೆ. ಕಾಲಕ್ರಮೇಣ ನಮ್ಮ ಶಾರೀರಿಕ ನೆನಪುಗಳೂ ಅಳಿಸಿಹೋಗುತ್ತವೆ. ಬದಲಾಗಿ ನನ್ನ ಪ್ರಭಾವ ಮತ್ತು ನನ್ನ ಲೆಗಸಿ ಉಳಿದಿರುತ್ತದೆ. ದೈಹಿಕ ಸೌಂದರ್ಯದ ಬಗ್ಗೆ ಗಮನ ಕೊಡದೆ ನಾನು ನನ್ನ ಸಮಯವನ್ನು ಆಂತರ್ಯದ ಸದ್ಗುಣಗಳನ್ನು ಹೆಚ್ಚಿಸಿಕೊಳ್ಳುವತ್ತ ವ್ಯಯಿಸಿದರೆ ನಾನು ಈ ಜಗತ್ತಿನಲ್ಲಿ ನನ್ನ ಕೈಲಾದಷ್ಟು ಬದಲಾವಣೆ ಮತ್ತು ಅಭಿವೃದ್ಧಿಯನ್ನು ತರಬಹುದೆನಿಸುತ್ತದೆ.

ಆದ್ದರಿಂದ ನನಗೆ ನನ್ನ ಮುಖ ಹೇಗಿದೆ ಎಂಬುದಕ್ಕಿಂತ ಆ ಮುಖದ ಹಿಂದೆ ಇರುವ ನಗೆ ಮುಖ್ಯವಾಗಿದೆ. ಮುಂದೆ ಯಾರಾದರೂ ನನ್ನನ್ನು ನೋಡಿದರೆ ದಯವಿಟ್ಟು ನನಗೆ ಹಲೋ ಹೇಳಿ ನನ್ನನ್ನು ಮಾತನಾಡಿಸಿ. ನನ್ನ ಈ ಫೋಟೋಗೆ ಬಂದಿರುವ ಪಾಸಿಟಿವ್ ಮತ್ತು ನೆಗೆಟಿವ್, ಎರಡೂ ರೀತಿಯ ಪ್ರತಿಕ್ರಿಯೆಗಳಿಂದ ನಾನು ನನ್ನನ್ನಲ್ಲದೆ ಇತರರನ್ನೂ ಇನ್ನೂ ಚೆನ್ನಾಗಿ ಅರ್ಥಮಾಡಿಕೊಳ್ಳುವುದಕ್ಕೆ ಸಾಧ್ಯವಾಗಿದ್ದರಿಂದ ನಾನು ಎಲ್ಲರಿಗೂ ಆಭಾರಿ ಆಗಿದ್ದೇನೆ.

ಅಂದಹಾಗೆ ನಾನು ಫೋಟೊದಲ್ಲಿ ತೊಟ್ಟಿರುವ ಯೋಗಾ ಪ್ಯಾಂಟ್‌ಗಳು ತುಂಬಾ ಆರಾಮಾಗಿರುತ್ತವೆ. ಹಾಗೆಯೇ ನಾನು ತೊಟ್ಟಿರುವ 'ಬೆಟ್ಟರ್ ಟುಗೆದರ್' ಎಂಬ ಬರಹ ಇರುವ ಟೀಶರ್ಟ್ ಒಂದು ಅಂತರ್‌ಧರ್ಮೀಯ ಯುವಕರ ಸಂಘಟನೆಯದ್ದು. ಕತೆಗಳನ್ನು ಹೇಳುವ ಮತ್ತು ಸಂವಾದಗಳನ್ನು ನಡೆಸುವ ಮೂಲಕ ವಿವಿಧ ಧರ್ಮಗಳ ನಡುವೆ ಸಾಮರಸ್ಯ ತರುವ ಉದ್ದೇಶ ಆ ಯುವ ಸಂಘಟನೆಯದ್ದು. ನನ್ನ ಬಗ್ಗೆ ಇದು ಇನ್ನಷ್ಟು ವಿವರಣೆ ನೀಡುತ್ತದೆಂದು ಇಲ್ಲಿ ಇದನ್ನು ಉಲ್ಲೇಖಿಸಿದ್ದೇನೆ.

ನನ್ನ ಮಾತುಗಳಿಂದ ಯಾರಿಗಾದರೂ ನೋವು ಉಂಟಾಗಿದ್ದರೆ ದಯವಿಟ್ಟು ನನ್ನನ್ನು ಕ್ಷಮಿಸಿ."

ಬಲ್‌ಪ್ರೀತ್ ಕೌರ್‌ಳ ಪ್ರತಿಕ್ರಿಯೆ ಜನರ ಮೆಚ್ಚುಗೆಗೆ ಪಾತ್ರವಾಗಿದ್ದಾಗಲೇ ಆಕೆಯ ಫೋಟೋವನ್ನು ಇಂಟರ್‌ನೆಟ್‌ನಲ್ಲಿ ಪೋಸ್ಟ್ ಮಾಡಿದ ವ್ಯಕ್ತಿ ತಪ್ಪೊಪ್ಪಿಕೊಂಡ. ಆತ ಹೀಗೆ ಬರೆದ:

"ನಾನು ಬಲ್‌ಪ್ರೀತಳ ಫೋಟೊ ಹಾಕಿದ್ದು ತಮಾಷೆಯಾಗಿರಲಿಲ್ಲ ಎಂದು ನನಗೆ ಅರಿವಾಗಿದೆ. ನಾನು ಸಿಖ್ಖರ, ಬಲ್‌ಪ್ರೀತಳ ಮತ್ತು ಇತರರ ಕ್ಷಮೆ ಕೇಳುತ್ತೇನೆ. ಇತರರನ್ನು ಲೇವಡಿ ಮಾಡುವುದು ಹಲವರಿಗೆ ಸಂತೋಷ ಕೊಡಬಹುದು, ಆದರೆ ಆ ಲೇವಡಿಗೆ ಗುರಿಯಾಗುವವರನ್ನು ಅಗೌರವಿಸುತ್ತದೆ. ನಾನು ಮಾಡಿದ್ದು ಸಂಪೂರ್ಣವಾಗಿ ತಪ್ಪು ಎಂದು ನನಗೆ ಗೊತ್ತು.

ಇದಾದನಂತರ ನಾನು ಸಿಖ್ ಧರ್ಮದ ಬಗ್ಗೆ ಹೆಚ್ಚು ಓದಿಕೊಂಡಿದ್ದು ಅದು ನಿಜವಾಗಲೂ ಆಸಕ್ತಿದಾಯಕವಾಗಿದೆ. ಬಲ್‌ಪ್ರೀತ್ ಹೇಳುವಂತೆ ನಮ್ಮ ದೈಹಿಕ ಸೌಂದರ್ಯಕ್ಕೆ ಹೆಚ್ಚು ಗಮನ ಕೊಡುವುದಕ್ಕಿಂತ ನಾವೊಂದು ಉತ್ತಮವಾದ ಲೆಗಸಿಯನ್ನು ಬಿಟ್ಟುಹೋಗುವುದು ಮುಖ್ಯ.

ಬಲ್‌ಪ್ರೀತ್, ನಾನು ಈ ಕುರಿತು ಮುಕ್ತವಾಗಿ ಚಿಂತಿಸದ ವ್ಯಕ್ತಿಯಾಗಿದ್ದಕ್ಕೆ ನನ್ನನ್ನು ಕ್ಷಮಿಸು. ನೀನು ನನಗಿಂತ ಉತ್ತಮ ವ್ಯಕ್ತಿ ಆಗಿರುವೆ.

ಸಿಖ್ಖರೇ, ನಾನು ನಿಮ್ಮ ಜೀವನಕ್ರಮದ ಬಗ್ಗೆ ಮತ್ತು ನಿಮ್ಮ ಸಂಸ್ಕೃತಿಯ ಬಗ್ಗೆ ಅವಹೇಳನ ಮಾಡಿದ್ದಕ್ಕೆ ನಿಮ್ಮ ಕ್ಷಮೆ ಕೇಳುತ್ತೇನೆ. ಬಲ್‌ಪ್ರೀತ್ ತಾನು ನಂಬಿರುವ ಸಿದ್ಧಾಂತದಲ್ಲಿ ಇಟ್ಟಿರುವ ನಂಬಿಕೆ ನನ್ನನ್ನು ಸ್ಫೂರ್ತನನ್ನಾಗಿಸಿದೆ."

ಆತ ಅಷ್ಟಕ್ಕೆ ಸುಮ್ಮನಾಗಲಿಲ್ಲ. ಅಮೆರಿಕದ ಒಹೈಯೋ ವಿಶ್ವವಿದ್ಯಾಲಯದಲ್ಲಿ ಓದುತ್ತಿರುವ, ಮುಂದೆ ನ್ಯೂರೋ ಸರ್ಜನ್ ಆಗಬೇಕೆಂಬ ಗುರಿ ಹೊಂದಿರುವ ಬಲ್‌ಪ್ರೀತಳಿಗೆ ವೈಯಕ್ತಿಕವಾಗಿ ಈ ಮೇಲ್ ಮೂಲಕ ಕ್ಷಮೆ ಕೋರಿದ. ಅದನ್ನು ಓದಿ ಬಲ್‌ಪ್ರೀತ್ ಎಷ್ಟು ದಂಗಾದಳೆಂದರೆ "ಆತ ಪ್ರಾಮಾಣಿಕವಾಗಿ ತನ್ನ ತಪ್ಪನ್ನು ಒಪ್ಪಿಕೊಂಡಿದ್ದಾನೆ. ನಿಜವಾಗಲೂ ಹೇಳಬೇಕೆಂದರೆ ನನಗೂ ಆ ರೀತಿ ಕ್ಷಮೆ

ಕಂಡಹಾಗೆ



editorlankesh@gmail.com • ಗೌರಿ ಲಂಕೇಶ್

ಕೇಳುವುದು ಕಷ್ಟವಾಗುತ್ತಿತ್ತೇನೋ" ಎಂದಿದ್ದಾಳೆ. ಹಾಗೆ ಹೇಳುವ ಮೂಲಕ ಬಲ್‌ಪ್ರೀತ್ ನಿಜವಾಗಲೂ ಎಷ್ಟು ಧಾರಾಳ ಮನಸ್ಸಿನವಳು ಎಂದು ಮತ್ತೊಮ್ಮೆ ಸಾಬೀತುಪಡಿಸಿದ್ದಾಳೆ.

ಸದ್ಯದಲ್ಲೇ ಆತ ಒಹೈಯೋಗೆ ಬಂದು ಆಕೆಯನ್ನು ಮುಖತಃ ಭೇಟಿ ಆಗಿ ಕ್ಷಮೆ ಕೋರಲೂ ಸಿದ್ಧ ಎಂದಿದ್ದಾನೆ. ಅದಕ್ಕೆ ಬಲ್‌ಪ್ರೀತ್ "ಅದರ ಅಗತ್ಯವಿಲ್ಲ. ಆದರೆ ನಾವು ಭೇಟಿ ಆದರೆ ಈ ಬಾರಿ ಜೊತೆಯಾಗಿ ಫೋಟೋ ತೆಗೆಸಿಕೊಳ್ಳೋಣ" ಎಂದು ತಮಾಷೆ ಮಾಡಿದ್ದಾಳೆ!

ಇತರರ ಧಾರ್ಮಿಕ ನಂಬಿಕೆಯ ಬಗ್ಗೆ, ಉಡುಗೆ ತೊಡುಗೆಗಳ ಬಗ್ಗೆ, ದೈಹಿಕ ಸೌಂದರ್ಯದ ಬಗ್ಗೆ ಪೂರ್ವಾಗ್ರಹಗಳನ್ನು ಹೊಂದಿರುವವರು ಅವುಗಳನ್ನು ಲೇವಡಿ ಮಾಡುವುದು ಸಾಮಾನ್ಯ. ಆದರೆ ಬಲ್‌ಪ್ರೀತ್ ಎಂಬ ಯುವತಿ ತನ್ನ ತಾಳ್ಮೆ, ದಿಟ್ಟತನ ಮತ್ತು ಸೂಕ್ಷ್ಮತೆಯಿಂದ ಅಂತಹ ಪೂರ್ವಾಗ್ರಹಗಳನ್ನು ಮನಮುಟ್ಟುವಂತೆ ತೊಡೆದುಹಾಕಿದ್ದಾಳೆ. ಇದು ಇತರರಿಗೆ ಮೇಲುಪಂಕ್ತಿ ಆಗಲಿ ಎಂಬ ಆಶಯ ನನ್ನದು...

ರಾಷ್ಟ್ರಪತಿ ಭವನದಲ್ಲಿ ಇತಿಹಾಸ ಬರೆದ ಅಕ್ಕೈ

ಅಲ್ತಮಾಸ್ ಕಬೀರ್ ಅವರು ಸುಪ್ರೀಂಕೋರ್ಟಿನ ಮುಖ್ಯ ನ್ಯಾಯಮೂರ್ತಿಗಳಾಗಿ ರಾಷ್ಟ್ರಪತಿ ಭವನದಲ್ಲಿ ಪ್ರಮಾಣ ವಚನ ಸ್ವೀಕರಿಸುವ ಸಮಾರಂಭಕ್ಕೆ ಬೆಂಗಳೂರಿನ ಲೈಂಗಿಕ ಅಲ್ಪಸಂಖ್ಯಾತರ ಸಂಘಟನೆಯಾದ ಸಂಗಮದ ಅಕ್ಕೈ ಪದ್ಮಶಾಲಿ ಅವರಿಗೆ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರ ಕಚೇರಿಯಿಂದ ಆಹ್ವಾನ ಪ್ರತಿ ಬಂದಾಗ ಅಕ್ಕೈಗೆ ತನ್ನ ಕಣ್ಣನ್ನೇ ನಂಬಲಾಗಲಿಲ್ಲ.

ಗಣ್ಯಾತಿಗಣ್ಯರಿರುವ ಸಮಾರಂಭಕ್ಕೆ ತನ್ನಂತಹ ಲೈಂಗಿಕ ಅಲ್ಪಸಂಖ್ಯಾತೆಯನ್ನು ಕರೆಯುವುದೆಂದರೇನು ಎಂದು ಅಕ್ಕೈ ಒಂದು ಕ್ಷಣ ಯೋಚಿಸಿದರು. ಇದು ನಿಜವೇ ಎಂದು ಮತ್ತೆಮತ್ತೆ ಆ ಆಹ್ವಾನ ಪತ್ರಿಕೆಯನ್ನು ನೋಡಿದರು. ಆದರೆ ಅದು ನಿಜವಾಗಲೂ ನ್ಯಾಯಮೂರ್ತಿ ಅಲ್ತಮಾಸ್ ಕಬೀರ್ ಅವರ ಅಪೇಕ್ಷೆಯಂತೆ ಕಳುಹಿಸಲಾಗಿದ್ದ ಆಮಂತ್ರಣ ಪತ್ರವಾಗಿತ್ತು.

ಬೆಂಗಳೂರಿನಲ್ಲೇ ಬೆಳೆದ ಅಕ್ಕೈ ಹಲವು ವರ್ಷಗಳ ಕಾಲ ತನ್ನ ಹಲವಾರು ಒಡನಾಡಿಗಳಂತೆ ಲೈಂಗಿಕ ವೃತ್ತಿಯಲ್ಲಿ ನಿರತರಾಗಿದ್ದವರು. ಆ ಕಾರಣಕ್ಕೆ ಸುಳ್ಳು ಕೇಸುಗಳಲ್ಲಿ ಫಿಟ್ ಆಗಿ ಹಲವಾರು ಬಾರಿ ಪೊಲೀಸ್ ಠಾಣೆ ಮತ್ತು ನ್ಯಾಯಾಲಯದ ಮೆಟ್ಟಿಲನ್ನು ಹತ್ತಿದ್ದವರು. 2004ರಲ್ಲಿ ಲೈಂಗಿಕ ವೃತ್ತಿಯನ್ನು ತೊರೆದು ಲೈಂಗಿಕ ಅಲ್ಪಸಂಖ್ಯಾತರ ರಕ್ಷಣೆಗೆ ಮತ್ತು ಹಕ್ಕುಗಳಿಗೆ ತೆರೆಯಲಾಗಿದ್ದ ಸಂಗಮ ಸಂಸ್ಥೆಗೆ ಕಾರ್ಯಕರ್ತೆಯಾಗಿ ಸೇರಿಕೊಂಡರು. ನಂತರ ಹಲವಾರು ಹೋರಾಟಗಳಲ್ಲಿ ಭಾಗಿಯಾದ ಅಕ್ಕೈ ತನ್ನ ಸಮುದಾಯದ ಜನರ ಮೇಲಾಗುತ್ತಿದ್ದ ಶೋಷಣೆ, ಅಪರಾಧ, ಹಿಂಸೆಗಳ ವಿರುದ್ಧ ಸೆಣಸಾಡಿದರು.


2010ರಲ್ಲಿ ಕರ್ನಾಟಕದ ಹೈಕೋರ್ಟ್ ಲೈಂಗಿಕ ಅಲ್ಪಸಂಖ್ಯಾತರ ನೆರವಿಗೆ ಬರಲು ನಿರ್ಧರಿಸಿ ವಿವಿಧ ಕಡೆ ವಿಚಾರಗೋಷ್ಠಿಗಳನ್ನು ಏರ್ಪಡಿಸಿತು. ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷೆ ಆಗಿದ್ದ ನ್ಯಾಯಮೂರ್ತಿ ಮಂಜುಳಾ ಚೆಲ್ಲೂರ್ ಅವರ ನೇತೃತ್ವದಲ್ಲಿ ಗುಲ್ಬರ್ಗ, ಶಿವಮೊಗ್ಗ ಮತ್ತು ಬೆಂಗಳೂರಿನಲ್ಲಿ ಸಮಾವೇಶಗಳು ನಡೆದಾಗ ಅವುಗಳಲ್ಲೆಲ್ಲ ಅಕ್ಕೈ ಸಕ್ರಿಯವಾಗಿ ಭಾಗವಹಿಸುವ ಮೂಲಕ ಎಲ್ಲರ ಗಮನ ಸೆಳೆದಿದ್ದರು. ಒಮ್ಮೆ ಅಲ್ತಮಾಸ್ ಕಬೀರ್ ಅವರಿದ್ದ ಸಭೆಯಲ್ಲೂ ಭಾಗವಹಿಸಿ ಅವರ ಮೆಚ್ಚುಗೆ ಪಡೆದಿದ್ದರು.

ಮೊದಲೇ ಹೆಣ್ಣುಮಕ್ಕಳ ಬಗ್ಗೆ, ಅಲ್ಪಸಂಖ್ಯಾತರ ಬಗ್ಗೆ ಅಪಾರ ಕಾಳಜಿ ಹೊಂದಿರುವ ಅಲ್ತಮಾಸ್ ಕಬೀರ್ ಅವರು ಆ ಕಾರಣಕ್ಕೇ ತಮ್ಮ ಬದುಕು ಮತ್ತು ವೃತ್ತಿಯ ಅತಿಮುಖ್ಯ ಸಮಾರಂಭದಲ್ಲಿ ಸಾಮಾಜಿಕ ಅಸಡ್ಡೆಗೆ ಗುರಿಯಾಗಿರುವ ಲೈಂಗಿಕ ಅಲ್ಪಸಂಖ್ಯಾತರ ಪ್ರತಿನಿಧಿಯಾಗಿ ಅಕ್ಕೈ ಇರಬೇಕೆಂದು ಅವರನ್ನು ಆಹ್ವಾನಿಸಿದ್ದರು.

ಅವತ್ತಿನ ಅನುಭವದ ಬಗ್ಗೆ ಅಕ್ಕೈ ಮಾತಿನಲ್ಲೇ ಕೇಳಿ:

"ಸೆಪ್ಟೆಂಬರ್ 29ರಂದು ಬೆಳಗ್ಗೆಯೇ ಎದ್ದು ರೆಡಿ ಆದೆ. ಹಸಿರು ಶಾಲು, ಕ್ರೀಮ್ ಬಣ್ಣದ ಟಾಪ್, ಹಸಿರು





ಪೈಜಾಮ ಧರಿಸಿದೆ. ಜೊತೆಗೆ ಮುತ್ತಿನ ಓಲೆಯನ್ನು ಹಾಕಿಕೊಂಡೆ. ನಾನು ತಂಗಿದ್ದ ಹೋಟೆಲ್‌ನಿಂದ ರಾಷ್ಟ್ರಪತಿ ಭವನಕ್ಕೆ ಹೋಗುತ್ತಿದ್ದಾಗ ನನ್ನ ಹಿನ್ನೆಲೆ, ನಾನು ಅನುಭವಿಸಿದ ಹಿಂಸೆ, ದೌರ್ಜನ್ಯ ಶೋಷಣೆ ಎಲ್ಲವೂ ನೆನಪಾಗಿ ಕಣ್ಣಿನಲ್ಲಿ ನೀರು ಹರಿಯಿತು. ಆದರೆ ಅಂತಹ ನಾನು ಇವತ್ತು ರಾಷ್ಟ್ರಪತಿ ಭವನವನ್ನೇ ಪ್ರವೇಶಿಸುತ್ತಿರುವ ಪ್ರಥಮ ಲೈಂಗಿಕ ಅಲ್ಪಸಂಖ್ಯಾತೆ ಎಂದು ನೆನಪಾದಾಗ ನಾನು ಪಯಣಿಸಿದ ದಾರಿ ನನಗೇ ಅಚ್ಚರಿ ಮೂಡಿಸಿತು.

ರಾಷ್ಟ್ರಪತಿ ಭವನದ ಹೆಬ್ಬಾಗಿಲಿನಲ್ಲಿ ಅಂಗರಕ್ಷಕರು ನನಗೆ ಕೈಮುಗಿದು ಸ್ವಾಗತಿಸಿದರು. ರಾಷ್ಟ್ರಪತಿ ಭವನವನ್ನು ಪ್ರವೇಶಿಸಿದಾಗ ಇದು ಸ್ವರ್ಗವೇ ಇರಬೇಕೆಂದು ನನಗೆ ಅನ್ನಿಸಿತು. ಆ ಬಣ್ಣ ಆ ಕಲೆ, ಆ ನಾಜೂಕು, ಥಳಥಳ ಹೊಳೆಯುತ್ತಿದ್ದ ಅಲಂಕಾರಿಕ ದೀಪಗಳು, ಬೃಹತ್ ಹೆಬ್ಬಾಗಿಲು, ಎಲ್ಲವನ್ನೂ ನೋಡಿ ನಾನು ಮಂತ್ರಮುಗ್ಧಳಾದೆ.

ಹಿರಿಯ ನ್ಯಾಯಮೂರ್ತಿಗಳು, ರಾಜಕಾರಣಿಗಳು, ನಾಯಕರು ಇದ್ದ ಸೆಂಟ್ರಲ್ ಹಾಲಿಗೆ ನನ್ನನ್ನು ಮೂರು ಜನ ಅಂಗರಕ್ಷಕರು ಕರೆದೊಯ್ದರು. ಆಗ ನನ್ನ ಆತ್ಮಸ್ಥೈರ್ಯ, ಘನತೆ ಇನ್ನಷ್ಟು ಇಮ್ಮಡಿ ಆಯಿತು.

ಆ ಪ್ರತಿಷ್ಠಿತ ಸಮಾರಂಭಕ್ಕೆ ಅರುಣ್ ಜೈಟ್ಲಿ, ಸಲ್ಮಾನ್ ಖುರ್ಷಿದ್, ಅಂಬಿಕಾ ಸೋನಿ, ವೀರಪ್ಪ ಮೊಯ್ಲಿ, ಕಪಿಲ್ ಸಿಬಾಲ್, ಪಿ.ಚಿದಂಬರಂ, ಲಾಲ್ ಕೃಷ್ಣ ಆದ್ವಾನಿ, ಲಾಲೂ ಪ್ರಸಾದ್ ಯಾದವ್, ಮನಮೋಹನ್ ಸಿಂಗ್, ಸೋನಿಯಾ ಗಾಂಧಿ, ನ್ಯಾಯಮೂರ್ತಿ ಎಸ್.ಎಚ್.ಕಪಾಡಿಯಾ, ವಿವಿಧ ಹೈಕೋರ್ಟ್‌ಗಳ ಮುಖ್ಯ ನ್ಯಾಯಮೂರ್ತಿಗಳು ಸೇರಿದಂತೆ ಹಲವಾರು ಗಣ್ಯರು ಆಗಮಿಸಿದರು.

ರಾಷ್ಟ್ರಪತಿ ಮುಖರ್ಜಿ ಅವರು ಆಗಮಿಸುತ್ತಿದ್ದಂತೆ ವಾದ್ಯಗೋಷ್ಠಿಗಳೆಲ್ಲ ಮೊಳಗಲಾರಂಭಿಸಿದವು. ಎಲ್ಲರೂ ಎದ್ದು ನಿಂತೆವು. ರಾಷ್ಟ್ರಗೀತೆ ಹಾಡಿದೆವು. ರಾಷ್ಟ್ರಪತಿ ನ್ಯಾಯಮೂರ್ತಿ ಅಲ್ತಮಾಸ್ ಕಬೀರ್ ಅವರಿಗೆ ಪ್ರಮಾಣವಚನ ಬೋಧಿಸಿದ ನಂತರ ಮತ್ತೆ ರಾಷ್ಟ್ರಗೀತೆಯನ್ನು ಹಾಡಲಾಯಿತು. ಐದೇ ನಿಮಿಷಗಳಲ್ಲಿ ಸಮಾರಂಭ ಮುಗಿಯಿತು. ಇದಾದನಂತರ ಇದ್ದದ್ದು ಚಹಾ ಕೂಟ.

ಚಹಾ ಕೂಟದಲ್ಲಿ ನನ್ನನ್ನು ಕಂಡವರಿಗೆ ಒಂದು ಕ್ಷಣ ಅಚ್ಚರಿ ಆಗಿರಬೇಕು. ನನ್ನ ವೈವಿಧ್ಯತೆಯನ್ನು ಕಂಡು 'ಯಾರು ಈ ವಿಭಿನ್ನ, ಗಾಂಭೀರ್ಯದ ಉಡುಗೆ ತೊಟ್ಟಿರುವವಳು' ಎಂದು ಅವರಲ್ಲಿ ಕೆಲವರು ಅಂದುಕೊಂಡಿದ್ದರೆ ಅಚ್ಚರಿ ಇಲ್ಲ.

ಮನಮೋಹನ್ ಸಿಂಗ್ ಮತ್ತು ಸೋನಿಯಾ ಗಾಂಧಿ ಅವರು ನನ್ನನ್ನು ಕಂಡು ನಮಸ್ಕರಿಸಿದರು. ಆದರೆ ಲಾಲೂ ಪ್ರಸಾದ್ ಯಾದವ್ ಅವರು ನನ್ನನ್ನು ತಬ್ಬಿಕೊಂಡು, ನನ್ನ ಕೈ ಹಿಡಿದು "ಆಪ್ ಕಹಾಸೆ ಆಯೆ? ಚಿಪ್ಸ್ ಖಾವೋ, ಚಾಯ್ ಪಿಯೋ" ಎಂದು ಹೇಳಿದರು. ನಾನು ಸಂಗಮ ಸಂಸ್ಥೆಯವಳೆಂದೂ, ಲೈಂಗಿಕ ಅಲ್ಪಸಂಖ್ಯಾತೆ ಎಂದೂ ಗೊತ್ತಾದಾಗ ತುಂಬಾ ಸಂತೋಷದಿಂದ ನನ್ನ ಕೈ ಹಿಡಿದು "ಮುಜೆ ಬಹುತ್ ಖುಷ್ ಹುವಾ. ಆಪ್ ಬಾರ್ ಬಾರ್ ಆರಾಹೋ" ಎಂದರು. ವೀರಪ್ಪ ಮೊಯ್ಲಿ ಅವರು ನನ್ನನ್ನು ಭೇಟಿ ಮಾಡಿ, ನಮಸ್ಕರಿಸಿ "ನಿಮ್ಮ ಆಗಮನ ಒಂದು ದೊಡ್ಡ ಬದಲಾವಣೆ" ಎಂದು ನಗುನಗುತ್ತಾ ನುಡಿದರು.

ಕಾನೂನು ಮಂತ್ರಿ ಸಲ್ಮಾನ್ ಖುರ್ಷಿದ್ ಅವರು "It's my pleasure to meet you here. Your presence has made history. In the near future we will see about giving more rights to gender minorities. Thank you for coming. See you" ಎಂದು ಹೇಳಿದರು.

ನನ್ನ ಜೀವನವಿಡೀ ತಾರತಮ್ಯವನ್ನೇ ಕಂಡಿರುವ ನನ್ನನ್ನು ಅವತ್ತು ಅಲ್ಲಿದ್ದ ಎಲ್ಲರೂ ಸಮಾನಳಂತೆ ನೋಡಿಕೊಂಡಿದ್ದು ವಿಶೇಷವಾಗಿತ್ತು.

ಈಗ ಬೆಂಗಳೂರಿಗೆ ವಾಪಸ್ ಬಂದಿದ್ದೇನೆ. ರಾಷ್ಟ್ರಪತಿ ಭವನದಲ್ಲಿ ನಾನು ಕಳೆದ ಸಮಯವನ್ನು ಸ್ವರ್ಗದಲ್ಲಿ ಕಳೆದ ಸಮಯ ಎಂದೇ ಆಗಾಗ್ಗೆ ನೆನಪಿಸಿಕೊಳ್ಳುತ್ತಿರುತ್ತೇನೆ."

ಅಕ್ಕೈ ಪದ್ಮಶಾಲಿಗೆ ನಮ್ಮೆಲ್ಲರ ಅಭಿನಂದನೆಗಳು.

ನಿತಿನ್ ಗಡ್ಕರಿಯ ಘಾತುಕತನ

"ಇತ್ತೀಚೆಗೆ ರಾಷ್ಟ್ರ ರಾಜಕಾರಣದಲ್ಲಿ ಒಂದು ನಾಟಕೀಯ ಬೆಳವಣಿಗೆ ನಡೆದಿದೆ. ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ನಿತಿನ್ ಗಡ್ಕರಿ ತಮ್ಮದೇ ಪ್ರದೇಶದ ಮಹಿಳೆಯೊಬ್ಬರಿಗೆ ಮಾನನಷ್ಟ ಮೊಕದ್ದಮೆಯ ನೋಟಿಸ್ ಜಾರಿ ಮಾಡಿದ್ದಾರೆ. ಹೀಗೆ ಕೇಸಿನ ಭಯವೊಡ್ಡಿ ಆಕೆಯನ್ನು ಮಣಿಸಬಹುದೆಂಬ ಲೆಕ್ಕಾಚಾರ ಗಡ್ಕರಿಯದ್ದು.


ಅಜಯ್ ಸಂಚೇತಿ

ಆದರೆ ಅಂಜಲಿ ದಮಾನಿಯ ಎಂಬ ಆ ಮಹಿಳೆ ನೋಟಿಸ್‌ಗೆ ಪ್ರತಿಕ್ರಿಯಿಸುತ್ತಾ "ರಾಜಕೀಯ ಹೋರಾಟ ನಡೆಯುವುದು ಕೋರ್ಟ್‌ನಲ್ಲಲ್ಲ; ಸಾರ್ವಜನಿಕರ ಮುಂದೆ. ಬನ್ನಿ, ಬಹಿರಂಗವಾಗಿ ಬಾಯಿಬಿಚ್ಚಿ ಮಾತನಾಡಿ. ಜನರಿಗೆ ಸತ್ಯಾಂಶ ತಿಳಿಯಲಿ" ಎಂದು ಗಡ್ಕರಿಗೆ ಸವಾಲೆಸೆದಿದ್ದಾಳೆ. ಆದರೆ ಯಾಕೋ ಏನೋ ಗಡ್ಕರಿ ಈ ವಿಷಯಕ್ಕೆ ಬಾಯಿಬಿಚ್ಚುತ್ತಿಲ್ಲ. ಅಂಜಲಿ ಮತ್ತಷ್ಟು ಪ್ರಶ್ನೆಗಳನ್ನು ಕೇಳಿದ್ದಾಳೆ. ಅಣ್ಣಾ ತಂಡದ ರೂವಾರಿ ಅರವಿಂದ್ ಕೇಜ್ರಿವಾಲ್ ಕೂಡ ಅಂಜಲಿಯ ಪ್ರಶ್ನೆಗಳಿಗೆ ದನಿಗೂಡಿಸಿದ್ದಾರೆ.

"ನೀವು ಯಾರ ಪರ? ಭ್ರಷ್ಟರ ಪರವೋ ಅಥವಾ ಭ್ರಷ್ಟರ ವಿರುದ್ಧ ಹೋರಾಡುತ್ತಿರುವವರ ಪರವೋ? ವಿರೋಧ ಪಕ್ಷದ ಅಧ್ಯಕ್ಷ ಸ್ಥಾನದಲ್ಲಿ ಕುಳಿತಿರುವ ನಿಮ್ಮಂಥ ರಾಜಕಾರಣಿಗಳು ಆಡಳಿತಪಕ್ಷದಲ್ಲಿರುವವರ ಜೊತೆ ವ್ಯಾಪಾರಿ ಸಂಬಂಧ ಇಟ್ಟುಕೊಂಡರೆ ಪ್ರಜಾತಂತ್ರ ಉಳಿಯುವುದಾದರೂ ಹೇಗೆ? ಆಡಳಿತ ಪಕ್ಷದ ತಪ್ಪುಗಳನ್ನು ಬಹಿರಂಗಗೊಳಿಸುವ ಗುರುತರ ಜವಾಬ್ದಾರಿಯಿರುವವರೇ ಭ್ರಷ್ಟರ ಜೊತೆ ಶಾಮೀಲಾಗಿಬಿಟ್ಟರೆ ಈ ದೇಶದ ಜನತೆ ನಿಮ್ಮ ಮೇಲೆ ಇಟ್ಟಿರುವ ವಿಶ್ವಾಸಕ್ಕೆ ದ್ರೋಹ ಬಗೆದಂತೆ ತಾನೆ?" ಎಂದು ಅಂಜಲಿ ದಮಾನಿಯ ಪ್ರಶ್ನಿಸುತ್ತಿದ್ದಾಳೆ.

ದಿನಬೆಳಗಾದರೆ ಕಾಂಗ್ರೆಸ್ ವಿರುದ್ಧ ಹತ್ತು ಹಲವು ಹೇಳಿಕೆ ನೀಡುವ ಗಡ್ಕರಿ ಸಾಹೇಬರು ತಮ್ಮನ್ನೇ ಉದ್ದೇಶಿಸಿರುವ ಇಂಥಾ ಗಂಭೀರ ಪ್ರಶ್ನೆಗಳ ಬಗ್ಗೆ ಮಾತ್ರ ಬಾಯಿ ಬಿಡುತ್ತಿಲ್ಲ. ಏನಿದರ ಮರ್ಮ?


ಸಂಚೇತಿಯ ಕಳಪೆ ಕಾಮಗಾರಿ


ಈ ಅಂಜಲಿ ದಮಾನಿಯ ಬೇರೆ ಯಾರೋ ಅಲ್ಲ. ಸ್ವತಃ ಬಿಜೆಪಿ-ಆರೆಸ್ಸೆಸ್‌ಗಳ ಕೃಪಾಶ್ರಯದಲ್ಲಿ ಕಾಂಗ್ರೆಸ್‌ನ ಭ್ರಷ್ಟಾಚಾರವನ್ನು ವಿರೋಧಿಸಲೆಂದು ಹುಟ್ಟಿಕೊಂಡ 'ಭ್ರಷ್ಟಾಚಾರದ ವಿರುದ್ಧ ಭಾರತ' ಎಂಬ ಹೈಫೈ ಸಂಘಟನೆಯೊಂದರ ಸಕ್ರಿಯ ಕಾರ್ಯಕರ್ತೆ ಹಾಗೂ ಮಾಹಿತಿ ಹಕ್ಕು ಹೋರಾಟಗಾರ್ತಿ. ಈಕೆ ಆರೆಸ್ಸೆಸ್ ನಾಯಕರೊಬ್ಬರ ಮಗಳಾಗಿರುವುದರಿಂದ ಈ ಪ್ರಕರಣಕ್ಕೆ ಮತ್ತಷ್ಟು ಮಹತ್ವ ಬಂದಿದೆ.

ಮಹಾರಾಷ್ಟ್ರ ರಾಜ್ಯದಲ್ಲಿ ಆಕೆಯ ಒಂದು ದಶಕದಲ್ಲಿ ನೀರಾವರಿ ಯೋಜನೆಯ ಹೆಸರಿನಲ್ಲಿ ಸಾವಿರಾರು ಕೋಟಿಗಳ ಹಗರಣ ನಡೆದಿದೆ. ಹೇಗೂ ಮಹಾರಾಷ್ಟ್ರದಲ್ಲಿ ಬಿಜೆಪಿ ಅಧಿಕಾರದಲ್ಲಿಲ್ಲ; ಕಾಂಗ್ರೆಸ್-ಎನ್‌ಸಿಪಿ ಮೈತ್ರಿ ಸರ್ಕಾರವಿದೆ ಅಧಿಕಾರದಲ್ಲಿ. ಆದ್ದರಿಂದ 'ಇಂಡಿಯಾ ಎಗೆನೆಸ್ಟ್ ಕರಪ್ಷನ್' ಸಂಘಟನೆಯ ವೈಟ್‌ಕಾಲರ್ ಮಂದಿ ಈ ಹಗರಣದ ಬಗ್ಗೆ ಒಂದಷ್ಟು ಹುಯಿಲೆಬ್ಬಿಸಿ ಫೋಟೋ ತೆಗೆಸಿಕೊಂಡಿದ್ದರು.

ಅಂಜಲಿಯ ಪ್ರಕಾರ ತನ್ನ ಮತ್ತು ಗಡ್ಕರಿ ನಡುವೆ ನಡೆದದ್ದಿಷ್ಟು: 'ಇಂಡಿಯಾ ಎಗೆನೆಸ್ಟ್ ಕರಪ್ಷನ್' ಸಂಘಟನೆಯ ಪ್ರಮುಖ ಕಾರ್ಯಕರ್ತೆಯಾದ ಅಂಜಲಿ ಈ ನೀರಾವರಿ ಹಗರಣದ ಬಗ್ಗೆ ಚರ್ಚಿಸಲು ಕಳೆದ ಆಗಸ್ಟ್ 14ರಂದು ಗಡ್ಕರಿಯನ್ನು ಭೇಟಿ ಮಾಡಿ ಕಾಂಗ್ರೆಸ್-ಎನ್‌ಸಿಪಿ ಸರ್ಕಾರದ ಭ್ರಷ್ಟಾಚಾರದ ವಿರುದ್ಧದ ಹೋರಾಟದೊಂದಿಗೆ ವಿರೋಧ ಪಕ್ಷದ ನಾಯಕರಾದ ಗಡ್ಕರಿ ಕೂಡ ಕೈಜೋಡಿಸಬೇಕೆಂದು ವಿನಂತಿಸಿದಳು.


ಆದರೆ ಈ ವಿಷಯದಲ್ಲಿ ಗಡ್ಕರಿಯ ಪ್ರತಿಕ್ರಿಯೆ ಮಾತ್ರ ಅನಿರೀಕ್ಷಿತವಾಗಿತ್ತು, "ನನ್ನ ಹಾಗು ಎನ್‌ಸಿಪಿ ನಾಯಕ ಶರದ್ ಪವಾರ್ ನಡುವೆ ಕೆಲವು ಕಾಮನ್ ಬ್ಯುಸಿನೆಸ್‌ಗಳಿವೆ... ಕೆಲವೊಮ್ಮೆ ಅವರು ನಮ್ಮ ಕೆಲಸಗಳನ್ನು ಮಾಡಿಕೊಡುತ್ತಾರೆ; ಹಾಗೆ ನಾವು ಅವರ ಕೆಲಸ ಮಾಡಿಕೊಡುತ್ತೇವೆ. ಆದ್ದರಿಂದ ಈ ಬಗ್ಗೆ ಏನೂ ಮಾಡಲಿಕ್ಕಾಗುವುದಿಲ್ಲ" ಎಂದು ಅಂಜಲಿಯ ಮನವಿಯನ್ನು ತಿರಸ್ಕರಿಸಿದರು. ಗಡ್ಕರಿಯ ಇಂಥಾ ನೀತಿಗೆಟ್ಟ ಮಾತುಗಳಿಗೆ ಹೇಗೆ ಪ್ರತಿಕ್ರಿಯಿಸುವುದೆಂದು ತೋಚದೇ ತಬ್ಬಿಬ್ಬಾದ ಅಂಜಲಿ ವಾಪಸ್ಸಾಗಿದ್ದರು.

ವಿಷಯ ಇಷ್ಟಕ್ಕೇ ಮುಗಿಯಲಿಲ್ಲ. ಈ ಹಗರಣದ ವಿರುದ್ಧ ಬಿಜೆಪಿಯ ರಾಷ್ಟ್ರೀಯ ಕಾರ್ಯದರ್ಶಿ ಕಿರಿತ್ ಸೋಮಯ್ಯ ಮುಂಬೈ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಹೂಡಲು ಎಲ್ಲಾ ತಯಾರಿ ನಡೆಸಿದ್ದರು. ಭಯ್ಯು ಮಹಾರಾಜ್ ಎಂಬ ಧಾರ್ಮಿಕ ಮುಖಂಡ ಹಾಗು ಗಡ್ಕರಿ ಇಬ್ಬರೂ ಸೇರಿ ಸೋಮಯ್ಯ ಆ ಕೇಸು ದಾಖಲಿಸದಂತೆ ತಡೆದಿದ್ದಾರೆ ಎಂಬುದು ಅಂಜಲಿ ಆರೋಪ.


ಮಿತೇಶ್ ಬಂಗಾಡಿಯ


ಇದು ಅಂತಿಂಥಾ ಹಗರಣವೇನಲ್ಲ. ಸುಮಾರು 70 ಸಾವಿರ ಕೋಟಿ ಮೊತ್ತದ್ದು. ಅದರಲ್ಲೂ ಈ ಯೋಜನೆ ಬರಗಾಲಪೀಡಿತ ವಿದರ್ಭ ಪ್ರಾಂತ್ಯದ ರೈತರ ಹೊಲಗಳಿಗೆ ನೀರುಣಿಸುವ ಉದ್ದೇಶಕ್ಕಾಗಿ ರೂಪುಗೊಂಡಿದ್ದು. ಕೋಟ್ಯಾಂತರ ಬಡರೈತರ ಬದುಕಿನಲ್ಲಿ ಹಸಿರು ಮೂಡಿಸಬೇಕಿದ್ದ ಯೋಜನೆಯ ಬಹುದೊಡ್ಡ ಮೊತ್ತ ಭ್ರಷ್ಟರ ಪಾಲಾಗಿಹೋಗಿತ್ತು. ಆದರೂ ವಿಪಕ್ಷ ನಾಯಕ ಆ ಬಗ್ಗೆ ತೋರಿಕೆಯ ವಿರೋಧವನ್ನೂ ತೋರಲಿಲ್ಲ ಎಂದರೆ ಏನು ಹೇಳಬೇಕು?

ಅಂಜಲಿಯ ಆರೋಪಗಳನ್ನು ಬದಿಗಿಟ್ಟು ಗಡ್ಕರಿಯ ನಿಜಬಣ್ಣ ಅರಿಯಲು ಈ ಹಗರಣದ ಕೆಲವು ವಿವರಗಳನ್ನು ನೋಡೋಣ. ಹಾಗೆ ನೋಡಿದರೆ ಈ ಹಗರಣವನ್ನು ಮೊದಲಿಗೆ ಬಯಲಿಗೆಳೆದ ವ್ಯಕ್ತಿ ವಿಜಯ್ ಪಂಢಾರೆ. ಆತ ಇದೇ ನೀರಾವರಿ ಇಲಾಖೆಯಲ್ಲಿ ಚೀಫ್ ಇಂಜಿನಿಯರ್ ಆಗಿದ್ದಾರೆ. ಅವರು ಕಳೆದ ಮೇ ತಿಂಗಳಲ್ಲಿ ರಾಜ್ಯಪಾಲ, ಮುಖ್ಯಮಂತ್ರಿ ಹಾಗೂ ನೀರಾವರಿ ಇಲಾಖೆಯ ಕಾರ್ಯದರ್ಶಿಗೆ 15 ಪುಟಗಳ ಒಂದು ಪತ್ರ ಬರೆದು ಈ ಯೋಜನೆಗೆ ವೆಚ್ಚ ಮಾಡಲಾದ ಒಟ್ಟು 70,000 ಕೋಟಿಗಳಲ್ಲಿ ಸುಮಾರು 35,000 ಕೋಟಿಗಳಷ್ಟು ಹಣ ಹೇಗೆ ಕೊಚ್ಚಿ ಹೋಗಿದೆ ಹಾಗೂ ಅಂತಿಮವಾಗಿ ಆ ಹಣ ರಾಜಕಾರಣಿಗಳು, ಅಧಿಕಾರಿಗಳು ಹಾಗೂ ಕಾಂಟ್ರಾಕ್ಟರ್‌ಗಳ ದುಷ್ಟಕೂಟದ ಪಾಲಾಗಿದೆ ಎಂಬುದನ್ನು ವಿವರಿಸಿ, ಆ ಬಗ್ಗೆ ತನಿಖೆ ನಡೆಸಲು ಆಗ್ರಹಿಸಿದ್ದರು.



ಅದರಂತೆ ತನಿಖೆ ನಡೆದು, ಸದರಿ ಯೋಜನೆಗಳ ಕಾಮಗಾರಿಗಳು ಕಳಪೆಯೆಂದೂ, ವ್ಯಾಪಕ ಅವ್ಯವಹಾರ ನಡೆದಿದೆಯೆಂದೂ ವರದಿ ಬಂದಿದೆ. ಆದರೆ ವರದಿಯನ್ನು ಮೂಲೆಗೆ ಎಸೆದು ತಮ್ಮ ಮಾಮೂಲಿ ಲೂಟಿಯನ್ನು ಈ ದುಷ್ಟಕೂಟ ಮುಂದುವರೆಸಿತ್ತು. ಹೀಗೆ 70,000 ಕೋಟಿ ಸಾರ್ವಜನಿಕ ಹಣವನ್ನು ನೀರಾವರಿಗೆಂದು ವೆಚ್ಚ ಮಾಡಿದ ನಂತರ ನೀರಾವರಿ ಪ್ರದೇಶ ಎಷ್ಟು ವಿಸ್ತರಿಸಿರಬಹುದು? ಈ ಹಿಂದೆ ಇದ್ದ ನೀರಾವರಿ ಪ್ರದೇಶದ ಜೊತೆಗೆ ಕೇವಲ 0.1% ಮಾತ್ರ!

ಈ ಯೋಜನೆಯ ಗುತ್ತಿಗೆ ನೀಡುವಾಗ ಎಲ್ಲಾ ನಿಯಮಗಳನ್ನೂ ಗಾಳಿಗೆ ತೂರಲಾಗಿದೆ. ಕೆಲವು ಬೇನಾಮಿ ಕಂಪನಿಗಳಿಗೂ ಹಣ ಪಾವತಿಸಲಾಗಿದೆ. ಯೋಜನೆಯ ಮೂಲ ಅಂದಾಜು ವೆಚ್ಚಕ್ಕಿಂತ ಹಲವು ಪಟ್ಟು ಏರಿಸಲಾಗಿದೆ.


ಅಜಿತ್ ಪವಾರ್

ಅದರ ಫಲಾನುಭವಿಗಳಲ್ಲಿ ಬಿಜೆಪಿಯ ಶಾಸಕರು, ಸಂಸದರೂ ಇದ್ದಾರೆ.

ಅವರಲ್ಲಿ ಪ್ರಮುಖನಾದವನು ಅಜಯ್ ಸಂಚೇತಿ. ಈತ ಕೂಡ ಗಡ್ಕರಿಯಂತೆ ನಾಗಪುರ ಮೂಲದವನೇ. ಈ ಸಂಚೇತಿ ಕುಟುಂಬಕ್ಕೂ ಆರೆಸ್ಸೆಸ್‌ಗೂ ಮೂರು ತಲೆಮಾರುಗಳ ನಂಟು ಇದೆಯಂತೆ. ಈತ ಸಾವಿರಾರು ಕೋಟಿ ಮೌಲ್ಯದ ಉದ್ಯಮಗಳ ಒಡೆಯನಾಗಿದ್ದಾನೆ. ಛತ್ತೀಸ್‌ಘಡ, ಜಾರ್ಖಂಡ್, ಮಹಾರಾಷ್ಟ್ರಗಳನ್ನೂ ಒಳಗೊಂಡು ಹಲವು ರಾಜ್ಯಗಳಿಗೆ ಈತನ ವಹಿವಾಟು ವಿಸ್ತರಿಸಿದೆ. ಈಗ ಬಿಜೆಪಿಯ ರಾಜ್ಯಸಭಾ ಎಂಪಿ ಕೂಡ ಆಗಿದ್ದಾನೆ. ಇಂಥಾ ಅಜಯ್ ಸಂಚೇತಿ ಮಾನ್ಯ ಗಡ್ಕರಿಗೆ ಪರಮ ಆಪ್ತ.

ಇದುವರೆಗೆ ಈ ಆಸಾಮಿ ಈ ನೀರಾವರಿ ಯೋಜನೆಯಲ್ಲಿ ಸುಮಾರು 3,000 ಕೋಟಿ ಮೊತ್ತದ ಗುತ್ತಿಗೆ ಪಡೆದುಕೊಂಡಿದ್ದಾನೆ. ಒಂದೇ ಕಂಪನಿಯ ಹೆಸರನ್ನು ಬದಲಾಯಿಸಿ, ಬೇರೆ ಬೇರೆ ಗುತ್ತಿಗೆ ಗಿಟ್ಟಿಸಿದ್ದಾನೆ. ಅಷ್ಟು ಮಾತ್ರವಲ್ಲ, ಕನಿಷ್ಠ ಒಂದು ಸನಿಕೆ ಮಣ್ಣನ್ನೂ ಎತ್ತದೆ 120 ಕೋಟಿಗಳ ಮುಂಗಡ ಹಣ ಈತನಿಗೆ ಸಂದಾಯವಾಗಿದೆ. ಗಡ್ಕರಿಯ ಕರಾಮತ್ತು ಮತ್ತು ತಾಕತ್ತಿನ ಪರಿಣಾಮ ಅದು. ಈ ದೇಶಭಕ್ತನ ಕಾಮಗಾರಿಗಳು ಅತ್ಯಂತ ಕಳಪೆಯಾಗಿದ್ದು ಮೂರು ಕಾಸಿನ ಉಪಯೋಗಕ್ಕೂ ಬಾರದ ಸ್ಥಿತಿಯಲ್ಲಿವೆ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಕೇಸರಿಕೂಟದ ಮತ್ತೊಬ್ಬ ಫಲಾನುಭವಿ ಮಿತೇಶ್ ಭಂಗಾಡಿಯ ಎಂಬ ಬಿಜೆಪಿ ಎಂಎಲ್‌ಸಿ. ಕೆಲ ವರ್ಷಗಳ ಹಿಂದೆ ಕ್ಲಾಸ್-3 ಗುತ್ತಿಗೆ ಕಾಮಗಾರಿ ನಡೆಸುತ್ತಿದ್ದ ಈತನ ಕಂಪನಿಯ ವಾರ್ಷಿಕ ವಹಿವಾಟು 20 ಲಕ್ಷ ಮಾತ್ರವಾಗಿತ್ತು.

ಗಡ್ಕರಿಯ ಮತ್ತೊಂದು ಮುಖ

ನಿತಿನ್ ಗಡ್ಕರಿ ಕೇವಲ ರಾಜಕಾರಣಿ ಮಾತ್ರವಲ್ಲ, ಆತ ಹಲವು ಕಂಪನಿಗಳ ಅಧಿಪತಿ. ಲಾಭದಾಯಕ ಉದ್ದಿಮೆಗಳ ಬಗ್ಗೆ ಆತನಿಗೆ ರಾಜಕಾರಣಕ್ಕಿಂತಲೂ ಹೆಚ್ಚಿನ ಆಸಕ್ತಿಯಿದೆ ಎಂಬುದೇ ವಾಸ್ತವ. ಈ ಗಡ್ಕರಿ ಎಷ್ಟೊಂದು ಪ್ರಭಾವಶಾಲಿ ಎಂಬುದಕ್ಕೆ ಕಳೆದ ಜೂನ್‌ನಲ್ಲಿ ನಾಗಪುರದಲ್ಲಿ ನಡೆದ ಗಡ್ಕರಿ ಮಗನ ಮದುವೆಯೇ ಸಾಕ್ಷಿ. ಈ ಮದುವೆಗೆ ಖುದ್ದು ಪ್ರಧಾನಿ ಮನಮೋಹನ್ ಸಿಂಗ್ ಹಾಜರಾಗಿದ್ದರು. ಇನ್ನು ಬಿಜೆಪಿಯ ಎಲ್ಲಾ ಗಣ್ಯಾತಿಗಣ್ಯರೂ ಭಾಗವಹಿಸಿದ್ದರು. ನಿತಿನ್ ಗಡ್ಕರಿಯ ಆತ್ಮೀಯ ಮಿತ್ರ ಹಾಗೂ ದೇಶದ ಅತಿ ಶ್ರೀಮಂತ ರಾಜಕಾರಣಿ ಶರದ್ ಪವಾರ್, ಭಾರೀ ಅವ್ಯವಹಾರಗಳ ಮೂಲಕವೇ ಉದ್ಯಮ ಸಾಮ್ರಾಜ್ಯ ನಿರ್ಮಿಸಿರುವ ರಿಲಯನ್ಸ್ ಕಂಪನಿಯ ಅಧಿಪತಿ ಮುಖೇಶ್ ಅಂಬಾನಿ, ರಾಹುಲ್ ಬಜಾಜ್, ಹೆಂಡದ ದೊರೆ ವಿಜಯ್ ಮಲ್ಯ.... ಹೀಗೇ ಅತಿಥಿಗಳ ಪಟ್ಟಿ ಮುಂದುವರೆಯುತ್ತದೆ. ಈ ಅದ್ದೂರಿ ಮದುವೆಯ ಔತಣದ ದಿನದಂದು ನಾಗಪುರ ಪಟ್ಟಣದ ನೆತ್ತಿಯ ಮೇಲೆ ಸುಮಾರು 50ಕ್ಕೂ ಹೆಚ್ಚು ಹೆಲಿಕಾಪ್ಟರ್‌ಗಳು ಹಾಗೂ ವಿಶೇಷ ವಿಮಾನಗಳು ಹಾರಾಡಿದ್ದವು.

ಅದಿರಲಿ, ಮದುಮಗ ಮರಿ ಗಡ್ಕರಿಗೆ ಅಪ್ಪ ಕೊಟ್ಟ ಉಡುಗೊರೆಯ ಮೌಲ್ಯ ಎಷ್ಟು ಗೊತ್ತೆ? ಸುಮಾರು ಒಂಭತ್ತು ಕೋಟಿ ಬಾಳುವ ವಿಲಾಸೀ ಬಂಗಲೆ ಮತ್ತು ಐಷಾರಾಮಿ ಬಿಎಂಡಬ್ಲ್ಯೂ ಕಾರು. ಇಲ್ಲಿ ಒಂದು ವಿಷಯವನ್ನು ನೆನಪಿಸಲೇಬೇಕು. ಅದೇನೆಂದರೆ ಒಂದು ಕಾಲದಲ್ಲಿ ಇದೇ ನಿತಿನ್ ಗಡ್ಕರಿ ತಮ್ಮ ಸ್ಕೂಟರ್‌ಗೆ ಪೆಟ್ರೋಲ್ ಹಾಕಿಸಲು ಪರದಾಡುತ್ತಿದ್ದರು.

ಗಡ್ಕರಿಯ ಆರ್ಥಿಕ ಬೆಳವಣಿಗೆಯಲ್ಲಿ ಈ ಹಿಂದೆ ಮಹಾರಾಷ್ಟ್ರದಲ್ಲಿ ಬಿಜೆಪಿ ಸರ್ಕಾರವಿದ್ದ ಕಾಲ ಪ್ರಮುಖವಾದುದು. ಏಕೆಂದರೆ ಮಾನ್ಯ ಗಡ್ಕರಿ ಆಗ ಪಿಡಬ್ಲ್ಯೂಡಿ ಮಿನಿಸ್ಟರ್ ಆಗಿದ್ದರು. ಹಲವಾರು ಉದ್ಯಮಿಗಳ ಜೊತೆ ಉತ್ತಮ ಒಡನಾಟ ಹೊಂದಿದ್ದ ಗಡ್ಕರಿ 'ಇನ್‌ಫ್ರಾಸ್ಟ್ರಕ್ಚರ್' ಖಾಸಗೀಕರಣದ ಪರವಾಗಿ ಪ್ರಬಲ ಲಾಬಿ ಮಾಡಿ ಯಶಸ್ವಿಯಾಗಿದ್ದರು. ಪರಿಣಾಮವಾಗಿ ಹಲವು ರಸ್ತೆಗಳು, ಫ್ಲೈಓವರ್‌ಗಳು ಖಾಸಗಿ ಖದೀಮರ ಪಾಲಾಗಿದ್ದವು.


ಇದರ ಜೊತೆಜೊತೆಗೆ ಗಡ್ಕರಿಯ ವ್ಯಾಪಾರ ವಹಿವಾಟುಗಳು, ಹೊಸಹೊಸ ಉದ್ಯಮಗಳು ಬೆಳೆಯುತ್ತಲೇ ಹೋದವು. ಷುಗರ್ ಮಿಲ್‌ಗಳು, ರಫ್ತು ವ್ಯವಹಾರ, ಮ್ಯಾಗನೀಸ್ ರಫ್ತು, ವಿದ್ಯುತ್ ಉತ್ಪಾದನೆ, ಕಲ್ಲಿದ್ದಲು ಗಣಿಗಾರಿಕೆ, ರಿಯಲ್ ಎಸ್ಟೇಟ್, ಐಟಿ, ಸಹಕಾರಿ ಸಂಸ್ಥೆಗಳು, ಸಾಲದ್ದಕ್ಕೆ ಅಂತ್ಯೋದಯ ಟ್ರಸ್ಟ್‌ನ ಹೆಸರಿನಲ್ಲಿ ರೇಷ್ಮೆ ಸೀರೆಗಳ ಉತ್ಪಾದನೆ ಹಾಗೂ ಮಾರಾಟ-ಹೀಗೆ ಹತ್ತು ಹಲವು ಉದ್ಯಮಗಳಿಗೆ ಗಡ್ಕರಿಯ ಬಿಸಿನೆಸ್ ವಿಸ್ತರಿಸುತ್ತಲೇ ಹೋಯಿತು. ಇರಲಿ ಬಿಡಿ, ಎಲ್ಲಾ ಶ್ರೀರಾಮನ ಇಚ್ಛೆ! ರಾಷ್ಟ್ರ ಭಕ್ತಿಯ ಫಲ!!

ಆದರೆ ಈ ಎಲ್ಲಾ ವ್ಯವಹಾರಗಳೂ 'ರಾಮನ ಲೆಕ್ಕ'ದಲ್ಲಿ ನಡೆಯುತ್ತವೆ ಎಂದು ಭಾವಿಸುವಂತಿಲ್ಲ. ಪೂರ್ತಿ ರಿಯಲ್ ಎಸ್ಟೇಟ್ ಕಂಪನಿ ಕೊಲ್ಕತ್ತಾದಲ್ಲಿ ಹಲವರಿಗೆ ಯಾಮಾರಿಸಿದ ಬಗ್ಗೆ ದೂರುಗಳು ದಾಖಲಾಗಿದ್ದು ಈ ಕಂಪನಿಯ ಜೊತೆಗೆ ವ್ಯವಹಾರ ಮಾಡದಿರುವಂತೆ ಗ್ರಾಹಕ ವೇದಿಕೆಗಳು ಎಚ್ಚರಿಕೆ ನೀಡಿವೆ. ಹಾಗೆಯೇ ಗೋವಾದಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆಯಲ್ಲಿ ಗಡ್ಕರಿಯ ಜನರೂ ಇದ್ದಾರಂತೆ.

ಅಂದಹಾಗೆ ಹಲವು ವರ್ಷಗಳ ಹಿಂದೆ ಈ ಗಡ್ಕರಿ ಆಗರ್ಭ ಶ್ರೀಮಂತನಾಗಿರಲಿಲ್ಲ. ನಾಗಪುರ ಜಿಲ್ಲೆಯ ಬಡ ಬ್ರಾಹ್ಮಣ ಕುಟುಂಬದ ಹಿನ್ನೆಲೆಯ ಗಡ್ಕರಿಗೆ ನಾಗಪುರ್‌ನಲ್ಲಿರುವ ಆರೆಸ್ಸೆಸ್ ಕೇಂದ್ರ ಕಚೇರಿ ಜೊತೆ ಭಾರೀ ನಂಟು ಹೊಂದಿದ್ದ, ಸಂಘದ ಕಟ್ಟಾಳಾಗಿ ದುಡಿದ ಗಡ್ಕರಿಗೆ ಜಾತಿಬೆಂಬಲವೂ ಇತ್ತು. ಆರಂಭದಲ್ಲಿ ಆರೆಸ್ಸೆಸ್ ಸಭೆಗಳಿಗೆ ಟೆಂಟ್ ಒದಗಿಸುವ ಮೂಲಕ ತನ್ನ ಉದ್ದಿಮೆಯನ್ನು ಪ್ರಾರಂಭಿಸಿದ ಗಡ್ಕರಿ ನೋಡುನೋಡುತ್ತಲೇ ಆಗರ್ಭ ಶ್ರೀಮಂತನಾದ.

ಪ್ರಸ್ತುತದಲ್ಲಿ ಆರೆಸ್ಸೆಸ್‌ನ ಘಟಾನುಘಟಿಗಳಿಗೆ ಗಡ್ಕರಿ ಎಂದರೆ ಅಚ್ಚುಮೆಚ್ಚು. ಆದ್ದರಿಂದಲೇ ಆತನನ್ನು ಪ್ರಭಾವಶಾಲಿ ಹುದ್ದೆಯಾದ ಬಿಜೆಪಿಯ ರಾಷ್ಟ್ರಾಧ್ಯಕ್ಷ ಸ್ಥಾನಕ್ಕೇರಿಸಿ, ಅದರ ಸಕಲ ಲಾಭಗಳನ್ನು ಎಲ್ಲರೂ ಅನುಭವಿಸಿದರು. ಆದರೆ ಆ ಸ್ಥಾನದಲ್ಲಿ ಗಡ್ಕರಿ ಮೂರು ವರ್ಷಗಳನ್ನು ಕಳೆದ ನಂತರ ಬಿಜೆಪಿಯ ಸಂವಿಧಾನದ ಪ್ರಕಾರ ಗಡ್ಕರಿ ಅನಿವಾರ್ಯವಾಗಿ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಯಲೇಬೇಕಿತ್ತು. ಆದರೆ ಇಂಥಾ ಪಳಗಿದ ಚತುರ ಉದ್ಯಮಿಯನ್ನು ಬಿಟ್ಟುಕೊಟ್ಟೋರುಂಟೇ? ಆದ್ದರಿಂದ ಆರೆಸ್ಸೆಸ್ ಹಾಗೂ ಬಿಜೆಪಿ ನಾಯಕಮಣಿಗಳು ಪಕ್ಷದ ನಿಬಂಧನೆಗಳನ್ನೇ ತಿದ್ದುಪಡಿ ಮಾಡಿ ಮಾನ್ಯ ನಿತಿನ್ ಗಡ್ಕರಿಯವರನ್ನು ಮತ್ತೊಂದು ಅವಧಿಗೆ ಅಧ್ಯಕ್ಷರನ್ನಾಗಿ ಮುಂದುವರೆಸಿದ್ದಾರೆ.

ಬೋಲೋ ಭಾರತ್ ಮಾತಾಕಿ ....??



ಅಂಜಲಿ ದಮಾನಿಯ

ಮರೆತನ್ನ ಕೇಸರಿ ಕೆಪಾಸಿಟಿ ಬಳಸಿ ಈತ 500 ಕೋಟಿಗಳ ಗುತ್ತಿಗೆ ಗಿಟ್ಟಿಸಿಕೊಂಡಿದ್ದಾನೆ.

ಮತ್ತೊಂದು ಆಸಕ್ತಿದಾಯಕ ವಿಚಾರವೆಂದರೆ ವಿದರ್ಭ ಪ್ರಾಂತ್ಯದಲ್ಲಿ ಈತನ ಕುಟುಂಬ 'ಲೋಕಶಾಹಿ ವಾರ್ತಾ' ಎಂಬ ದಿನಪತ್ರಿಕೆಯೊಂದನ್ನು ನೆಡೆಸುತ್ತಿದೆ. ಆ ಪತ್ರಿಕೆಯಲ್ಲಿ ಈ ಯೋಜನೆಯ ಕಾಮಗಾರಿ ಸೂಪರ್ ಆಗಿದೆಯೆಂದೂ, ಟೀಕಾಕಾರರ ಉದ್ದೇಶವೇ ಸರಿಯಿಲ್ಲವೆಂದೂ ಕಪೋಲಕಲ್ಪಿತ ಲೇಖನಗಳು ಪುಂಖಾನುಪುಂಖವಾಗಿ ಪ್ರಕಟವಾಗುತ್ತಿವೆ. ಶಹಬ್ಬಾಸ್!! ಬಿಜೆಪಿಯಲ್ಲಿದ್ದುಕೊಂಡು ಇಷ್ಟು ವರ್ಷ ಚೆನ್ನಾಗಿಯೇ ತರಬೇತಾಗಿದ್ದಾನೆ. ಆದರೆ ವಾಸ್ತವದಲ್ಲಿ ಸಾವಿರಾರು ಕೋಟಿಗಳ ವೆಚ್ಚದಲ್ಲಿ ಕಾಮಗಾರಿ ಮುಗಿದಿದ್ದರೂ ಇಷ್ಟು ಒಂದು ಎಕರೆಗೂ ನೀರು ಕೊಡದ ಹಲವು ಉದಾಹರಣೆಗಳು ಇಲ್ಲಿವೆ.

ಈ ಹಗರಣದ ಕೇಂದ್ರಬಿಂದು ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ಎನ್‌ಸಿಪಿಯ ಅಜಿತ್ ಪವಾರ್. ಈತ ಶರದ್ ಪವಾರ್‌ನ ಹತ್ತಿರದ ಬಂಧು. ಈ ಹಗರಣ ಮಾಧ್ಯಮಗಳಲ್ಲಿ ಭಾರೀ ಚರ್ಚೆಯ ವಸ್ತುವಾಗುತ್ತಿದ್ದಂತೆ ಈತ ರಾಜೀನಾಮೆ ಕೊಟ್ಟು ಕೈತೊಳೆದುಕೊಂಡಿದ್ದಾನೆ. ಇದೀಗ ಹೊಸ ನಾಟಕ ಆರಂಭವಾಗಿದೆ. ಆದರೆ ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷ ಎಲ್ಲರ ಉದ್ದೇಶವೂ ಹಗರಣವನ್ನು ಮುಚ್ಚಿಹಾಕುವುದೇ ಆಗಿರುವುದರಿಂದ ಇದರ ಭವಿಷ್ಯ ಏನಾಗಬಹುದೆಂದು ಸುಲಭವಾಗಿ ಊಹಿಸಬಹುದು.

ಹಾಗೆ ಗಡ್ಕರಿಯ ನಿಜಬಣ್ಣ ಅರಿಯಲು ಇನ್ನೊಂದು ಪ್ರಮುಖ ಘಟನಾವಳಿಯನ್ನೂ ಇಲ್ಲಿ ಉಲ್ಲೇಖಿಸಬಹುದು. ಕಲ್ಲಿದ್ದಲು ಹಂಚಿಕೆ ವಿಚಾರದಲ್ಲಿ ನಡೆದ ಹಗರಣದ ಬಗ್ಗೆ ಇದಷ್ಟೂ ಹೆಚ್ಚು ಹುಯಿಲೆಬ್ಬಿಸಿ, ಮುಂದಿನ ಲೋಕಸಭಾ ಚುನಾವಣೆಯಲ್ಲಿ ಅದರ ಲಾಭ ಪಡೆಯುವ ಲೆಕ್ಕಾಚಾರ ಬಿಜೆಪಿಯದು. ಈ ಬಗ್ಗೆ ಬಿಜೆಪಿ ಮಾತ್ರವಲ್ಲದೆ ಎಲ್ಲಾ ವಿರೋಧ ಪಕ್ಷಗಳೂ ಯುಪಿಎ ಸರ್ಕಾರದ ಮೇಲೆ ಮುಗಿಬಿದ್ದಿವೆ. ಸಂಸತ್ ಅಧಿವೇಶನ ನಡೆಯದಂತೆ ನೋಡಿಕೊಂಡುಬಿಟ್ಟಿದ್ದರು. ಆದರೆ ಇಷ್ಟೆಲ್ಲಾ ನಡೆಯುತ್ತಿದ್ದರೂ ಬಿಜೆಪಿಯ ರಾಷ್ಟ್ರಾಧ್ಯಕ್ಷ, ಆರ್‌ಎಸ್‌ಎಸ್‌ನ ಕಣ್ಮಣಿ ನಿತಿನ್ ಗಡ್ಕರಿಯ ಸದ್ದೇ ಇಲ್ಲ, ಎಲ್ಲಿ ಹೋದರಪ್ಪಾ ಇವರು ಅಂತ ಹುಡುಕಿ ನೋಡಿದರೆ ಅವರು ಒಂದು ಫಸ್ಟ್ ಟೂರ್ ಪ್ಲಾನ್ ಮಾಡಿಕೊಂಡು ತಮ್ಮ ಕುಟುಂಬದ ಜೊತೆ ಕೆನಡಾ ದೇಶಕ್ಕೆ ಹಾರಿಹೋಗಿದ್ದರು.

ಇದೇನಪ್ಪಾ ಈ ಅಧ್ಯಕ್ಷ ಹೀಗೆ ಮಾಡ್ತಾರೆ? ಏನಾಗಿದೆ ಇವರಿಗೆ ಅಂತಾ ಕೆದಕುತ್ತಾ ಹೋದರೆ ಅಸಲಿಯತ್ತು ಬೇರೆಯೇ ಇತ್ತು. ಬಿಜೆಪಿ ಆಡಳಿತದ ಛತ್ತೀಸ್‌ಘಡದಲ್ಲಿ ಗಡ್ಕರಿಯ ಮಿತ್ರ ಇದೇ ಅಜಯ್ ಸಂಚೇತಿ ಎಂಬಾತ ಎಸ್‌ಎಂಎಸ್ ಇನ್‌ಫ್ರಾಸ್ಟ್ರಕ್ಚರ್ ಕಂಪನಿಯ ಹೆಸರಿನಲ್ಲಿ ಎನ್‌ಎಂಡಿಸಿಯ ವ್ಯಾಪ್ತಿಯಲ್ಲಿದ್ದ ಕಲ್ಲಿದ್ದಲು ಗಣಿಯನ್ನು ಅಗ್ಗದ ಬೆಲೆಗೆ ಗುತ್ತಿಗೆ ಪಡೆದುಕೊಂಡಿದ್ದಾನೆ. ಆ ನಂತರ ಸಿಎಜಿ ಕೈಗೊಂಡ ತನಿಖೆಯಲ್ಲಿ ರಾಜ್ಯ ಸರ್ಕಾರಕ್ಕೆ ಈ ವ್ಯವಹಾರದಿಂದ ಸುಮಾರು 1,000 ಕೋಟಿಗಳ ನಷ್ಟ ಉಂಟಾಗಿರುವುದಾಗಿ ವರದಿ ನೀಡಿದೆ. ಗಡ್ಕರಿಯ ಒಂದು ಕಂಪನಿಯೂ ಸಹ ತನ್ನ ಥರ್ಮಲ್ ಪವರ್ ಪ್ರಾಜೆಕ್ಟ್‌ಗಾಗಿ ಕಲ್ಲಿದ್ದಲು ಗುತ್ತಿಗೆ ಪಡೆದಿರಬಹುದೆಂಬ ವದಂತಿಯಿದೆ.


ಮತ್ತೊಂದು ವಿಚಾರ ಹೇಗಿದೆ ನೋಡಿ. ಬಿಜೆಪಿ ಪಕ್ಷ ಕಳೆದ ಒಂದು ತಿಂಗಳಿನಿಂದ ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಬಂಡವಾಳದ ನೇರ ಹೂಡಿಕೆಯನ್ನು ವಿರೋಧಿಸಿ ಪಾರ್ಲಿಮೆಂಟಿನಲ್ಲೂ, ಬೀದಿಗಳಲ್ಲೂ ಹುಯಿಲೆಬ್ಬಿಸುತ್ತಿರುವುದನ್ನು ನಾವು ನಿತ್ಯವೂ ನೋಡುತ್ತಿದ್ದೇವೆ. ಆದರೆ ಈ ಸ್ವದೇಶಿ ಮುಸುಕುಧಾರಿಗಳ ನಿಜರೂಪ ಅರ್ಥ ಮಾಡಿಕೊಳ್ಳಲು ಮೊನ್ನೆ ದೆಹಲಿಯಲ್ಲಿ ನಡೆದ ಬಿಜೆಪಿ ಯುವ ಮೋರ್ಚಾ ಸಭೆಯಲ್ಲಿ ನಿತಿನ್ ಗಡ್ಕರಿ ಹೇಳಿದ ಮಾತನ್ನು ಗಮನಿಸಬೇಕು. "ನಮ್ಮ ದೇಶಕ್ಕೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ವಿದೇಶಿ ಬಂಡವಾಳ ಹರಿದುಬರಬೇಕಾದ ಅಗತ್ಯವಿದೆ. ಆದರೆ ದೇಶದಲ್ಲಿ ಅದಕ್ಕೆ ಪೂರಕ ವಾತಾವರಣವಿಲ್ಲ" ಎಂದು ವಿಷಾದ ವ್ಯಕ್ತಪಡಿಸಿದ್ದಾರೆ.

ಇದು ಸ್ವದೇಶಿ ಮುಖವಾಡದ ಹಿಂದಿನ ಅಸಲಿ ಮುಖ; ಬಿಜೆಪಿ ಅಧ್ಯಕ್ಷ ಸ್ವಾಮಿ, ಸಂಘ ಪರಿವಾರದ ಅಚ್ಚುಮೆಚ್ಚಿನ ಆಯ್ಕೆ, ಇದೇ ನಿತಿನ್ ಗಡ್ಕರಿ. ಬೆಲ್ಲ ಇರೋಕಡೆ ಇರುವೆ ಮುತ್ತಿಕೊಳ್ಳೋದು ಸಹಜ ಅಲ್ಲವೆ?

• ದೊಡ್ಡಿಪಾಳ್ಯ ನರಸಿಂಹಮೂರ್ತಿ

'ಎಂದೋ'ಸಲ್ಫಾನ್: ನಿರ್ಲಕ್ಷ್ಯದ ಎರಡು ನಿದರ್ಶನಗಳು

ಪುಸ್ತಕದ ಕಟ್ಟಕಡೆಯಲ್ಲಿ ಮುನ್ನುಡಿ ಬರೆದರೆ ಹೇಗಿರುತ್ತೆ?



ಇತ್ತೀಚೆಗಷ್ಟೆ ಟಿವಿ ಚಾನೆಲ್ ಒಂದರ ಕ್ಯಾಮೆರಾದೆದುರು ಸರಿಸುಮಾರು ಅರ್ಧಗಂಟೆಯ ಪ್ಯಾನೆಲ್ ಡಿಸ್ಕಷನ್‌ಗೆ ಕುಳಿತ ದಕ್ಷಿಣ ಕನ್ನಡ ಜಿಲ್ಲೆಯ ಉಸ್ತುವಾರಿ ಸಚಿವ ಸಿ.ಟಿ.ರವಿಯ ಮಾತು'ಕತೆ' ಕೇಳಿದ ನಂತರ ಇಂತಹದ್ದೊಂದು ಅಪಹಾಸ್ಯದ ಪ್ರಶ್ನೆ ಕಾಡುತ್ತದೆ. 'ಎಂದೋ' ಆಗಿಹೋಗಿರುವ ಕೆಲಸವನ್ನು ಈಗ ಮಾಡಬೇಕೆಂದು ಗಾಂಭೀರ್ಯವಾಗಿ ಹೇಳಿದ ಅವರ ಮಾತುಗಳಿಂದಾಗಿ ಎಂಡೋಸಲ್ಫಾನ್ ಪೀಡಿತರ ರೌರವ ಬದುಕಿನತ್ತ ಸರ್ಕಾರಕ್ಕಿರುವ ದಿವ್ಯ ಅಸಡ್ಡೆ, ನೆಪದ ಕಾಳಜಿಯ ಪರಿಚಯವೂ ಆದಂತಾಗುತ್ತದೆ.

ಸರ್ಕಾರವೇ ತಿನ್ನಿಸಿದ ಎಂಡೋಸಲ್ಫಾನ್ ಎನ್ನುವ ವಿಷವುಂಡು ನರಳುತ್ತಿರುವ ನತದೃಷ್ಟ ಜೀವಗಳ ಯಾತನೆ ಇಂದು ನಿನ್ನೆಯದಲ್ಲ. ರಾಜ್ಯ ಸರ್ಕಾರದ ಅರಣ್ಯ ಇಲಾಖೆಗೆ ಸೇರುವ ಕರ್ನಾಟಕ ಗೋಡಂಬಿ ಅಭಿವೃದ್ಧಿ ಕಾರ್ಪೊರೇಷನ್ (ಕೆ.ಸಿ.ಡಿ.ಸಿ) ಸಂಸ್ಥೆಯು ದಕ್ಷಿಣ ಕನ್ನಡ ಜಿಲ್ಲೆಯ 92 ಹಳ್ಳಿಗಳಲ್ಲಿದ್ದ ತನ್ನ ಗೋಡಂಬಿ ಪ್ಲಾಂಟೇಷನ್‌ಗಳಿಗೆ ಸತತ 18 ವರ್ಷಗಳ ಕಾಲ ಸಿಂಪಡಿಸಿದ ಎಂಡೋಸಲ್ಫಾನ್‌ನ ದುರಂತ ಇದು. 2001ರಲ್ಲೇ ಇದರ ಸಿಂಪಡಣೆಯನ್ನು ಅಲ್ಲಿ ನಿಲ್ಲಿಸಿದೆಯಾದರೂ ಇವತ್ತಿಗೂ ಕರಾಳಛಾಯೆ ಮುಂದುವರೆಯುತ್ತಲೇ ಇದೆ. ಗಾಳಿ, ನೀರು, ತಿನ್ನುವ ಆಹಾರ, ಕೊನೆಗೆ ಅಂತರ್ಜಲದಲ್ಲೂ ಬೆರೆತುಹೋಗಿದ್ದ ಈ ರಕ್ಕಸ ರಾಸಾಯನಿಕದ ಪರಿಣಾಮದಿಂದಾಗಿ ಮಾನವನ ಜೀನ್‌ಗಳಲ್ಲೇ ವ್ಯತ್ಯಯ ಉಂಟಾಗಿ ಹುಟ್ಟುವ ಮಕ್ಕಳು ಅಂಗವೈಕಲ್ಯತೆ, ಬುದ್ಧಿಮಾಂದ್ಯತೆ ಇಲ್ಲವೆ ಹಾರ್ಮೋನುಗಳ ತೊಂದರೆಯಿಂದ ನರಳುತ್ತಿರುವುದು ಇಲ್ಲಿನ ಸಾಮಾನ್ಯ ಚಿತ್ರಣ. ಕೆಲ ಎನ್.ಜಿ.ಒಗಳು, ಸಂವೇದನಾಶೀಲ ಹೋರಾಟಗಾರರು, ಪರಿಸರಪ್ರೇಮಿಗಳು, ಅಷ್ಟೇ ಏಕೆ ಖುದ್ದು ರಾಷ್ಟ್ರೀಯ ಮಾನವ ಹಕ್ಕು ಆಯೋಗವೇ ಪೀಡಿತರಿಗೆ ಪರಿಹಾರ ದೊರಕಿಸಿಕೊಡುವಂತೆ ಸ್ಪಷ್ಟ ನಿರ್ದೇಶನ ನೀಡಿದ್ದರೂ ಇದುವರೆವಿಗೂ ಸರ್ಕಾರ ಮನಸ್ಸಿಟ್ಟು ಸ್ಪಂದಿಸಿಲ್ಲ. ಹಾಗೊಮ್ಮೆ ಹೀಗೊಮ್ಮೆ ಈ ಕುರಿತು ಮಾನವೀಯತೆ, ಅಂತಃಕರಣದ ಮಾತನ್ನಾಡುವ ಆಳುವ ಮಂದಿ ನಂತರ ಎಲ್ಲವನ್ನೂ ಮರೆತು ಸುಮ್ಮನಾಗಿಬಿಡುತ್ತಾರೆ. ಅವತ್ತು ಮಾತನಾಡಿದ ಸಿ.ಟಿ.ರವಿಯವರ ಮಾತುಗಳಲ್ಲೂ



ಎಂಡೋಸಲ್ಫಾನ್ ಪೀಡಿತ ಮಗು


ಅಂತಹುದೇ ಬೇಜವಾಬ್ದಾರಿತನ ಎದ್ದು ಕಾಣುತ್ತಿತ್ತು.

ಪೀಡಿತರ ದುಸ್ಥಿತಿಗೆ ಒಂದಷ್ಟು ಮಮ್ಮಲ ಮರುಗಿದ ಸಚಿವ ಸಾಹೇಬರು ತಮ್ಮ ಮಾತಿನುದ್ದಕ್ಕೂ ಒಂದು ಗಂಭೀರ ಅಧ್ಯಯನವಾಗಬೇಕು, ಅದಕ್ಕೆ ಅಂತಾರಾಷ್ಟ್ರೀಯ ಮಟ್ಟದ ಸಹಕಾರ ಬೇಕು, ಇದಕ್ಕೆಂದು ವೈದ್ಯಕೀಯ ಕಾಲೇಜುಗಳ ಇಲ್ಲವೆ ಸಂಶೋಧನಾ ಕೇಂದ್ರಗಳನ್ನು ಬಳಸಿಕೊಳ್ಳಬೇಕೆಂಬ ವೀರೋಚಿತ ಮಾತುಗಳನ್ನೇ ಆಡಿದ್ದರು. ಸಂಬಂಧಪಟ್ಟ ರಾಸಾಯನಿಕ ಕಾರ್ಖಾನೆಗಳ ವಿರುದ್ಧ ಹೈಕೋರ್ಟ್‌ನಲ್ಲಿ ಸರ್ಕಾರ ಸೋಲುವುದಕ್ಕೆ ಇಂತಹ ಸಮಗ್ರ ವೈಜ್ಞಾನಿಕ ಅಧ್ಯಯನದ ವರದಿ ಇಲ್ಲದಿದ್ದುದೇ ಕಾರಣವೆಂಬ ಸರ್ಕಾರಿ ಅಸಹಾಯಕತೆಯನ್ನೂ ತೋಡಿಕೊಂಡಿದ್ದರು. ಸುಮ್ಮನೇ ಕುಳಿತು ಆಲಿಸುವವರಿಗೆ ಸಚಿವರ ಮಾತುಗಳಲ್ಲಿ ಕಾಳಜಿ ಮತ್ತು ದೂರದೃಷ್ಟಿ ಎದ್ದು ಕಾಣುವಂತಿತ್ತು. ಏಕೆಂದರೆ ಸಿ.ಟಿ.ರವಿ ಹೇಳಿದ್ದು ಅರ್ಧ ಸತ್ಯ ಮಾತ್ರ! ಅಥವಾ ಸಚಿವರಿಗೆ ತಿಳಿದಿದ್ದೇ ಆ ಅರ್ಧ ಸತ್ಯ ಮಾತ್ರವೇ ಇರಬೇಕು.

ಅವರು ಒತ್ತಿ ಒತ್ತಿ ಹೇಳುತ್ತಿದ್ದ ವೈಜ್ಞಾನಿಕ ಅಧ್ಯಯನ ಮುಗಿದೇ ಐದಾರು ವರ್ಷ ಕಳೆಯುತ್ತಿದೆ. ಎಲ್ಲಕ್ಕೂ ಎಂಡೋಸಲ್ಫಾನ್ ಹೇಗೆ ಕಾರಣವಾಗಿದೆ ಎಂಬ ಸಮಗ್ರ ವರದಿ ಸರ್ಕಾರದ ಫೈಲುಗಳಲ್ಲಿ ಧೂಳು ತಿನ್ನುತ್ತಾ ಕೂತಿದೆ. ಆ ವರದಿಯನ್ನೇ ಆಧರಿಸಿ ಸುಪ್ರೀಂ ಕೋರ್ಟ್ ಮೇಲಿಂದ ಮೇಲೆ ಸರ್ಕಾರಗಳಿಗೆ ಛೀಮಾರಿ ಹಾಕುತ್ತಿದೆ. ಇಂತಹ ಮಹತ್ವದ ಅಧ್ಯಯನ ನಡೆದಿರುವುದನ್ನೇ ಮರೆತವರಂತೆ ಸಚಿವ ಸಿ.ಟಿ.ರವಿ ಅಧ್ಯಯನ, ಅಧ್ಯಯನ ಎಂದು ಕನವರಿಸಿದ್ದು ನಿಜಕ್ಕೂ ವಿಷಾದನೀಯ.

ಅಷ್ಟಕ್ಕೂ ಯಾವುದೋ ಎನ್.ಜಿ.ಓ ಆಗಲಿ, ಖಾಸಗಿ ಸಂಸ್ಥೆಯಾಗಲಿ ನಡೆಸಿದ್ದ ಏಕಪಕ್ಷೀಯ ಅಧ್ಯಯನವಲ್ಲ ಅದು. ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್ (ಐ.ಸಿ.ಎಂ.ಆರ್) ಎಂಬ ಪ್ರತಿಷ್ಠಿತ ರಾಷ್ಟ್ರೀಯ ಸಂಸ್ಥೆ ಬರೋಬ್ಬರಿ 8,62,022 ರೂ. ಅನುದಾನ ಬಿಡುಗಡೆ ಮಾಡಿ ತಜ್ಞರಿಂದ ಮಾಡಿಸಿದ್ದ ಅಧ್ಯಯನ ಅದಾಗಿತ್ತು. ಮಣಿಪಾಲದ ಕಸ್ತೂರಬಾ ವೈದ್ಯಕೀಯ ಕಾಲೇಜಿನ ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗದ ಮುಖ್ಯಸ್ಥ ಡಾ. ಪ್ರತಾಪ್ ಕುಮಾರ್ ಅವರ ನೇತೃತ್ವದಲ್ಲಿ ವೈದ್ಯರಾದ ಡಾ. ಸತೀಶ್ ಅಡಿಗ (ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗ), ಡಾ. ಸತೀಶ್ ರಾವ್ (ರೇಡಿಯೋ ಬಯಾಲಜಿ), ಡಾ.ಗಣೇಶ್‌ಚಂದ್ರ ಜಗೇಟಿಯಾ (ರೇಡಿಯೋ ಬಯಾಲಜಿ) ಮೊದಲಾದ ತಜ್ಞರ

Figure 3 Mean (SEM) Score for testicular development



Other Abnormalities:

Table 15 shows the prevalence of goitre in the study and control subjects. It may be noted that all cases of goire were classified as physiological goitre occurring at the onset of puberty. The significance of higher prevalence of this physiological variation in the study girls is not clear and may be investigated in further details.

Table 19 Prevalence of goitre

	Female	Male
Reference	2 / 183 (1.09)	1 / 233 (0.43)
Study	14 / 258 (5.41)* P=0.032978	0 / 361 (0.00)

Figures in parenthesis indicate percentage.

ಎನ್‌ಐಒಎಚ್ ವರದಿಯ ಒಂದು ಪುಟ...

Observations of micronucleus (MN) assay

Fig 6: Profiles of micro nucleated binucleate cells (MNBNC) in control and endosulfan exposed subjects with different age groups

ಐಸಿಎಂ ಆರ್ ವರದಿಯ ಒಂದು ಪ್ರತಿ






Fig 7: Profiles of overall MNBNC in control and endosulfan exposed population



The level of significance was determined using one-way ANOVA. There was significant increase in micro nucleated binucleate cells of endosulfan-exposed population ($p < 0.0001$) compared to controls. The Pearson's r-value was 0.246 ($p < 0.01$) for micronuclei and age. It was -0.123 ($p < 0.05$) for micronuclei and non-vegetarians in endosulfan exposed populations. In endosulfan-exposed population, the

ತಂಡ ಫಾರ್ಮಕಾಲಜಿ ವಿಭಾಗದ ಮುಖ್ಯಸ್ಥ ಡಾ. ರವೀಂದ್ರನಾಥ್ ಶಾನಭೋಗ್ ಅವರ ಮಾರ್ಗದರ್ಶನದಲ್ಲಿ ಸತತ ಮೂರು ವರ್ಷಗಳ ಕಾಲ ಸಮಗ್ರ ಅಧ್ಯಯನ ನಡೆಸಿ, ಪೀಡಿತರನ್ನು ಭೇಟಿಯಾಗಿ, ಮಾದರಿಗಳನ್ನು ಪರೀಕ್ಷಿಸಿ ಎಂಡೋಸಲ್ಫಾನ್ ಎಂತಹ ಗಂಭೀರ ವಿಷ ಎನ್ನುವ ವರದಿಯನ್ನು ತಯಾರಿಸಿ ಐ.ಸಿ.ಎಂ.ಆರ್‌ಗೆ ಕಳುಹಿಸಿಕೊಟ್ಟಿದ್ದರು. ಇದು ಸರ್ಕಾರದ್ದೇ ಅಧ್ಯಯನ, ಸರ್ಕಾರದ್ದೇ ವರದಿ. ಇಂತಹ ಅಮೂಲ್ಯ ಅಧ್ಯಯನ ನಡೆದಿರುವ ಮಾಹಿತಿ ಖುದ್ದು ಸಚಿವರಿಗೇ ಇಲ್ಲವೆಂದ ಮೇಲೆ ಸರ್ಕಾರಕ್ಕೆ ಎಂಡೋಸಲ್ಫಾನ್ ಪೀಡಿತರ ಬಗ್ಗೆ ಇನ್ನೆಂತಹ ಆಸ್ಥೆ ಇರಬೇಡ?

ಕೇವಲ ಇದೊಂದೇ ವರದಿಯಲ್ಲ, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಆಕ್ಯುಪೇಷನಲ್ ಹೆಲ್ತ್ (ಎನ್.ಐ.ಒ.ಎಚ್) ಎನ್ನುವ ಅಹಮದಾಬಾದ್‌ನ ಮತ್ತೊಂದು ರಾಷ್ಟ್ರೀಯ ಸಂಸ್ಥೆಯೂ ಸಹ **The Investigation of Unusual Illnesses Allegedly Produced by Endosulfan Exposure** ಎನ್ನುವ 98 ಪುಟಗಳ ಸಮಗ್ರ ವರದಿಯನ್ನು ತಯಾರಿಸಿಟ್ಟಿದೆ. ಇದೂ ಸಹ ತಜ್ಞರು ತಯಾರಿಸಿದ ವೈಜ್ಞಾನಿಕ ವರದಿ. ಹೀಗೆ ಎರಡೆರಡು ಅಧ್ಯಯನಗಳನ್ನು ಕಣ್ಮುಂದಿಟ್ಟುಕೊಂಡು ಮತ್ತೊಂದು ಅಧ್ಯಯನದ ಬಗ್ಗೆ ಮಾತನಾಡುತ್ತಿರುವ ಸರ್ಕಾರದ ಹಿಂದಿರುವ ಉದ್ದೇಶವಾದರೂ ಏನು? ಹೊಸದೊಂದು ಅಧ್ಯಯನ ನಡೆಯಬೇಕೆಂದರೆ ಏನಿಲ್ಲವೆಂದರೂ ನಾಲ್ಕರಿಂದ ಐದು ವರ್ಷ ಬೇಕಾಗುತ್ತದೆ ಹಾಗೂ ಈಗಿನ ಪರಿಸ್ಥಿತಿಯಲ್ಲಿ ಹತ್ತಾರು ಕೋಟಿ ಹಣವನ್ನೂ ವ್ಯಯಿಸಬೇಕಾಗುತ್ತದೆ. ತೆರಿಗೆ ಹಣ ಪೋಲಾಗುವುದು ಮಾತ್ರವಲ್ಲ ಸಂತ್ರಸ್ತರಿಗೆ ಸಲ್ಲಬೇಕಾದ ಪರಿಹಾರವೂ ಇದರ ನೆಪದಲ್ಲಿ ಮರೀಚಿಕೆಯಾಗುತ್ತದೆ. ಈಗಾಗಲೇ ಪಕ್ಕದ ಕೇರಳದಲ್ಲಿ ಪ್ರತಿ ಸಂತ್ರಸ್ತರಿಗೆ ಮಾನವ ಹಕ್ಕು ಆಯೋಗದ ಶಿಫಾರಸ್ಸಿನಂತೆ ತಲಾ ಐದು ಲಕ್ಷ ಪರಿಹಾರವನ್ನು ನೀಡಲಾಗಿದೆ. ಆದರೆ ರಾಜ್ಯದಲ್ಲಿ ಸರ್ಕಾರಿ ಲೆಕ್ಕದಂತೆ ಪ್ರತಿ ಪೀಡಿತನಿಗೆ ಲಭಿಸಿರುವುದು ಕೇವಲ 50,000 ಮಾತ್ರ. ಇಲ್ಲಿಯೂ ಕೇರಳ ಮಾದರಿಯಲ್ಲೇ ಪರಿಹಾರ ನೀಡುವ ಕುರಿತು ಈಗ ಯೋಚಿಸಲಾಗುತ್ತಿದೆ ಅದೂ ವರದಿ



ಸಂಶೋಧಕ ರವೀಂದ್ರನಾಥ್ ಶಾನಭೋಗ್

ಬಂದಮೇಲೆ ಎಂಬ ಒಕ್ಕಣೆ ಸಚಿವ ಸಾಹೇಬರದ್ದು.

ಇನ್ನು ರಾಜ್ಯ ಸರ್ಕಾರ ಈ ವಿಷಯವಾಗಿ ಅದೆಷ್ಟು ನಿರ್ಲಕ್ಷ್ಯ ವಹಿಸಿದೆ ಎಂಬುದಕ್ಕೆ ಮತ್ತೊಂದು ನಿದರ್ಶನವಿದೆ. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಜನರ ಸಿಂಪತಿ ಗಿಟ್ಟಿಸಿಕೊಳ್ಳಲು ಸಚಿವೆ ಶೋಭಾ ಮಂಡಿಸಿದ ಎಂಡೋಸಲ್ಫಾನ್ ನಿಷೇಧ ಮಾಡುವ ಪ್ರಸ್ತಾಪವನ್ನು ಒಂದು ಮಸೂದೆ ಎನ್ನುವಂತೆ ಎರಡೂ ಸದನಗಳಲ್ಲಿ ಕೈ ಎತ್ತುವ ಮೂಲಕ ಸರ್ವರೂ ಅಂಗೀಕರಿಸಿದ್ದರು. ರಾಸಾಯನಿಕವೊಂದನ್ನು ನಿಷೇಧಿಸಬೇಕೆಂದರೆ ಅದಕ್ಕೆ ಬೇಕಾದ ವೈಜ್ಞಾನಿಕ ಪುರಾವೆಗಳನ್ನು ಇಟ್ಟುಕೊಂಡೇ ಮುಂದುವರೆಯಬೇಕು. ಆದರೆ ಅಷ್ಟು ಪರಿಜ್ಞಾನ ಯಾರಿಗೂ ಇದ್ದಂತಿರಲಿಲ್ಲ. ಎಂಡೋಸಲ್ಫಾನ್ ಕಂಪನಿಗಳು ಸಹಜವಾಗೇ ರಾಜ್ಯ ಸರ್ಕಾರದ ವಿರುದ್ಧ ಕೋರ್ಟ್ ಮೆಟ್ಟಿಲೇರಿದ್ದವು. ಆಗ ಕೋರ್ಟ್ ಸಹ ಯಾವ ಅಧ್ಯಯನ ಮಾನದಂಡದ ಮೇಲೆ ಎಂಡೋಸಲ್ಫಾನ್ ಕಂಪನಿಗಳು ಅಪಾಯವೆಂದು ನಿಷೇಧಿಸಿದ್ದೀರಿ ಎಂದು ರಾಜ್ಯ ಸರ್ಕಾರದ ವಿವರಣೆ ಕೇಳಿತ್ತು. ಆಗ ಮುಖ್ಯಮಂತ್ರಿ ಆದಿಯಾಗಿ ಪ್ರತಿಯೊಬ್ಬರೂ ತಬ್ಬಿಬ್ಬಾಗಿದ್ದರು. ಅದೇ ಸಮಯದಲ್ಲಿ ಈ ಕುರಿತು ಅಧ್ಯಯನ ಮಾಡಿ ಸಕಲ ವೈಜ್ಞಾನಿಕ ದಾಖಲೆ ಹೊಂದಿದ್ದ ಡಾ. ರವೀಂದ್ರನಾಥ್ ಶಾನಬೋಗ್ ಅವರ ವಿಚಾರ ಸಚಿವೆ ಶೋಭಾ ಕರಂದ್ಲಾಜೆ ಕಿವಿಗೆ ಬಿದ್ದಿತ್ತು. ಖುದ್ದು ಕರಂದ್ಲಾಜೆಯೇ ಅವರಿಗೆ ಫೋನಾಯಿಸಿ ಸರ್ಕಾರಕ್ಕೆ ಸಹಾಯ ಮಾಡುವಂತೆ ಅಂಗಲಾಚಿದ್ದರು. ವಿಷಯವನ್ನು ಗಂಭೀರವಾಗಿ ಪರಿಗಣಿಸುವುದಾದರೆ ಮಾತ್ರವೇ ಸಹಾಯ ಮಾಡುವುದಾಗಿ ಷರತ್ತು ವಿಧಿಸಿದ ನಂತರವಷ್ಟೇ ಡಾ. ರವೀಂದ್ರನಾಥ್‌ರು ತಮ್ಮ ಸಕಲ ವರದಿಗಳೊಟ್ಟಿಗೆ ಸರ್ಕಾರದ ಸಹಾಯಕ್ಕೆ ಧಾವಿಸಿದ್ದರು.


ಕುಮಾರಕೃಪಾದಲ್ಲಿ ನಡೆದ ಸಭೆಯೊಂದರಲ್ಲಿ ಯಡಿಯೂರಪ್ಪ, ಶೋಭಾ ಕರಂದ್ಲಾಜೆ ಮತ್ತು ಸಚಿವ ಸುರೇಶ್ ಕುಮಾರ್ ಸಮ್ಮುಖದಲ್ಲಿ ಎಂಡೋಸಲ್ಫಾನ್‌ನ ವಿಷಕಾರಿ ಪರಿಣಾಮಗಳನ್ನು ಎಳೆಎಳೆಯಾಗಿ ಬಿಡಿಸಿಟ್ಟಿದ್ದ ರವೀಂದ್ರನಾಥ್ ಪ್ರತಿಯೊಬ್ಬರಿಗೂ ತಮ್ಮ ಬಳಿ ಇದ್ದ 300 ಪುಟಗಳ ವರದಿಯ ಒಂದೊಂದು ಪ್ರತಿಯನ್ನು ನೀಡಿದ್ದರು. ಅದೊಂದು ವರದಿ ಸಾಕಾಗಿತ್ತು, ಸರ್ಕಾರ ಕೋರ್ಟ್‌ನಲ್ಲಿ ಆ ಕಂಪನಿಗಳನ್ನು ಬಗ್ಗು ಬಡಿಯಲು. ಆದರೆ ಅವರ್‍ಯಾರು ಆ ಕೆಲಸಕ್ಕೆ ಮುಂದಾಗಲೇ ಇಲ್ಲ. ಕೋರ್ಟ್‌ಗೆ ಇಂತಹ ಮಹತ್ವದ ಪುರಾವೆಯನ್ನು ಒದಗಿಸದ ಕಾರಣ ಕೇಸ್ ಬಿದ್ದು ಹೋಗಿತ್ತು. ಒಂದೊಮ್ಮೆ ಕೋರ್ಟ್‌ಗೆ ಆ ವರದಿ ತಲುಪಿದ್ದೇ ಆಗಿದ್ದಲ್ಲಿ ವಿಷಕಾರಿ ರಾಸಾಯನಿಕವನ್ನು ಮಾರಾಟ ಮಾಡಿದ ಕಂಪನಿಗಳಿಗೆ ಛೀಮಾರಿ ಹಾಕುವುದು ಮಾತ್ರವಲ್ಲದೆ ಸಂತ್ರಸ್ತರಿಗೆ ಕಂಪನಿಗಳೇ ಪರಿಹಾರ ನೀಡುವಂತೆ ಖಂಡಿತಾ ತಾಕೀತು ಮಾಡುತ್ತಿತ್ತು. ಆಗ ಪರಿಹಾರ ರೂಪದ ಬೃಹತ್ ಮೊತ್ತ ವಂಚಕ ಎಂಡೋ ಕಂಪನಿಗಳ ಕೈ ಬಿದುತ್ತಿತ್ತು. ಆದರೆ ಬಿಜೆಪಿ ಸರ್ಕಾರ ಅದ್ಯಾವುದನ್ನೂ ಮಾಡದೆ ಎಂಡೋಸಲ್ಫಾನ್ ಪೀಡಿತರಿಗೆ ದ್ರೋಹ ಬಗೆದದ್ದು ಮಾತ್ರವಲ್ಲ ಲಾಭ ಮಾಡಿಕೊಂಡ ಕಂಪನಿಗಳು ಭರಿಸಬೇಕಾದ ಪರಿಹಾರವನ್ನು ಈಗ ತೆರಿಗೆದಾರರ ಹಣದಿಂದ ನೀಡಿ ಕ್ರೆಡಿಟ್ ಪಡೆದುಕೊಳ್ಳಲು ಹವಣಿಸುತ್ತಿದೆ.

ಮನುಕುಲದ ಮಹಾದುರಂತಕ್ಕೆ ಸರ್ಕಾರ ಸ್ಪಂದಿಸುತ್ತಿರುವ ರೀತಿ ಇದು.

• ಗಿರೀಶ್ ತಾಳಿಕಟ್ಟೆ

ಯಡ್ಡಿ: ಎಲ್ಲಿಗೆ ಪಯಣ, ಯಾವುದು ದಾರಿ.....

ಶಿಸ್ತಿನ ಪಕ್ಷವೆಂದು ಹೇಳಿಕೊಳ್ಳುತ್ತಿದ್ದ ಬಿಜೆಪಿಯು ಈಗ ಅಶಿಸ್ತು ತುಂಬಿರುವ ಮನೆಯಾಗಿದೆ. ಅದಕ್ಕಿಂತಲೂ ಮುಖ್ಯವಾಗಿ ಈ ಮನೆಯೊಡೆಯ ಯಡಿಯೂರಪ್ಪನವರೇ ಬಿಜೆಪಿ ಮನೆಯನ್ನು ಒಡೆಯುತ್ತಿದ್ದಾರೆ. ಮನೆಯ ಮಾಲೀಕನೇ ಮನೆಯಿಂದ ಹೊರಬಂದು ಇನ್ನೊಂದು ಮನೆಯನ್ನು ಕಟ್ಟುವ ಉತ್ಸಾಹದಲ್ಲಿದ್ದಾರೆ. ಅಲ್ಲಿಗೆ ಮತ್ತೊಮ್ಮೆ ಅಧಿಕಾರದ ಗದ್ದುಗೆಯನ್ನು ಏರುವ ಬಿಜೆಪಿಯ ಕನಸು ನುಚ್ಚುನೂರಾಗಿದೆ.



ಕೊನೆಗೂ ಬಿಜೆಪಿಗೆ ಗುಡ್‌ಬೈ ಹೇಳುವ ಬಗ್ಗೆ ಯಡಿಯೂರಪ್ಪ ಬಾಯಿಬಿಟ್ಟಿದ್ದಾರೆ. ಯಡ್ಡಿ ಪಕ್ಷ ಬಿಡುವ ಬಗ್ಗೆ ಈತನಕ ರಾಜಕೀಯ ವಲಯದಲ್ಲಿ ಊಹಾಪೋಹಗಳು ಇದ್ದವೇ ಹೊರತು ಅವರು ಎಲ್ಲೂ ನೇರವಾಗಿ ಅಥವಾ ಪರೋಕ್ಷವಾಗಿ ಹೊಸ ಪಕ್ಷ ಕಟ್ಟುವ ಬಗ್ಗೆ ಅಥವಾ ಬಿಜೆಪಿಗೆ ವಿದಾಯ ಹೇಳುವ ಬಗ್ಗೆ ಹೇಳಿರಲಿಲ್ಲ. "ಏನೇ ಇದ್ದರೂ ಇದು ನಮ್ಮ ಒಂದು ಕುಟುಂಬದ ಸಮಸ್ಯೆ, ನಾವು ನಾವೇ ನಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುತ್ತೇವೆ" ಎಂದು ತೇಪೆ ಹಚ್ಚುವ ಮಾತುಗಳನ್ನಾಡುತ್ತಿದ್ದ ಯಡಿಯೂರಪ್ಪ ಈಗ ನಿಜವಾಗಲೂ ಗರಂ ಆಗಿದ್ದಾರೆ.

ಮೊನ್ನೆ ಯಡ್ಡಿಯನ್ನು ಭೇಟಿಯಾಗುವ ಉದ್ದೇಶದಿಂದಲೇ ರಾಷ್ಟ್ರೀಯ ನಾಯಕ ಅರುಣ್ ಜೇಟ್ಲಿ ಬೆಂಗಳೂರಿಗೆ ಬಂದಾಗ ಶಿವಮೊಗ್ಗೆಯ ರೈಲು ಹತ್ತಿದ ಯಡ್ಡಿ ಜೇಟ್ಲಿ ಅವರನ್ನು ಭೇಟಿಯಾಗದೇ ಹೈಕಮಾಂಡ್ ವಿರುದ್ಧ ತನ್ನ ಆಕ್ರೋಶ ಮತ್ತು ಅಸಮಾಧಾನವನ್ನು ವ್ಯಕ್ತಪಡಿಸಿದರು. ಅದಕ್ಕಿಂತ ಮೊದಲು ಹರಿಯಾಣದಲ್ಲಿ ನಡೆದ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಗೂ ಗೈರುಹಾಜರಾಗುವ ಮುಖಾಂತರ ಯಡ್ಡಿ ತನ್ನ ಸಿಟ್ಟನ್ನು ದೆಹಲಿ ದೊರೆಗಳಿಗೆ ತೋರಿಸಿದ್ದರು.

ಆದರೆ ಈಗ ಹೀಗೆ ಪರೋಕ್ಷವಾಗಿ ತನ್ನ ಸಿಟ್ಟು ಪ್ರದರ್ಶಿಸುವ ಕಾಲ ಮುಗಿದುಹೋಗಿದೆ. ಮೊನ್ನೆ ಚಿಕ್ಕಮಗಳೂರಿನಲ್ಲಿ ಬಿಜೆಪಿ ಬಿಟ್ಟುಹೋಗುವ ಬಗ್ಗೆ ಸೂಚ್ಯವಾಗಿ ಯಡ್ಡಿ ಹೇಳಿದ್ದಾರೆ. "ನಾನು ಯಾವುದೇ ರಾಷ್ಟ್ರೀಯ ಪಕ್ಷಕ್ಕೆ ಸೇರುವುದಿಲ್ಲ" ಎಂದು ಹೇಳಿರುವ ಯಡ್ಡಿ ತನ್ನ ಬೆಂಬಲಿಗರಿಗೆ ಮತ್ತು ದೆಹಲಿ ದೊರೆಗಳಿಗೆ ತಾನು ಹೊಸ ಪಕ್ಷ ಕಟ್ಟುವ ಬಗ್ಗೆ ಸೂಚನೆ ನೀಡಿದ್ದಾರೆ. ಅಷ್ಟೇ ಅಲ್ಲ ಡಿಸೆಂಬರ್‌ತನಕ ಬಿಜೆಪಿಯಲ್ಲೇ ಇದ್ದುಬಿಡಿ ಎಂದು ತನ್ನ ಬೆಂಬಲಿಗ ಶಾಸಕರಿಗೆ ಕಿವಿಮಾತು ಹೇಳಿರುವ ಯಡಿಯೂರಪ್ಪ ಈಗ ಮಾನಸಿಕವಾಗಿ ಎಲ್ಲರನ್ನೂ ಬಿಜೆಪಿಗೆ ವಿದಾಯ ಹೇಳಲು ತಯಾರು ಮಾಡುತ್ತಿದ್ದಾರೆ.

ಬಿಜೆಪಿಗೆ ಯಡಿಯೂರಪ್ಪ ವಿದಾಯ ಹೇಳಿದರೆ ಇದರಿಂದ ಲಾಭವಾಗುವುದು ಯಾರಿಗೆ? ಹಾಗೆಯೇ ಯಡಿಯೂರಪ್ಪ ಹೊಸ ಪಕ್ಷ ಕಟ್ಟುತ್ತಾರೋ ಅಥವಾ ಈಗಿರುವ ಯಾವುದಾದರೂ ಪ್ರಾದೇಶಿಕ ಪಕ್ಷದ ಜೊತೆಗೆ ಸೇರಿಕೊಳ್ಳುತ್ತಾರೋ ಎಂಬಿತ್ಯಾದಿ ವಿಷಯಗಳ ಬಗ್ಗೆ ಈಗ ರಾಜಕೀಯ ವಲಯದಲ್ಲಿ ಚರ್ಚೆ ಆರಂಭವಾಗಿದೆ.

ಒಂದೇ ಮಾತಿನಲ್ಲಿ ಹೇಳುವುದಾದರೆ ಕಳೆದ 40 ವರ್ಷಗಳಿಂದ ತಾನೇ ಬೆಳೆಸಿದ ಬಿಜೆಪಿ ಪಕ್ಷವನ್ನು ಬಿಟ್ಟು ಹೊಸ ಪಕ್ಷದತ್ತ ಪ್ರಯಾಣ ಆರಂಭಿಸಿರುವ ಯಡಿಯೂರಪ್ಪನವರ ಈ ಕ್ರಮ ರಾಜ್ಯ ರಾಜಕೀಯದಲ್ಲಿ ಅನೇಕ ಹೊಸ ಧ್ರುವೀಕರಣಕ್ಕೆ ನಾಂದಿಯಾಗುತ್ತದೆ. ವಾಸ್ತವವಾಗಿ ಯಡಿಯೂರಪ್ಪ ಇಲ್ಲದ ಬಿಜೆಪಿ ಯಾವ ಕಾರಣಕ್ಕೂ ಮತ್ತೊಮ್ಮೆ ಅಧಿಕಾರಕ್ಕೆ ಬರುವುದೇ ಇಲ್ಲ. ಅಂದರೆ, ತಾನೇ ಪೋಷಿಸಿ ಬೆಳೆಸಿದ ಬಿಜೆಪಿ ಪಕ್ಷವನ್ನು ನಿರ್ನಾಮ ಮಾಡಲು ಯಡಿಯೂರಪ್ಪ ನಿರ್ಧರಿಸಿದ್ದಾರೆಂದಾಯಿತು.

ಈತನಕ ಮತ್ತೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗುವ ಕನಸು ಕಾಣುತ್ತಿದ್ದ ಯಡಿಯೂರಪ್ಪ ಈಗ ಹೊಸ ಪಕ್ಷವನ್ನು ಕಟ್ಟುವ ಮುಖಾಂತರ ಒಂದು ರೀತಿಯಲ್ಲಿ ಮುಖ್ಯಮಂತ್ರಿ ಗದ್ದುಗೆಯೇರುವ ಕನಸಿಗೂ ವಿದಾಯ ಹೇಳಿದಂತೆ ಆಗಿದೆ. ಹೀಗಾಗಿ ಕಿಂಗ್ ಆಗುವ ಬದಲು ಕಿಂಗ್‌ಮೇಕರ್ ಆಗುವುದೇ ವಾಸಿ ಎಂಬ ತೀರ್ಮಾನಕ್ಕೆ ಬಂದಿರುವ ಯಡಿಯೂರಪ್ಪ ಮುಂದಿನ ಸರ್ಕಾರ ರಚನೆಯಲ್ಲಿ ಪ್ರಮುಖವಾದ ಪಾತ್ರ ನಿರ್ವಹಿಸಲು ನಿರ್ಧರಿಸಿದ್ದಾರೆ.

ಕಳೆದ ಒಂದು ವರ್ಷದಿಂದ ಜೆಡಿ(ಎಸ್)ನ ಕುಮಾರಸ್ವಾಮಿಯವರು ಮುಂದಿನ ಸರ್ಕಾರ ರಚನೆ ಸಂದರ್ಭದಲ್ಲಿ ಕಿಂಗ್‌ಮೇಕರ್ ಆಗುತ್ತಾರೆಂದೇ ನಂಬಲಾಗಿತ್ತು, ಅದಕ್ಕೆ ಸರಿಯಾಗಿ ಅವರು ತಮ್ಮ ಪಕ್ಷದ ತಂತ್ರಗಳನ್ನು ಬದಲಾಯಿಸುತ್ತಾ ಕನಿಷ್ಠವೆಂದರೂ 40 ರಿಂದ 50 ಸೀಟುಗಳನ್ನು ಗೆದ್ದರೆ ಮುಂದಿನ ಸರ್ಕಾರದ ಕೀಯನ್ನು ತಮ್ಮ ಕೈಯಲ್ಲಿಟ್ಟುಕೊಳ್ಳಬಹುದು ಎಂದು ರಾಜಕೀಯ ತಂತ್ರಗಾರಿಕೆ ಹೆಣೆದಿದ್ದರು.

ಈಗ ಯಡಿಯೂರಪ್ಪ ಕೂಡ ಹೊಸ ಪಕ್ಷವನ್ನು ಕಟ್ಟುವ ಉತ್ಸಾಹ ತೋರಿಸುವುದನ್ನು ನೋಡಿದರೆ ಮುಂದಿನ ಸರ್ಕಾರ ರಚನೆಯ ಸಂದರ್ಭದಲ್ಲಿ ಇಬ್ಬರು ಕಿಂಗ್‌ಮೇಕರ್‌ಗಳ ನಡುವೆ ದೊಡ್ಡ ಹಣಾಹಣಿ ನಡೆಯುವುದು ಗ್ಯಾರಂಟಿ ಆಗಿದೆ. ಹೀಗಾಗಿ ರಾಷ್ಟ್ರೀಯ ಪಕ್ಷಗಳಾದ ಕಾಂಗ್ರೆಸ್ ಅಥವಾ ಬಿಜೆಪಿ ಸರ್ಕಾರ ರಚಿಸುವ ಸಂದರ್ಭ ಒದಗಿಬಂದಲ್ಲಿ ಕರ್ನಾಟಕದ ಈ ಇಬ್ಬರು ದಂಡನಾಯಕರ ಬೆಂಬಲವಿಲ್ಲದೆ ಸರ್ಕಾರ ರಚಿಸಲಾಗದಂತಹ ಒಂದು ವಿಶಿಷ್ಟ ರಾಜಕೀಯ ಪರಿಸ್ಥಿತಿ ಉದ್ಭವವಾಗುತ್ತದೆ.

ಸದ್ಯದ ರಾಜಕೀಯ ಪರಿಸ್ಥಿತಿ ಹೇಗಿದೆ ಎಂದರೆ ನೂರು ವರ್ಷಗಳ ಇತಿಹಾಸವಿರುವ ಕಾಂಗ್ರೆಸ್‌ನಲ್ಲೂ ಒಳಜಗಳ ತಾರಕಕ್ಕೇರಿದೆ. ಅಲ್ಲಿ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಲು ಹತ್ತಾರು ನಾಯಕರುಗಳು ಕಾದು ನಿಂತಿದ್ದಾರೆ. ವಾಸ್ತವವಾಗಿ ಆ ಪಕ್ಷದಲ್ಲಿ ಕಾರ್ಯಕರ್ತರಿಗಿಂತ ನಾಯಕರೇ ಹೆಚ್ಚಾಗಿ ಕಾಣಿಸುತ್ತಿದ್ದಾರೆಂಬ ಹಾಸ್ಯವೂ ಪ್ರಚಲಿತದಲ್ಲಿದೆ. ಬಿಜೆಪಿಯಂತೂ ಯಾವ ಕಾಲಕ್ಕೂ ಸ್ವತಂತ್ರವಾಗಿ ಕರ್ನಾಟಕದ ಗದ್ದುಗೆಯೇರುವ ಸಾಧ್ಯತೆ ಬಹಳ ಕಡಿಮೆ. ಆದ್ದರಿಂದ ಅತ್ಯಂತ ಹೆಚ್ಚು ಸ್ಥಾನವನ್ನು ಒಂದು ವೇಳೆ ಕಾಂಗ್ರೆಸ್ ಪಕ್ಷ ಪಡೆದುಕೊಂಡರೂ ಈ ಇಬ್ಬರು ದಂಡನಾಯಕರಲ್ಲಿ ಒಬ್ಬರ ಸಹಕಾರ ಬೇಕೇಬೇಕಾಗುತ್ತದೆ.

ಈ ಕಾರಣಕ್ಕಾಗಿಯೇ ಈಗ ಯಡ್ಡಿ ಗುಂಪಿನಲ್ಲಿ ಒಂದು ಹೊಸ ಸಮಸ್ಯೆ ತಲೆದೋರಿದೆ. ಅದೇನೆಂದರೆ ನೇರವಾಗಿ ಕಾಂಗ್ರೆಸ್ ಪಕ್ಷವನ್ನು ಸೇರಬೇಕು ಎಂದು ಕೆಲವರು ಯಡ್ಡಿ ಬಳಿ ಹೇಳಿಕೊಂಡಿದ್ದಾರೆ. ಆದರೆ ಕಳೆದ ನಲವತ್ತು ವರ್ಷಗಳಿಂದ ರಾತ್ರಿ, ಹಗಲು ಕಾಂಗ್ರೆಸ್ಸನ್ನು ಬೈಯುತ್ತಾ ಬಂದಿರುವ ಯಡಿಯೂರಪ್ಪ ಮಾನಸಿಕವಾಗಿ ಕಾಂಗ್ರೆಸ್ ಸೇರಲು ತಯಾರಿಲ್ಲ. ಅದರ ಬದಲಿಗೆ ಕಾಂಗ್ರೆಸ್ ಜೊತೆ ಈಗಾಗಲೇ ಸ್ನೇಹ ಸಂಪಾದಿಸಿರುವ ಯಾವುದಾದರೂ ಪಕ್ಷದ ಜೊತೆಗೆ ಗುರುತಿಸಿಕೊಂಡು ಆ ಮೂಲಕ ಕಾಂಗ್ರೆಸ್ ಮನೆಯನ್ನು ಪ್ರವೇಶಿಸುವುದು ಒಳ್ಳೆಯದು ಎಂಬ ಲೆಕ್ಕಾಚಾರ ಯಡ್ಡಿಯದ್ದು. ಆ ಕಾರಣಕ್ಕಾಗಿಯೇ ಅವರು ಈಗಾಗಲೇ ಎನ್.ಸಿ.ಪಿ.ಯ ರಾಷ್ಟ್ರೀಯ ಅಧ್ಯಕ್ಷ ಶರದ್ ಪವಾರ್ ಜೊತೆ ಎರಡು-ಮೂರು ಸುತ್ತಿನ ಮಾತುಕತೆ ಮುಗಿಸಿದ್ದಾರೆ. ಆದರೆ ಪವಾರ್ ಜೊತೆ ಗುರುತಿಸಿಕೊಂಡರೆ ಮರಾಠಿ ವಿರೋಧಿಗಳು ಉತ್ತರ ಕರ್ನಾಟಕದಲ್ಲಿ ಸಾಕಷ್ಟು ಸಂಖ್ಯೆಯಲ್ಲಿರುವುದರಿಂದ ಅವರೆಲ್ಲರೂ ತನ್ನ ಬೆಂಬಲಕ್ಕೆ ಬಾರದಿರಬಹುದು ಎಂಬ ಅಂಜಿಕೆಯೂ ಯಡ್ಡಿಗಿದೆ. ಅಷ್ಟೇ ಅಲ್ಲ, ಶರದ್ ಪವಾರ್ ಮತ್ತು ಸೋನಿಯಾ ಗಾಂಧಿ ಸಂಬಂಧ ಈಗ ಈ ಹಿಂದಿನಷ್ಟು ಗಟ್ಟಿಯಾಗಿಲ್ಲದಿರುವುದರಿಂದ ಯಡ್ಡಿ ಎನ್‌ಸಿ.ಪಿ ಜೊತೆ ಮೈತ್ರಿ ಮಾಡಿಕೊಳ್ಳಲು ಹಿಂದೇಟು ಹಾಕುತ್ತಿದ್ದಾರೆ.

ಎನ್‌ಸಿ.ಪಿ ಹೊರತಾಗಿ ಯಡ್ಡಿ ಕಣ್ಣು ಸುಬ್ರಹ್ಮಣ್ಯಸ್ವಾಮಿ ನೇತೃತ್ವದ ಜನತಾ ಪಕ್ಷದ ಮೇಲೆಯೂ ಬಿದ್ದಿದೆ. ಇದಕ್ಕೆ ಮುಖ್ಯ ಕಾರಣ ಅವರ ಬಳಿಯಿರುವ ನೇಗಿಲು ಹೊತ್ತ ರೈತನ ಚಿಹ್ನೆ. ಆ ಚಿಹ್ನೆ ಸಿಕ್ಕರೆ ತಾನು ರೈತಪರ ಎಂದು ಹೇಳಿಕೊಳ್ಳಲು ಸುಲಭವಾಗುತ್ತದೆ ಮತ್ತು ರೈತರ ಓಟನ್ನು ಪಡೆಯಲು ನೆರವಾಗುತ್ತದೆ ಎಂಬುದು ಯಡ್ಡಿ ನಂಬಿಕೆ.



ಆದರೆ ನೇಗಿಲು ಹೊತ್ತ ರೈತ ಚಿಹ್ನೆಯ ಬಗ್ಗೆ ಯಡ್ಡಿಯ ಅನುಯಾಯಿಗಳಿಂದಲೇ ಅಪಸ್ವರ ಮೂಡಿಬಂದಿದೆ. ಅವರ ಪ್ರಕಾರ ನೇಗಿಲು ಹೊತ್ತ ರೈತ ಚಿಹ್ನೆ ಒಂದು ರೀತಿಯಲ್ಲಿ ಒಕ್ಕಲಿಗರನ್ನು ಪ್ರತಿನಿಧಿಸುತ್ತದೆ. ಆದ್ದರಿಂದ ಅಂತಹ ಚಿಹ್ನೆಯಿಂದ ಉತ್ತರ ಕರ್ನಾಟಕದ ಲಿಂಗಾಯತ ಮತದಾರರು ಬೇಸರ ಮಾಡಿಕೊಳ್ಳಬಹುದು ಎಂಬುದು ಅವರ ಆತಂಕ. ಅಷ್ಟೇ ಅಲ್ಲ, ಸುಬ್ರಹ್ಮಣ್ಯ ಸ್ವಾಮಿ ಒಂದು ರೀತಿಯಲ್ಲಿ ಅತ್ಯಂತ ಅಪಾಯಕಾರಿ ರಾಜಕಾರಣಿ. ಅಂತವರ ಜೊತೆ ದೀರ್ಘಕಾಲದವರೆಗೆ ಸುಮಧುರ ಸಂಬಂಧವನ್ನು ಇಟ್ಟುಕೊಳ್ಳಲು ಸಾಧ್ಯವಾಗದು ಎಂಬ ಅರಿವೂ ಯಡ್ಡಿಗಿದೆ. ಹೀಗಾಗಿ ಜನತಾದಳ ಪಕ್ಷ ಸೇರುವ ಸಾಧ್ಯತೆ ಕಡಿಮೆಯಿದೆ.



ಚಿತ್ರ ಕೃಪೆ
ಪ್ರಕಾಶ್ ಶೆಟ್ಟಿ

ಈ ಮಧ್ಯೆ ಮುಲಾಯಂ ಸಿಂಗ್ ಯಾದವ್ ನೇತೃತ್ವದ ಸಮಾಜವಾದಿ ಪಕ್ಷದ ಜೊತೆಗೆ ಯಾಕೆ ಮೈತ್ರಿಯನ್ನು ಬೆಳೆಸಿಕೊಳ್ಳಬಾರದು ಎಂಬ ಚಿಂತನೆಯೂ ಯಡ್ಡಿ ವಲಯದಲ್ಲಿ ನಡೆಯುತ್ತಿದೆ. ಇತ್ತೀಚೆಗೆ ನಡೆದ ಉತ್ತರ ಪ್ರದೇಶದ ಅಸೆಂಬ್ಲಿ ಚುನಾವಣೆಯಲ್ಲಿ ಮುಲಾಯಂ ಸಿಂಗ್ ನೇತೃತ್ವದ ಸಮಾಜವಾದಿ ಪಕ್ಷ ಕಾಂಗ್ರೆಸ್ ಮತ್ತು ಮಾಯಾವತಿಯ ಬಿಎಸ್‌ಪಿ ಪಕ್ಷಗಳನ್ನು ಧೂಳೀಪಟ ಮಾಡಿತ್ತು. ಸಮಾಜವಾದಿ ಪಕ್ಷದ ಜೊತೆಗೆ ಹೊಂದಾಣಿಕೆ ಮಾಡಿಕೊಂಡರೆ ಹಿಂದುಳಿದ ವರ್ಗ ಮತ್ತು ಮುಸ್ಲಿಂ ಜನಾಂಗದ ಬೆಂಬಲವೂ ಸಿಗುತ್ತದೆ ಎಂಬ ಯೋಚನೆ ಯಡ್ಡಿ ಆ ಪಕ್ಷದತ್ತ ಗಮನಹರಿಸಲು ಪ್ರೋತ್ಸಾಹಿಸುತ್ತಿದೆ. ಆದರೆ ಮುಲಾಯಂ ಸಿಂಗ್ ಅವರ ಒಲವು ಮತ್ತು ನಿಲುವುಗಳು ಆಗಾಗ್ಗೆ ಬದಲಾಗುವುದರಿಂದ ಅವರನ್ನು ಸಂಪೂರ್ಣವಾಗಿ ನಂಬಲು ಯಡ್ಡಿ ಹಿಂದೇಟು ಹಾಕುತ್ತಿದ್ದಾರೆ.

ಯಾವ ಪಕ್ಷದ ಜೊತೆಗೆ ಹೊಂದಾಣಿಕೆ ಮಾಡಿಕೊಳ್ಳಬೇಕು ಎಂಬ ತೀರ್ಮಾನಕ್ಕೆ ಯಡಿಯೂರಪ್ಪ ಬಂದಿಲ್ಲವಾದ್ದರಿಂದ ಡಿಸೆಂಬರ್ ತನಕ ಬಿಜೆಪಿಯಲ್ಲೇ ಇರಿ ಎಂದು ತನ್ನ ಬೆಂಬಲಿಗರಿಗೆ ಸೂಚಿಸಿದ್ದಾರೆ. ಇದೆಲ್ಲದರ ಮಧ್ಯೆ ಬೇರೆ ಪಕ್ಷದ ಜೊತೆಗೆ ಸೇರುವ ಬದಲಾಗಿ ಕರ್ನಾಟಕ ಜನತಾ ಪಾರ್ಟಿ ಎಂಬ ಹೊಸ ಪಕ್ಷವನ್ನೇ ಕಟ್ಟೋಣ ಎಂಬ ಚಿಂತನೆಯೂ ಯಡ್ಡಿಯವರಲ್ಲಿದೆಯಂತೆ. ಹಾಗಾದರೆ ಬಿಜೆಪಿ V/s ಕೆ.ಜೆ.ಪಿ ಸಮರವು ಮುಂದಿನ ಚುನಾವಣೆ ಸಂದರ್ಭದಲ್ಲಿ ನಡೆಯಲಿದೆ.

ಡಿಸೆಂಬರ್ ತಿಂಗಳ ಎರಡನೇ ಅಥವಾ ಮೂರನೇ ವಾರದಲ್ಲಿ ಯಡಿಯೂರಪ್ಪ ಹೊಸ ಪಕ್ಷವನ್ನು ಅಧಿಕೃತವಾಗಿ ಘೋಷಿಸಬಹುದು ಎಂಬುದು ಅವರ ಅನುಯಾಯಿಗಳ ಮಾತು. ಆ ಸಂದರ್ಭದಲ್ಲಿ ಅವರ ಜೊತೆ ಅವರ ಹಿಂಬಾಲಕರ್‍ಯಾರೂ ಇರುವುದಿಲ್ಲ, ಅವರೆಲ್ಲ ಜಗದೀಶ್ ಶೆಟ್ಟರ್ ನೇತೃತ್ವದ ಬಿಜೆಪಿಯಲ್ಲೇ ಮುಂದುವರಿಯುತ್ತಾರೆ. ಆದರೆ ಚುನಾವಣೆ ಘೋಷಣೆಯಾದ ಕೂಡಲೇ ಯಡ್ಡಿ ಹಿಂಬಾಲಕರೆಲ್ಲ ಬಿಜೆಪಿಯಿಂದ ಹಾರಿಬರುವ ಒಂದು ತಂತ್ರಗಾರಿಕೆಯನ್ನು ಅವರು ಹಮ್ಮಿಕೊಂಡಿದ್ದಾರೆ. ಈ ಮಧ್ಯೆ ಡಿಸೆಂಬರ್‌ನಲ್ಲಿ ಪಕ್ಷ ಘೋಷಣೆಯಾದ ಕೂಡಲೇ ಸುಮಾರು 50 ಕ್ಷೇತ್ರಗಳಿಗೆ ಯಡಿಯೂರಪ್ಪ ಅಭ್ಯರ್ಥಿಯನ್ನು ಘೋಷಿಸಲಿದ್ದಾರೆ ಎಂಬ ಮಾತೂ ಕೇಳಿಬರುತ್ತಿದೆ.

ಯಡಿಯೂರಪ್ಪ ಹೊಸ ಪಕ್ಷ ರಚಿಸಿದ್ದೇ ಆದಲ್ಲಿ ಈ ರಾಜ್ಯದಲ್ಲಿ ಮತ್ತೊಂದು ಪ್ರಾದೇಶಿಕ ಪಕ್ಷವೊಂದನ್ನು ಹುಟ್ಟುಹಾಕಿದಂತಾಗುತ್ತದೆ. ಈ ಹಿಂದೆ ಕೆಂಗಲ್ ಹನುಮಂತಯ್ಯ, ದೇವರಾಜ್ ಅರಸ್, ಗುಂಡೂರಾವ್, ರಾಮಕೃಷ್ಣ ಹೆಗಡೆ, ಬಂಗಾರಪ್ಪ ಮೊದಲಾದವರು ಪ್ರಾದೇಶಿಕ ಪಕ್ಷಗಳನ್ನು ಹುಟ್ಟುಹಾಕಿದ್ದರೂ ಅವರ್‍ಯಾರೂ ಚುನಾವಣೆಯಲ್ಲಿ ಗೆದ್ದಿರಲಿಲ್ಲ, ತನ್ನ ಲಿಂಗಾಯತ ಜಾತಿಯವರನ್ನೇ ಅವಲಂಬಿಸಿರುವ ಯಡ್ಡಿ ಈ ನಿಟ್ಟಿನಲ್ಲಿ ಎಷ್ಟು ಯಶಸ್ವಿ ಆಗುತ್ತಾರೆಂದು ಭವಿಷ್ಯ ನಿರ್ಧರಿಸಲಿದೆ.

ಮುಂದಿನ ಚುನಾವಣೆಯಲ್ಲಿ ರಾಜಕೀಯವಾಗಿ ಅತ್ಯಂತ ಪ್ರಬಲವಾಗಿರುವ ಒಕ್ಕಲಿಗ ಮತ್ತು ಲಿಂಗಾಯತ ಸಮುದಾಯದ ನಡುವೆ ಹಣಾಹಣಿ ನಡೆಯುವುದಂತೂ ಖಚಿತ. ಈಗ ಪ್ರಶ್ನೆಯಿರುವುದಿಷ್ಟೇ. ಮುಂದಿನ ಮುಖ್ಯಮಂತ್ರಿ ಯಾರೆಂಬುದಲ್ಲ, ಮುಂದಿನ ಮುಖ್ಯಮಂತ್ರಿ ಆಯ್ಕೆಯಲ್ಲಿ ಯಡಿಯೂರಪ್ಪನವರ ಮಾತು ನಡೆಯುತ್ತೋ ಅಥವಾ ಕುಮಾರಸ್ವಾಮಿಯವರ ಮಾತು ನಡೆಯುತ್ತೋ ಎಂಬುದೇ ಮುಖ್ಯವಾದುದಾಗಿದೆ.

ಯಡಿಯೂರಪ್ಪನವರು ಹೊಸ ಪಕ್ಷವನ್ನು ಕಟ್ಟಿದರೆ ಕನಿಷ್ಠವೆಂದರೂ ಈಗಿರುವ 46 ಜನ ಬಿಜೆಪಿ ಲಿಂಗಾಯತ ಶಾಸಕರಲ್ಲಿ 30 ಜನರಾದರೂ ಅವರ ಜೊತೆಗೆ ಕೈಜೋಡಿಸುತ್ತಾರೆಂಬ ಮಾತು ಕೇಳಿಬರುತ್ತಿದೆ. ಹಾಗೆಯೇ, ಕಾಂಗ್ರೆಸ್ ಪಕ್ಷದಲ್ಲಿ ಲಿಂಗಾಯತ ನಾಯಕರಿಗೆ ಸರಿಯಾದ ಸ್ಥಾನಮಾನ ಇಲ್ಲ ಎಂಬ ಕಾರಣಕ್ಕೆ ಆ ಪಕ್ಷದಿಂದ ಕೆಲವು ಲಿಂಗಾಯತ ನಾಯಕರು ಯಡ್ಡಿ ಜೊತೆಗೆ ಕೈಜೋಡಿಸುವ ಮಾತೂ ಕೇಳಿಬರುತ್ತಿದೆ. ಬಹುತೇಕ ಲಿಂಗಾಯತ ಶಾಸಕರು ಲಿಂಗಾಯತ ಮಠಾಧೀಶರ ಕೃಪೆಯಿಂದ ಗೆದ್ದುಬಂದಿದ್ದಾರೆ. ಈ ಕಾರಣಕ್ಕೆ ಮುಂದಿನ ಚುನಾವಣೆ ಘೋಷಣೆಯಾದ ನಂತರ ಲಿಂಗಾಯತ ಮಠಾಧೀಶರು ರಾಜಕೀಯದಲ್ಲಿ ಹೆಚ್ಚು ಕೈಆಡಿಸುವ ಸೂಚನೆಗಳು ಕಾಣಿಸುತ್ತಿವೆ.

ಶಿಸ್ತಿನ ಪಕ್ಷವೆಂದು ಹೇಳಿಕೊಳ್ಳುತ್ತಿದ್ದ ಬಿಜೆಪಿಯು ಈಗ ಅಶಿಸ್ತು ತುಂಬಿರುವ ಮನೆಯಾಗಿದೆ. ಅದಕ್ಕಿಂತಲೂ ಮುಖ್ಯವಾಗಿ ಈ ಮನೆಯೊಡೆಯ ಯಡಿಯೂರಪ್ಪನವರೇ ಬಿಜೆಪಿ ಮನೆಯನ್ನು ಒಡೆಯುತ್ತಿದ್ದಾರೆ. ಮನೆಯ ಮಾಲೀಕನೇ ಮನೆಯಿಂದ ಹೊರಬಂದು ಇನ್ನೊಂದು ಮನೆಯನ್ನು ಕಟ್ಟುವ ಉತ್ಸಾಹದಲ್ಲಿದ್ದಾರೆ. ಅಲ್ಲಿಗೆ ಮತ್ತೊಮ್ಮೆ ಅಧಿಕಾರದ ಗದ್ದುಗೆಯನ್ನು ಏರುವ ಬಿಜೆಪಿಯ ಕನಸು ನುಚ್ಚುನೂರಾಗಿದೆ. ತನಗೆ ಅವಮಾನ ಮಾಡಿದ ದೆಹಲಿ ನಾಯಕರಿಗೆ ಮತ್ತು ತನ್ನ ಸಾಂಪ್ರದಾಯಿಕ ವೈರಿ ಅನಂತ್‌ಕುಮಾರ್‌ಗೆ ಬುದ್ಧಿ ಕಲಿಸಲೇಬೇಕೆಂದು ಯಡ್ಡಿ ಪಣ ತೊಟ್ಟಂತಿದೆ.

ಚಡ್ಡಿಗಳ ಈ ಯುದ್ಧದಲ್ಲಿ ಕರ್ನಾಟಕ ನಶಿಸುವುದು ಗ್ಯಾರಂಟಿ.

● ಶೆಣೈ

ತಿಪಟೂರು: ವಿಶಿಷ್ಟ ಗಾಂಧೀ ಸ್ಮರಣೆ

ಗಾಂಧೀ ಜಯಂತಿ ಹೇಗಿರಬೇಕು?

ಉನ್ನತ ಅಧಿಕಾರಿಗಳ ಮತ್ತು ಜನಪ್ರತಿನಿಧಿಗಳ ಆದರ್ಶ ಹೇಗಿರಬೇಕು?

ಈ ಎರಡು ಪ್ರಶ್ನೆಗಳಿಗೆ ಅಕ್ಟೋಬರ್ 2ರಂದು ತಿಪಟೂರಿನಲ್ಲಿ ನಡೆದ ವಿಶಿಷ್ಟ ಗಾಂಧೀಜಯಂತಿಯ ಆಚರಣೆ ಉತ್ತರವಾಗಿ ಕಾಣಬಹುದು. ಅಲ್ಲಿ 'ಬೋಲೋ ಮಹಾತ್ಮ ಗಾಂಧೀಜಿಕಿ ಜೈ' ಎನ್ನುವ ವ್ಯರ್ಥ ಘೋಷಣೆಗಳಿರಲಿಲ್ಲ, ಗಾಂಧಿ ಆದರ್ಶದ ಮಂಖಾನುಮಂಖಿ ಭಾಷಣಗಳಿರಲಿಲ್ಲ, ಹಂಚಲೆಂದು ತಂದ ಸ್ವೀಟ್ ಬಾಕ್ಸ್‌ಗಳಿರಲಿಲ್ಲ (ಬದಲಾಗಿ ರಾಗಿ ರೊಟ್ಟಿ, ಕಾಯಿ ಚಟ್ನಿಯೆಂಬ ಬಡವರ ಭೋಜನವಿತ್ತು), ಎಲ್ಲಕ್ಕೂ ಮಿಗಿಲಾಗಿ ಅಧಿಕಾರ ದರ್ಪದ ಯಾವ ಪ್ರತ್ಯೇಕತೆಯೂ



ಇರಲಿಲ್ಲ. ಅಲ್ಲಿದ್ದದ್ದು ಎಲ್ಲರೂ ಒಂದಾಗಿ ಗಾಂಧೀಜಿಯ ಉದಾತ್ತ ಮೌಲ್ಯವಾದ ಶ್ರಮದಾನವನ್ನು ಸಾಕಾರಗೊಳಿಸಬೇಕೆಂಬ ಹಂಬಲ ಮತ್ತು ಆ ಮೂಲಕ ಕೆರೆಯಲ್ಲಿ ತುಂಬಿದ್ದ ಕಳೆಯನ್ನು ಹೊರತೆಗೆದು ಸ್ವಚ್ಛ ಮಾಡಿ ಗಾಂಧೀ ಜಯಂತಿಯನ್ನು ವಿಶಿಷ್ಟವಾಗಿ ಆಚರಿಸಬೇಕೆಂಬ ಉದ್ದೇಶ ಮಾತ್ರ!


ಇಂತಹದ್ದೊಂದು ಅಪರೂಪದ ಯೋಜನೆಯನ್ನು ರೂಪಿಸಿದ್ದು ಅಲ್ಲಿನ ಪೌರಾಯುಕ್ತರಾದ ವೆಂಕಟೇಶ್ ಮತ್ತು ತಹಸೀಲ್ದಾರ್ ವಿಜಯ್ ಕುಮಾರ್ ಎಂಬ ಉತ್ಸಾಹಿ ಯುವಕರು. ಅವರಿಗೆ ಸ್ಥಳೀಯ ಶಾಸಕ ಬಿ.ಸಿ.ನಾಗೇಶ್ ಕೂಡಾ ಒತ್ತಾಸೆಯಾಗಿ ನಿಲ್ಲುವ ಮೂಲಕ ಒಂದು ಮಾದರಿಗೆ ಮುನ್ನುಡಿ ಬರೆದಿದ್ದರು. ಸಾಮಾನ್ಯ ಜನರ ಕೈಗೆ ಸುಲಭಕ್ಕೆ ಸಿಗದ ಇಂತಹ ಉನ್ನತ ಅಧಿಕಾರಿಗಳು ಈ ಬಗೆಯ ಕಾರ್ಯಕ್ರಮಗಳಲ್ಲಿ ಉದ್ಘಾಟನೆಯ ನೆಪಕ್ಕೆಂಬಂತೆ ದಡದಲ್ಲೇ ನಿಂತು ಒಂದಷ್ಟು ಕಸ ಎತ್ತಿದ ಪೋಸು ಕೊಟ್ಟು ಮರೆಯಾಗಿಬಿಡುತ್ತಾರೆ. ಅವತ್ತು ಕೆರೆಯ ಸುತ್ತ ನೆರೆದಿದ್ದ ಜನರಲ್ಲೂ ಇಂತಹುದೇ ಸಹಜ ನಿರೀಕ್ಷೆ ಇತ್ತು. ಒಂದೆರಡು ಕಾಲೇಜುಗಳ ಎನ್.ಎಸ್.ಎಸ್ ತಂಡಗಳನ್ನು ನೀರಿಗಿಳಿಸಿ ಬಟ್ಟೆ ಮಾಸುವ ಮುನ್ನ ಎಲ್ಲರೂ ಕಾಣೆಯಾಗಿಬಿಡುತ್ತಾರೆ ಎಂಬ ಕಲ್ಪನೆಯಲ್ಲಿದ್ದ ಜನರಿಗೆ ಒಂದು ಶಾಕ್ ಕಾದಿತ್ತು, ಏಕೆಂದರೆ ಖುದ್ದು ಕಮೀಷನರ್ ಮತ್ತು ತಹಸೀಲ್ದಾರರು ವಾಟರ್ ಜಾಕೆಟ್ ತೊಟ್ಟು ಕೊಳಚೆ ನೀರಿಗಿಳಿದು ಈಜುತ್ತಾ ಹೋಗಿ ಥೇಟ್ ಪೌರಕಾರ್ಮಿಕರಂತೆ ನೀರಿನ ಕಳೆಯನ್ನು ಹೊತ್ತುತಂದು ದಡದಲ್ಲಿದ್ದ ಸಿಬ್ಬಂದಿಗಳ ಕೈಗಿಡುತ್ತಿದ್ದ ದೃಶ್ಯ ಸಾರ್ವಜನಿಕರಿಗೆ ವಿಶೇಷವಾಗಿ ಕಂಡಿತ್ತು. ಸಮಯ ಕಳೆದಂತೆ ಸಣ್ಣಗೆ ಜಮಾಯಿಸಿದ ಜನರು ಕೆರೆಯಲ್ಲಿ ಕಸ ತೆಗೆಯುತ್ತಿದ್ದ ಈ ಇಬ್ಬರು ಅಧಿಕಾರಿಗಳನ್ನು ವಿಚಿತ್ರ ಪ್ರಾಣಿಗಳಂತೆ, ಯಾವುದೋ ವಿಸ್ಮಯವನ್ನು ನೋಡುವಂತೆ 'ಅಲ್ನೋಡಿ ಕಮೀಷನರ್, ಇಲ್ನೋಡಿ ತಹಸೀಲ್ದಾರ್' ಎಂದು ಮುಗಿಬಿದ್ದು ನೋಡಲು ಶುರು ಮಾಡಿದ್ದರು.

ಈ ಇಬ್ಬರ ಹುಮ್ಮಸ್ಸನ್ನು ಕಂಡ ಸ್ವತಃ ಶಾಸಕ ಬಿ.ಸಿ ನಾಗೇಶ್ ಸಹ ನೀರಿಗಿಳಿದು ತಮ್ಮ ಕೈಲಾದ ಸಹಾಯ ಮಾಡುತ್ತಾ ನೆರೆದಿದ್ದ ಜನರನ್ನೂ ಈ ವಿಶಿಷ್ಟ ಗಾಂಧಿ ಜಯಂತಿಯಲ್ಲಿ ಭಾಗವಹಿಸುವಂತೆ ಪ್ರೇರೇಪಿಸಿದ್ದರು. ಅಲ್ಲಿ ನೆರೆದಿದ್ದ ಸುಮಾರಷ್ಟು ಜನರಿಗೆ ಅವತ್ತು ಗಾಂಧೀ ಜಯಂತಿ ಎನ್ನುವುದೂ ತಿಳಿದಿರಲಿಲ್ಲ. ಆದರೆ ವಿಷಯ ತಿಳಿದ ನಂತರ ತಾವೂ ಕೆರೆ ಸ್ವಚ್ಛತೆಯಲ್ಲಿ ಭಾಗಿಯಾಗುವ ಮೂಲಕ 'ಶ್ರಮದಾನ'ದ ಕನಸನ್ನು ಅನುಷ್ಠಾನಕ್ಕೆ ತಂದಿದ್ದರು. ಪುರಸಭೆಯ ಸದಸ್ಯರು, ತಾಲ್ಲೂಕು ಕಚೇರಿ ಸಿಬ್ಬಂದಿಗಳು, ಪೌರಕಾರ್ಮಿಕರು, ವಿವಿಧ ಜನಪ್ರತಿನಿಧಿಗಳು, ಎನ್.ಎಸ್.ಎಸ್ ಪದಾಧಿಕಾರಿಗಳು, ಹೀಗೆ ಪ್ರತಿಯೊಬ್ಬರೂ ತಮ್ಮನ್ನು ಕೆರೆ ಸ್ವಚ್ಛತೆಯಲ್ಲಿ ತೊಡಗಿಸಿಕೊಂಡಿದ್ದರು. ಮಹಿಳಾ ಕಾರ್ಪೋರೇಟರ್‌ಗಳು, ಮಹಿಳಾ ಸಿಬ್ಬಂದಿಗಳೂ ಸಹ ದಡದಲ್ಲಿ ನಿಂತು ಹಗ್ಗದಿಂದ ಜಲಸಸ್ಯಗಳನ್ನು ಹೊರಗೆಳೆದು ಹಾಕಲು ಕೈಜೋಡಿಸಿದ್ದರು.

ಇದು ಆರಂಭ ಶೂರತ್ವದಂತೆಯೂ ಇರಲಿಲ್ಲ. ಏಕೆಂದರೆ ತಮ್ಮೆಲ್ಲ ಸಿಬ್ಬಂದಿ ಮತ್ತು ಸಾರ್ವಜನಿಕರೊಂದಿಗೆ ಶಾಸಕ, ತಹಸೀಲ್ದಾರ್ ಮತ್ತು ಪೌರಾಯುಕ್ತರು ಬೆಳಗ್ಗೆಯಿಂದ ಸಂಜೆಯವರೆಗೂ ಕೆರೆಯಲ್ಲೇ ಇದ್ದು ಕಸ ತೆಗೆಯುವ ಮೂಲಕ ಸಂಪೂರ್ಣ ಸ್ವಚ್ಛತಾ ಕನಸನ್ನು ಸಾಕಾರಗೊಳಿಸಿದ್ದರು. ಜನರಿಂದ ದೂರವೇ ಉಳಿದು ಆಡಳಿತ ನಿಯಂತ್ರಿಸುವ ಉನ್ನತೋನ್ನತ ಯಂತ್ರಗಳಾಗುವ ಬದಲು ಜನರೊಂದಿಗೆ ಬೆರೆತು, ಅವರಲ್ಲೂ ಮೌಲ್ಯಗಳ ಜಾಗೃತಿ ಮೂಡಿಸುವಂತಹ ಇಂತಹ ಸಂವೇದನಾಶೀಲ ಪ್ರಯತ್ನಗಳು ನಿಜಕ್ಕೂ ಸ್ವಾಗತಾರ್ಹ. ಮತ್ತೊಬ್ಬರಿಗೆ ಮಾದರಿಯಾಗುವಂತೆ ಗಾಂಧೀ ಜಯಂತಿ ಆಚರಿಸಿದ ತಹಸೀಲ್ದಾರ್, ಪೌರಾಯುಕ್ತ ಮತ್ತು ಶಾಸಕರನ್ನು ಒಮ್ಮೆ ಅಭಿನಂದಿಸಲೇಬೇಕು.

● ಗಿರೀಶ್

ಇದು ಸರ್ಕಾರಿ ಪೋಷಿತ ಜೀತಗಾರಿಕೆ!





ಅಕ್ಕು ಮತ್ತು ಲೀಲಾ, ಈ ಇಬ್ಬರು ಮಹಿಳೆಯರು ಕಳೆದ 41 ವರ್ಷಗಳಿಂದ ಉಡುಪಿಯ ಸರ್ಕಾರಿ ಮಹಿಳಾ ಶಿಕ್ಷಕ ತರಬೇತಿ ಸಂಸ್ಥೆಯಲ್ಲಿ ಕಸ ಗುಡಿಸುವ, ಶೌಚಾಲಯ ಸ್ವಚ್ಛಮಾಡುವ ಕೆಲಸ ಮಾಡಿಕೊಂಡು ಬರುತ್ತಿದ್ದಾರೆ. ಇವರ ಈ ಸೇವೆಗೆ ಸರ್ಕಾರ ನೀಡುತ್ತಿರುವ ಸಂಬಳವಾದರೂ ತಿಂಗಳಿಗೆ 15 ರೂಪಾಯಿ ಮಾತ್ರ!

1971ರಲ್ಲಿ ಶಿಕ್ಷಣ ಇಲಾಖೆಯು ಇವರನ್ನು ಗುತ್ತಿಗೆ ಆಧಾರದಲ್ಲಿ ಕೆಲಸಕ್ಕೆ ತೆಗೆದುಕೊಂಡಿತ್ತು. ಆಗ ಸ್ಥಳೀಯ ಜನಪ್ರತಿನಿಧಿಗಳು ಮತ್ತು ಇಲಾಖೆಯ ಅಧಿಕಾರಿಗಳು ಮುಂದೆ ನಿಮ್ಮನ್ನು ಕಾಯಂ ಮಾಡಿಕೊಳ್ಳುತ್ತೇವೆಂಬ ಆಶ್ವಾಸನೆಯನ್ನು ನೀಡಿದ್ದರು. ಅವತ್ತಿನ ಲೆಕ್ಕಾಚಾರದಂತೆ ತಿಂಗಳಿಗೆ 15 ರೂಪಾಯಿಯ ಸಂಬಳವನ್ನೂ ಗೊತ್ತು ಮಾಡಿದ್ದರು. ಅದಾಗಿ ಇಲ್ಲಿಗೆ ನಾಲ್ಕು ದಶಕಗಳೇ ಕಳೆದುಹೋಗಿದೆ. ಸಾಕಷ್ಟು ಬದಲಾವಣೆಗಳೂ ಆಗಿಹೋಗಿವೆ ಆದರೆ ಅವರಿಬ್ಬರ ಸಂಬಳ ಮತ್ತು ಗುತ್ತಿಗೆಯ ಸ್ಥಾನ ಮಾತ್ರ ಹಾಗೇ ಉಳಿದಿವೆ.

ತಮ್ಮನ್ನು ಸೇವೆಗೆ ಕಾಯಂ ಮಾಡಿಕೊಂಡು ಕನಿಷ್ಠ ವೇತನ ನೀಡಬೇಕೆಂಬ ಮನವಿ ಪತ್ರ ಹಿಡಿದು ಅವರು ಅಲೆಯದ ಮಂತ್ರಿ ಮನೆಯಿಲ್ಲ, ರಾಮಕೃಷ್ಣ ಹೆಗ್ಗಡೆ, ಬೊಮ್ಮಾಯಿ, ದೇವೇಗೌಡ, ಜೆ.ಎಚ್.ಪಟೇಲ್, ಕುಮಾರಸ್ವಾಮಿ, ಯಡಿಯೂರಪ್ಪ ಹೀಗೆ ಪ್ರತಿಯೊಬ್ಬ ಮುಖ್ಯಮಂತ್ರಿಗೂ ಮನವಿ ಸಲ್ಲಿಸುತ್ತಲೇ ಬಂದಿದ್ದಾರೆ. ಆದರೆ ಭರವಸೆಯ ಹೊರತು ಮತ್ತೇನೂ ಸಿಕ್ಕಿಲ್ಲ, ಸರ್ಕಾರದ ದೌರ್ಜನ್ಯ ಎಷ್ಟು ಹದ್ದು ಮೀರಿದೆಯೆಂದರೆ ಇವರ ಈ ಹೋರಾಟವನ್ನು ಹತ್ತಿಕ್ಕುವ ಉದ್ದೇಶದಿಂದ ಕಳೆದೊಂದೆರಡು ವರ್ಷಗಳಿಂದ ಇವರಿಗೆ ನೀಡುತ್ತಿದ್ದ 15 ರೂಪಾಯಿ ಸಂಬಳವನ್ನೂ ಸುಖಾಸುಮ್ಮನೆ ತಡೆಹಿಡಿಯಲಾಗಿದೆ.

ಇವರಲ್ಲಿ ಲೀಲಾ ಎಂಬಾಕೆ ದಲಿತೆಯಾಗಿದ್ದರೆ ಅಕ್ಕು ಹಿಂದುಳಿದ ವರ್ಗದ ಹೆಂಗಸು. ಹಾಗಾಗಿ ಇವರ ಪರವಾಗಿ ನಿಲ್ಲುವ ಯಾವ ಪ್ರಖರ ಧ್ವನಿಗಳೂ ಇರಲಿಲ್ಲ, ಆದರೆ 1999ರಲ್ಲಿ ಮಾನವಹಕ್ಕು ಸಂರಕ್ಷಣಾ ಸಂಸ್ಥೆ ಹೆಸರಿನ ಎನ್.ಜಿ.ಓ ಬೆಂಬಲದೊಂದಿಗೆ ಈ ಇಬ್ಬರು ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿ (ಕೆಎಟಿ)ಯಲ್ಲಿ ಸರ್ಕಾರದ ವಿರುದ್ಧ ದಾವೆ ಹೂಡಿದ್ದರು. ಸರ್ಕಾರದ ಅನ್ಯಾಯದ ವಿರುದ್ಧ ಚೆನ್ನಾಗಿ ಕ್ಯಾಕರಿಸಿದ್ದ ಕೆಎಟಿ ತೀರ್ಪು ಬಂದ 90 ದಿನಗಳ ಒಳಗಾಗಿ ಅವರನ್ನು ಕಾಯಂ ಮಾಡಿಕೊಂಡು ಕನಿಷ್ಠ ವೇತನ ಸೌಲಭ್ಯ ನೀಡುವಂತೆ ತಾಕೀತು ಮಾಡಿತ್ತು.

ಆದರೆ ಸರ್ಕಾರಕ್ಕೆ ಈ ಇಬ್ಬರು ಅಸಹಾಯಕರ ಮೇಲೆ ಯಾವ ಸಿಟ್ಟಿದೆಯೋ ಗೊತ್ತಿಲ್ಲ, ಕೆಎಟಿ ತೀರ್ಪನ್ನು ಕಡೆಗಣಿಸಿ ಹೈಕೋರ್ಟ್ ಮೆಟ್ಟಿಲೇರಿತ್ತು, ಅಲ್ಲಿಯೂ ಸರ್ಕಾರಕ್ಕೆ ಸರಿಯಾದ ಮಂಗಳಾರತಿಯಾಗಿತ್ತು. ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿ ಗುಬ್ಬಿ ಮೇಲೆ ಬ್ರಹ್ಮಾಸ್ತ್ರ ಪ್ರಯೋಗಿಸಲೂ ಮುಂದಾದ ಸರ್ಕಾರದ ಹಕೀಕತ್ತು ಅಲ್ಲಿಯೂ ನಿಲ್ಲಲಿಲ್ಲ. ಸುಪ್ರೀಂ ಕೋರ್ಟ್ ಅಂತೂ ಸರ್ಕಾರದ ನೀತಿಯನ್ನು ತರಾಟೆಗೆ ತೆಗೆದುಕೊಂಡು ಮೇಲ್ಮನವಿ, ವಿಚಾರಣೆ ಎಂಬ ನೆಪ ಹೇಳದೆ ಈ ಕೂಡಲೇ ಸೂಕ್ತ ಕ್ರಮಕ್ಕೈಗೊಳ್ಳಬೇಕೆಂಬ ನಿರ್ದೇಶನ ನೀಡಿತ್ತು, ಆಗಲಾದರೂ ಸರ್ಕಾರ ಈ ಹೆಂಗಸರ ಹೋರಾಟಕ್ಕೆ ಸ್ಪಂದಿಸ ಬಹುದೆನ್ನುವ ಆಶಯವಿತ್ತು, ಆದರೆ ಸುಪ್ರೀಂ ಕೋರ್ಟ್‌ನ ಈ ಆದೇಶ ಬಂದು ಇಲ್ಲಿಗೆ 30 ತಿಂಗಳುಗಳೇ ಕಳೆದುಹೋಗಿದೆ, ಆದರೂ ಸರ್ಕಾರ ನಯಾಪೈಸೆಯ ಕ್ರಮಕ್ಕೂ ಮುಂದಾಗಿಲ್ಲ, ಬಿಜೆಪಿ ಸರ್ಕಾರಕ್ಕೆ ಸುಪ್ರೀಂ ಆಣತಿಯೂ ಲೆಕ್ಕಕ್ಕಿದ್ದಂತಿಲ್ಲ.

ಮಾನವಹಕ್ಕು ಸಂರಕ್ಷಣಾ ಸಂಸ್ಥೆಯ ಮುಖ್ಯಸ್ಥ ಡಾ. ರವೀಂದ್ರನಾಥ್ ಶ್ಯಾನಭೋಗ್ ಇತ್ತೀಚೆಗಷ್ಟೆ ಮಂಗಳೂರು, ಬೆಂಗಳೂರಿನಲ್ಲಿ ಪತ್ರಿಕಾಗೋಷ್ಠಿ ನಡೆಸಿ ಈ ಇಬ್ಬರ ಅಸಹಾಯಕತೆಯನ್ನು ಸರ್ಕಾರ ಮತ್ತು ಶಿಕ್ಷಣ ಇಲಾಖೆಯ ಮುಂದಿಡುವ ಪ್ರಯತ್ನ ಮಾಡಿದ್ದರು. ಅದಕ್ಕೆ ಸ್ಪಂದಿಸುವ ವ್ಯವಧಾನ ಇಲಾಖೆಗಾಗಲಿ, ಸರ್ಕಾರಕ್ಕಾಗಲಿ ಇದ್ದಂತೆ ಕಾಣುತ್ತಿಲ್ಲ, ಕಡೇ ಪಕ್ಷ ಇದೇ ಭಾಗದವರಾದ, ಶಿಕ್ಷಣ ಸಚಿವರೂ ಆಗಿರುವ ಕಾಗೇರಿಯಾದರೂ ಇವರ ಗೋಳಿಗೆ ಕಿವಿಗೊಡದಿರುವುದು ವಿಪರ್ಯಾಸವೇ ಸರಿ. ಹಾಗೆ ನೋಡಿದರೆ ಇವರಿಬ್ಬರ ವಿಷಯದಲ್ಲಿ ಹೈಕೋರ್ಟ್, ಸುಪ್ರೀಂ ಕೋರ್ಟ್ ಅಂತ ಮೇಲ್ಮನವಿ ಸಲ್ಲಿಸಿ ಸರ್ಕಾರ ಖರ್ಚು ಮಾಡಿಕೊಂಡಿರುವ ಅರ್ಧದಷ್ಟು ಹಣ ಬಿಡುಗಡೆ ಮಾಡಿದ್ದರೂ ಈ ಇಬ್ಬರ ಸಂಬಳ ತೀರಿಹೋಗುತ್ತಿತ್ತು!

ಕುರುಬರಾಗಿದ್ದಕೊಂಡು ಕುರಿ ತಿನ್ನಬಾರದೇನ್ರಿ

ಥೂತ್ತೇರಿ

• ಯಾಹೂ

ಬಿಜೆಪಿ ಅಧ್ಯಕ್ಷರು, ರಾಜ್ಯದ ಉಪಮುಖ್ಯಮಂತ್ರಿಗಳು ಹಾಗೂ ಕುರುಬರ ಕುಲತಿಲಕರೂ ಆದ ಈಶ್ವರಪ್ಪನವರು ಗಾಂಧಿ ಜಯಂತಿ ದಿನವೇ ಕುರಿ ಮಾಂಸ ತಿಂದರೆಂಬ ಆಪಾದನೆ ಬಗ್ಗೆ ಅವರನ್ನೇ ಕೇಳಬೇಕೆನಿಸಿ ಫೋನ್ ಮಾಡಿದರೆ ರಿಂಗಾಯ್ತು.

ರಿಂಗ್ ಟೋನ್: ಟರರ್... ಟರರ್.... ಟರರ್

"ಹಲೋ ಯಾರ್ರಿ?"

"ನಾನು ಸಾರ್ ಯಾಹು, ಪತ್ರಕರ್ತ."

"ಏನು ಪತ್ರಕರ್ತರೊ ಏನೊ, ನಿಮ್ಮ ಹಾವಳಿ ಜಾಸ್ತಿಯಾಯ್ತು ಕಂಡ್ರಿ."

"ಯಾಕ್ ಸಾರ್? ಏನು ಮಾಡಿದ್ರು?"

"ನೆಮ್ಮದಿಯಾಗಿ ಊಟ ಮಾಡಕ್ಕೂ ಬಿಡಲ್ಲವಲ್ರೀ. ಬದನೆಕಾಯಿ ಸಾರಲ್ಲುಂಡ್ರೂ, ಬಾಡಿನ ಸಾರಲ್ಲುಂಡ್ರು ಅಂತ ಬರಿತೀರಲ್ರೀ."

"ಗಾಂಧಿ ಜಯಂತಿ ದಿನ ಮಾಂಸದ ಸಾರಲ್ಲಿ ಉಣ್ಣಬಾರದಲ್ಲವ ಸಾರ್?"


"ಅಂಗಂತ ಗಾಂಧಿ ಮಹಾತ್ಮ ಹೇಳಿದ್ದರೇನ್ರಿ?"

"ಹೇಳಿಲ್ಲ ಸಾರ್. ಆದರೆ ನಾವು ಅವರ ಅಹಿಂಸಾವಾದಕ್ಕೆ ಕೊಡೊ ಗೌರವ."

"ಗಾಂಧಿ ಮಹಾತ್ಮ ಅಹಿಂಸೆ ಹೇಳಿದ್ರು ಸರಿ ಕಂಡ್ರಿ, ಆದ್ರೆ ಆಗ್ತಾ ಇರದೇನು? ಗಾಂಧಿ ಜಯಂತಿ ದಿನಾನೂ ಬದುಕಿರಬೇಕಾದ ಆಡುಕುರಿನ ಹಿಂದಿನ ದಿನನೇ ಕೂದಾಕ್ತರೆ ಇದಕೇನೇಳ್ತಿರಿ?"

"ಹಾಗಿದ್ರೆ ನೀವು ತಿಂದಿದ್ದು ಹಿಂದಿನ ದಿನ ಕೂದ ಕುರಿ ಮಾಂಸನ ಸಾರ್?"

"ಯಾರ್ರಿ ಹಾಗಂತ ಹೇಳಿದ್ದು?"



"ಸಾರಿ ಸಾರ್, ನೀವು ಅದೇ ದಿನ ಕೂದ ಕುರಿ ಮಾಂಸ ತಿಂದಿದ್ದಿರಿ ಅಂತ ಅವುರಿಗೆ ಗೊತ್ತಿರಲಿಲ್ಲವೇನೊ."

"ನೋಡ್ರಿ, ಎಡೂರಪ್ಪನಿಗೂ ನನಗೂ ಮನಸ್ತಾಪ ಇರೊ ಸಂದರ್ಭದಲ್ಲಿ ಯಾರೊ ನನಿಗಾಗದೋರು ಅಥವಾ ಎಡೂರಪ್ಪನ ಕಡೆಯವರೇ ಇಂತ ಸುಳ್ಳು ಸುದ್ದಿ ಹಬ್ಬಿಸಿರಬವುದು. ಇವರೇನು ಮಹಾ ಸಭ್ಯಸ್ಥರ? ಲಿಂಗಾಯಿತ್ರ ಮಾಂಸ ತಿನ್ನದಿಲವಾ?"

"ಅಯ್ಯೋ, ಅವ್ರುರತರ ಯಾರೂ ತಿನ್ನದಿಲ್ಲ ಬುಡಿ ಸಾರ್. ಅದ್ಕೆ ಮಾಂಸ ಕೆಜಿಗೆ 350 ರೂಪಾಯಿ ಆಗಿದೆ. ಪಾಪ ಸಾಬರು ಎಲ್ಲಿಂದ ತಂದರು ಸಾರ್ ಅಷ್ಟು ದುಡ್ಡ, ಅದ್ಕೆ ದನ ತಿಂತರೆ. ಅಂಥೋರನ್ನು ನೀವು ಕೈ ಕಡಿಬೇಕು, ಗಂಟಲ ಕುಯ್ಯಬೇಕು ಅಂತಿರಿ. ಗಾಂಧಿ ಜಯಂತಿ ದಿನನೆ ಕುರಿ ತಿಂದಿರೊ ನಿಮ್ಮ ಯಾವ ಭಾಗ ಕುಯ್ಯಬೇಕು ಹೇಳಿ ಸಾರ್?"

"ರಿ ಆಡು, ಕುರಿ ಇರದು ಮನುಸ್ರು ತಿನ್ನದಕ್ಕೆ, ಆದ್ರೆ ಗೋವು ಹಾಗಲ್ಲ, ಅದು ನಮ್ಮ ಧರ್ಮದಲ್ಲಿ ಪೂಜೆ ಮಾಡೊ ವಸ್ತು, ಕಾಮಧೇನು."

"ಎಮ್ಮೆ ಕೂಡ ಕಾಮಧೇನು ಸಾರ್."

"ಯಾರ್ರಿ ಹೇಳಿದ್ದು ನಿಮಗೆ? ಎಮ್ಮೆನೇ ಬೇರೆ, ಹಸುನೆ ಬೇರೆ."

"ಹೋಗ್ಲಿ ಬಿಡಿ ಸಾರ್. ಆದ್ರೂ ನೀವು ಗಾಂಧಿ ಜಯಂತಿ ದಿನನೇ ಕುರಿ ಮಾಂಸ ತಿಂದಿರದ್ಕೆ ನಮ್ಮಲ್ಲಿ ಸಾಕಷ್ಟು ಸಾಕ್ಷ್ಯಾಧಾರ ಇದೆ ಸಾರ್."

"ಏನು ಸಾಕ್ಷಿ ಇದೆರಿ?"

"ಮೊದಲನೆದಾಗಿ ನಿಮ್ಮ ಮೇಲೆ ಇಂತ ಗುರುತರ ಆಪಾದನೆ ಮಾಡಿರೋರು ಕುರುಬರ ಹುಡುಗ್ರು."

"ರೀ, ಕುರುಬರೆಲ್ಲಾ ಒಂದೇ ಅಲ್ಲ ಕಂಡ್ರಿ, ಕಾಂಗ್ರೆಸ್ ಕುರುಬ್ರು, ಬಿಜೆಪಿ ಕುರುಬ್ರು, ದಳದ ಕುರುಬ್ರು ಅಂತಲೂ ಇದಾರೆ. ಆ ಸಿದ್ಧರಾಮಯ್ಯ ಕಡೆ ಕುರುಬರ ಮಾತನ್ನೆ ನಂಬಿ ಸಾಕ್ಷ್ಯಾಧಾರ ಇದೆ ಅಂತಿರಲ್ರೀ."

"ಇನ್ನೂ ಒಂದು ಐತಿಹಾಸಿಕವಾದ ಸಾಕ್ಷಿ ಪ್ರಕಾರ ಗಾಂಧೀಜಿ ಕೊಂದವನು ಆರೆಸ್ಸೆಸ್ಸಿನವನು. ನೀವು ಆರೆಸ್ಸೆಸ್ಸಿನಿಂದ ಬಂದೋರು. ಹಾಗಾಗಿ ನಿಮಗೆ ಗಾಂಧಿ ಕಂಡ್ರೆ ಆಗಲ್ಲ, ಅವರ ಜಯಂತಿ ಆಚರಣೆನೂ ಸಹಿಸಕ್ಕಾಗಲ್ಲ, ಅಂಗಾಗಿ ನೀವು ಉದ್ದೇಶಪೂರ್ವಕವಾಗಿ ಗಾಂಧಿ ಜಯಂತಿ ದಿನ ಮಾಂಸ ತಿಂದಿದ್ದಿರಿ ಅಂತ ಕೆಲವರ ಸಾಕ್ಷಿ ಇದೆ."

"ಆ ಸಾಕ್ಷಿ ಇಟಗಂಡು ಏನು ಮಾಡ್ತಿರಿ ನೀವು? ಏನು ಮೆಡಿಕಲ್ ಚೆಕಪ್ ಮಾಡುಸ್ತಿರಾ? ಯಾರೊ ಗೆಳೆಯನ ಮನೆಗೆ ಹೋದೆ, ಊಟ ಮಾಡಿದೆ, ಬಂದೆ. ಆ ಸಾಂಬಾರು ಯಾವುದು ಅಂತ್ಲೂ ನೋಡಲಿಲ್ಲ. ಯಲ್ಲಾ ಮುಗದ ಮೇಲೆ ಫೋನು ಮಾಡ್ತಿರಲ್ಲಾ, ನಿಮಗೆ ಬೇರೆ ಕೆಲಸ ಇಲವೇನ್ರಿ?"

"ನಿಮ್ಮನ್ನು ತನಿಖೆ ಮಾಡೊದೆ ಕೆಲಸ ಸಾರ್. ಯಾಕಂದ್ರೆ ನೀವು ಈ ರಾಜ್ಯದ ಉಪಮುಖ್ಯಮಂತ್ರಿ, ಮುಂದೆ ಮುಖ್ಯಮಂತ್ರಿಯಾಗೋರು. ರಾಷ್ಟ್ರಪಿತನ ಬಗ್ಗೆ ಸಾರ್ವಜನಿಕವಾಗಿ ಮಾತನಾಡಬೇಕಾದೋರು. ಅದರಲ್ಲೂ ಶುದ್ಧ ಅಹಿಂಸಾವಾದಿ ಪೇಜಾವರರ ಪ್ರಥಮ ಶಿಷ್ಯರಲ್ಲೊಬ್ಬರು! ಜಿಹ್ವಾಚಾಪಲ್ಯ ತಡಿಯಕ್ಕಾಗದೆ ಮಾಂಸ ತಿಂದಿದ್ದಿರಿ ಅಂದ್ರೆ, ಭಾಳ ನೋವಾಗತ್ತೆ ಸಾರ್."

"ಏನು ಮಾಡದ್ರಿ ಯಾಹು. ನಾವು ಬಳ್ಳಾರಿ ಕಡೆ ಕುರುಬ್ರು. ನಮ್ಮ ಪರಂಪರೇಲಿ ಕುರಿ ತಿನ್ನೋದು ನಮ್ಮ ಜೀವನ ಕ್ರಮ. ನಾವೆಷ್ಟೇ ಸಸ್ಯಹಾರಿಗಳ ಜೊತೆ ಮಾತಾಡಿದ್ರು, ಮಾಂಸದ ಸಾರಿನ ವಾಸನೆ ಬಂದರೆ ತಡಿಯಕ್ಕಾಗಲ್ಲ."

"ಈ ಮಾತು ನಿಜ ಸಾರ್. ನನಿಗೂ ಕೂಡ ನನ್ನ ವೈರಿಗಳ ಮನೆ ಬಾಡಿನ ಸಾರು ವಾಸನೆ ಬಂದ್ರೂ ಸಾಕು, ಎಲ್ಲಾನು ಮರತು ಅವರನ್ನ ಮಾತನಾಡುಸಬೇಕು ಅನ್ನುಸ್ತದೆ. ಈ ಮಾಂಸ ಭಕ್ಷಣೆ ಜನಗಳ ಹೊಡೆದಾಟ ಎಂದೂ ಮುಂದುವರಿಯಲ್ಲ ಸಾರ್. ಯಾಕಂದ್ರೆ ಬಾಡಿನ ಸಾರಿಗೇ ಅಂತ ಶಕ್ತಿ ಇದೆ. ಆದ್ರೆ ಎಡೂರಪ್ಪನ ಕಡೆಯವರಿಗೆ ಇಂತಹ ಸಾರಿನ ರುಚಿ ಗೊತ್ತಿಲ್ಲ, ಆದ್ರಿಂದ ನಿಮ್ಮ ಅವರ ಜಗಳ ಜೀವಪರ್ಯಂತ ನಡಿಯೋ ಸೂಚನೆ ಇದಿಯಲ್ಲಾ ಸಾರ್."

"ಅಂಗೇನುಯಿಲ್ಲ ಕಂಡ್ರಿ. ಎಡೂರಪ್ಪ ನಾವು ಚನ್ನಾಗಿದ್ವಿ. ಜಗಳ ಇದ್ವಿದ್ರೆ, ನಾವು ಜಗಳಾಡಿಕಂಡೇ ಒಟ್ಟಿಗಿರತಿವಿ."

"ಮುಂದೆಂದೂ ನಿಮ್ಮ ಜೊತೆ ಕುಂತಗೊಳದಿಲವಂತೆ ಅವುರು."

"ಅವುರು ಕುಂತಗಳದು ಬೇಡಿ. ನಾವು ಕುಂತಗತಿವಿ."

"ಅದೇನೊ ನಿಜ ಸಾರ್. ಈಗ ಶಂಕರಮೂರ್ತಿ ತೀರೋದ್ರು ಅನ್ನಿ, ಆ ಜಾಗಕ್ಕೆ ಬಂದಾಗ ಅನಿವಾರ್ಯವಾಗಿ ಕುಂತಗಬೇಕಾಯ್ತದೆ ಅಥವಾ ಆಚಾರ್ರ ತರ ಯಾರ ಸತ್ರು ಜೊತೆಲಿ ಹೋಗಿ ಕುಳತಗಳೊ ಸಂದರ್ಭ ಬರಬವುದು. ಯಾಕಂದ್ರೆ ಬಿಜೆಪಿ ಬೇರೆ ಪಾರ್ಟಿ ತರ ಅಲ್ಲ."

"ಅದ್ನೆ ಹೇಳಿದ್ದು ನಾನು. ನಾವು ಜಗಳಾಡಿಕಂಡೇ ಒಂದಾಗಿರತಿವಿ ಅಂತ."

"ಎಡೂರಪ್ಪೇನೊ ಮುಂದೆ ನಿಮ್ಮನ್ನ ನೋಡಿಕತ್ತರಂತಲ್ಲಾ ಸಾರ್."

"ನೋಡಿಕಳ್ತರೆ ಅಂದ್ರೇನು? ನನ್ನನ್ನ ಸೋಲಸಕ್ಕೆ ಟ್ರೈ ಮಾಡ್ತರೆ ಅಲ್ಲವೇನ್ರಿ? ನಾನು ಶಿವಮೊಗ್ಗದ ಲಿಂಗಾಯತ್ರಲ್ಲಿ ಕಾಲುಭಾಗನ ಜೊತೇಲಿಟ್ಟಗಂಡಿದ್ದಿನಿ. ಇನ್ನ ಜೈನರು, ಬ್ರಾಹ್ಮಣರು, ಗೋಣಿಗ್ರು, ಕುರುಬ್ರು, ತಮುಳ್ರು, ಒಂದ್ಯೆರಡು ಜನ ಮುಸ್ಲಿಮರು ನನ್ನ ಬಿಟ್ಟು ಇನ್ಯಾರಿಗೂ ಓಟಾಕದಿಲ್ಲ, ನನಿಗೆ ಬರೋ ಮತ ಬಂದೇ ಬರ್ತವೆ. ಅದ್ಯಾಂಗೆ ಸೋಲುಸ್ತರೋ ನೋಡ್ತಿನಿ."

"ಒಬ್ಬ ಒಳ್ಳೆ ಲಿಂಗಾಯತ ನಿಂತ್ರೆ ನೀವು ಸೋಲ್ತಿರಂತೆ?"

"ಒಳ್ಳೆ ಲಿಂಗಾಯತ ಯಾರಿದಾರ್ರಿ ಇಲ್ಲಿ?"

"ಥೂತ್ತೇರಿ!!!" ●

ಚೋರ ಶಾಂತೆಗ್ಡೆ ಚಮತ್ಕಾರ!

ಟಿಎಸ್‌ಎಸ್‌ನಲ್ಲಿ ನೂರೊಂದು ಕೋಟಿಯ ಕರ್ಮಕಾಂಡ!!



ಶಿರಸಿ ಸೀಮೆಯ ಅಡಿಕೆ ಬೆಳೆಗಾರರ ಜೀವ-ಜೀವಾಳ ಎನಿಸಿದ್ದ ತೋಟಗಾರ್ಸ್ ಸೇಲ್ಸ್ ಸೊಸೈಟಿ (ಟಿಎಸ್‌ಎಸ್) ಮುಳುಗುತ್ತಿದೆ; ಬಡ ತೋಟಿಗರ ಈ ಆಶಾಗೋಪುರದ ಒಂದೊಂದೇ ಕಲ್ಲುಗಳನ್ನು ಆಡಳಿತಗಾರರೇ ಕಿತ್ತು ಸ್ವಜೀರ್ಣೋದ್ಧಾರ ಮಾಡಿಕೊಳ್ಳುತ್ತಿದ್ದಾರೆ. ಕೋಟಿ-ಕೋಟಿ ರೂ.ಗಳ ಚರ-ಸ್ಥಿರ ಆಸ್ತಿಯ ಈ ದೈತ್ಯ ಸಹಕಾರಿ ಸಂಘಕ್ಕೆ ಅದರ ಅಧ್ಯಕ್ಷ ಶಾಂತಾರಾಮ ಹೆಗಡೆಯೇ ಪರಮವೈರಿಯಾಗಿ ಪರಿಣಮಿಸಿದ್ದಾನೆ. ಕಳೆದ ಒಂದೂ ಮುಕ್ಕಾಲು ದಶಕದಿಂದ ಸಂಘದ ಏಕಪಕ್ಷೀಯ ಪಾರುಪತ್ಯಗಾರನಾಗಿ ಅವತರಿಸಿರುವ ಈ "ನಕಲಿ ಸಹಕಾರಿ ರತ್ನ"ದ ಮುಖವಾಡ ಈಗ ದಿನಕ್ಕೊಂದರಂತೆ ಕಳಚಿ ಬೀಳುತ್ತಿದೆ!!

ಶಾಂತೆಗ್ಡೆ ನಾಜೂಕಯ್ಯ; ಒಳಗೊಳಗೇ ಗೋಲ್‌ಮಾಲ್ ಮಾಡುತ್ತಲೇ ತಾನೊಬ್ಬ ಅಡಿಕೆ ಬೆಳೆಗಾರರ ಹಿತೈಷಿಯೆಂದು ಪೋಸು ಕೊಡಬಲ್ಲ ಚಾಲಾಕಿ. ಶಿರಸಿ-ಸಿದ್ಧಾಪುರ ಮತ್ತು ಯಲ್ಲಾಪುರ ಭಾಗದಲ್ಲಿ ಹೆಚ್ಚಿರುವ ಹವ್ಯಕ ಬ್ರಾಹ್ಮಣ ಅಡಿಕೆ ತೋಟಿಗರು ಈ ಶಾಂತಣ್ಣನ ಮೋಡಿಗೆ ಮರುಳಾಗಿ ಬಹುವಾಗಿ ನೆಚ್ಚಿಕೊಂಡಿದ್ದರು. ಶಾಂತೆಗ್ಡೆಯನ್ನು ನಂಬಿದ್ದ ಅಡಿಕೆ ತೋಟಿಗರೀಗ ಭ್ರಮನಿರಸನಗೊಂಡಿದ್ದಾರೆ; ಶಾಂತಣ್ಣ ಪಕ್ಕಾ ನರಿಯಣ್ಣನೆಂಬುದು ಅವರಿಗೆಲ್ಲ ಖಾತ್ರಿಯಾಗಿ ಹೋಗಿದೆ! ಶಾಂತೆಗ್ಡೆ ಹೈಗರ ಅಗ್ರಗಣ್ಯ ನೇತಾರ. ಹೈಗ ಸರ್ವವಲ್ಲಿ ಮಹಾಮಠದ ಉಪಾಧ್ಯಕ್ಷ ಗಂಗಾಧರೇಂದ್ರ ಸರಸ್ವತಿ ಸ್ವಾಮಿಗಳ ಬಲಗೈ ಬಂಟ, ಹಲವು ಬಾರಿ ಪ್ರತಿಷ್ಠಿತ ಕೆಡಿಸಿಸಿ ಬ್ಯಾಂಕಿನ ಅಧ್ಯಕ್ಷನಾಗಿರುವಾತ, ರಾಷ್ಟ್ರೀಯ ಪಕ್ಷ ಕಾಂಗ್ರೆಸ್‌ನ ಜಿಲ್ಲಾಧ್ಯಕ್ಷನಾಗಿದ್ದಾತ, ಬಲಾಢ್ಯ ದೇಶಪಾಂಡೆಯ ಗಳಸ್ಯ-ಕಂಠಸ್ಯ ಅವ್ಯವಹಾರಕ್ಕೆ ಕೈಹಾಕದ ಸಂಭಾವಿತ, ಅಡಿಕೆ ಬೆಳೆಗಾರರ ಉದ್ಧಾರಕ್ಕೆ ಹಗಲಿರುಳೂ ಸಮರ್ಪಣಾ ಭಾವದಿಂದ ಬೆವರಿಳಿಸುತ್ತಿರುವವ, ಟಿಎಸ್‌ಎಸ್ ಕಟ್ಟಿಬೆಳೆಸಿದ್ದ ದಿ.ಕಡವೆ ಹೆಗಡೆಯ ಅಪರಾವತಾರ.... ಎಂದೆಲ್ಲ ಭಾವಿಸಿದ್ದ ಅಡಿಕೆ ತೋಟಿಗರು ಅನಾವರಣವಾಗುತ್ತಿರುವ ಶಾಂತೆಗ್ಡೆಯ ತರಹೇವಾರಿ ಅಸಲಿ ಅವತಾರ ಕಂಡು ಬೆಚ್ಚಿಬೀಳುತ್ತಿದ್ದಾರೆ.

ಕೋಟಿ ಲೂಟಿ

ಬೃಹತ್ ಟಿಎಸ್‌ಎಸ್ ಅನ್ನು ಕೆಲವೇ ದಿನದಲ್ಲಿ ಈ ಹೆಗ್ಗಣ ನುಂಗಿ ನೊಣೆಯುತ್ತದೆಂಬುದು ಹವ್ಯಕ ಸಂಕುಲಕ್ಕಷ್ಟೇ ಅಲ್ಲ, ಇಡೀ ಅಡಿಕೆ-ಸೀಮೆಗೇ ಪಕ್ಕಾ ಆಗಿಹೋಗಿದೆ! ಶಾಂತಾರಾಮ ಹೆಗಡೆಯ ಕಾಲಕೀರ್ದಿಯಲ್ಲಿ ಒಂದಲ್ಲ, ಎರಡಲ್ಲ ಬರೋಬ್ಬರಿ ಒಂದು ನೂರಾ ಒಂದು ಕೋಟಿಯ ಆಪರಾತಪರಾ- ಅವ್ಯವಹಾರ ಟಿಎಸ್‌ಎಸ್‌ನಲ್ಲಿ ನಡೆದಿದೆ!! ಇದನ್ನು ಯಾರೋ ಶಾಂತೆಗ್ಡೆಯ ಸಹಕಾರಿ ಅಥವಾ ರಾಜಕೀಯ ವಲಯದ ಹಿತಶತ್ರುಗಳು ಮಾಡಿದ ಆರೋಪವಲ್ಲ; ಸಹಕಾರಿ ಸಂಘಗಳ ಕಾಯ್ದೆ 64 ರಡಿಯಲ್ಲಿ ಸರ್ಕಾರ ನಡೆಸಿದ ವಿಚಾರಣಾ ವರದಿಯೇ ಸಾಕ್ಷ್ಯಾಧಾರ ಸಮೇತ ಹೊರಹಾಕಿರುವ ಶಾಂತೆಗ್ಡೆ ಬಳಗದ ಭ್ರಷ್ಟ ಭಾನಗಡಿ! ಈ ವರದಿ ಬಂದು ಎರಡು ವರ್ಷ ಕಳೆದಿದೆ. ಸಹಕಾರ ಸಂಘಗಳ ಕಾಯ್ದೆ 68 ರ ಪ್ರಕಾರ ಸರ್ಕಾರ ಆದೇಶ ಹೊರಡಿಸಿ ಲೋಪ-ದೋಷ ಸರಿಪಡಿಸಿಕೊಂಡು ಅನುಸರಣಾ ವರದಿ ಸಲ್ಲಿಸುವಂತೆ ತಾಕೀತೂ ಮಾಡಿಯಾಗಿದೆ. ಆದರೆ ಸ್ವಾಹಾ ಶೂರ ಶಾಂತೆಗ್ಡೆ ಅಂಚ್ ಕೋ ಮಾತ್ರ ಇದ್ಯಾವುದಕ್ಕೂ ತಲೆ ಕೆಡಿಸಿಕೊಳ್ಳದೆ ಟಿಎಸ್‌ಎಸ್‌ನ ಉದ್ದಗಲಕ್ಕೆ ಹಾಯಾಗಿ ಮೇಯ್ದಾಡಿಕೊಂಡಿದೆ; ಇಡೀ ಸಂಘವನ್ನೇ ಕಬ್ಜಾ ಮಾಡಿಕೊಂಡಂತೆ ದಾದಾಗಿರಿಯಿಂದ ಹಾರಾಡುತ್ತಿದೆ.

ಟಿಎಸ್‌ಎಸ್‌ನ ಅವ್ಯವಹಾರಗಳ ಶಾಸನಬದ್ಧ ವಿಚಾರಣೆಗೆಂದು ಸಹಕಾರ ಇಲಾಖೆ ಎಂ.ಎಸ್. ಪಾಟೀಲ್ ಎಂಬ "ಪುಣ್ಯಾತ್ಮ"ನನ್ನು ವಿಚಾರಣಾಧಿಕಾರಿಯೆಂದು ನೇಮಿಸಿತ್ತು, ಈ ಪಾಟೀಲ್ ಮಾಮಾ ಟಿಎಸ್‌ಎಸ್ ಆಡಳಿತಗಾರ ಶಾಂತೆಗ್ಗೆ, ಪ್ರಧಾನ ವ್ಯವಸ್ಥಾಪಕ ರವೀಶ್ ಹೆಗಡೆ ಮತ್ತವರ ಗುಳುಂ ಪಡೆಯನ್ನು ಬಚಾವಾಗಿಸುವ ಹಿಡನ್ ಅಜೆಂಡಾ ಇಟ್ಟುಕೊಂಡು ಬಂದಿದ್ದನೇ ಹೊರತು ಸಂಘದೊಳಗಿನ ಹುಳುಕು ಹೊರತೆಗೆಯುವ ಕರ್ತವ್ಯ ನಿಷ್ಠೆ- ಪ್ರಾಮಾಣಿಕತೆ ಒಂಚೂರೂ ಆತನಲ್ಲಿ ಇರಲಿಲ್ಲ, ಟಿಎಸ್‌ಎಸ್ ಕೊಳ್ಳೆ ಹೊಡೆಯುತ್ತಿರುವವರ ರಕ್ಷಿಸಲು ಪಾಟೀಲ್ ಮಾಮ ಅದೆಷ್ಟೇ ಹವಣಿಸಿದರೂ ಆಧಾರ ಪೂರ್ವಕ ಅವ್ಯವಹಾರಗಳು ದಂಡಿ-ದಂಡಿಯಾಗಿ ಕೈಗೆ ಸಿಕ್ಕಿದ್ದರಿಂದ ನೌಕರಿ ಉಳಿಸಿಕೊಳ್ಳಲು ಅನಿವಾರ್ಯವಾಗಿ ಒಂದಿಷ್ಟು ಭಾನಗಡಿ ಬಹಿರಂಗಪಡಿಸಲೇ ಬೇಕಾಗಿಬಂತು, ಪಾಪ! ಶಾಂತೆಗ್ಡೆ ಬಳಗ ಪಾಟೀಲ ಮಾಮನ ಖರೀದಿಸಿದರೂ ಪ್ರಯೋಜನವಾಗದೇ ಮಾನ ಮೂರ್ಕಾಸಿಗೆ ಹರಾಜಾಗಿ ಹೋಯ್ತು!!

ವಿಚಾರಣಾಧಿಕಾರಿ ಪಾಟೀಲನ 200 ಪುಟಗಳ ವರದಿಯ ಬಹುತೇಕ ಕಡೆ ಶಾಂತೆಗ್ಡೆ-ರವೀಶ್ ಹೆಗಡೆ ಇತ್ಯಾದಿ ಹವ್ಯಕ ಬಂಧುಗಳು ತಮಗೆ ಅನುಕೂಲವಾಗುವ ರೀತಿಯ ಶರಾ ಬರೆಸಿದ್ದಾರೇನೋ ನಿಜ. ಆದರೆ ಈ ಭರ್ಜರಿ ಭ್ರಷ್ಟಾಚಾರ ವರದಿಗೆ ಲಗತ್ತಿಸಿರುವ ಅನುಬಂಧ ನೋಡಿದರೆ ನಾನಾ ನಮೂನೆಯಲ್ಲಿ ಅಕ್ರಮ-ಅವ್ಯವಹಾರ-ಅನಾಚಾರ-ಅವಾಂತರ ಆಗಿರುವುದು ಸಾಬೀತಾಗುತ್ತದೆ. ಟಿಎಸ್‌ಎಸ್‌ನಲ್ಲಿ ಪ್ರತ್ಯಕ್ಷವಾಗಿ 62.46 ಕೋಟಿ ಅವ್ಯವಹಾರವಾದರೆ, ಅಪ್ರತ್ಯಕ್ಷವಾಗಿ 32.36 ಕೋಟಿ ಅಕ್ರಮ ದಂಧೆ ನಡೆದಿದೆ. ಶಾಂತೆಗ್ಡೆಯ ಖಾಸಗಿ ಟ್ರಸ್ಟ್ ಆಗಿರುವ ಟಿಎಸ್‌ಎಸ್ ಆಸ್ಪತ್ರೆಗೆ 6.81 ಕೋಟಿ ಬಳುವಳಿ ನೀಡಲಾಗಿದೆ. ಈ ಒಟ್ಟೂ 101.63 ಕೋಟಿಗೆ ಇಂದಿನ ವರೆಗಿನ ಬಡ್ಡಿ ಸೇರಿಸಿದರೆ ಟಿಎಸ್‌ಎಸ್‌ಗೆ ಆಗಿರುವ ನಿವ್ವಳ ಹಾನಿಗೆ ಅರ್ಥಾತ್ ಶಾಂತೆಗ್ಡೆ ಗ್ಯಾಂಗಿಗಾದ ನಿಖರ ಲಾಭಕ್ಕೆ ಇನ್ನೊಂದಿಷ್ಟು ಕೋಟಿ ರೂಪಾಯಿಗಳು ಸೇರುತ್ತವೆ.

ಹಿಕಮತ್ತಿನ ಹತ್ತು ಮುಖ


ಶಾಂತೆಗ್ಡೆಯ ಖಾಸಗಿ ಆಸ್ಪತ್ರೆ ಕೇಸು ನ್ಯಾಯಾಲಯದಲ್ಲಿದೆ. ಅಲ್ಲೇನಾದರೂ ಈ ಕೋಟ್ಯಂತರ ರೂ. ಆಸ್ಪತ್ರೆ ಟಿಎಸ್‌ಎಸ್ ಸುಪರ್ದಿಯಿಂದ ತಪ್ಪಿಹೋಗಿ ಶಾಂತೆಗ್ಡೆಯ ಜೋಳಿಗೆಗೆ ಬಿತ್ತೆಂದರೆ 7 ಕೋಟಿ ಪಂಗನಾಮ ಬಿದ್ದಂತೆಯೇ; ಬರೋಬ್ಬರಿ 7 ಕೋಟಿ ಶಾಂತೆಗ್ಡೆಯ ಪರ್ಸನಲ್ ಅಕೌಂಟಿಗೆ ಬಿದ್ದಂತೆ ಆಗುತ್ತದೆ. 64(1) ವಿಚಾರಣಾ ವರದಿ ಬರುವ ಕಾಲಕ್ಕೆ ಸಂಘ 51 ಕೋಟಿ ಸಾಲ ಬ್ಯಾಂಕುಗಳಿಂದ ಪಡೆದಿತ್ತು. ಅಲ್ಲದೆ ಬಹಳ ಕಾಲದಿಂದ ಕೂಡಿಸುತ್ತ ಬಂದಿರುವ ಕಾಯ್ದಿಟ್ಟ ನಿಧಿ, ಬೆಲೆ ಏರಿಳಿತ ನಿಧಿ, ಗಂಡಾಂತರ ನಿಧಿ ಮುಂತಾದವುಗಳನ್ನು ಮನಬಂದಂತೆ ವ್ಯವಹಾರದಲ್ಲಿ ತೊಡಗಿಸಲಾಗಿದೆ. ಇದು ಸಂಘದ ಆರ್ಥಿಕ ಅವನತಿಗೆ ಜೀವಂತ ನಿದರ್ಶನದಂತಿದೆ.

ಶಾಸನಬದ್ಧ ವಿಚಾರಣೆಯಲ್ಲಿ 62,45,83,224 ರೂಪಾಯಿ ಅವ್ಯವಹಾರ ಪ್ರತ್ಯಕ್ಷವಾಗಿ ಟಿಎಸ್‌ಎಸ್‌ನಲ್ಲಿ ನಡೆದಿರುವುದನ್ನು ಅಂಕಿ-ಅಂಶ ಸಮೇತ ದೃಢಪಡಿಸಿದೆ. ಯಾವುದೇ ಭದ್ರತೆಯಿಲ್ಲದೆ 13,62,60,597 ರೂ. ಖರೀದಿದಾರರಿಗೆ ಕೊಡಲಾಗಿದೆ. ಇದರಲ್ಲಿ ಶಾಂತೆಗ್ಡೆಯ ಗೋಲ್‌ಮಾಲ್ ಬಳಗದ ಗುರು ಹೆಗಡೆ, ಉಮೇಶ್ ಹೆಗಡೆ ವಗೈರೆ ದಗಾಕೋರ ಅಡಿಕೆ ವ್ಯಾಪಾರಸ್ಥರೇ ಹೆಚ್ಚು. ರೂ. 6,92,798 ನಿಯಮಬಾಹಿರವಾಗಿ ಬಡ್ಡಿ ರಿಯಾಯಿತಿ ಕೊಡಲಾಗಿದೆ. ಆಯ್ದ ಸಿಬ್ಬಂದಿಗಳಿಗೆ ಕೊಡಲಾಗಿರುವ ವೇತನ 69,453 ರೂ. ವಸೂಲಾತಿಯಾಗಬೇಕಿದೆ. 44,206 ರೂ.ಗಳನ್ನು ಆಡಳಿತ ಮಂಡಳಿಯ ಭೂಪರಿಗೆ ಕಾನೂನುಬಾಹಿರವಾಗಿ ಪ್ರಯಾಣಭತ್ಯೆಯೆಂದು ಧಾರೆಯೆರೆಯಲಾಗಿದೆ. ಸಹಕಾರ ಇಲಾಖೆಯ ನಿಬಂಧಕರ ಸುತ್ತೋಲೆ ಉಲ್ಲಂಘಿಸಿ 88,283 ರೂ. ಸಂಘಕ್ಕೆ ಲಾಸ್ ಮಾಡಲಾಗಿದೆ. ನಿಯಮಬಾಹಿರವಾಗಿ ಶಾಂತೆಗ್ಡೆಯ ಹುಸಿ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ನಿಧಿಗೆ 10,33,503 ರೂ ಬಡ್ಡಿ ಕೊಡಲಾಗಿದೆ. ಸತತ ಮೂರು ವರ್ಷದಿಂದ 'ಅ' ವರ್ಗದ ಇಬ್ಬರು ಶಾಂತೆಗ್ಡೆ ಸಹಚರರಾದ ಸದಸ್ಯರು 2,27,44,441 ರೂ. ಸಂಘಕ್ಕೆ ಕೊಡದೇ "ಆಟ" ಆಡುತ್ತಿದ್ದಾರೆ.

ವರ್ಮಾ ಟ್ರಾನ್ಸ್‌ಪೋರ್ಟ್‌ನಿಂದ 23,40,816 ರೂ. ಬರಬೇಕಾಗಿದೆ. ಪ್ರಧಾನ ವ್ಯವಸ್ಥಾಪಕ ರವೀಶ್ ಹೆಗಡೆಗೆ ಈ ಟ್ರಾನ್ಸ್‌ಪೋರ್ಟ್ ಕುಳಗಳ ಜೊತೆ ಅದೇನೋ ಒಳಸಂಬಂಧವಿದೆಯೆಂದು ಟಿಎಸ್‌ಎಸ್‌ನ ಕಂಬ-ಕಂಬಗಳೂ ಉಲಿಯುತ್ತವೆ. ಏಕಕಾಲಿಕ ತೀರುವಳಿ ಬಡ್ಡಿ ರಿಯಾಯಿತಿಯಿಂದ 40,24,706 ರೂ. ಟಿಎಸ್‌ಎಸ್‌ಗೆ ಟೊಪ್ಪಿಗೆ ಬಿದ್ದಿದೆ. ಆಡಳಿತ ಮಂಡಳಿಯ ದುರಾಸೆಯ ನಿರ್ದೇಶಕರಿಗೆ ರೂ. 1,14,726 ರೂ ಬಂಗಾರದ ನಾಣ್ಯ ಕೊಟ್ಟಿರುವುದರಿಂದ ಹಾನಿಯಾಗಿದೆ. ಶಾಂತೆಗ್ಡೆಯ ಯಜಮಾನಿಕೆಯಡಿ ಸಿದ್ಧಾಪುರ ಶಾಖೆಯ ಮ್ಯಾನೇಜರ್ ಆಗಿದ್ದ ಎಸ್.ಜಿ. ಹೆಗಡೆ ಸಣ್ಣಳ್ಳಿ 1,37,60,500 ರೂ. ಅವ್ಯವಹಾರ ಮಾಡಿ ಹೋಗಿದ್ದಾನೆ. ಯು.ಟಿ.ಐ.ನಲ್ಲಿ ತೊಡಗಿಸಿದ್ದ 21,58,121 ರೂ.ನಿಂದ 5,95,879 ಹಾನಿಯಾಗಿವೆ. ವ್ಯವಹಾರ ಸ್ಥಗಿತಗೊಳಿಸಿರುವ ಅಡಿಕೆ ವ್ಯಾಪಾರಿಗಳಿಂದ ಬರಬೇಕಾಗಿರುವುದು 2,60,041 ರೂ.ಗಳು. ಭದ್ರತೆಯಿಲ್ಲದ ಆಸಾಮಿ ಸಾಲ 44,25,47,275 ರೂ. ಇದೆಲ್ಲ ಶಾಂತೆಗ್ಡೆ ಮರ್ಜಿಯಂತೆ ಬೇಕಾಬಿಟ್ಟಿಯಾಗಿ ಹಂಚಿದ ಹಣ.



ರವೀಶ್ ಹೆಗಡೆ



ಶಾಂತಾರಾಮ ಹೆಗಡೆ

ಇದಕ್ಕೆ ಸಮಾನಾಂತರವಾಗಿ ಶಾಂತೆಗ್ಡೆಯ ಪಾರುಪತ್ಯಗಾರ ಮಂಡಳಿ ರೂ. 32,36,29,314 ರೂ. ಅಪ್ರತ್ಯಕ್ಷವಾಗಿ ಸಂಘದಿಂದ ಸೋರಿ ಹೋಗುವಂತೆ ಮಾಡಿದೆ. ಲಾಭವಿಲ್ಲದೆ ಇಂಥ ಹಿಕಮತ್ತು ನಡೆಸಲು ಸಾಧ್ಯವಾ? ಖರೀದಿದಾರರು ಪಡೆದ 31,10,78,991 ರೂ.ಗಳ ವಸೂಲಿಗೆ ಟಿಎಸ್‌ಎಸ್ ಆಡಳಿತಗಾರರು ಅದ್ಯಾಕೋ ಮನಸ್ಸೇ ಮಾಡುತ್ತಿಲ್ಲ; ಅದರಲ್ಲೂ ಇದು ನಿಯಮಬಾಹಿರವಾಗಿ ಕೊಡಲಾಗಿರುವ ಸಾಲ. ಸಂಘದ ಕಾರ್ಯವ್ಯಾಪ್ತಿಯ ಹೊರಗಿನ 113 ಸದಸ್ಯರಿಗೆ ನೀಡಲಾಗಿರುವ 1,25,50,323ರೂ. ಬರುವುದೇ ಅನುಮಾನ. ಇದೆಲ್ಲ ಶಾಂತೆಗ್ಡೆ ತನ್ನ ಮಾವ ಕಡವೆ ಹೆಗಡೆ ನಿಸ್ಪೃಹವಾಗಿ ದುಡಿದು ಕಟ್ಟಿದ ಟಿಎಸ್‌ಎಸ್ ಉಳಿಸಿ-ಬೆಳೆಸಲು ಮಾಡಿರುವ ಪ್ರಾಮಾಣಿಕ ಪ್ರಯತ್ನ!! ಅಡಿಕೆ-ಬೆಳೆಗಾರ ಹಿತಕಾಯುವ ಶಾಂತೆಗ್ಡೆಯ ಕಾರ್ಯವೈಖರಿ ಇದು.

"TSS" ಎಂಬ ಗೋಲ್‌ಮಾಲ್ ಟ್ರಸ್ಟ್‌ನ ಆಸ್ಪತ್ರೆಗೆ ಕಾನೂನುಬಾಹಿರವಾಗಿ 10,33,503 ರೂ. ಬಡ್ಡಿಯೆಂದು ಅಧ್ಯಕ್ಷ ಶಾಂತೆಗ್ಡೆ ಮತ್ತು ಡ್ಯಾಮೇಜರ್ ರವೀಶ್ ಹೆಗಡೆ ಕೊಟ್ಟಿದ್ದಾರೆ. ಅಲ್ಲದೆ ಬಡರೈತರ ಪ್ರೋತ್ಸಾಹಧನವನ್ನು tssಗೆ ವರ್ಗಾಯಿಸಿದ್ದಾರೆ. ಬೆಳೆಗಾರರ ಹಣ ಹೊಡೆಯಲು ಸರ್ವಸಾಧಾರಣ ಸಭೆಯಲ್ಲೊಂದು "ಗಾಂಧಿ ಠರಾವು" ಬೇರೆ ಮಾಡಿಕೊಂಡಿದ್ದಾರೆ. ಆದರೆ ಪ್ರೋತ್ಸಾಹಧನ ಹೀಗೆ ಠರಾವ್ ಮೂಲಕ ವರ್ಗಾಯಿಸಲಾಗದು. ಸರ್ವಸಾಧಾರಣ ಸಭೆಗೆ ಭಾಗವಹಿಸುವ ಅವಕಾಶವಿಲ್ಲದ ನಾಮಿನಲ್ ಮೆಂಬರ್‌ಗಳ ದೊಡ್ಡ ಮೊತ್ತದ ಹಣವನ್ನು ಶಾಂತೆಗ್ಡೆಯ ಆಸ್ಪತ್ರೆ ಆಸ್ವಾದಿಸಿದೆ. ಈ ಹಣ 7 ಕೋಟಿ ಮೀರುತ್ತದೆ. ದುರಂತವೆಂದರೆ ಈ ಹಣ ಅತ್ತ ಅಸಹಾಯಕ ಅಡಿಕೆ ಬೆಳೆಗಾರರಿಗೂ ಸಿಗದೆ, ಅತ್ತ tss ಆಸ್ಪತ್ರೆ ನಿಧಿಯಾಗಿಯೂ ಇರದೇ ಶಾಂತೆಗ್ಡೆಯ ಖಾಸಗಿ ಟ್ರಸ್ಟ್‌ನ ಪಾಲಾಗಿದೆ. ಸ್ವಯಂಘೋಷಿತ ಸಜ್ಜನ-ಶಾಸಕನಾಗುವ ಹಪಾಹಪಿಯ ಶಾಂತೆಗ್ಡೆಯ ದುರಾಸೆ-ದುರಾಡಳಿತಕ್ಕೆ ಇನ್ನೆಂಥ ಸಾಕ್ಷಿ ಬೇಕು?!

ಡ್ಯಾಮೇಜರ್ ರವೀಶ್ ರಗಳೆ

ಟಿಎಸ್‌ಎಸ್ ಅವನತಿ ಜಾಡಲ್ಲಿ ನಡೆಯುತ್ತಿರುವುದಕ್ಕೆ ಅಡ್ನಾಡಿ ಅಧ್ಯಕ್ಷ ಶಾಂತೆಗ್ಡೆ ಎಷ್ಟು ಹೊಣೆಯೋ ಅಷ್ಟೇ ಜವಾಬ್ದಾರ ಪ್ರಧಾನ ವ್ಯವಸ್ಥಾಪಕ ರವೀಶ್ ಹೆಗಡೆ! ಈ ರವೀಶ್ ಬಂದದ್ದೇ ತಡ ಒಂದಲ್ಲ ಒಂದು ರಗಳೆ ಸಂಘದಲ್ಲಿ ನಡೆಯಹತ್ತಿದೆ. ಪೆಪ್ಸಿ ಕಂಪೆನಿಯಲ್ಲಿ ಅದೆಷ್ಟು ಬಾಟಲಿ ಹೋಯ್ತು ಎಷ್ಟು ಶಿಲ್ಕಿ ಇದೆ ಎಂಬ ಲೆಕ್ಕಬರೆಯುವ ಪೋರನಾಗಿದ್ದ ಈ ಮಾಣಿಗೆ ಶಾಂತೆಗ್ಡೆ ತನ್ನ ಆಪ್ತರೊಬ್ಬರ ರಕ್ತ ಸಂಬಂಧಿ ಎಂಬ ಕಾರಣಕ್ಕೆ ಟಿಎಸ್‌ಎಸ್‌ನ ಮ್ಯಾನೇಜರ್ ಪೀಠದಲ್ಲಿ ಪ್ರತಿಷ್ಠಾಪಿಸಿದ್ದರು.

ಈ ರವೀಶ್ ಹೆಗಡೆಗೆ ಅಡಿಕೆ ಮಾರುಕಟ್ಟೆಯ ಜ್ಞಾನವಾಗಲಿ, ಟಿಎಸ್‌ಎಸ್‌ನಂಥ ದೈತ್ಯ ಸಂಸ್ಥೆ ನಡೆಸುವ ಯೋಗ್ಯತೆಯಾಗಲಿ ಇಲ್ಲ, ಖರೀದಿ-ವಿಕ್ರಿ ವಿಭಾಗದಲ್ಲಿ ನಿರಂತರ ಗೋಲ್‌ಮಾಲ್ ಮಾಡುತ್ತಿರುವ ಅನಿಲ್ ಕುಮಾರ್ ಮುಷ್ಠಗಿ ಎಂಬ ನೌಕರನ ಕೈಯಲ್ಲಿ ತನ್ನ ಜುಟ್ಟುಕೊಟ್ಟು ಕೂತಿರುವ ಈ ರವೀಶ್ ಆತನ ದೋಖಾ ಆಟಗಳಿಗೆಲ್ಲಾ ಸಹಕರಿಸುತ್ತ ಸಿಕ್ಕಷ್ಟು ಕಿಸೆಗಿಳಿಸುತ್ತಿದ್ದಾನೆ. ಎಷ್ಟೆಂದರೂ ಈ ಮುಷ್ಠಗಿ ಮಾಮು ಅಧ್ಯಕ್ಷ ಶಾಂತೆಗ್ಡೆಯ ಯೌವನ ಕಾಲದ ಸಖ. ಟಿಎಸ್‌ಎಸ್‌ನ ಸಾಮ್ರಾಟ್ ಹೋಟೆಲಲ್ಲಿ ಸರದಿಯಂತೆ ಸ್ವಾಗತಕಾರ ಚಾಕರಿ ಮಾಡುತ್ತಿದ್ದ ಆಪ್ತರಿವರು. ಇಂಥವನ ಅವ್ಯವಹಾರ ಎತ್ತಿಯಾಡಿ ಕ್ರಮ ಕೈಗೊಳ್ಳುವ ತಾಕತ್ತು ರವೀಶನಿಗೆಲ್ಲಿದೆ, ಪಾಪ.

ಹಿಂದೆ ಸಿದ್ಧಾಪುರ ಶಾಖೆಯಲ್ಲಿ ಮ್ಯಾನೇಜರ್ ಆಗಿದ್ದ ಸಣ್ಣಳ್ಳಿ ಹೆಗಡೆಯ ಅವ್ಯವಹಾರ ಕಂಡುಹಿಡಿದಿದ್ದೇ ಪ್ರಕಾಶ್ ಹೆಗಡೆ ಎಂಬ ದಕ್ಷ ಪ್ರಾಮಾಣಿಕ ಪ್ರಧಾನ ವ್ಯವಸ್ಥಾಪಕ. ಸಣ್ಣಳ್ಳಿ ಹೆಗಡೆ ಹೆಡೆಮುರಿ ಕಟ್ಟಿ ಡಿಸ್‌ಮಿಸ್ ಮಾಡಿದ್ದು ಪ್ರಕಾಶ್ ಹೆಗಡೆ. ಆ ಧೈರ್ಯ ರವೀಶ್‌ಗೆ ಇಲ್ಲ, ಇಲ್ಲದಿದ್ದರೆ ಅಡಿಕೆ ಖರೀದಿ-ವಿಕ್ರಿ ವಿಭಾಗದಲ್ಲಿ ಕೋಟಿ-ಕೋಟಿ ದೋಚುತ್ತಿರುವ ಮುಷ್ಠಗಿ ಮನೆ ಸೇರಿ ವರ್ಷ ಎರಡಾಗುತ್ತಿತ್ತು, ಚಪಾಲಚೆನ್ನಿಗ ಮುಷ್ಠಗಿ ಹೇಳಿದಂತೆಯೇ ಆಡಳಿತ ನಡೆಸುತ್ತಿರುವ ರವೀಶ್ ಅಡಿಕೆ ಸಂಸ್ಕರಣಕ್ಕೆ ಆತನ ಮನೆಗೇ ಕಳಿಸುತ್ತಾನೆ. ಎಂಥ ಅನೈತಿಕ ಮೈತ್ರಿ ನೋಡಿ.

ರವೀಶ್ ಹೆಗಡೆಗೆ ಅಡಿಕೆ ವ್ಯವಹಾರದಲ್ಲಿ ದೊಡ್ಡಪಾಲು ಸಂದಾಯವಾಗುತ್ತಿದೆ ಎಂಬ ಗುಲ್ಲು ಶಿರಸಿ ಸೀಮೆಯಲ್ಲಿ ಟಾಕ್ ಆಫ್ ದಿ ಟೌನ್! ಸಹಕಾರಿ ಇಲಾಖೆ ನಡೆಸಿದ 64(1) ಶಾಸನಬದ್ಧ ವಿಚಾರಣೆಯಲ್ಲಿ ಈ ರವೀಶ್ ಹೆಗಡೆಯ ಹೊಣೆಗೇಡಿತನ ಕರಾರುವಾಕ್ಕಾಗಿ ಗುರುತಿಸಲಾಗಿದೆ. ಇದೊಂದೇ ಸಾಕು ಈತನನ್ನು ಮ್ಯಾನೇಜರ್ ಕುರ್ಚಿಯಿಂದ ಕೆಳಗಿಳಿಸಲು. ಟಿಎಸ್‌ಎಸ್‌ಗೆ ಬರುವಾಗ ತಿರುಬೋಕಿಯಂತಿದ್ದ ರವೀಶ್ ಈಗ ಶಿರಸಿಯಲ್ಲಿ ಭರ್ಜರಿ ಸೈಟ್ ಖರೀದಿಸಿ ಬಂಗ್ಲೆ ಕಟ್ಟಿಸುತ್ತಿದ್ದಾನೆ. ರವೀಶ್ ಲಕ್ಷಾಧೀಶನಾಗಿರುವುದೂ ಟಿಎಸ್‌ಎಸ್ ದಿವಾಳಿಯಾಗುತ್ತಿರುವುದೂ ಥಳುಕು ಹಾಕಿಕೊಳ್ಳುತ್ತಿದೆ.

ರವೀಶ್ ಲಕ್ಷಾಧಿಪತಿಯಾದರೆ ಈತನ ಗುರು ಶಾಂತೆಗ್ಡೆ ಕೋಟ್ಯಾಧಿಪತಿ. ಟಿಎಸ್‌ಎಸ್‌ನ ವಾಹನ-ಹಣ-ಕಟ್ಟಡಗಳು ಶಾಂತೆಗ್ಡೆಯ ಒಣ ಖಯಾಲಿಗೆ ಬೇಕೆಂದಾಗೆಲ್ಲ ಸಲೀಸಾಗಿ ಸಿಗುತ್ತದೆ. ಬೆಂಗಳೂರು-ಹುಬ್ಬಳ್ಳಿ-ಧಾರವಾಡದಲ್ಲಿ "ಸಂಭಾವಿತ" ಶಾಂತೆಗ್ಡೆ ಸೈಟ್ ಖರೀದಿಸಿದ್ದಾರೆಂಬುದು ಬಡ ತೋಟಿಗರಲ್ಲಿ ತರಹೇವಾರಿ ವದಂತಿ-ಚರ್ಚೆ ಹುಟ್ಟಿಹಾಕಿದೆ. ರಾಗಿಹೊಸಳ್ಳಿಯಲ್ಲಿ ಭರ್ಜರಿ ಅಡಿಕೆ ತೋಟ ತಯಾರಿಸಿದ್ದಾರೆ ಶಾಂತೆಗ್ಡೆ. ಟಿಎಸ್‌ಎಸ್ ಬೈಲಾ ಪ್ರಕಾರ ತರಿ(ಗದ್ದೆ) ಜಮೀನಿಗೆ ಸಾಲ ಕೊಡಲುಬಾರದು. ಆದರೆ ಶಾಂತೆಗ್ಡೆ ಹಬ್ಬೆ ಗ್ರಾಮದ ತನ್ನ ಗದ್ದೆ ಮೇಲೆ 30 ಲಕ್ಷ ಸಾಲ ಟಿಎಸ್‌ಎಸ್‌ನಲ್ಲಿ ಎತ್ತಿದ್ದಾರೆ. ಆ ಸಾಲ ಟಿಎಸ್‌ಎಸ್‌ನಲ್ಲಿ ಬಿದ್ದ ಅಡಿಕೆ ಮಾರಿಯೇ ತುಂಬಿದ್ದಾರೆಂಬುದು ಸಾಮಾನ್ಯ ಜೋಕ್ ಶಿರಸಿಯಲ್ಲಿ, ಇವರ ಮಿತ್ರ ಮುಷ್ಠಗಿಯೂ ಚಪಗಿಯಲ್ಲಿ ಅತಿಕ್ರಮಣ ಮಾಡಿ ಲಕ್ಷಾಂತರ ರೂ. ಮನೆ ಕಟ್ಟಿದ್ದಾನೆ. ಒಟ್ಟಿನಲ್ಲಿ ಟಿಎಸ್‌ಎಸ್ ಶಾಂತೆಗ್ಡೆ-ರವೀಶ್-ಮುಷ್ಠಗಿಗೆ ಬೇಕಾದ್ದು ಕೊಡುವ ಕಾಮಧೇನು!

ರಿಜಿಸ್ಟ್ರಾರ್ ಹೆಗಡೆಗೆ ಕಾಣಿಕೆ

ಸಹಕಾರ ಸಂಘಗಳ ನಿಬಂಧಕ ಎಸ್.ಜಿ. ಹೆಗಡೆ ಶಿರಸಿ ಗಡಿಯ ದೊಡ್ಮನೆಯವರು. ಈತ ಟಿಎಸ್‌ಎಸ್‌ನ ಆಡಳಿತ ಮಂಡಳಿಯ ಹೈಗರ ಜಾತಿ ಬಂದು. ಶಾಂತೆಗ್ಡೆಗಂತೂ ಎಸ್.ಜಿ. ಹೆಗಡೆ ಖಾಸಾ ಆದ್ಮಿ! 2010 ರ ಜನವರಿ 16 ರಂದು ಈ ರಿಜಿಸ್ಟ್ರಾರ್ ಸಾಹೇಬರನ್ನು ಶಾಂತೆಗ್ಡೆ ಟಿಎಸ್‌ಎಸ್‌ಗೆ ಕರೆತಂದಿದ್ದರು. ಅದು ರವಿವಾರ. ಮಾರ್ಕೆಟ್‌ಗೆ ರಜೆ. ಆದರೂ ಸಾಹೇಬರ ಸಂಪ್ರೀತಗೊಳಿಸಲು ಅಡಿಕೆ ವ್ಯಾಪಾರ ಅಂದು ಇಡಲಾಗಿತ್ತು, ಸ್ವೀಟ್ ಸುಪಾರಿ ಘಟಕ ಉದ್ಘಾಟನೆಯೂ ಹೆಗಡೆ ಸಾಹೇಬರ ಅಮೃತಹಸ್ತದಿಂದ ನಡೆಸಲಾಗಿತ್ತು.

ವಿಷಯ ಅದಲ್ಲ, ಆ ವೇಳೆಗೆ ಟಿಎಸ್‌ಎಸ್‌ನಲ್ಲಿ ಶಾಂತೆಗ್ಡೆ ಬಳಗ ಮಾಡಿದ್ದ ಅವ್ಯವಹಾರದ ಬಗ್ಗೆ ಶಾಸನಬದ್ಧ ವಿಚಾರಣೆ 64(1) ಸ.ಸಂ. ಕಾಯ್ದೆಯಂತೆ ನಡೆದಿತ್ತು, ಸ.ಸಂ. ಕಾಯ್ದೆ 68 ರ ಪ್ರಕಾರ ನ್ಯೂನತೆ ಸರಿಪಡಿಸಿಕೊಳ್ಳುವ ಆದೇಶವೂ ಬಂದಿತ್ತು, ಆದರೂ ಈ ಎಸ್.ಜಿ. ಹೆಗಡೆ ಟಿಎಸ್‌ಎಸ್ ಅತೀ ಉತ್ತಮವಾಗಿ ನಡೆಯುತ್ತಿದೆ ಎಂದು ಪ್ರಶಂಸಿಸಿದ್ದರು. ಇದು ಶಾಂತೆಗ್ಡೆ ಗುಣಸ್ವಭಾವ ಬಲ್ಲವರನ್ನು ನಗಬಾರದ ಕಡೆಯಿಂದೆಲ್ಲ ನಗಿಸಿತ್ತು. ಶಾಂತೆಗ್ಡೆ ಸಾಹೇಬರನ್ನು ಟಿಎಸ್‌ಎಸ್‌ನ ಸ್ಟ್ರಾಂಗ್ ರೂಮ್‌ಗೆ ಅಲ್ಲಿರುವ ಬೆಳ್ಳಿಯ ಲಕ್ಷ್ಮೀಮೂರ್ತಿ ತೋರಿಸಲೆಂದು ತುಂಬ ರಹಸ್ಯವಾಗಿ ಕರೆದೊಯ್ದಿದ್ದರಂತೆ. ಅಲ್ಲಿ ಬರೋಬ್ಬರಿ 20 ತೊಲ ಬಂಗಾರದ ಗಟ್ಟಿ ಕಾಣಿಕೆ ಕೊಡಲಾಯಿತಂತೆ. ಆನಂತರವೇ ಅಲ್ಲವೇ 64(1) 68 ವರದಿ ಆದೇಶವೆಲ್ಲ ಹಳ್ಳಹಿಡಿದು ಶಾಂತೆಗ್ಡೆ ಬಳಗ ಸೇಫ್ ಆಗಿದ್ದು?!

ದಿವಾಳಿಯತ್ತ ಟಿಎಸ್‌ಎಸ್

ಟಿಎಸ್‌ಎಸ್ ಅನ್ನು ಯಾವಾಗ ಶಾಂತೆಗ್ಡೆ ಕಬ್ಜಾ ಮಾಡಿಕೊಂಡು ಅನುಭೋಗಿಸಲು ಶುರು ಹಚ್ಚಿಕೊಂಡನೇ ಅಂದಿನಿಂದಲೇ ಸಂಘದ ಸರಿಯಾದ ಸಾಂಪತ್ತಿಕ ಸ್ಥಿತಿಗತಿಯೇ ಗೋಗುಂ ಆಗಿಹೋಯ್ತು. ಹಲವು ವರ್ಷದಿಂದ ಟಿಎಸ್‌ಎಸ್ ಪ್ರಕಟಿಸುತ್ತಿರುವ ಲಾಭ-ಹಾನಿಯ ಆಢಾವೆ ಪತ್ರಿಕೆಯೇ ಬೋಗಸ್. ಲಾಭ-ಹಾನಿಯನ್ನು ದೃಢೀಕರಿಸುವಾಗ ಸಹಕಾರಿ ಸಂಘಗಳ ಕಾಯ್ದೆ 1960 ನಿಯಮ 22 ನ್ನು ಪಾಲಿಸಿದ್ದೇ ಇಲ್ಲ. ಬರಬೇಕಾದ ಬಡ್ಡಿಯನ್ನು ಲಾಭದ ಖಾತೆಗೆ ಸೇರಿಸಿ ಸಂಘ ಭರ್ಜರಿ ಲಾಭದಲ್ಲಿದೆ ಎಂದು ಬಿಂಬಿಸುತ್ತ ಬರಲಾಗಿದೆ. ಇದು ಹುಸಿ ಲಾಭ. ಈ ಅಂಶ ಸಹಕಾರಿ ಇಲಾಖೆಯ ಆಡಿಟರ್ (144 ಲೆಕ್ಕತಪಾಸಣಾಧಿಕಾರಿ) ಮತ್ತು 64(1) ವಿಚಾರಣಾಧಿಕಾರಿ ಪಾಟೀಲ್ ಮಾಮ ಇಬ್ಬರೂ ಒಪ್ಪಿಕೊಳ್ಳುತ್ತಾರೆ.

ಆದರೆ ಈ ವಿಚಾರಣಾಧಿಕಾರಿ ಪಾಟೀಲ್ ಲಾಭ-ಹಾನಿ ಪತ್ರಿಕೆ ಸರಿಪಡಿಸಿ 2004-05 ರಿಂದ 2009-10 ರ ತನಕದ ನೈಜಲಾಭವನ್ನು ತೋರಿಸಲು ಪ್ರಯತ್ನಿಸಲೇ ಇಲ್ಲ. ಹಾಗೆ ನಿಯತ್ತಿನಿಂದ ಆತ ಕೆಲಸ ಮಾಡಿದ್ದೇ ಆದರೆ, ಅಧ್ಯಕ್ಷ ಶಾಂತೆಗ್ಡೆ ಡ್ಯಾಮೇಜರ್ ರವೀಶ್ ಹೆಗಡೆಯ ಹಗಲುಬಾಜಿತನ ಸಾಬೀತು ಪಡಿಸಿದಂತಾಗುತ್ತಿತ್ತು. ಆದರೆ ಹೆಗಡೆದ್ವಯರಿಂದ ಮೇಜುವಾನಿ ಮಾಡಿಸಿಕೊಂಡಿದ್ದ ಪಾಟೀಲ್ ಮಾಮನೂ ಟಿಎಸ್‌ಎಸ್‌ನಲ್ಲಿ ದೋನಂಬರ್ ದಂಧೆ ಮಾಡಿ ನುಣುಚಿಕೊಂಡು ಹೋಗಿದ್ದಾನೆ. 2004 ರಿಂದ 2010 ರ ತನಕ ಟಿಎಸ್‌ಎಸ್‌ಗೆ ನಿಜವಾಗಿ ...,89,34,453 ರೂ. ನಿವ್ವಳ ಹಾನಿಯಾಗಿದೆ. ಆದರೆ ಶಾಂತೆಗ್ಡೆ-ರವೀಶ್ ಹೆಗ್ಡೆಗಳ ಆಢಾವೆಯಲ್ಲಿ ಸಂಘಕ್ಕೆ ...,75,61,538 ರೂ. ಲಾಭವಾಗಿದೆ! ಹೇಗಿದೆ ಹೆಗ್ಡೆಗಳ ಅಂದರ್-ಬಾಹರ್? ಹೀಗೆ ಲಾಭ ತೋರಿಸುವುದರ ಮುಖ್ಯ ಉದ್ದೇಶವೇನು ಗೊತ್ತಾ? ಲಾಭ ತೋರಿಸದಿದ್ದರೆ ಶಾಂತೆಗ್ಡೆ ಆಸ್ಪತ್ರೆಗೆ ಹಣ ವರ್ಗಾಯಿಸಲು ಬರುತ್ತಿರಲಿಲ್ಲ. ಸಂಘದ ಲೆಕ್ಕ ಪರಿಶೋಧಕ ಉದಯ ಸ್ವಾದಿ ಲಾಭ-ಹಾನಿ ಪತ್ರಿಕೆ ಲೋಪದಿಂದ ಕೂಡಿದ್ದರೂ ದೃಢೀಕರಿಸಿ ಹೊಣೆಗೇಡಿತನ ತೋರಿಸಿದ್ದಾರೆಂದು ಹೇಳುವ ವಿಚಾರಣಾಧಿಕಾರಿ ಪಾಟೀಲ್ ಮಾಮ ತಾವೇಕೆ ನೈಜ ಲಾಭ-ಹಾನಿ ತನ್ನ ವರದಿಯಲ್ಲಿ ತೋರಿಸಲಿಲ್ಲ? ಶಾಂತೆಗ್ಡೆಯ ಸೋಗಲಾಡಿತನ ಬಹಿರಂಗ ಮಾಡಲಿಲ್ಲ? ಒಟ್ಟಿನಲ್ಲಿ ಟಿಎಸ್‌ಎಸ್‌ನ "ಆಸ್ತಿ-ಜವಾಬ್ದಾರಿ" ಪತ್ರಿಕೆಯಲ್ಲಿ ಇರುವುದೆಲ್ಲ ಶುದ್ಧ ಸುಳ್ಳು ಅಂಕಿ-ಅಂಶ!


ಆದ್ದರಿಂದ ಸಹಕಾರ ಸಂಘಗಳ ಲೆಕ್ಕ ತಪಾಸಣಾ ಅಧಿಕಾರಿಗಳು ಸ.ಸಂ.ಕಾಯ್ದೆ ಕಲಂ 63(11) ಮತ್ತು 63(10) ರ ಪ್ರಕಾರ ಟಿಎಸ್‌ಎಸ್‌ನ ಲೆಕ್ಕಪತ್ರ ಮರುತಪಾಸಣೆ ಒಳಪಡಿಸುವ ಜರೂರಿದೆ. ಆಗ ಶಾಂತೆಗ್ಡೆ ಕೈ ಅದೆಷ್ಟು ಕೊಳಕಾಗಿದೆ ಎಂಬುದು ಸ್ಪಷ್ಟವಾಗುತ್ತದೆ.

ಶಾಂತೆಗ್ಡೆ-ಪಾಟೀಲ್ ಜುಗಲ್ ಬಂದಿ

ಟಿಎಸ್‌ಎಸ್‌ನಲ್ಲಿ ನಡೆದಿರುವ ಅವ್ಯವಹಾರ-ಅಪರಾತಪರಾದ ತನಿಖೆಗೆ ಸ.ಸಂ. ಕಾಯ್ದೆ 64(1) ರಂತೆ ವಿಚಾರಣೆ ನಡೆದಿದೆಯಾದರೂ ವಿಚಾರಣಾಧಿಕಾರಿ ಪಾಟೀಲ್ ಅವ್ಯವಹಾರಿ ಅಧ್ಯಕ್ಷ ಶಾಂತೆಗ್ಡೆ ಮತ್ತು ಪ್ರಧಾನ ವ್ಯವಸ್ಥಾಪಕ ರವೀಶ್ ಹೆಗಡೆಗಳ ಜೊತೆ ಶಾಮೀಲಾಗಿದ್ದರಿಂದ ನ್ಯಾಯಯುತ ಫಲಿತಾಂಶ ಬಂದಿಲ್ಲ. ಪಾಟೀಲನ ತನಿಖಾ ವರದಿಯಲ್ಲಿ ಶಾಂತೆಗ್ಡೆ ಬಳಗದ ಭಾನಗಡಿ ಬಗ್ಗೆ ಸ್ಪಷ್ಟ ಚಿತ್ರಣವೇ ಇಲ್ಲ. ಹೆಜ್ಜೆ ಹೆಜ್ಜೆಗೆ ಚೋರ ಶಾಂತೆಗ್ಡೆಯನ್ನು ರಕ್ಷಿಸಲೆಂದೇ ಪಾಟೀಲ್ ಪ್ರಯತ್ನಿಸಿದ್ದಾರೆ. ಆಢಾವೆ ಪತ್ರಿಕೆಯಲ್ಲಿನ ಗೋಲ್‌ಮಾಲ್‌ಗೆ ಸಮವರ್ತಿ ಆಡಿಟರ್ ಮತ್ತು ಅಂತಿಮ ಲೆಕ್ಕಪರಿಶೋಧಕ ಸ್ವಾದಿಗಳೇ ಹೊಣೆ ಎಂದು ಹೇಳಿರುವ ಪಾಟೀಲ್ ಅಪ್ಪಿತಪ್ಪಿಯೂ ಶಾಂತೆಗ್ಡೆ ಅಥವಾ ರವೀಶ್ ಹೆಗಡೆಗಳನ್ನು ತಪ್ಪಿತಸ್ಥರೆಂದು ಹೇಳಿಲ್ಲ.

ವಿಚಾರಣಾ ವರದಿಯಲ್ಲಿ ಲೆಕ್ಕತಪಾಸಿಗರ ಬಗ್ಗೆ ವಿಚಾರಣಾಧಿಕಾರಿ ಪಾಟೀಲ್ ವ್ಯಕ್ತಪಡಿಸಿರುವ ಅಭಿಪ್ರಾಯ ಮತ್ತು ಆಡಳಿತ ಮಂಡಳಿಯವರು ಅರ್ಥಾತ್ ಅಧ್ಯಕ್ಷ ಶಾಂತೆಗ್ಡೆ-ಡ್ಯಾಮೇಜರ್ ರವೀಶ್ ಹೆಗಡೆ ಬಳಗ ತಮಗೆ ಕೇಳಿರುವ ಪ್ರಶ್ನೆಗಳಿಗೆ ಕೊಟ್ಟಿರುವ ಉತ್ತರ ಒಂದೇ ಥರ ಇದೆ. ಇದನ್ನು ನೋಡಿದರೆ ಆಡಳಿತಮಂಡಳಿಯವರೇ ವಿಚಾರಣಾಧಿಕಾರಿಗೆ ತಮ್ಮಿಚ್ಛೆಯಂತೆ "ಕತೆ" ಹೇಳಿ ಬರೆಸಿದಂತೆ ಭಾಸವಾಗುತ್ತದೆ! ಇಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ, ವಿಚಾರಣಾ ವರದಿಯಲ್ಲಿ ಎಲ್ಲಿಯೂ ಪ್ರಧಾನ ವ್ಯವಸ್ಥಾಪಕ ರವೀಶ್ ಹೆಗಡೆಯನ್ನು ತಪ್ಪಿತಸ್ಥನೆಂದಾಗಲಿ, ತಪ್ಪಿಗೆ-ಅವ್ಯವಹಾರಕ್ಕೆ ಹೊಣೆಯೆಂದಾಗಲಿ ಹೇಳದೆ ಎಲ್ಲ ಅನಿಷ್ಟಕ್ಕೂ ಆಯಾ ವಿಭಾಗದ ಕಾರ್ಯನಿರ್ವಾಹಕರೇ ಜವಾಬ್ದಾರರೆಂದು ಸಗಣಿ ಸಾರಿಸಲಾಗಿದೆ! ವಾಸ್ತವವೆಂದರೆ, ಸಂಘದ ನಿಯಮದಂತೆ ಸಂಘದ ಸಕಲ ಆಗು-ಹೋಗುಗಳಿಗೆ ಪ್ರಧಾನ ವ್ಯವಸ್ಥಾಪಕನೇ ಹೊಣೆಗಾರ. ಆತನ ಕರ್ತವ್ಯಲೋಪ ಅಥವಾ ಅವ್ಯವಹಾರಕ್ಕೆ ಆಡಳಿತ ಮಂಡಳಿಯೇ ಉತ್ತರದಾಯಿ. ಹೀಗಿರುವಾಗ ಟಿಎಸ್‌ಎಸ್‌ನ ಅವ್ಯವಹಾರಕ್ಕೆ ಜವಾಬ್ದಾರರು ಶಾಂತೆಗ್ಡೆ ಮತ್ತು ರವೀಶ್ ಹೆಗಡೆಗಳು ತಾನೆ? ಇವರಿಬ್ಬರಿಗೆ ಸಾವಿರಾರು ಬಡ ಅಡಿಕೆ ಬೆಳೆಗಾರರ ಕಣ್ಣೀರಿನ ಶಾಪ ತಟ್ಟದೇ ಇದ್ದೀತಾ? ವಿಚಾರಣಾಧಿಕಾರಿಯ ದಾರಿ ತಪ್ಪಿಸಿದ ಮಾತ್ರಕ್ಕೆ ಪಾಪ ಪರಿಹಾರವಾದೀತಾ?

ಹಿಂದೆ ಸಿದ್ದಾಪುರದ ಟಿಎಸ್‌ಎಸ್ ಶಾಖೆಯಲ್ಲಿ ಕೋಟ್ಯಂತರ ರೂಪಾಯಿ ಅಪರಾತಪರಾ ಆಗಿದ್ದಾಗ ಅಲ್ಲಿಯ ಮ್ಯಾನೇಜರ್ ಸಣ್ಣಳ್ಳಿ ಮಾಣಿಯನ್ನು ಹೊಣೆಯಾಗಿಸಿ ಅಧಿಕಪ್ರಸಂಗಿ ಅಧ್ಯಕ್ಷ ಶಾಂತೆಗ್ಡೆಯ ಆಡಳಿತಮಂಡಳಿ ಬಚಾವಾಗಿತ್ತು. ಈಗಲೂ ಅದೇ ತಂತ್ರ ಹೆಣೆಯಲಾಗಿದೆ. ಸಣ್ಣ ನೌಕರರ ಬಲಿ ಹಾಕಿ ದೊಡ್ಡ ತಿಮಿಂಗಿಲುಗಳು ಹಾಯಾಗಿರಲು ಸಂಚು ರೂಪಿಸಿಕೊಂಡಿವೆ. ಶಾಂತೆಗ್ಡೆ ಜೈಲಿಗೆ ಕಳಿಸಲು ಒಂದಲ್ಲ ಹತ್ತಾರು ಆಧಾರಗಳು ಸಿಗುತ್ತವೆ. ಆದರೆ ಬೆಕ್ಕಿಗೆ ಗಂಟೆ ಕಟ್ಟೋರು ಯಾರು?!



ಮುಷ್ಟಗಿ

ಅಡಿಕೆ ಖರೀದಿ ಅಡ್ಡಕಸುಬು

ಟಿಎಸ್‌ಎಸ್‌ನಲ್ಲಿ ನಡೆಯುವ ಅಕ್ರಮ-ಸಕ್ರಮ ಎರಡೂ ಅಡಿಕೆ ವಹಿವಾಟಿದೆಯಲ್ಲ ಅದು ರಾಜಕಾರಣಿಯೂ ಆಗಿರುವ ಕಂತ್ರಿ ಪುಢಾರಿ ಶಾಂತೆಗ್ಡೆಯ ಪಾಲಿಗೆ ಅಕ್ಷಯಪಾತ್ರೆಯಂತಾಗಿದೆ. ಯಾವಾಗ ಸಂಘದ ಬೈಲಾಕ್ಕೆ ವಿರುದ್ಧವಾಗಿ ವ್ಯಾಪಾರಸ್ಥರಿಂದ ಅಡಿಕೆ ಖರೀದಿಗೆ ಶಾಂತೆಗ್ಡೆ ಕೈ ಹಾಕಿದನೋ ಆಗ ಇದರಲ್ಲೇನೋ ದಗಲುಬಾಜಿ ದಂಧೆಯಿದೆಯೆಂಬ ಅನುಮಾನ ಎಂಥ ಗಾಂಪನಿಗೂ ಶುರುವಾಗಿದೆ. ಅಡಿಕೆ ಖರೀದಿ ಏನಿದ್ದರೂ ಅಸಹಾಯಕ ಅಡಿಕೆ ಬೆಳೆಗಾರನಾದ ಸಂಘದ ಸದಸ್ಯನಿಂದಲೇ ಮಾಡಬೇಕೆಂದಿದೆ. ಶಾಂತೆಗ್ಡೆ ತನ್ನ ರಹಸ್ಯ ದಂಧೆಯ ಪಾಲುದಾರರಾದ ಗುರು ಹೆಗಡೆ, ಉಮೇಶ್ ಹೆಗಡೆ ವಗೈರೆ ವ್ಯಾಪಾರಸ್ಥರಿಂದ ಅಡಿಕೆ ಖರೀದಿ ಮಾಡಲಾರಂಭಿಸಿದಾಗ ಕೋಟ್ಯಂತರ ರೂಪಾಯಿ ಗೋಲ್‌ಮಾಲ್ ಟಿಎಸ್‌ಎಸ್‌ನಲ್ಲಿ ನಡೆದುಹೋಯ್ತು.

ಅಡಿಕೆ ಖರೀದಿ-ವಿಕ್ರಿ ವ್ಯವಹಾರದಲ್ಲಿ ಅಧ್ಯಕ್ಷ ಶಾಂತೆಗ್ಡೆ ಪ್ರಧಾನ ವ್ಯವಸ್ಥಾಪಕ ರವೀಶ್ ಹೆಗಡೆ ಮತ್ತು ಖರೀದಿ ವಿಕ್ರಿ ವಿಭಾಗದ ಬಾಸ್ ಅನಿಲ್‌ಕುಮಾರ್ ಮುಷ್ಟಗಿ ಎಂಬ ತ್ರಿಮೂರ್ತಿಗಳು ಹಣ ದೋಚುತ್ತಿದ್ದಾರೆಂಬ ಗುಲ್ಲು ಇವತ್ತಿಗೂ ಹಾಗೇ ಇದೆ. ಆದರೆ ಈ ಅಡಿಕೆ ಖರೀದಿ ಖಾಸಗಿಯವರಿಂದ ನಡೆದಿರುವುದನ್ನು 64(1) ವಿಚಾರಣಾಧಿಕಾರಿ ಪಾಟೀಲ್ ಮಾಮ ಗಂಭೀರವಾಗಿ ಪರಿಗಣಿಸಲೇ ಇಲ್ಲ. ಈ ಕರ್ತವ್ಯಭ್ರಷ್ಟ ಅಧಿಕಾರಿ ಶಾಂತೆಗ್ಡೆ-ರವೀಶ್ ಬಳಗ ಕೊಟ್ಟ ಬೋಗಸ್ ಲೆಕ್ಕಪತ್ರ ಅಂಕಿ-ಅಂಶದ ಆಧಾರದ ಮೇಲೆ ವಿಚಾರಣಾ ವರದಿ ಸಿದ್ಧಪಡಿಸಿದ್ದಾನೆಯೇ ಹೊರತು ಸಂಘದ ವ್ರೊಟ್ ನಿಯಮ, ಸಹಕಾರ ಇಲಾಖೆಯ ಕಾಯ್ದೆ-ಕಟ್ಟಳೆಯಂತೆ ತನಿಖೆ ನಡೆಸಲೇ ಇಲ್ಲ.

ಖಾಸಗಿಯವರಿಂದ ಅಡಿಕೆ ಖರೀದಿಸಿದ್ದು ಸಹಕಾರಿ ಸಂಘಗಳ ನಿಬಂಧಕರ ಸುತ್ತೋಲೆಯ ಆದೇಶದಿಂದ ಎಂದು ಪಾಟೀಲ್ ಮಾಮ ಹೇಳಿದ್ದಾರೆ. ಈ ಸುತ್ತೋಲೆ ಸ್ವಜಾತಿ ಬಂಧುವಾದ ನಿಬಂಧಕರಿಂದ ಮಾಡಿಸಿದ್ದೇ ಶಾಂತೆಗ್ಡೆ ಆಗಿತ್ತು. ಅದಿರಲಿ, ಸುತ್ತೋಲೆ ಏನಿದ್ದರೂ ಸಾಮಾನ್ಯ ನಿರ್ದೇಶನವೇ ಹೊರತು ವ್ರೊಟ್ ನಿಯಮ (ಬೈಲಾ) ಉಲ್ಲಂಘನೆ ಆಜ್ಞೆಯಲ್ಲ! ಅಲ್ಲದೆ ವ್ಯಾಪಾರಸ್ಥರಿಂದ ಕೊಂಡುಕೊಂಡ ಅಡಿಕೆ ಎಷ್ಟು? ಆಯ್ದ ಕೆಲವರಿಂದಷ್ಟೇ ದೊಡ್ಡ ಪ್ರಮಾಣದ ಅಡಿಕೆ ಖರೀದಿಸಿ ಅವ್ಯವಹಾರ ಮಾಡಲಾಗಿದೆಯಾ? ಎಂಬುದನ್ನು ಪಟೇಲ್ ಬುದ್ಧಿಪೂರ್ವಕವಾಗಿ ಮರೆಮಾಚಿದ್ದಾರೆ. ಮಜಾ ಎಂದರೆ, ಹೀಗೆ ಖಾಸಗಿಯವರಿಂದ ಅಡಿಕೆ ಖರೀದಿಸಿದ್ದು ಅಪರಾಧವೆಂದು ಸ್ವತಃ ಆಡಳಿತ ಮಂಡಳಿಯೇ 28.11.2010 ರ ಸರ್ವಸಾಧಾರಣ ಸಭೆಯಲ್ಲಿ ಒಪ್ಪಿಕೊಂಡಿತ್ತು. ಮತ್ತು ಅಂದು ಖಾಸಗಿಯವರಿಂದ ಅಡಿಕೆ ಖರೀದಿಗೆ ಅನುಕೂಲವಾಗುವಂತೆ ಬೈಲಾ ತಿದ್ದುಪಡಿ ಮಾಡಿಕೊಂಡಿತ್ತು! ಹೀಗಿರುವಾಗ ಪಾಟೀಲ ಮಾಮ ನಿಬಂಧಕರನ್ನು ಅಪರಾಧಿಯಾಗಿಸಿ ಆಡಳಿತಮಂಡಳಿ ಬಚಾವಿಗೆ ಹವಣಿಸಿದ್ದು ಅಕ್ಷಮ್ಯವೇ ಸರಿ! ಇಂಥ ಟೊಳಲೊಟ್ಟೆ ಅಭಿಪ್ರಾಯ ಬೇಕಷ್ಟು ವಿಚಾರಣಾಧಿಕಾರಿ ಪಾಟೀಲ ತನ್ನ ವರದಿಯಲ್ಲಿ ತುಂಬಿದ್ದಾನೆ.

ಟಿಎಸ್‌ಎಸ್‌ನ ಅಡಿಕೆ ವ್ಯವಹಾರವೇ ಒಂದು ದೋಖಾ ನಾಟಕ. ಸಂಘ ಇತ್ತೀಚಿನ ವರ್ಷದಲ್ಲಿ ದಲ್ಲಾಳಿ ವ್ಯವಹಾರ ಜತೆಜತೆಗೇ ವ್ಯಾಪಾರಸ್ಥರಿಂದಲೂ ಅಡಿಕೆ ಖರೀದಿ ಪ್ರಾರಂಭಿಸಿತು. ಬೈಲಾದಲ್ಲಿ ಅವಕಾಶವಿಲ್ಲದಿದ್ದರೂ ವ್ಯಾಪಾರಸ್ಥರಿಂದ ನೇರ ಅಡಿಕೆ ಖರೀದಿ ನಡೆಸಿತು. ಬಡರೈತರ ಅಡಿಕೆಗಿಂತಲೂ ದಗಾಕೋರ ವ್ಯಾಪಾರಿಗಳದೇ ಹೆಚ್ಚು ಅಡಿಕೆ ಖರೀದಿ ನಡೆದಾಗ ರೈತರು ತಿರುಗಿಬಿದ್ದರು. ಆಗ ಸಂಸ್ಥೆಯ ಧ್ಯೇಯೋದ್ದೇಶ ಮತ್ತು ಸಹಕಾರಿ ಇಲಾಖೆಯ ಸುತ್ತೋಲೆ ವಿರುದ್ಧ ಬೈಲಾ ತಿದ್ದುಪಡಿ ಮಾಡಿಕೊಂಡು ವ್ಯಾಪಾರಿಗಳಿಗೆ ರತ್ನಗಂಬಳಿ ಹಾಸಲಾಯ್ತು! ಅಸಹಾಯಕ ಸ್ಥಳೀಯ ರೈತರಿಗೆ ಮೈಚುಚ್ಚುವ ಕಂಬಳಿ ಕೊಡಲಾಯ್ತು. ಅಂದಿನ ಅಕ್ರಮ ವ್ಯವಹಾರ ಸಕ್ರಮಗೊಳಿಸಿಕೊಂಡು ವ್ಯಾಪಾರಿಗಳಿಂದ ನೇರ ಅಡಿಕೆ ಖರೀದಿಸುವ ದಂಧೆ ಅಧಿಕೃತ ಸಿಂಧುತ್ವ ಕೊಡಲಾಯ್ತು. ವಿಪರ್ಯಾಸವೆಂದರೆ, ಸಹಕಾರ ಇಲಾಖೆ ತನ್ನದೇ ಸುತ್ತೋಲೆ ವಿರುದ್ಧದ ಬೈಲಾ ತಿದ್ದುಪಡಿಗೆ ಅನುಮೋದನೆ ನೀಡಿತ್ತು. ಇದು ಅಧ್ಯಕ್ಷ ಶಾಂತೆಗ್ಡೆಯ ಪವಾಡ; ಸಹಕಾರ ಇಲಾಖೆಯ ನಿಬಂಧಕರ ಕಚೇರಿಯ ತನಕ ಬೆಳೆದ ಜನಿವಾರ ಸಂಬಂಧದ ಮಹಿಮೆ.

ಆದರೆ ಸಂಸ್ಥೆ ಅಡಿಕೆ ನೇರ ಖರೀದಿ ವ್ಯವಹಾರದಲ್ಲಿ ಲಾಭ ಗಳಿಸುವುದಿರಲಿ ದೊಡ್ಡ ಹಾನಿ ಮಾಡಿಕೊಂಡಿತು. ಈ ವ್ಯವಹಾರದಲ್ಲಿ ತೊಡಗಿಸಿದ ಬಂಡವಾಳ 30 ಕೋಟಿಯಷ್ಟು ಬಂಡವಾಳಕ್ಕೆ ಠೇವಣಿ ಮತ್ತು ಬ್ಯಾಂಕ್ ಸಾಲದಂತೆ ಪ್ರತಿಶತ 10 ಬಡ್ಡಿ ಜಡಿದರೂ ಅದೇ 3 ಕೋಟಿ ಆಗುತ್ತದೆ. ಆದರೆ ಅಡಿಕೆ ಖರೀದಿ-ವಿಕ್ರಿ ವಿಭಾಗದಲ್ಲಿ ಬಡ್ಡಿ ರೂ. 44,37,930 ಮಾತ್ರ ಎಂದು ತೋರಿಸಲಾಗಿದೆ. ಅಂದರೆ 3 ಕೋಟಿ ರೂ. ಬಡ್ಡಿ ಬದಲು 44,37,930 ಎಂದು ಹೇಳಿ ರೂ. 15,33,702 ಲಾಭ ಕಾಣಿಸಲಾಗಿದೆ. ಇದು ಸದಸ್ಯರ ಕಣ್ಣಿಗೆ ಮಣ್ಣೆರಚುವ ಅಧ್ಯಕ್ಷ ಶಾಂತೆಗ್ಡೆ ಬಳಗದ ಕುಚೇಷ್ಟೆ! ವಾಸ್ತವವಾಗಿ ಬಂಡವಾಳಕ್ಕೆ ಕನಿಷ್ಠ 3 ಕೋಟಿ ರೂ ಬಡ್ಡಿ ಹಾಕಿದರೆ ಅಡಿಕೆ ವ್ಯಾಪಾರದಲ್ಲಿ 2.5 ಕೋಟಿಗೂ ಮೀರಿ ಹಾನಿಯಾಗಿದೆ!! ಇದು ಶಾಂತೆಗ್ಡೆ-ರವೀಶ್ ಹೆಗಡೆ ಎಂಬ ಅಡಿಕೆ ಮಾರ್ಕೆಟ್ ಪ್ರವೀಣರ ವ್ಯಾಪಾರಿ ತಂತ್ರ. ಇದು 2010-11 ರಲ್ಲಿ ಮಾತ್ರ ಆದ ಅನಾಹುತವಲ್ಲ, ಕಳೆದ ಹಲವಾರು ವರ್ಷದಿಂದ ಟಿಎಸ್‌ಎಸ್ ಎಂಬ ಶಾಂತೆಗ್ಡೆಯ ದೋ ನಂಬರ್ ಅಡ್ಡೆಯಲ್ಲಿ ಆಗುತ್ತಿರುವ ಕರ್ಮಕಾಂಡ! ಸಿಹಿ ಅಡಿಕೆ "ಟ್ರೈಗರ್" ತಯಾರಿಕೆ ದಂಧೆಯಲ್ಲಿ ಟಿಎಸ್‌ಎಸ್‌ಗೆ ಹಾನಿ ಅಧ್ಯಕ್ಷರ ಬಳಗಕ್ಕೆ ಭಾಗ್ಯ ಬಂದಿದೆ!



ಟಿಎಸ್ಸೆಸ್ ಆಸ್ಪತ್ರೆ

ಉಪಸಂಹಾರ

ಟಿಎಸ್‌ಎಸ್‌ನ ಕಾರ್ಯವೈಖರಿ ಶಾಸನಬದ್ಧ ತನಿಖೆ (ಸ.ಸಂ. ಕಾಯ್ದೆ 64(1)ಗೊಳಪಡಿಸಿದಾಗ ಹೊರಬಂದ ಆಘಾತಕಾರಿ ಅಪರಾತಪರಾ, ಹೊರಬರದ ಇನ್ನೂ ಅಘಾಯಕಾರಿಯಾದ ಅವ್ಯವಹಾರ, ಅಧ್ಯಕ್ಷ ಶಾಂತೆಗ್ಡೆ-ಡ್ಯಾಮೇಜರ್ ರವೀಶ್ ಹೆಗಡೆಯ ಅನ್ಯಾಯ-ಮೋಸ-ವಂಚನೆ ಮತ್ತು ಆಡಳಿತ ಮಂಡಳಿಯ ಹನ್ನೆರಡು ಮೂಕ-ಕಿವುಡ-ಕುರುಡ ನಿರ್ದೇಶಕರ ನಿಷ್ಕ್ರಿಯತೆ-ದೌರ್ಬಲ್ಯ ಸೂಕ್ಷ್ಮವಾಗಿ ಅವಲೋಕಿಸಿದರೆ ಈ ರೈತರಾಧಾರ ಸಂಸ್ಥೆ ಅವಸಾನದತ್ತ ದಾಪುಗಾಲು ಹಾಕುತ್ತಿರುವ ಸೂಚನೆಗಳು ಗೋಚರಿಸುತ್ತವೆ. ಶಾಸನಬದ್ಧ ವಿಚಾರಣೆ ನಡೆದು ಕೆಲವು ಗಂಭೀರ ನ್ಯೂನತೆ-ಅಕ್ರಮ ಬಹಿರಂಗಗೊಂಡರೂ ಸಹಕಾರ ಇಲಾಖೆ ಕಣ್ಣುಮುಚ್ಚಿ ಕುಳಿತಿದೆ. ಶಾಂತೆಗ್ಡೆ ಪರಿವಾರದ ಥೈಲಿ ಮಹಿಮೆಗೆ ಮರುಳಾಗಿರುವ ಸಹಕಾರ ಇಲಾಖೆಯ ದೊಡ್ಡವರು ಉದಾಸೀನದಿಂದಿದ್ದಾರೆ. ದೊಡ್ಡ ಪ್ರಮಾಣದ ಬ್ಯಾಂಕ್ ಸಾಲದ ಜೊತೆಗೆ ಎಲ್ಲ ನಿಧಿ ಜಾಪಿಕಾರಕ ವ್ಯವಹಾರದಲ್ಲಿ ತೊಡಗಿಸಿರುವ ಸಂಘದ ಆರ್ಥಿಕ ಸ್ಥಿತಿ ಗಂಡಾಂತರಕಾರಿ ಆಗಿದೆ. ಈಗ ಸಹಕಾರ ಇಲಾಖೆ ಎಚ್ಚೆತ್ತುಕೊಳ್ಳದಿದ್ದರೆ, ನಿರ್ದೇಶಕ ಮಹಾಶಯರು ಕರ್ತವ್ಯ ನಿಭಾಯಿಸದಿದ್ದರೆ ಶಾಂತೆಗ್ಡೆ ಬಳಗ ಸದಸ್ಯರ-ಠೇವಣಿದಾರರ ಆಪೋಶನ ಪಡೆಯುವುದು ಗ್ಯಾರಂಟಿ.

ತಕ್ಷಣಕ್ಕೆ ಡೈರೆಕ್ಟರ್ ದೊರೆಗಳು-ಸಹಕಾರಿ ಇಲಾಖೆಯ ಪ್ರಭೃತಿಗಳು ಟಿಎಸ್‌ಎಸ್ ಎಂಬ ಬಡ ಅಡಿಕೆ ಬೆಳೆಗಾರ ಸಹಕಾರ ಸಂಘವನ್ನು ರಕ್ಕಸರ ಕೈಯಿಂದ ತಪ್ಪಿಸಿ ಪುನಶ್ಚೇತನ ನೀಡಬೇಕಿದೆ. ವ್ಯಾಪಾರಸ್ಥರು-ಖರೀದಿದಾರರು ಕೊಡಬೇಕಿರುವ ಬಾಕಿ ಹಣ ಮುಲಾಜಿಲ್ಲದೆ ಜರೂರಾಗಿ ವಸೂಲಿ ಮಾಡಬೇಕಿದೆ. ಆಸ್ಪತ್ರೆ ಟಿಎಸ್‌ಎಸ್‌ದಲ್ಲಿ ತನ್ನದೆಂದು ಶಾಂತೆಗ್ಡೆ ನ್ಯಾಯಾಲಯದಲ್ಲಿ ಹಾಕಿರುವ ಕೇಸು ಖತಮ್ ಗೊಳಿಸಿ ಆ ಆಸ್ಪತ್ರೆ ಸಂಘದ ಸುಪರ್ದಿಗೆ ಬರುವಂತೆ ಮಾಡಿದರೆ 20 ಕೋಟಿ ಲಾಭವಾಗುತ್ತದೆ. ಸಂಘದ ನೈಜ ಸಾಂಪತ್ತಿಕ ಸ್ಥಿತಿ, ಲಾಭ-ಹಾನಿ ಗತಿ ಮುಚ್ಚುಮರೆ ಮಾಡದೆ ತಪ್ಪು ಸರಿಪಡಿಸಿಕೊಳ್ಳಬೇಕಿದೆ. ಅವ್ಯವಹಾರಕ್ಕೆ ಸಂಬಂಧಿಸಿದ ಹಣ ಕಟ್ಟುನಿಟ್ಟಾಗಿ ವಸೂಲಿ ಮಾಡಿದರೆ ಆ ಬೃಹತ್ ಮೊತ್ತವೇ ಅಸಹಾಯಕ ತೋಟಗಾರ ಸದಸ್ಯರ ಸಾಲ ಮನ್ನಾ-ಬಡ್ಡಿ ರಿಯಾಯಿತಿಗೆ "ಪ್ಯಾಕೇಜ್" ಮಾಡಬಹುದು. ಆಸಾಮಿ ಸಾಲಮನ್ನಾಕ್ಕೆ ರ್‍ಯಾಲಿ, ಸರ್ಕಾರಿಮಟ್ಟದಲ್ಲಿ ಪ್ರಯತ್ನ ನಡೆಸಿರುವ ಸ್ವರ್ಣವಲ್ಲಿ ಸ್ವಾಮೀಜಿ ಯಾಕೆ ತನ್ನ ಶಿಷ್ಯೋತ್ತಮ ಶಾಂತೆಗ್ಡೆಗೆ ಈ ಸಲಹೆ ಕೊಡಬಾರದು.

ಯಾರ್‍ಯಾರದೋ ಆಸಾಮಿ ಸಾಲಮನ್ನಾ ಮಾಡಿ ತಮ್ಮ ಬೇನಾಮಿ ಸಾಲ ಶೂಲದಿಂದ ಬಚಾವಾಗಿರುವ ಶಾಂತೆಗ್ಡೆ ಬಳಗಕ್ಕೆ ಈ ಸಾಲವನ್ನು ಪ್ಯಾಕೇಜ್ ಮಂಜೂರಿ ಪಡೆಯುವುದೇನೂ ಕಷ್ಟದ ಕೆಲಸವಲ್ಲ. ಸಂಕಷ್ಟದಲ್ಲಿರುವ ರೈತ-ತೋಟಿಗರನ್ನು ಸಾಲಮನ್ನಾದ ಹೆಸರಲ್ಲಿ ಬೀದಿಗಿಳಿಸಿ ಸತಾಯಿಸುವುದಕ್ಕಿಂತ ಇದು ಸ್ವಾಮೀಜಿ ಮತ್ತು ಶಾಂತೆಗ್ಡೆಜೀ ಇಬ್ಬರಿಗೂ ಮರ್ಯಾದೆ ತರುವ ಧರ್ಮಕಾರ್ಯವಾದೀತು! ಹಾಗೆಯೇ ಅನುತ್ಪಾದಕ ಪ್ರಾಜೆಕ್ಟ್‌ಗಳಾದ ಸ್ವೀಟ್ ಸುಪಾರಿ ತಯಾರಿಕೆ ಎಟಿಎಂ ಮುಚ್ಚಿ ಸಂಘಕ್ಕೆ ಮೋಸ ಮಾಡುತ್ತಿರುವ ಖಾಸಗಿಯವರಿಂದ ಅಡಿಕೆ ಖರೀದಿಸುವ ಪ್ರಾಜೆಕ್ಟ್ ಏಜೆಂಟರ ಹಾವಳಿ ನಿಲ್ಲಿಸಬೇಕಿದೆ. ಮುಷ್ಟಗಿಯಂಥ ಹಗಲುಗಳ್ಳ ನೌಕರನನ್ನು ಮನೆಗೆ ಕಳಿಸಬೇಕಿದೆ. ಕಂಗಾಲಾಗಿರುವ ಠೇವುದಾರರು-ಸದಸ್ಯರಲ್ಲಿ ಧೈರ್ಯ ತುಂಬುವ ಪ್ರಾಮಾಣಿಕ ಕೆಲಸ ಆಗಬೇಕಿದೆ.

ಇದೆಲ್ಲಾ ಪೊಕ್ಕು ಪುಢಾರಿ ಶಾಂತೆಗ್ಡೆ ಅಥವಾ ಆತನನ್ನು ಅಡ್ಡದಾರಿಯಲ್ಲಿ ಒಯ್ಯುತ್ತಿರುವ "ಪೆಪ್ಸಿ ಕೋ" ರವೀಶ್ ಹೆಗಡೆಯಿಂದ ಸಾಧ್ಯವೇ ಇಲ್ಲ. ಏಕೆಂದರೆ 64(1) ವಿಚಾರಣೆ, ನ್ಯೂನತೆ ಸರಿಪಡಿಸಿಕೊಳ್ಳುವ 68 ಆದೇಶ ಬಂದು ವರ್ಷ ಎರಡು ತಿಂಗಳು ಕಳೆದಿದೆ. ಆದರೂ ಶಾಂತೆಗ್ಡೆ ಗ್ಯಾಂಗ್‌ನ ದುರಾಡಳಿತ-ದೌರ್ಜನ್ಯ-ಬಡ ಅಡಿಕೆ ಬೆಳೆಗಾರ ಠೇವಣಿ ಜತೆಗಿನ ಚೆಲ್ಲಾಟವಿನ್ನೂ ನಿಂತಿಲ್ಲ. ಗೋಲ್‌ಮಾಲ್, ಸ್ವಾಹಾ, ಏಕಪಕ್ಷೀಯ ಪ್ರಭುತ್ವ ಯಾವುದಕ್ಕೂ ಕಡಿವಾಣ ಬಿದ್ದಿಲ್ಲ. ಹಾಗಾಗಿ ಸಹಕಾರಿ ಇಲಾಖೆ ತಕ್ಷಣ ಟಿಎಸ್‌ಎಸ್ ಆಡಳಿತ ಮಂಡಳಿ ಸೂಪರ್ ಸೀಡ್ ಮಾಡಿ ದಕ್ಷ-ಪ್ರಾಮಾಣಿಕ ಆಡಳಿತಾಧಿಕಾರಿ ನೇಮಿಸಬೇಕಿದೆ. ಆ ಮೂಲಕ ಸಿರಸಿ ಸೀಮೆಯ ಸಂಕಷ್ಟದಲ್ಲಿರುವ ಅಡಿಕೆ ತೋಟಿಗರನ್ನು ಗಂಡಾಂತರದಿಂದ ಪಾರುಮಾಡಬೇಕಿದೆ!

ಹಾಗಂತ ನೊಂದ ತೋಟಿಗರೇ ಅಲವತ್ತುಕೊಳ್ಳುತ್ತಿದ್ದಾರೆ. ಆದಾಗದಿದ್ದರೆ ತೋಟಿಗರೇ ಬೀದಿಗಿಳಿದು ಶಾಂತೆಗ್ಡೆ ಮತ್ತವನ ಹುಚ್ಚು ಮೆರವಣಿಗೆಗೆ ಢಮ್ಮು ಬಾರಿಸುತ್ತಿರುವ ಡೈರೆಕ್ಟರ್ ಮಹಾಶಯರನ್ನು ವಿಚಾರಿಸಿಕೊಳ್ಳುವುದು ಖಂಡಿತ. ಈಗಾಗಲೇ ಟಿಎಸ್‌ಎಸ್‌ನ ಅವ್ಯವಹಾರ-ಅವಾಂತರದಿಂದ ರೋಸತ್ತ ತೋಟಿಗ ಸದಸ್ಯರ ಆಕ್ರೋಶ ಗುಪ್ತಗಾಮಿಯಾಗಿ ಹಳ್ಳಿ-ಹಳ್ಳಿಗಳಲ್ಲಿ ಹರಿದಾಡತೊಡಗಿದೆ. ಇವರಿಗೆಲ್ಲ ಶಾಂತೆಗ್ಡೆಗಿಂತ ಆತ ಹೇಳಿದ್ದಕ್ಕೆ ಸ್ವಂತಿಕೆ ಬಿಟ್ಟು ಗೋಣಾಡಿಸುವ ನಿರ್ದೇಶಕರ ಮೇಲೆ ಹೆಚ್ಚು ಸಿಟ್ಟು ಬಂದಂತಿದೆ. ಹಿರಿಯ ನಿರ್ದೇಶಕ ವಿಶ್ವಾಮಿತ್ರ, ನಿಷ್ಠುನುಡಿಯ ಹೀಪನಳ್ಳಿ ಸೀತಾರಾಮ ಹೆಗಡೆ, ಮೋಸ ಕಂಡರಾಗದ ನೀರ್ನಳ್ಳಿ ಸೀತಾರಾಮ ಹೆಗಡೆ, ಎಂ.ಎಸ್. ಹೆಗಡೆ ಎದೆಗಾರಿಕೆಯವರು ಯಾಕೆ ಬಾಯಿ ಮುಚ್ಚಿಕೊಂಡು ಪರೋಕ್ಷವಾಗಿ ಶಾಂತೆಗ್ಡೆಯ ಸ್ವಾಹಾ ಟೀಮಿನ ಪಾಪದಲ್ಲಿ ಪಾಲುದಾರರಾಗುತ್ತಿದ್ದಾರೋ ತಿಳಿಯದಾಗಿದೆ. ರಾಮಕೃಷ್ಣ ಹೆಗಡೆಯಂಥ ವಿಚಾರವಂತರ ಬುದ್ಧಿಗೂ ಶಾಂತೆಗ್ಡೆ ಅದೆಂಥ ಮಂಕುಬೂದಿ ಎರಚಿದ್ದಾರೆಂಬುದೇ ಸಿದ್ದಾಪುರದ ಭಾಗದ ತೋಟಿಗರ ಯಕ್ಷಪ್ರಶ್ನೆಯಾಗಿದೆ. ಕಾಗೇರಿ ಜೋಶಿಯಂಥ ತಂತ್ರಗಾರರು ಮತ್ತಿತರ ಅಂಧಾನುಕರಣೆಗಳಿಂದ ಸದಸ್ಯ ತೋಟಿಗರು ನಿರೀಕ್ಷೆ ಏನೂ ಇಟ್ಟಿಲ್ಲ ಬಿಡಿ.

ಒಂದಂತೂ ಖರೆ: ಟಿಎಸ್‌ಎಸ್ ಅನ್ನು ಬಕಾಸುರರ ಬಾಯಿಂದ ಬಚಾಯಿಸಲು ಸಂಘದ ಸದಸ್ಯರಾದ ತೋಟಿಗರೇ ಸಿಡಿದೇಳಬೇಕಾಗಿದೆ. ಆ ಮೂಲಕ ನಿಜ ಅರ್ಥದಲ್ಲಿ ಟಿಎಸ್‌ಎಸ್ ತೋಟಿಗರ ಸಂರಕ್ಷಕ ಸಂಸ್ಥೆಯಾಗಿಸಲು ಹೋರಾಡಬೇಕಾಗಿದೆ.

● ನಹುಷ



ಈಶ್ವರಿ ಮಳ್ಳ ಅಳಿಯ ಗೋಮಾಳ ಕಳ್ಳ

ಓಂದಲ್ಲ ಎರಡಲ್ಲ ಒಟ್ಟು 152 ಎಕರೆಗಳಷ್ಟು ಸರ್ಕಾರಿ ಗೋಮಾಳ ಭೂಮಿ ಲೂಟಿಯಾಗಿದೆ!

ಅದಿರು ಲೂಟಿ ಮಾಡಿ ಭೂಸಂಪತ್ತನ್ನು ದೋಚಿದ್ದಾಯ್ತು, ಬೆಂಗಳೂರು ಸುತ್ತಮುತ್ತಲ ಬಂಗಾರದ ಬೆಲೆಬಾಳುವ ಭೂಮಿಯನ್ನೂ ನುಂಗಿದ್ದಾಯ್ತು. ಜೈಲುಪಾಲಾದ ಗಾಲಿ ಜನಾರ್ದನ ರೆಡ್ಡಿ, ಮುಖ್ಯಮಂತ್ರಿ (ಮಾಜಿ) ಯಡ್ಡಿ, ಕಟ್ಟಾ ಸಾಯ್ಸು ಕೃಷ್ಣಯ್ಯ ಶೆಟ್ಟಿ ಇತ್ಯಾದಿ ಬಿಜೆಪಿ ಮಂತ್ರಿಗಳ 'ಪರಪ್ಪನ ಅಗ್ರಹಾರದ' ಫಲಾನುಭವಿಗಳ ಸರತಿಸಾಲಿನಲ್ಲೀಗ ಉಪಮುಖ್ಯಮಂತ್ರಿ ಈಶ್ವರಪ್ಪನವರ ಸರದಿ....!

ಆದರೆ ಈಶ್ವರಪ್ಪ ಬೇರೆಲ್ಲ 'ಜೈಲು ಪಾರ್ಟಿ'ಗಳಿಗಿಂತಲೂ ಕೊಂಚ ಹುಷಾರು. ತಾನೆಲ್ಲಿ ಸಿಕ್ಕಾಕಿಕೊಳ್ಳುತ್ತೇನೋ ಎಂದು ತನ್ನ ಖಾಸಾ ಅಳಿಯನನ್ನು ಬಾವಿಗೆ ತಳ್ಳಿ ಆಳ ಅಳೆದಿದ್ದಾರೆ. ಸದ್ಯ ಲೋಕಾಯುಕ್ತ ಕೋರ್ಟಿನ ಕಟಕಟೆಯಲ್ಲಿ ನಿಂತು ಜೈಲುಕಂಬಿಗಳ ಲೆಕ್ಕದ ರಿಹರ್ಸಲ್ ನಡೆಸುತ್ತಿರುವ ಕೆ.ಎ.ಎಸ್. ಅಧಿಕಾರಿ ಸಿ.ಆರ್. ಶಿವಪ್ರಸಾದ್ ಉಪಮುಖ್ಯಮಂತ್ರಿ ಈಶ್ವರಪ್ಪನವರ ಮೂರನೇ ಮಗಳು ಶಾಂತಾರ ಧರ್ಮಪತಿ!

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಕೇವಲ 9 ಕಿ.ಮೀ ದೂರದಲ್ಲಿರುವ ಈ 152 ಎಕರೆ ಸರ್ಕಾರಿ ಭೂಮಿಯ ಸದ್ಯದ ಮಾರುಕಟ್ಟೆ ಮೌಲ್ಯ, ತಲಾ ಎಕರೆಗೆ ಕನಿಷ್ಠ 80 ಲಕ್ಷ ರೂಪಾಯಿಗಳಂತೆ ಲೆಕ್ಕವಿಟ್ಟರೂ ಅದು 120 ಕೋಟಿಯ ಭರ್ಜರಿ ಸೊತ್ತಾಗುತ್ತದೆ. ದೇವನಹಳ್ಳಿ ತಾಲ್ಲೂಕು ಕಸಬಾ ಹೋಬಳಿಯ ಭಿನ್ನಮಂಗಲ ಗ್ರಾಮದ ಸರ್ವೆ ನಂಬರ್ 73 ರಲ್ಲಿದ್ದ ಸರ್ಕಾರಿ ಗೋಮಾಳದ ಒಟ್ಟು 300 ಎಕರೆಗಳ ಪೈಕಿ 152 ಎಕರೆಗಳಷ್ಟನ್ನು ಎಷ್ಟೊಂದು ನಿರಂಕುಶವಾಗಿ ಲಪಟಾಯಿಸಿದ್ದಾರೆಂದರೆ, 2007 ರ ಭೂಕಬಳಿಕೆ ನಿಷೇಧ ಮಸೂದೆಗೇನಾದರೂ ರಾಷ್ಟ್ರಪತಿಗಳ ಅಂಕಿತ ಬಿತ್ತೆಂದರೆ ಈ ಪ್ರಕರಣದಲ್ಲಿ ಮೊದಲು ಜೈಲುಪಾಲಾಗುವುದೇ ದಾವಣಗೆರೆಯ ಬಿಜೆಪಿ ಸಂಸದ ಜಿ.ಎಂ. ಸಿದ್ದೇಶ್‌ರ ತಂಗಿಯ ಗಂಡ ಆರ್.ಕೆ. ರಾಜು ಎಂಬ ಐಎಎಸ್ ಮತ್ತು ಡಿಸಿಎಂ ಈಶ್ವರಪ್ಪನವರ ಖಾಸಾ ಅಳಿಯ ಶಿವಪ್ರಸಾದ್!

ದೇವನಹಳ್ಳಿ ಏರ್‌ಪೋರ್ಟ್

ಸಿ.ಆರ್. ಶಿವಪ್ರಸಾದ್ 2005 ರ ಬ್ಯಾಚಿನ ಕೆಎಎಸ್ ಅಧಿಕಾರಿ. ಈತ ಲೋಕಸೇವಾ ಆಯೋಗ ಅರ್ಥಾತ್ ಕೆಪಿಎಸ್‌ಸಿಯಲ್ಲಿ ಹೇಗೆ ತೇರ್ಗಡೆಯಾದ, ಅದೂ ಯಡಿಯೂರಪ್ಪ ಉಪಮುಖ್ಯಮಂತ್ರಿಯಾಗಿದ್ದಾಗಲೇ ದೇವೇಗೌಡರ ಮನೆಮಗನಂತಿರುವ ಡೆಂಟಲ್ ಕೃಷ್ಣ ಲೋಕಸೇವಾ ಆಯೋಗದ ಅಧ್ಯಕ್ಷರಾಗಿದ್ದಾಗ ಅದ್ಹೇಗೆ ಕೆ.ಎ.ಎಸ್. ಪರೀಕ್ಷೆ ಬರೆದ ಎಂಬುದೇ ತನಿಖಾಸಕ್ತ ಸಂಗತಿ. 2006 ರ ಹೊತ್ತಿಗೆ ಪ್ರೊಬೇಷನರಿ ತಹಶೀಲ್ದಾರ್ ಆಗಿ ಶಿವಮೊಗ್ಗದ ಆಸುಪಾಸು ಸೇವೆ ಸಲ್ಲಿಸಿದ ಶಿವಪ್ರಸಾದ್‌ನನ್ನು ಬಿಜೆಪಿ ಅಧಿಕಾರಕ್ಕೆ ಬರುತ್ತಿದ್ದಂತೆಯೇ ಮಾವ ಈಶ್ವರಪ್ಪನವರೇ ನಿಂತು ಬೆಂಗಳೂರು ಗ್ರಾಮಾಂತರ ದೊಡ್ಡಬಳ್ಳಾಪುರ ಉಪವಿಭಾಗಕ್ಕೆ ಅಸಿಸ್ಟೆಂಟ್ ಕಮೀಷನರ್ ಆಗಿ ವರ್ಗಾಯಿಸಿದ್ದರ ಹಿಂದಿದ್ದ ಉದ್ದೇಶವೇ ದೇವನಹಳ್ಳಿ ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಮತ್ತು ಅದರ ಸುತ್ತ ಭುಗಿಲೆದ್ದ ರಿಯಲ್ ಎಸ್ಟೇಟ್ ಹಾಹಾಕಾರ.

ಕಸಬಾ ಹೋಬಳಿಯ ಭಿನ್ನಮಂಗಲ ದೇವನಹಳ್ಳಿ ಟೌನಿಗೆ 2 ಕಿ.ಮೀ. ಅಂತರಕ್ಕಿದೆಯಾದರೂ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಬರೋಬ್ಬರಿ 9 ಕಿ.ಮೀ. ದೂರದಲ್ಲಿದೆ. 2009 ರ ಹೊತ್ತಿಗೆ ಅಳಿಯ ಶಿವಪ್ರಸಾದ್‌ನನ್ನು ದೊಡ್ಡಬಳ್ಳಾಪುರ ಉಪವಿಭಾಗಕ್ಕೆ ಅಸಿಸ್ಟೆಂಟ್ ಕಮೀಷನರ್ ಆಗಿ ತರುವ ಹೊತ್ತಿಗೆ ಬಿಜೆಪಿ ಅಧಿಕಾರಕ್ಕೆ ಬಂದು ಮುಖ್ಯಮಂತ್ರಿ ಯಡ್ಡಿ ಸಂಪುಟದಲ್ಲಿ ಈಶ್ವರಪ್ಪ ವಿದ್ಯುತ್ ಮತ್ತು ಇಂಧನ ಖಾತೆ ಮಂತ್ರಿಯಾಗಿ ವಿಜೃಂಭಿಸುತ್ತಿದ್ದರು. ಯಡಿಯೂರಪ್ಪ ಸಂಪುಟದಲ್ಲಿ ಮಾವ ಪ್ರಭಾವಿ ಮಂತ್ರಿಯಾದ ಮೇಲೆ ಅಳಿಯ ಶಿವಪ್ರಸಾದ್‌ನ ಆರ್ಭಟಕ್ಕೆ ಮೇರೆಯುಂಟೆ?



ಹಾಗೆ ನೋಡಿದರೆ ಅಸಿಸ್ಟೆಂಟ್ ಕಮೀಷನರ್ ಶಿವಪ್ರಸಾದ್ ಸೇರಿದಂತೆ ಈಶ್ವರಪ್ಪನವರ ಅಳಿಯಂದಿರು, ಅಣ್ಣಂದಿರ ಅಳಿಯಂದಿರೆಲ್ಲ ಡಾಕ್ಟರ್, ಇಂಜಿನಿಯರ್ ಕೆಎಎಸ್ ಅಧಿಕಾರಿಗಳಂಥ ಆಯಕಟ್ಟಿನ ಹುದ್ದೆಗಳನ್ನೇ ಆಕ್ರಮಿಸಿದ್ದಾರೆ. ಮೂಲತಃ ಬಳ್ಳಾರಿಯ ಕೆ. ಶರಣಪ್ಪ ಮತ್ತು ಬಸಮ್ಮ ದಂಪತಿಗಳ ನಾಲ್ವರು ಮಕ್ಕಳ ಪೈಕಿ ಕಿರಿಯನೇ ಈಶ್ವರಪ್ಪ. ಈಶ್ವರಪ್ಪನವರ ಹಿರಿಯಣ್ಣ ಸಿದ್ಧಪ್ಪ ಅರಣ್ಯ ಇಲಾಖೆಯಲ್ಲಿದ್ದು ಕ್ರಮೇಣ ಆ ಕೆಲಸಕ್ಕೆ ರಾಜೀನಾಮೆಯಿತ್ತು ಶಿವಮೊಗ್ಗದಲ್ಲಿ ವಿಜಯಾ ಫ್ಯಾನ್ಸಿ ಸ್ಟೋರ್ ಎಂಬ ಬಳೆ ಅಂಗಡಿಯಿಟ್ಟಿದ್ದ. ಎರಡನೇ ಅಣ್ಣ ಚಂದ್ರಪ್ಪ ಅನಕ್ಷರಸ್ಥ ಮತ್ತು ಮುಗ್ಧ ರೈತ. ಮೂರನೇ ಅಣ್ಣ ಗಂಗಾಧರಪ್ಪ ಭದ್ರಾವತಿಯ ವಿಶ್ವೇಶ್ವರಯ್ಯ ಉಕ್ಕಿನ ಕಾರ್ಖಾನೆಯಲ್ಲಿ ಕಾರ್ಮಿಕನಾಗಿದ್ದು ಕ್ರಮೇಣ ಇನ್ನೊಬ್ಬ ಅಣ್ಣ ಸಿದ್ಧಪ್ಪನ ಜೊತೆ ಸೇರಿ ಶಿವಮೊಗ್ಗದ ಅಶೋಕಾ ರಸ್ತೆಯಲ್ಲಿ ಸ್ವಾಮಿ ವಿವೇಕಾನಂದ ಅಡಿಕೆ ಮಂಡಿ ಆರಂಭಿಸಿದ.

ಅಳಿಯಂದಿರ ಅದೃಷ್ಟ

ಹೀಗೆ ಅಣ್ಣಂದಿರೆಲ್ಲ ಅಳಿದುಳಿದ ಅರೆಕಸುಬಿಗೆ ಕೈಯಿಟ್ಟು ಹೊಟ್ಟೆ ಹೊರೆದರೆ ಕೊನೇ ತಮ್ಮ ಈಶ್ವರಪ್ಪ ಮಾತ್ರ ಜೆ.ಪಿ. ಚಳವಳಿ, ಆರೆಸ್ಸೆಸ್, ಜನಸಂಘ ಇತ್ಯಾದಿ ಚೆಡ್ಡಿ ಉಸಾಬರಿಯಲ್ಲೇ ನಿರುದ್ಯೋಗಿಯಾಗುಳಿದು ಬಿಟ್ಟರು. 1989 ರಲ್ಲಿ ಮೊದಲ ಬಾರಿಗೆ ಬಿಜೆಪಿಯಿಂದ ಶಿವಮೊಗ್ಗಕ್ಕೆ ನಿಂತಾಗಲೂ ಈಶ್ವರಪ್ಪನವರಿಗೆ ಚುನಾವಣೆಯ ಠೇವಣಿಗೆ ದುಡ್ಡಿರಲಿಲ್ಲ. 1994 ರಿಂದ 1999 ರ ವರೆಗೆ ಎರಡನೇ ಅವಧಿಗೆ ಅವರು ಶಾಸಕರಾದಾಗಲೂ ಶಿವಮೊಗ್ಗದಲ್ಲೊಂದು ಮನೆ ಬಿಟ್ಟರೆ ಬೇರೆ ಗತಿಯಿರಲಿಲ್ಲ. ಇವತ್ತು ಸಿಮೆಂಟ್ ಏಜೆನ್ಸಿ, ಸಕ್ಕರೆ ಕಾರ್ಖಾನೆ, ವಿದ್ಯಾಸಂಸ್ಥೆ, ಬೇನಾಮಿ ಡಿಸ್ಟಿಲ್ಲರಿ ಮತ್ತು ಶಿವಮೊಗ್ಗ, ಚಿತ್ರದುರ್ಗ ಹಾಗೂ ಬೆಂಗಳೂರು ಜಿಲ್ಲೆಗಳಲ್ಲಿ ಎಕರೆಗಟ್ಟಲೇ ಭೂಮಿ, ಬಂಗಲೆ, ನಿವೇಶನಗಳಿವೆಯೆಂದರೆ; ಇಷ್ಟೆಲ್ಲ ಸೊತ್ತು ದಕ್ಕಿದ್ದು ಆರೆಸ್ಸೆಸ್ ಆದರ್ಶದಿಂದಲ್ಲದೆ ಮತ್ತೇನು?

ಈಶ್ವರಪ್ಪನವರ ಧರ್ಮಪತ್ನಿ ಜಯಲಕ್ಷ್ಮಿಯವರಾಗಲಿ, ಅವರ ತವರು ಮನೆಯವರಾಗಲಿ ಯಾರೂ ಕುಬೇರರಲ್ಲ. ಈಶ್ವರಪ್ಪ-ಜಯಲಕ್ಷ್ಮಿ ದಂಪತಿಗಳಿಗೆ ನಾಲ್ವರು ಹೆಣ್ಣು, ಮತ್ತೊಂದು ಗಂಡು ಮಕ್ಕಳ ಪೈಕಿ ಹಿರಿಯ ಮಗಳು ಕನಕಳನ್ನು ಕೊಟ್ಟಿದ್ದು ಬೆಂಗಳೂರಿನ ನಿರ್ಮಲ್‌ಕುಮಾರ್ ಕಂಟ್ರಾಕ್ಟರ್‌ಗೆ. ಎರಡನೇ ಮಗಳು ಜ್ಯೋತಿಯನ್ನು ಹೊಸಪೇಟೆಯ ಡಾಕ್ಟರ್ ಭರತ್‌ರಾಜ್‌ಗೆ ಕೊಟ್ಟರು. ಮೂರನೆಯವನೇ ಕಾಂತೇಶ್. ಈತ ಮದುವೆಯಾದ ಶಾಲಿನಿ ಎಂಬ ಹೆಣ್ಣುಮಗಳದ್ದೂ ಶ್ರೀಮಂತ ಹಿನ್ನೆಲೆಯೇನಲ್ಲ, ಆದರೆ ನಾಲ್ಕನೆಯವಳು ಶಾಂತಾ ಹಾಗಲ್ಲ, ಆ ಕಾಲಕ್ಕೇ ಕೋಟಿಗಟ್ಟಲೆ ದೋಚಿ ಕುಖ್ಯಾತಿ ಗಳಿಸಿದ್ದ ನೀರಾವರಿ ಇಲಾಖೆಯ ಇಂಜಿನಿಯರ್ ಮಹಾಶಯನ ಮಗ ಶಿವಪ್ರಸಾದ್‌ನನ್ನು ಕೈಹಿಡಿದ ಫಲವಾಗಿ ಆಸ್ತಿ, ಅಂತಸ್ತು, ಸುಪ್ಪತ್ತಿಗೆ, ಒಟ್ಟೊಟ್ಟಿಗೆ ಒಲಿದಿತ್ತು. ಈಶ್ವರಪ್ಪನವರ ಕೊನೇ ಮಗಳು ಸುಮಾ ಕೂಡ ಲೋಕೋಪಯೋಗಿ ಇಲಾಖೆಯ ಇಂಜಿನಿಯರ್ ತೇಜಸ್ವಿ ಎಂಬಾತನನ್ನು ಮದುವೆಯಾಗುವ ಮೂಲಕ ಪರೋಕ್ಷವಾಗಿ ಭ್ರಷ್ಟಾಚಾರದ ಫಲಾನುಭವಿಯಾದರು.

ಯಾವತ್ತು ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿ ಈಶ್ವರಪ್ಪ ಜಲಸಂಪನ್ಮೂಲ ಸಚಿವರಾಗಿ, ಆನಂತರ ಬಿಜೆಪಿಯೇ ಅಧಿಕಾರಕ್ಕೆ ಬಂತೋ ಅಳಿಯಂದಿರ ಅದೃಷ್ಟ ಖುಲಾಯಿಸಿತು! ಹಿರಿಯ ಅಳಿಯ ನಿರ್ಮಲ್‌ಕುಮಾರ್ ನೀರಾವರಿ ಇಲಾಖೆಯ ಭಾರೀ ಕಾಂಟ್ರಾಕ್ಟು ಹಿಡಿದು ಬೆಂಗಳೂರಿನಲ್ಲೊಂದು ಬಂಗಲೆ, ಶಿಕಾರಿಪುರದಲ್ಲಿ ಫಾರ್ಮ್ ಹೌಸ್, ಯಲಹಂಕದಲ್ಲೆರಡು ಸೈಟು ಮತ್ತು ವಿವಿಧ ಕಂಪೆನಿಗಳ ಕೋಟಿಗಟ್ಟಲೇ ಷೇರುಗಳನ್ನು ಖರೀದಿಸಿದ. ಯಲಹಂಕ, ಡಾಲರ್ಸ್ ಕಾಲೋನಿ, ದೇವನಹಳ್ಳಿ ಸುತ್ತಮುತ್ತ ರಿಯಲ್ ಎಸ್ಟೇಟ್ ದಂಧೆಗಿಳಿದ. ಎರಡನೇ ಅಳಿಯ ಡಾ. ಭರತ್‌ರಾಜ್ ರಾಣೆಬೆನ್ನೂರಿನಲ್ಲಿ ಪತ್ನಿ ಜ್ಯೋತಿಯ ಹೆಸರಲ್ಲಿ ಟ್ರಾಕ್ಟರ್ ಷೋ ರೂಮ್ ತೆರೆದ. ನಾಲ್ಕನೇ ಅಳಿಯ ತೇಜಸ್ವಿ ಲೋಕೋಪಯೋಗಿ ಮತ್ತು ಬಿಬಿಎಂಪಿಯಲ್ಲಿ ನೂರಾರು ಕೋಟಿಯ ಬೇನಾಮಿ ಕಾಂಟ್ರಾಕ್ಟು ಹಿಡಿದರೆ ಮೂರನೇ ಮಗಳು ಶಾಂತಾಳ ಗಂಡ ಶಿವಪ್ರಸಾದ್ ಕೈಹಾಕಿದ್ದು ಇದೇ ದೇವನಹಳ್ಳಿಯ ಭಿನ್ನಮಂಗಲದ 183 ಎಕರೆ ಗೋಮಾಳಕ್ಕೆ.



ಆಂಧ್ರದ ರಮಣರೆಡ್ಡಿ

ದೇವನಹಳ್ಳಿ ತಾಲ್ಲೂಕು ಭಿನ್ನಮಂಗಲದಲ್ಲಿದ್ದ ಗೋಮಾಳದ 183 ಎಕರೆಗಳ ಪೈಕಿ 152 ಎಕರೆಗೆ ಕಣ್ಣಿಟ್ಟೇ ಆಂಧ್ರದ ಕುಖ್ಯಾತ ನೆಲಕಂಟಕ ಎಸ್. ರಮಣರೆಡ್ಡಿ ಎಂಬಾತ ದೇವನಹಳ್ಳಿಗೆ ವಕ್ಕರಿಸಿದ್ದ. ಈತ ಆಂಧ್ರದ ಮಾಜಿ ಮುಖ್ಯಮಂತ್ರಿ ವೈ.ಎಸ್. ರಾಜಶೇಖರ ರೆಡ್ಡಿಯ ಮಗ ಜಗನ್‌ನ ಬೇನಾಮಿ ಎಂಬುದೂ ರಿಯಲ್ ಎಸ್ಟೇಟ್ ಮೂಲಗಳ ವಾದ. ಅದೇನು ಡೀಲು ಕುದುರಿತ್ತೋ ಈಶ್ವರಪ್ಪನ ಅಳಿಯ ಶಿವಪ್ರಸಾದ್ ದೊಡ್ಡಬಳ್ಳಾಪುರ ಉಪವಿಭಾಗಕ್ಕೆ ಅಸಿಸ್ಟೆಂಟ್ ಕಮೀಷನರ್ ಆಗಿದ್ದೇ ತಡ, ಎಲೆ ಕೃಷ್ಣಪ್ಪ ಮತ್ತು ಆತನ ಮಗ ಎಲ್. ನಾರಾಯಣಸ್ವಾಮಪ್ಪ ಎಂಬ ಜೋಡಿದಾರರ ಹೆಸರಿಗೆ 152 ಎಕರೆ ಗೋಮಾಳದ ಭೂಮಿ ಮಂಜೂರಾದಂತೆ ದಾಖಲೆ ಸೃಷ್ಟಿಯಾಯ್ತು. ಯಾವುದೋ ಕಾಲಕ್ಕೆ ಈ ಎಲೆ ಕೃಷ್ಣಪ್ಪ ಇಡೀ 152 ಎಕರೆ ಭೂಮಿಯನ್ನು ಆಂಧ್ರದ ರಮಣರೆಡ್ಡಿಗೆ ಮಾರಿದಂತೆ ಮತ್ತೊಂದು ನಕಲಿ ದಾಖಲೆಯನ್ನೂ ಹುಟ್ಟುಹಾಕಲಾಯ್ತು.


ಭಿನ್ನಮಂಗಲದ ಗೋಮಾಳ

ದೊಡ್ಡಬಳ್ಳಾಪುರ ಉಪವಿಭಾಗವೆಂದರೆ ಅದು ಹೇಳಿಕೇಳಿ ಪಕ್ಕಾ ರಿಯಲ್ ಎಸ್ಟೇಟ್ ಮಾಫಿಯಾಗಳ ಹಿಡಿತದಲ್ಲಿರುವ ರೆವಿನ್ಯೂ ವಲಯ. ನೆಲಮಂಗಲ, ದೊಡ್ಡಬಳ್ಳಾಪುರ, ಹೊಸಕೋಟೆ ಮತ್ತು ದೇವನಹಳ್ಳಿ ತಾಲ್ಲೂಕುಗಳನ್ನು ಒಳಗೊಂಡ ದೊಡ್ಡಬಳ್ಳಾಪುರ ಉಪವಿಭಾಗಕ್ಕೆ ಈಶ್ವರಪ್ಪ ಅಳಿಯ ಶಿವಪ್ರಸಾದ್ ವಕ್ಕರಿಸುತ್ತಿದ್ದಂತೆಯೇ ಲೂಟಿಗೆ ಪೂರಕವಾದ ವ್ಯವಸ್ಥೆಯಿರಬೇಕಲ್ಲ; ಅದಕ್ಕೆಂದೇ ದೇವನಹಳ್ಳಿಗೆ ತಹಶೀಲ್ದಾರ್ ಆಗಿ ನೇಮಕವಾಗಿದ್ದು ಸಂಪತ್‌ಕುಮಾರ್ ಎಂಬ ಮತ್ತೊಬ್ಬ ಕೆಎಎಸ್ ಅಧಿಕಾರಿ!

ಈತ ಶಿವಪ್ರಸಾದ್‌ನ ಕೆಎಎಸ್ ಬ್ಯಾಚ್‌ಮೇಟ್. ಜೊತೆಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಜಿಲ್ಲಾಧಿಕಾರಿಯನ್ನಾಗಿ ಆರ್.ಕೆ. ರಾಜು ಎಂಬ ಐಎಎಸ್ ಅಧಿಕಾರಿಯನ್ನು ತರಲಾಯ್ತು. ಐಎಎಸ್ ಆರ್.ಕೆ ರಾಜು ಬೇರೆ ಯಾರೂ ಅಲ್ಲ, ದಾವಣಗೆರೆಯ ಬಿಜೆಪಿ ಸಂಸದ ಮತ್ತು ಅಡಿಕೆ ಧಣಿ ಜಿ.ಎಂ. ಸಿದ್ದೇಶ್‌ನ ತಂಗಿಯ ಗಂಡ!

ಅಳಿಯನನ್ನು ಮುಂದಿಟ್ಟುಕೊಂಡು ಇಡೀ 152 ಎಕರೆಯ ಗೋಮಾಳವನ್ನು ದೋಚುವುದು ಬಹುಶಃ ಈಶ್ವರಪ್ಪನವರ ಲೆಕ್ಕಾಚಾರವಾಗಿರಬೇಕು. ಅವರೇ ನಿಂತು ಆರ್.ಕೆ. ರಾಜುರನ್ನು ಬೆಂಗಳೂರು ಗ್ರಾಮಾಂತರದ ಜಿಲ್ಲಾಧಿಕಾರಿಯಾಗಿ ತಂದಿದ್ದರ ಹಿಂದೆ ಇನ್ನೆಂಥ ಉದ್ದೇಶವಿದ್ದೀತು?

ಬೇನಾಮಿ ಖಾತೆದಾರರು

152 ಎಕರೆ ಗೋಮಾಳದ ಫೈಲಿಗೆ ಶಿವಪ್ರಸಾದ್ ಕೈಹಾಕಿದ ಮರುಗಳಿಗೆಯಿಂದಲೇ ಯಾವ ವೇಗದಲ್ಲಿ ಜೀವ ಬಂತೆಂದರೆ, ಎಲೆ ಕೃಷ್ಣಪ್ಪನಿಂದ ಆಂಧ್ರದ ರಮಣರೆಡ್ಡಿಯ ಪತ್ನಿ ವೆಂಕಟನರಸಮ್ಮನ ಹೆಸರಿಗೆ ಖಾತೆಯಾಗಿ ಈತನಿಂದ ಅದು ತಲಾ ಮೂರೆಕರೆ, ಐದೆಕರೆಯಂತೆ ಹಲವಾರು ಬೇನಾಮಿ ವ್ಯಕ್ತಿಗಳಿಗೆ ಹಸ್ತಾಂತರವಾಯಿತು. ಸಣ್ಣಪುಟ್ಟಪ್ಪ, ಮಾಯಪ್ಪ, ಚೆನ್ನಪ್ಪ, ವೀರಯ್ಯ ನಂಜುಂಡಪ್ಪ, ಆರ್. ಚನ್ನಪ್ಪ, ನಾಗಪ್ಪ ಕಾಳಿಂಗಪ್ಪ, ಟಿ. ವೀರಯ್ಯ, ದರ್ಬಾರ್ ಚನ್ನಪ್ಪ ಇತ್ಯಾದಿ ಬೇರೆಬೇರೆ ಹೆಸರಿಗೆ ಬಿಡಿಬಿಡಿಯಾಗಿ ಭೂಮಿ ವಿಂಗಡಿಸಿ ಮಾರಿದ 152 ಎಕರೆಗೆ ಇದ್ದಕ್ಕಿದ್ದಂತೆ ರಮಣರೆಡ್ಡಿಯೆಂಬ ಆಂಧ್ರದ ಮೂಲದ ಮತ್ತೊಬ್ಬ ವಕ್ಕರಿಸಿದ.

ತಾನು ಬಾಲರೆಡ್ಡಿಯ ಮಗ ಎಂದು ಕೆಲವೆಡೆ, ಇನ್ನೂ ಕೆಲವೆಡೆ ತಾನು ಆತನ ಸಾಕುಮಗನೆಂದು ಹಲವೆಡೆ ಬಾಲರೆಡ್ಡಿಯ ತಂಗಿಯ ಮಗನೆಂದು ಏಕಾಏಕಿ ಉದ್ಭವಿಸಿದ ರಮಣ್ಣರೆಡ್ಡಿಯ ಬೆನ್ನಿಗೆ ನಿಂತಿದ್ದು ಅಸಿಸ್ಟೆಂಟ್ ಕಮಿಷನರ್ ಶಿವಪ್ರಸಾದ್. ರಮಣರೆಡ್ಡಿಯ ಪತ್ನಿ ವೆಂಕಟನರಸಮ್ಮನಿಂದ ಭೂಮಿ ಖರೀದಿಸಿದ ರೈತರ ಪರವಾಗಿ ಜಿಲ್ಲಾಧಿಕಾರಿಗಳೇ ತಡೆ ನೀಡಿದರೂ ಇದ್ಯಾವುದನ್ನು ಲೆಕ್ಕಿಸದ ಶಿವಪ್ರಸಾದ್ ಏಕಾಏಕಿ 16 ಮಂದಿ ರೈತರ ಹೆಸರಿಗಿದ್ದ ಮ್ಯುಟೇಷನ್‌ನ್ನು ವಜಾ ಮಾಡಿಬಿಟ್ಟ. ರೈತರಿಗೆ ಹೆಸರಿಗಿದ್ದ 152 ಎಕರೆ ರಾತ್ರೋರಾತ್ರಿ ರಮಣರೆಡ್ಡಿಯ ಕುತಂತ್ರದ ಫಲವಾಗಿ ರೈತರ ಕೈತಪ್ಪುವಂತಾಯ್ತು. ಇದರ ವಿರುದ್ಧ ಪ್ರತಿಭಟನೆಗಳಾದವು.

ಇದನ್ನು ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದು ಯಾಗಪ್ಪ ಎಂಬಾತನ ಪತ್ನಿ ತೇರೇಸಮ್ಮ ಮತ್ತು ಇತರ ಏಳು ಮಂದಿ ರೈತರು. ಅಸಿಸ್ಟೆಂಟ್ ಕಮೀಷನರ್ ಶಿವಪ್ರಸಾದ್, ಐಎಎಸ್ ಆರ್.ಕೆ. ರಾಜು, ತಹಶೀಲ್ದಾರ್ ಸಂಪತ್‌ಕುಮಾರ್, ಭೂಸ್ವಾಧೀನಾಧಿಕಾರಿ ಶ್ರೀರಾಮರೆಡ್ಡಿ, ಪ್ರಾದೇಶಿಕ ವಿಭಾಗಾಧಿಕಾರಿ ಸತ್ಯವತಿ ಇತ್ಯಾದಿ 15 ಮಂದಿ ಕಂದಾಯ ಇಲಾಖೆಯ ಅಧಿಕಾರಿಗಳನ್ನು ಆರೋಪಿಗಳನ್ನಾಗಿಸಿದ ತೆರೇಸಮ್ಮ ಮತ್ತಿತರರು ಕೋರ್ಟ್ ಮೆಟ್ಟಿಲೇರುವುದಕ್ಕೂ ಮುನ್ನ ಮಂತ್ರಿ ಈಶ್ವರಪ್ಪ ಅಳಿಯನ ಭೂಕಬಳಿಕೆಗೆ ಅನುಕೂಲವಾಗಲೆಂದು ಮತ್ತೊಂದು ಅನಾಹುತಕಾರಿ ಕೆಲಸಕ್ಕೆ ಕೈಯಿಟ್ಟರು.

ಅದು ನಿಷ್ಠಾವಂತ ಐಎಎಸ್ ಅಧಿಕಾರಿ ವಿ. ಮಂಜುಳಾರ ಎತ್ತಂಗಡಿ!

152 ಎಕರೆ ಗೋಮಾಳವನ್ನು ಆಂಧ್ರದ ಖದೀಮ ರಮಣರೆಡ್ಡಿಗೆ ವಿಲೇವಾರಿ ಮಾಡದಂತೆ ತನ್ನೆಲ್ಲಾ ಶಕ್ತಿ ಮೀರಿ ಹೋರಾಡಿಕೊಂಡೇ ಬಂದಿದ್ದ ವಿ. ಮಂಜುಲ ಕೇವಲ ದೇವನಹಳ್ಳಿಯ ಸರ್ಕಾರಿ ಸೊತ್ತನಷ್ಟೇ ಅಲ್ಲ, ಬೆಂಗಳೂರು ಸುತ್ತಮುತ್ತಲ 40 ಸಾವಿರಕ್ಕೂ ಅಧಿಕ ಎಕರೆಗಳಷ್ಟು ಸರ್ಕಾರಿ ಭೂಮಿ ಉಳಿಸಲು ಕಂದಾಯ ಮಂತ್ರಿ ಕರುಣಾಕರೆಡ್ಡಿ ಮತ್ತು ಮುಖ್ಯಮಂತ್ರಿ ಯಡ್ಡಿಯನ್ನೇ ಎದುರಾಕಿಕೊಂಡಿದ್ದರು. ಮಂಜುಳ ಎತ್ತಂಗಡಿಯಿಂದಾಗಿ ಗೋಮಾಳದ ಲೂಟಿ ಮತ್ತಷ್ಟು ಸಲೀಸಾಯಿತು.

ಇಷ್ಟಾಗಿದ್ದೇ ತಡ ಎಲ್ಲಿ ತನ್ನ ಲೂಟಿ ಬಯಲಾಗುತ್ತೋ ಎಂದು ಹುಷಾರಾದ ಶಿವಪ್ರಸಾದ್ ತಾನು ಅದಕ್ಕಿಂತಲೂ ಆದಾಯವಿರುವ ಕೆಐಎಡಿಬಿಗೆ ವರ್ಗಾವಣೆ ಮಾಡಿಸಿಕೊಂಡರೆ ಐಎಎಸ್ ಆರ್.ಕೆ. ರಾಜು ತುಮಕೂರು ಜಿಲ್ಲಾಧಿಕಾರಿಯಾದ. ಸತ್ಯವತಿಯೂ ಉಪಾಯವಾಗಿ ಜಾಗ ಖಾಲಿ ಮಾಡಿದ್ದಳು. ಆದರೆ ಹೈಕೋರ್ಟ್ ಬಿಡಬೇಕಲ್ಲ, ತೆರೇಸಮ್ಮ ಸಲ್ಲಿಸಿದ ಅರ್ಜಿಯ ವಿಚಾರಣೆ ಕೈಗೆತ್ತಿಕೊಂಡ ಹೈಕೋರ್ಟ್ ನ್ಯಾಯಮೂರ್ತಿ ಶೈಲೇಂದ್ರ ಕುಮಾರ್ ಪೀಠ ಇಡೀ ಪ್ರಕರಣದ ನಿರಂಕುಶ ಲೂಟಿಯನ್ನು ಲೋಕಾಯುಕ್ತ ತನಿಖೆಗೊಪ್ಪಿಸಿತು. ಇದರ ವಿರುದ್ಧ ರಮಣರೆಡ್ಡಿ ವಿಭಾಗೀಯ ಪೀಠದ ಮೊರೆ ಹೋದರೆ ಅಲ್ಲಿದ್ದದ್ದು ನ್ಯಾಯಮೂರ್ತಿ ಖೆಹರ್. ಯಾವುದೇ ದಾಖಲೆಯಿಲ್ಲದೆ 152 ಎಕರೆಗಳ ಗೋಮಾಳವನ್ನು ಬೇನಾಮಿಗಳಿಗೆ ಪರಭಾರೆ ಮಾಡಿದ್ದರ ಹಿಂದಿರುವ ಷಡ್ಯಂತ್ರವನ್ನು ಸ್ಪಷ್ಟವಾಗೇ ಗುರುತಿಸಿದ ನ್ಯಾ.ಮೂ. ಖೆಹರ್ ಕೂಡ ಲೋಕಾಯುಕ್ತ ತನಿಖೆಗೇ ಆದೇಶಿಸಿಬಿಟ್ಟರು.

ಪ್ರಕರಣವೀಗ ಲೋಕಾಯುಕ್ತರ ಅಂಗಳಕ್ಕೆ ಬಂದಿದೆ. ಈಶ್ವರಪ್ಪ ಅಳಿಯನ ಪಾಪದ ಕೊಡವೂ ತುಂಬಿಬಂದಿದೆ. ಕೆಐಎಡಿಬಿಯಿಂದ ಕರ್ನಾಟಕ ಆಹಾರ ಮತ್ತು ಉಗ್ರಾಣ ನಿಗಮದ ಆಯುಕ್ತನಾಗಿ ವಕ್ಕರಿಸಿದ ಶಿವಪ್ರಸಾದ್ ಇಡೀ 152 ಎಕರೆ ಭೂಕಬಳಿಕೆಯ ಮೊದಲ ಆರೋಪಿ!

ಇದರಲ್ಲಿ ಡಿಸಿಎಂ ಈಶ್ವರಪ್ಪನವರ ಕಾಣದ ಕೈ ಮತ್ತು ಬೇನಾಮಿ ಹಿತಾಸಕ್ತಿಯ ಬಗ್ಗೆ ತನಿಖೆ ಮಾಡುವವರ್‍ಯಾರು? 152 ಎಕರೆಗಳಷ್ಟು ಸರ್ಕಾರಿ ಗೋಮಾಳವೆಂದರೆ ಅದು ಸಣ್ಣ ಸೊತ್ತೇನಲ್ಲ, ವಿರೋಧ ಪಕ್ಷಗಳೇಕೆ ಈ ಬಗ್ಗೆ ಸೊಲ್ಲೆತ್ತುವುದಿಲ್ಲ?

● ರಾ.ಸೋಮನಾಥ್

ಕಾವೇರಿ ಅನ್ಯಾಯ

ಅವಿವೇಕಿ ಶೆಟ್ಟರ್

ವಂಚಕ ಕಾಂಗ್ರೆಸ್



...ಗಿನದು ಕಾವೇರಿ ನದಿ ನೀರಿನ ಹಂಚಿಕೆಯಲ್ಲಿ ...ಕ್ಕೆ ಆಗುತ್ತಿರುವ ಅನ್ಯಾಯದ ಮುಂದುವರೆದ ... ಅಷ್ಟೆ. ಇವಕ್ಕೆ ಹೇಗೆ ಕೆಲವು ಚಾರಿತ್ರಿಕ ...ಳಿವೆಯೋ ಅದೇ ರೀತಿ ವರ್ತಮಾನದ ರಾಜಕೀಯ ಲೆಕ್ಕಾಚಾರಗಳೂ ಇವೆ.

...ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಕಾವೇರಿ ನದಿ ...ಕಾರದ ಸಭೆಯಿಂದ ಮುನಿಸಿಕೊಂಡು ಎದ್ದು ...ಂದಿದ್ದು ಕೂಡಾ ರಾಜಕೀಯ ಲಾಭವನ್ನು ...ಯೇ ಮಾಡಿದ್ದಾಗಿದೆ. ಕಿರಾಣಿ ಅಂಗಡಿಯಲ್ಲಿ ... ಮಾಡುತ್ತಾ ಗಿಟ್ಟದೆ ಹೋದಾಗ ಎದ್ದು ಬರುವಷ್ಟೇ ... ಶೆಟ್ಟರ್ ಸೆಪ್ಟೆಂಬರ್ 19ರ CRA ಸಭೆಯಿಂದ ...ಂದಾಗಲೇ ಕರ್ನಾಟಕಕ್ಕೆ ಮುಂದೇನು ಕಾದಿದೆ ... ಕೆಲವರಿಗಾದರೂ ಅರ್ಥವಾಗಿತ್ತು.

...ಂದು ಹನಿ ನೀರನ್ನೂ ಬಿಡುವುದಿಲ್ಲ' ಎಂದು ...ರ್ 19 ರಂದು ವೀರಾವೇಶದ ಹೇಳಿಕೆ ಕೊಟ್ಟ ... ಅದೇ ಸೆಪ್ಟೆಂಬರ್ 26ರ ರಾತ್ರಿ ಬಾಲಮುದುಡಿ ... ಕೆ.ಆರ್.ಎಸ್ ಹಾಗೂ ಕಬಿನಿ ಡ್ಯಾಂಗಳ ಗೇಟ್ ...ತಮಿಳುನಾಡಿಗೆ ನೀರು ಹರಿಸಬೇಕಾಗಿ ಬಂತು.

...ವಕ್ಕೆ ದೂರದೃಷ್ಟಿ ಇರದ, ಅಪ್ರಬುದ್ಧ ಕರ್ನಾಟಕ ...ದ ಹೊಣೆ ಎಷ್ಟಿದೆಯೋ ವಿರೋಧ ಪಕ್ಷ ಕಾಂಗ್ರೆಸ್‌ನ ...ಯೂ ಅಷ್ಟೇ ಇದೆ.

...ಪ್ರೀಂ ಕೋರ್ಟ್ ಆದೇಶ ಹಾಗೂ ಕಾವೇರಿ ಜಲ ...ಗದ ಮಧ್ಯಂತರ ತೀರ್ಪಿನಂತೆ ಅಸ್ತಿತ್ವಕ್ಕೆ ಬಂದಿರುವ ... ನದಿ ಪ್ರಾಧಿಕಾರದ (CRA) ಸ್ವರೂಪ ಹಾಗೂ ...ದರ ಅಧಿಕಾರದ ವ್ಯಾಪ್ತಿ-ವಿಸ್ತಾರಗಳನ್ನು ಶೆಟ್ಟರ್ ಸರಿಯಾಗಿ ಅರ್ಥಮಾಡಿಕೊಂಡಿದ್ದಿದ್ದರೆ ಈಗಿನಷ್ಟು ...ತವಂತೂ ಆಗುತ್ತಿರಲಿಲ್ಲ ಎನ್ನಲೇಬೇಕು.

...ಧಾನಮಂತ್ರಿಗಳ ಅಧ್ಯಕ್ಷತೆಯ ಸಿ.ಆರ್.ಎ ಯು ...ಕ್ಕೆ ಉದ್ಭವಿಸುವ ನೀರಿನ ಹಂಚಿಕೆಗೆ ಸಂಬಂಧಿಸಿದ ...ವನ್ನು ಪರಿಶೀಲಿಸಿ ಒಂದು ಪರಿಹಾರ ಸೂತ್ರವನ್ನು ...ತ್ತದೆ. ಬಹುಪಾಲು ಆದೇಶದಂತೆಯೇ ಇರುವ ...ಎ ಅಭಿಪ್ರಾಯವನ್ನು ಪುನರ್‌ಪರಿಶೀಲಿಸುವಂತೆ ...ವುದಾಗಲಿ ಏಕಾಏಕಿ ಧಿಕ್ಕರಿಸಲು ಬರುವುದಿಲ್ಲ, ...ವೇಳೆ ಸಿ.ಆರ್.ಎ ತೀರ್ಪು ಸಮಾಧಾನ ತರದಿದ್ದರೆ ...ಪ್ರೀಂ ಕೋರ್ಟ್‌ನ ಮೊರೆ ಹೋಗಬಹುದಾಗಿದೆ. ...ದ್ದೆ ಗಣೇಶನ ಗಲಾಟೆಯಲ್ಲಿ RSS ಪುಂಡರು ...ಲೆಬ್ಬಿಸುವಂತೆ ಸಿ.ಆರ್.ಎ ಸಭೆಯಿಂದ ಹೊರಬಂದ ... ಈಗ ಪುನಃ ಸಿ.ಆರ್.ಎ ಸಭೆ ಕರೆಯುವಂತೆ ...ರೆಯುತ್ತಿದ್ದಾರೆ. ಹೀಗೆ ಅಪ್ರಬುದ್ಧರಂತೆ ವರ್ತಿಸುವ ...ಗಿ ಶೆಟ್ಟರ್ ಸರ್ಕಾರ ಏನೇನು ಮಾಡಬಹುದಿ...ದನ್ನೊಮ್ಮೆ ನೋಡೋಣ.

...ಗಾಲದ ಮುನ್ಸೂಚನೆ ಇತ್ತಲ್ಲವೆ?

...ಲ್ಲಿಗೆ ಆರು ತಿಂಗಳ ಹಿಂದೆಯೇ ಈ ವರ್ಷ ಕರ್ನಾಟಕ ...ಲ ಅನುಭವಿಸುವ ಸೂಚನೆ ಸಿಕ್ಕಿತ್ತು. ಮುಂಗಾರು ...ಮುಕ್ಕಾಲು ವಾಸಿ ಕೈಕೊಟ್ಟಿತ್ತು. ಕಳೆದ ಸೆಪ್ಟೆಂಬರ್ ...ವರೆಗೂ ಕೃಷ್ಣರಾಜಸಾಗರ, ಕಬಿನಿ, ಹೇಮಾವತಿ ...ಶಯಗಳಿಗೆ ಸಾಕಷ್ಟು ನೀರು ಹರಿದು ಬಂದಿರಲಿಲ್ಲ. ... ರಾಜ್ಯದ ಬರಗಾಲ ಕುರಿತಂತೆ ಅಧ್ಯಯನ ಸಮೀಕ್ಷೆ ...ಯು ಒಂದಲ್ಲ, ಎರಡು ಮೂರು ಸಾರಿ ಕೇಂದ್ರದ ... ತಂಡಗಳೂ ಇಲ್ಲಿಗೆ ಬಂದುಹೋಗಿದ್ದವು. ಕಾವೇರಿ ...ಕಣಿವೆಯ 49 ತಾಲ್ಲೂಕುಗಳು ತೀವ್ರ ಬರಗಾಲಕ್ಕೆ ...ರುವ ಬಗ್ಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರಕ್ಕೆ ...ಮಾಹಿತಿಯಿತ್ತು.

...ವಸ್ತುಸ್ಥಿತಿ ಹೀಗಿದ್ದಾಗ ಮುಂದಿನ ದಿನಗಳಲ್ಲಿ ಕಾವೇರಿ ...ಗಿ ತಮಿಳುನಾಡಿನೊಂದಿಗೆ ಜಗಳ ಶುರುವಾಗಬಹುದು ... ಒಂದು ಸಾಧ್ಯತೆಯನ್ನು ರಾಜ್ಯ ಸರ್ಕಾರ ...ದಾಲೋಚನೆ ಮಾಡಬೇಕಿತ್ತಲ್ಲವೇ?

...ಮಿಳುನಾಡು ಸೆಪ್ಟೆಂಬರ್ ತಿಂಗಳಲ್ಲಿ ಸಿ.ಆರ್.ಎ ... ಸುಪ್ರೀಂ ಕೋರ್ಟ್‌ಗೆ ಹೋಗುವ ತನಕ ಕಾಯದೆ ...ಕವೇ ಜುಲೈ, ಆಗಸ್ಟ್ ತಿಂಗಳಲ್ಲಿ ಕಾವೇರಿ ನದಿ ...ಕಾರದ ಗಮನಕ್ಕೆ ಬರುವಂತೆ ಕರ್ನಾಟಕದ ಬರ ...ತಿಯ ಬಗ್ಗೆ ಮಾಹಿತಿ ನೀಡಬಹುದಿತ್ತು, ಅಲ್ಲದೆ ...ಸ್ಥಿತಿ ಇದ್ದಾಗ 'ಸಂಕಷ್ಟ ಸೂತ್ರ' ರೂಪಿಸಿ ಕರ್ನಾಟಕಕ್ಕೆ ...ವಾಗದಂತೆ ಮನವಿ ಮಾಡಿಕೊಂಡಿರಬಹುದಿತ್ತು. ... ತರಲೆ ರಾಜಕೀಯದಲ್ಲಿ, ಭಿನ್ನಮತೀಯರ ಚಿಲ್ಲರೆ ...ದಲ್ಲಿ ಮುಳುಗಿಹೋಗಿದ್ದ ಬಿಜೆಪಿಗಳಿಗೆ ಈ ...ದೊಡಗು ಬೇಕಿರಲಿಲ್ಲ. ಈ ಮುತ್ಸದ್ದಿಗಳಿಗೆ ಇದು ...ಮೂಲೂ ಇಲ್ಲ. ಇದು ಕಾವೇರಿ ನೀರಿಗೆ ಸಂಬಂಧಿಸಿ ... ಮಾತ್ರವಲ್ಲ, ವಿದ್ಯುತ್ ಕ್ಷಾಮ ನಿರ್ವಹಿಸುವಲ್ಲಿಯೂ ... ರೀತಿ ಬೇಜವಾಬ್ದಾರಿತನವನ್ನು ಬಿಜೆಪಿ ಸರ್ಕಾರ ...ಸಿದೆ. ರಾಯಚೂರು ಥರ್ಮಲ್ ಸ್ಥಾವರದಲ್ಲಿ ...ದ್ದಿಲು ಸಂಗ್ರಹ ಸಾಕಷ್ಟು ಇದೆಯೋ ಇಲ್ಲವೋ ...ದರತ್ತಲೂ ಗಮನ ನೀಡದೆ ಕಲ್ಲಿದ್ದಲಿನ ಕೊನೆಯ ...ಚೆ ಖಾಲಿಯಾಗುವವರೆಗೂ ಸುಮ್ಮನಿದ್ದು ಅಲ್ಲಿ ...ತ್ ಉತ್ಪಾದನೆ ನಿಂತ ಮೇಲೆ ಎಚ್ಚೆತ್ತುಕೊಂಡದ್ದನ್ನು ...ದ ಜನತೆ ನೋಡಿಲ್ಲವೇ?

...ಬರ ಪರಿಹಾರಕ್ಕೆ ಸಂಬಂಧಿಸಿದಂತೆಯೂ ಕೇಂದ್ರ ...ನ ಕೃಷಿಗೀಕ ವಿಪತ್ತು ನಿರ್ವಹಣಾ ಪ್ರಾಧಿಕಾರಕ್ಕೆ ಸೂಕ್ತ ರೀತಿಯಲ್ಲಿ ಅಂಕಿಅಂಶಗಳನ್ನೊಳಗೊಂಡ ನಿಯಮಾನುಸಾರದ ಪರಿಹಾರ ಪ್ರಸ್ತಾವನೆ ಸಲ್ಲಿಸುವಲ್ಲಿಯೂ ಬಿಜೆಪಿ ಸರ್ಕಾರ ವಿಫಲಗೊಂಡಿತ್ತು.

ಕೇಂದ್ರದಲ್ಲಿ ಯಾವುದೇ ಸರ್ಕಾರ ಅಧಿಕಾರದಲ್ಲಿದ್ದರೂ, ರಾಜ್ಯಗಳಲ್ಲಿ ವಿರೋಧ ಪಕ್ಷಗಳ ಸರ್ಕಾರಗಳೇ ನಡೆಯುತ್ತಿದ್ದರೂ ಈ ಮಂಡಳಿಯು ತನ್ನದೇ ಆದ ಮಾನದಂಡಗಳ ಆಧಾರದಲ್ಲಿ ಬರ ಪರಿಹಾರ ಮೊತ್ತವನ್ನು ನಿರ್ಧರಿಸುತ್ತದೆ. ಇಲ್ಲಿ ಸೂಕ್ತವಾದ ಪರಿಹಾರ ಪಡೆಯಬೇಕೆಂದರೆ ಸರಿಯಾದ ಪ್ರೊಸೀಜರ್ ಪಾಲಿಸಬೇಕಷ್ಟೆ. ಬರದ ವಿಚಾರದಲ್ಲಿ ಬಿಜೆಪಿ ಕಟ್ಟಾಳುಗಳು ಕಾಂಗ್ರೆಸ್ ವಿರುದ್ಧ ಮಲತಾಯಿ ಧೋರಣೆಯ ಆರೋಪ ಮಾಡುತ್ತಾ ಕಾಲಾಯಾಪನೆ ಮಾಡುತ್ತಾ ಐದು ಸಾವಿರ ಕೋಟಿ ರೂ. ಕೇಳಿ ಕೊನೆಗೆ ಪಡೆದದ್ದು ಕೇವಲ 232 ಕೋಟಿ ಮಾತ್ರ.

ಒಂದು ಒಕ್ಕೂಟ ವ್ಯವಸ್ಥೆಯಲ್ಲಿರುವಾಗ ಅದು ಬರ ಪರಿಹಾರವೋ ಅಥವಾ ನೀರಿನ ಹಂಚಿಕೆಯೋ, ಹಾಲಿ ಇರುವ ನಿಯಮಗಳು ತಾರತಮ್ಯದಿಂದ ಕೂಡಿದ್ದಾಗ ಅಂತಹದ್ದನ್ನು ಸರಿಪಡಿಸಿಕೊಳ್ಳಬೇಕೆಂದರೆ ನಿರಂತರ ಪ್ರಯತ್ನ ಬೇಕಾಗುತ್ತದೆ.

ಆದರೆ ಈಗಿನ ಬಿಜೆಪಿ ಸರ್ಕಾರಕ್ಕೆ ಅಷ್ಟೆಲ್ಲ ಸಹನೆ, ಮುಂದಾಲೋಚನೆಗಳೆರಡೂ ಇರುವಂತೆ ಕಾಣುತ್ತಿಲ್ಲ. ಬಿಜೆಪಿಗಳು ಮಾಡಿರುವ ಇನ್ನೊಂದು ತಪ್ಪೆಂದರೆ..

ಕರ್ನಾಟಕದಲ್ಲಿ ಬರಗಾಲದ ಸಂಭವ ಕಾಣುತ್ತಿರುವುದರಿಂದ ಇಲ್ಲಿನ ಮಳೆಯನ್ನೇ ನೆಚ್ಚಿಕೊಂಡು, ಇಲ್ಲಿನ ಡ್ಯಾಂಗಳಿಂದ ಹರಿಯುವ ನೀರನ್ನೇ ನಂಬಿಕೊಂಡು ತಮಿಳುನಾಡಿನ ರೈತರು ಸಹಜ ಪರಿಸ್ಥಿತಿಯಲ್ಲಿ ಮಾಡುವಂತೆ ಅಷ್ಟೆಲ್ಲಾ ವಿಸ್ತೀರ್ಣದಲ್ಲಿ ಭತ್ತ ಬೆಳೆಯಲು ಮುಂದಾಗದಂತೆ ಸೂಚನೆ ನೀಡಬಹುದಿತ್ತು. ಕಾವೇರಿ ಪ್ರಾಧಿಕಾರಕ್ಕೂ ಈ ಮೊದಲೇ ವಾಸ್ತವ ಪರಿಸ್ಥಿತಿಯ ಬಗ್ಗೆ ಮಾಹಿತಿ ನೀಡಿ ತಮಿಳುನಾಡು ಬರಪೀಡಿತ ಕರ್ನಾಟಕದ ಮೇಲೆ ನೀರಿಗಾಗಿ ಒತ್ತಡ ಹೇರದಂತೆಯೂ ಜುಲೈನಲ್ಲೇ ತಿಳಿಸಿರಬಹುದಿತ್ತು.

ಕಾಂಗ್ರೆಸ್ ವಂಚನೆ

ಅಪರೂಪಕ್ಕೆ ಮಾತನಾಡುವ ಯಂತ್ರದಂತೆ ಕಾಣುವ ಪ್ರಧಾನಿ ಮನಮೋಹನ್ ಸಿಂಗ್ ಸರ್ಕಾರಿ ಪ್ರಥಮ ದರ್ಜೆ ಗುಮಾಸ್ತನಂತೆ ಈ ಸಂಕಷ್ಟದ ಸಮಯದಲ್ಲಿ ವರ್ತಿಸುತ್ತಿದ್ದಾರೆ.

ಕರ್ನಾಟಕವು ಸೆಪ್ಟೆಂಬರ್ 20 ರಿಂದ ಅಕ್ಟೋಬರ್ 15ರ ತನಕ ಪ್ರತಿನಿತ್ಯ ಒಂಬತ್ತು ಸಾವಿರ ಕ್ಯೂಸೆಕ್ಸ್‌ನಷ್ಟು ನೀರನ್ನು ತಮಿಳುನಾಡಿಗೆ ಹರಿಸುವಂತೆ ಆದೇಶಿಸಿರುವ ಕಾವೇರಿ ನದಿ ಪ್ರಾಧಿಕಾರವು ಸದ್ಯದ ಲಭ್ಯ ಪರಿಸ್ಥಿತಿಯಲ್ಲಿರುವ ಪರಮಾಧಿಕಾರ ಹೊಂದಿರುವ ಸಂಸ್ಥೆಯಾಗಿದ್ದರೂ ಅಲ್ಲೇ ಇನ್ನೊಂದು ಶಾಸನಬದ್ಧ ಸಮಿತಿಯೂ ಇದೆ.

ಕಾವೇರಿ ಉಸ್ತುವಾರಿಯ ಸಮಿತಿ (Cauvery Monitoring Committee) ಎಂಬ ಹೆಸರಿನ ಈ ಸಮಿತಿಯ ಸದಸ್ಯರು ಈಗ ವಿವಾದ ಸ್ಫೋಟಗೊಂಡು, ಜನಾಕ್ರೋಶ ಭುಗಿಲೆದ್ದಿರುವಾಗ ಪರಿಸ್ಥಿತಿಯ ಅಧ್ಯಯನಕ್ಕೆಂದು ಕರ್ನಾಟಕ ತಮಿಳುನಾಡಿಗೆ ಬಂದಿದ್ದಾರೆ. ಕಾವೇರಿ ನದಿ ಕಣಿವೆ ಪ್ರದೇಶದ ಉಸ್ತುವಾರಿಯೂ ಇದರ ವ್ಯಾಪ್ತಿಗೆ ಬರುವುದೇ ನಿಜವಾದಲ್ಲಿ ಕರ್ನಾಟಕದಲ್ಲಿ ಬರಗಾಲ ಬಂದಿರುವ ಬಗ್ಗೆ ಇವರೇಕೆ ಮೊದಲೇ ಗಮನ ಹರಿಸಬಾರದಿತ್ತು?

ತಮಿಳುನಾಡಿಗೆ ಕರ್ನಾಟಕದಿಂದ ಈ ಬಾರಿ ಸಾಕಷ್ಟು ನೀರು ಹರಿದುಬರುವ ಸಂಭವ ಇಲ್ಲವೆಂದು ತಿಳಿಸಿ ಬೆಳೆ ಪ್ರದೇಶದ ವಿಸ್ತೀರ್ಣವನ್ನು ಕಡಿಮೆ ಮಾಡಿಕೊಳ್ಳುವಂತೆಯೋ ಅಥವಾ ಹೆಚ್ಚು ನೀರು ಕೇಳದ ಪರ್ಯಾಯ ಬೆಳೆ ಆರಿಸಿಕೊಳ್ಳುವಂತೆಯೋ ತಮಿಳುನಾಡಿಗೆ ಮುನ್ನೆಚ್ಚರಿಕೆ ನೀಡಬಹುದಿತ್ತಲ್ಲವೇ?

'ಸಂಕಷ್ಟ ಸೂತ್ರ' ಎಂಬುದು, ಕಷ್ಟ ಬಂದು ಮನೆ ಬಾಗಿಲ ಬಳಿ ನಿಂತಾಗ ಹುಡುಕುವ ಪರಿಹಾರವಲ್ಲವಲ್ಲ?

ಕರ್ನಾಟಕ ಅಥವಾ ತಮಿಳುನಾಡು ಯಾರಿಗೇ ಆಗಲಿ ಬಿಕ್ಕಟ್ಟು ಎದುರಾಗುವ ಬಗ್ಗೆ ಮೊದಲೇ ಗ್ರಹಿಸಿ, ಅಂದಾಜು ಮಾಡಿಕೊಂಡು ಸೂಕ್ತ ಪರಿಹಾರ ಹುಡುಕುವ ಪ್ರಕ್ರಿಯೆಯೂ ಸಂಕಷ್ಟ ಸೂತ್ರವೇ ತಾನೆ?

ಆದರೆ ಕೇಂದ್ರದಲ್ಲಿ ಭ್ರಷ್ಟಾಚಾರದಲ್ಲಿ ಮುಳುಗಿಹೋಗಿರುವ ಕಾಂಗ್ರೆಸ್‌ಗೆ ಅಮೆರಿಕದ ಬಹುರಾಷ್ಟ್ರೀಯ ಸಂಸ್ಥೆಗಳ ಗುಲಾಮಗಿರಿ ಮಾಡುವಲ್ಲಿ ಮೈಮರೆತಿರುವ ಮನಮೋಹನ್ ಸಿಂಗ್‌ಗೆ ಕಾವೇರಿಯಿಂದ ಉಂಟಾಗಬಹುದಾಗಿದ್ದ ಬಿಕ್ಕಟ್ಟಿನ ಬಗ್ಗೆ ಯೋಚಿಸಲು ಸಮಯ ಸಿಗಬೇಕು ಹೇಗೆ?

ಶೆಟ್ಟರ್ ಹೊಸ ನಾಟಕ

ನೀರು ಹರಿಸುವ ಪ್ರಧಾನ ಮಂತ್ರಿಯ ಆದೇಶ ಪಾಲಿಸುವಂತೆ ಸುಪ್ರೀಂ ಕೋರ್ಟ್‌ನಿಂದ ಛೀಮಾರಿ ಹಾಕಿಸಿಕೊಂಡ ನಂತರ ಶೆಟ್ಟರ್ ಸರ್ಕಾರಕ್ಕೆ ಈಗ ಉಳಿದಿರುವುದು ಎರಡೇ ದಾರಿಗಳು.

ಒಂದು ಪ್ರಧಾನಿ ಅಧ್ಯಕ್ಷತೆಯ ಕಾವೇರಿ ನದಿ ಪ್ರಾಧಿಕಾರಕ್ಕೆ ಕರ್ನಾಟಕದ ಕಷ್ಟಗಳ ಬಗ್ಗೆ ಮನವಿ ಸಲ್ಲಿಸುವುದು, ಎರಡನೆಯದು ಕಾವೇರಿ ಪ್ರಾಧಿಕಾರದ ಆದೇಶ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸುವುದು.

ಸೆಪ್ಟೆಂಬರ್ 26ರ ರಾತ್ರಿ ನೀರು ಹರಿಸಲು ಆರಂಭಿಸಿದ ಮರುಕ್ಷಣದಿಂದಲೂ ಸುಪ್ರೀಂ ಕೋರ್ಟ್‌ಗೆ ಪುನರ್‌ಪರಿಶೀಲನಾ ಅರ್ಜಿ ಹಾಕುವುದಾಗಿ ಹೇಳುತ್ತಾ ಬಂದಿದ್ದರೂ ಇವತ್ತಿನವರೆಗೂ ಅರ್ಜಿ ಸಲ್ಲಿಸಿಲ್ಲ. ಡಜನ್‌ಗಟ್ಟಲೆ ತಜ್ಞ ವಕೀಲರಿರುವಾಗ ವರ್ಷಕ್ಕೆ 30 ಕೋಟಿ ಫೀಸ್ ಪೀಕುತ್ತಿರುವ ಈ ವಕೀಲರಿಗೆ ಹತ್ತೆಂಟು ಪುಟಗಳ ಒಂದು ಅರ್ಜಿ ರೆಡಿ ಮಾಡಿ ಸಲ್ಲಿಸಲು ವಾರಗಟ್ಟಲೆ ಸಮಯ ಬೇಕೆ?

ಇಲ್ಲಿ ಶೆಟ್ಟರ್ ತಂತ್ರ ಸ್ಪಷ್ಟವಾಗಿದೆ.

ಪ್ರಧಾನಿ ಹಾಗೂ ಸಿ.ಆರ್.ಎ ಆದೇಶದಂತೆ ಅಕ್ಟೋಬರ್ 15ರವರೆಗೂ ನೀರು ಹರಿಸದೆ ಅದಕ್ಕೂ ಮುನ್ನವೇ ಪುನಃ ಸುಪ್ರೀಂ ಕೋರ್ಟ್‌ಗೆ ಹೋದರೆ ಮತ್ತೆ ಛೀಮಾರಿ ಹಾಕಿಸಿಕೊಳ್ಳಬೇಕಾದೀತೇನೋ ಎಂಬ ಹಿಂಜರಿಕೆ ಅದು. ಕರ್ನಾಟಕವನ್ನು ಪ್ರತಿನಿಧಿಸುತ್ತಿರುವ ವಕೀಲ ನಾರೀಮನ್ ಟೀಂ ಕೂಡಾ ತಕ್ಷಣವೇ ಪುನರ್ ಪರಿಶೀಲನಾ ಅರ್ಜಿಯನ್ನು ಸಲ್ಲಿಸಲು ಬಯಸುತ್ತಿಲ್ಲ. ಆದರೂ ಜನರ ಆಕ್ರೋಶ ತಣಿಸಲು ಕೋರ್ಟ್‌ಗೆ ಹೋಗುವುದಾಗಿ ತೇಪೆದಾರಿ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಹಾಗೊಂದು ವೇಳೆ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಈಗಲೇ ಹೋದರೂ ಕೂಡಾ ಕಾವೇರಿ ಪ್ರಾಧಿಕಾರಕ್ಕೆ ಮತ್ತೆ ಮನವಿ ಮಾಡುವಂತೆ ಕೋರ್ಟ್ ನಿರ್ದೇಶನ ನೀಡುವ ಎಲ್ಲಾ ಸಾಧ್ಯತೆಗಳೂ ಇವೆ.

ಉಳಿದಂತೆ ಪ್ರಧಾನಿ ಅಧ್ಯಕ್ಷತೆಯ ಕಾವೇರಿ ನದಿ ಪ್ರಾಧಿಕಾರಕ್ಕೆ ನೇರವಾಗಿ ಪುನರ್ ಪರಿಶೀಲನಾ ಅರ್ಜಿ ಸಲ್ಲಿಸಲು ಕರ್ನಾಟಕಕ್ಕೆ ಅವಕಾಶವಿದ್ದೇ ಇದೆ. ಕರ್ನಾಟಕ ಈಗಾಗಲೇ ಅರ್ಜಿ ನೀಡಿಯೂ ಆಗಿದೆ. ಆದರೆ ಈ ಅರ್ಜಿಗೆ ಸಂಬಂಧಿಸಿದಂತಹ ಸಭೆಯ ದಿನಾಂಕ ತುರ್ತಾಗಿ ನಿಗದಿಯಾಗುವಂತೆ ಕಾಣುತ್ತಿಲ್ಲ. ಅಕ್ಟೋಬರ್ 16ಕ್ಕೆ ಇದರ ಸಭೆ ಈ ಮೊದಲೇ ಅಂದರೆ ನೀರು ಬಿಡುವಂತೆ ಪ್ರಧಾನಿ ಆದೇಶಿಸಿದ್ದ ಸೆಪ್ಟೆಂಬರ್ 19ರಂದೇ ನಿಗದಿಯಾಗಿತ್ತು.

ಕರ್ನಾಟಕದ ಸಂಕಷ್ಟದ ಮೊರೆ ಆಲಿಸಿ ಪ್ರಧಾನಮಂತ್ರಿ ನಿಗದಿತ ಅವಧಿಗೆ ಮೊದಲೇ ಪ್ರಾಧಿಕಾರದ ಸಭೆ ಕರೆಯುವುದು ಅನುಮಾನಾಸ್ಪದವಾಗಿದೆ. ಹಾಗೊಂದು ವೇಳೆ ಸಭೆ ಕರೆದರೂ ಜಯಲಲಿತ ಹಾಜರಾಗದೆ ಅಥವಾ ನಾಮಕಾವಸ್ತೆಗೆ ತನ್ನ ಪ್ರತಿನಿಧಿಯೊಬ್ಬರನ್ನು ಕಳುಹಿಸಿ ಸಭೆಯ ಉದ್ದೇಶವನ್ನೇ ಬುಡಮೇಲು ಮಾಡುವ ಸಾಧ್ಯತೆಗಳಂತೂ ಇದ್ದೇ ಇದೆ.

ಕರ್ನಾಟಕಕ್ಕೆ ಈಗ ಉಳಿದಿರುವ ಆಶಾವಾದವೇನೆಂದರೆ ಅಕ್ಟೋಬರ್ 8 ರಂದು ನಡೆಯಲಿರುವ ಕಾವೇರಿ ಉಸ್ತುವಾರಿ ಸಮಿತಿಯ ಸಭೆಯೊಂದೆ. ಪ್ರಾಧಿಕಾರದ ಅಧೀನ ಅಂಗವಾಗಿರುವ ಮಾನಿಟರಿಂಗ್ ಕಮಿಟಿಯ ಮೂವರು ಸದಸ್ಯರೀಗ ತಮಿಳುನಾಡು, ಕರ್ನಾಟಕಕ್ಕೆ ಭೇಟಿ ನೀಡಿ ಬೆಳೆ ಪರಿಸ್ಥಿತಿ, ಮಳೆ ಹಾಗೂ ಡ್ಯಾಂಗಳಲ್ಲಿರುವ ನೀರಿನ ಸಂಗ್ರಹದ ಬಗ್ಗೆ ಮಾಹಿತಿ ಸಂಗ್ರಹಿಸುತ್ತಿದ್ದಾರೆ. ಈ ಕಮಿಟಿಯ ಸದಸ್ಯರು ಮೆಟ್ಟೂರು ಡ್ಯಾಂ ಹತ್ತಿರ ಬರದಂತೆ ತಡೆದು ತಮಿಳುನಾಡು ಸರ್ಕಾರ ಉದ್ಧಟತನ ತೋರಿ ನಂತರ ಅವಕಾಶ ನೀಡಿರುವ ಘಟನೆಯೂ ಆಗಿದೆ. ಏನೇ ಆದರೂ ಉಸ್ತುವಾರಿ ಸಮಿತಿಯು ಅಕ್ಟೋಬರ್ 8ರ ಸಭೆಯಲ್ಲಿ ಕರ್ನಾಟಕ ಇನ್ನೂ ಹೆಚ್ಚು ನೀರು ಹರಿಸಲಾಗದ ದುಸ್ಥಿತಿ ತಲುಪಿರುವುದನ್ನು ಪರಿಗಣಿಸದ್ದೇ ಆದಲ್ಲಿ ಬಿಕ್ಕಟ್ಟಿನ ಪರಿಹಾರದ ಸಾಧ್ಯತೆಗಳು ಅಲ್ಲೇ ಗೋಚರಿಸಬೇಕಷ್ಟೆ.

ನೀರು ನೀಡುವಂತೆ ಆದೇಶಿಸಿ ಜನರ ಕೋಪಕ್ಕೆ ಗುರಿಯಾಗುತ್ತಿರುವ ಕಾಂಗ್ರೆಸ್ ಪಾರ್ಟಿಗೂ ತನ್ನ ಇಮೇಜ್ ಉಳಿಸಿಕೊಳ್ಳುವ ಒಂದು ಅವಕಾಶವೂ ಅದರಲ್ಲೇ ಅಡಗಿದೆ.

ಏನೇ ಆಗಲಿ, ಜಗದೀಶ್ ಶೆಟ್ಟರ್ RSS ಬಾಲಕನಂತೆ ಬೀದಿ ಜಗಳಕ್ಕೆ ನಿಲ್ಲುವ ಬದಲಾಗಿ ಈ ಬಾರಿಯಾದರೂ ಮುತ್ಸದ್ದಿಯಂತೆ ವರ್ತಿಸಲಿ.

● ವರದಿಗಾರ

ಬಿಜೆಪಿ ಕುತಂತ್ರ ಬುದ್ಧಿ

ತಮಿಳುನಾಡಿಗೆ ನೀರು ನಿಲ್ಲಿಸಿ ಅಂದರೆ ಬೆಂಗಳೂರಿಗೆ ನೀರು ಬಂದ್ ಮಾಡಿದರಂತೆ

ಇದೊಂದು ತರಾ 'ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕಿದಂತೆ.'

ವರ್ಷಕ್ಕೆ 20 ಟಿಎಂಸಿಯಷ್ಟು ಕಾವೇರಿ ನೀರನ್ನು ಬಳಸುವ 1 ಕೋಟಿಯಷ್ಟಿರುವ ಬೆಂಗಳೂರಿನ ಪ್ರಜೆಗಳು

ಕಾವೇರಿ ಹೋರಾಟಕ್ಕೆ ಸ್ಪಂದಿಸುತ್ತಿಲ್ಲವೆಂದು ಈಗ ಆರೋಪಿಸಲಾಗಿದೆ. ಹಾಗಾಗಿ ಇವರಿಗೆ ಪಾಠ ಕಲಿಸಲು ಕೆಲವು

ದಿನ ನೀರು ಸರಬರಾಜನ್ನು ಬಂದ್ ಮಾಡಲು ಬಿಜೆಪಿ ಸರ್ಕಾರ ಪ್ಲಾನ್ ಮಾಡುತ್ತಿದೆ.

ಅಂದರೆ ನೀರು ಸಿಗದೆ ಪರಿತಪಿಸುವ ಜನ ಕಾಂಗ್ರೆಸ್ ಪಾರ್ಟಿಯನ್ನು ದೂಷಿಸಲಿ, ಅದರಿಂದ ಬಿಜೆಪಿಗೆ ಲಾಭ

ಎಂಬುದೇ ಅದರ ಹಿಂದಿರುವ ರಾಜಕೀಯ ಲೆಕ್ಕಾಚಾರ. ಹಾಗೆ ಹೇಳಬೇಕೆಂದರೆ ಬೆಂಗಳೂರಿಗರು ಕಾವೇರಿ

ಹೋರಾಟಕ್ಕೆ ಬರುವುದಿರಲಿ, ಪೆಟ್ರೋಲ್ ಬೆಲೆ ಏರಿಕೆಯಾಗಲಿ, ಕರೆಂಟು ಸಿಗಲಿ, ಸಿಗದಿರಲಿ, ಬಿಟಿಎಸ್ ಟಿಕೆಟ್

ಬೆಲೆ ಏರಲಿ, ಗ್ಯಾಸ್ ರೇಟ್ ಸುಡಲಿ.... ಕೊನೆಗೆ ಬೆಂಗಳೂರಿಗೇ ಬೆಂಕಿ ಬೀಳಲಿ ತಲೆ ಕೆಡಿಸಿಕೊಳ್ಳದವರು.

ಬೆಂಗಳೂರಿನಲ್ಲಿ ಕಳೆದ ಒಂದು ತಿಂಗಳಿನಿಂದ ಹೋಟೆಲ್ ತಿಂಡಿಗಳ ಬೆಲೆ ವಿಪರೀತ ಏರಿಕೆಯಾಗಿದೆ. ಎರಡು

ಇಡ್ಲಿಗೆ 25 ರೂ. ಒಂದು ವಡೆ 20 ರೂ. ದೋಸೆ 30 ರೂ. ಕಾಫಿಗೆ 12 ರಿಂದ 15 ರೂ.ಗೆ ಏರಿಸಿ ಹೋಟೆಲ್

ಮಾಲೀಕರು ಜನರನ್ನು ಲೂಟಿ ಮಾಡುತ್ತಿದ್ದಾರೆ. ಆದರೇನು ಒಂದು ಕಾಲದಲ್ಲಿ pensioner's paradise

ಎನಿಸಿಕೊಂಡಿದ್ದ ಬೆಂಗಳೂರು ಈಗ ಎಲ್ಲಾ ರೀತಿಯ ಸಾಮಾಜಿಕ ಕಾಳಜಿಗಳಿಂದ ಮುಕ್ತರಾದ ನಿವೃತ್ತ ಮನಸ್ಥಿತಿಯವರ

ನಗರವೇ ಆಗಿ ಹೋಗಿದೆ. ನಿಜ, ನಗರದ ಜನ ಕಾವೇರಿ ಕಣಿವೆಯ ರೈತರ ಸಮಸ್ಯೆಗಳಿಗೆ ಸ್ಪಂದಿಸಬೇಕು. ಅದನ್ನು

ಜನ ತಾವಾಗಿಯೇ ಅರಿಯಬೇಕು.

ಈಗ ಬಿಜೆಪಿಗಳು ಬೆಂಗಳೂರಿಗೆ ನೀರು ಬಂದ್ ಮಾಡುವ ಯೋಚನೆಯು ಜನರ ಸಿಟ್ಟನ್ನು ಕೇಂದ್ರದ

ಕಾಂಗ್ರೆಸ್ ವಿರುದ್ಧ ತಿರುಗಿಸುವ ನೀಚ ಲೆಕ್ಕಾಚಾರವಾಗಿದೆ.

ಇವರಿಗೆ ತಾಕತ್ತಿದ್ದರೆ ತಮಿಳುನಾಡಿಗೆ ಹರಿದುಹೋಗುತ್ತಿರುವ ನೀರು ನಿಲ್ಲಿಸಲಿ ನೋಡೋಣ.


ರಾಣೆಬೆನ್ನೂರ ಕಾಂಗ್ರೆಸ್ಸಿಗೆ ಕೋಳಿವಾಡನೇ ಪಾಯಿಜನ್

ಈ ಹಿಂದೆ ಕಾಂಗ್ರೆಸ್‌ನ ಭದ್ರಬುನಾದಿ ಎಂದೇ ಕರೆಯಿಸಿಕೊಳ್ಳುತ್ತಿದ್ದ ರಾಣೆಬೆನ್ನೂರ ವಿಧಾನಸಭಾ ಕ್ಷೇತ್ರದಲ್ಲಿ ಕಳೆದೆರಡು ಅವಧಿಯಿಂದ ಬಿಜೆಪಿ ಬಾವುಟ ಹಾರಾಡುತ್ತಿದೆ. ಇದು ಬಿಜೆಪಿಯ ಬಲದಿಂದಲ್ಲ, ಬದಲಾಗಿ ಕಾಂಗ್ರೆಸ್‌ನ ಮಾಜಿ ಮಂತ್ರಿ ಕೆ.ಬಿ.ಕೋಳಿವಾಡ ಎಂಬ ಎಡಬಿಡಂಗಿ ಪಾರ್ಟಿಯಲ್ಲಿ ಇಲ್ಲಿಯವರೆಗೂ ಮಾಡುತ್ತಾ ಬಂದಿರುವ ಎಡವಟ್ಟನಿಂದ.

ನಾಲ್ಕು ಬಾರಿ ಶಾಸಕನಾಗಿ, ಒಂದು ಅವಧಿ ಮಂತ್ರಿಯಾಗಿದ್ದ ಕೋಳಿವಾಡ ಕ್ಷೇತ್ರದಲ್ಲಿ ಕಡಿದು ಗುಡ್ಡೆಹಾಕಿದ್ದೇನೂ ಇಲ್ಲ. ಅಧಿಕಾರದಲ್ಲಿದ್ದಾಗ ಜನರನ್ನು ಹತ್ತಿರಕ್ಕೂ ಸೇರಿಸಿಕೊಳ್ಳದೆ ಹಿಟ್ಲರ್‌ನಂತೆ ವರ್ತಿಸುವುದು, ಅಧಿಕಾರ ಕಳೆದುಕೊಂಡಾಗ ಪಕ್ಷದಲ್ಲಿ ತಾನೊಬ್ಬನೇ ಸುಪ್ರೀಂ ಎಂದು ಕರೆಯಿಸಿಕೊಳ್ಳುವ ಕೋಳಿವಾಡನ ಹಪಾಹಪಿಯೇ ಕಾಂಗ್ರೆಸ್ಸಿಗೆ ಮುಳುವಾಯಿತಲ್ಲದೆ, ಜನರಿಗೂ ಅನಿವಾರ್ಯವಾಗಿ ಬಿಜೆಪಿಯ ನರುತ್ತ ಜಿ.ಶಿವಣ್ಣನನ್ನು ಒಪ್ಪಿಕೊಳ್ಳುವಂತಾಯಿತು.

ರಾಣೆಬೆನ್ನೂರಿನ ಜನ ಕೋಳಿವಾಡನನ್ನು ನಾಲ್ಕು ಬಾರಿ ಶಾಸಕನ ಸ್ಥಾನಕ್ಕೆ ಗೆಲ್ಲಿಸುತ್ತಾ ಬಂದಿದ್ದು ಇವನ ಕೆಲಸದ ವರ್ಚಸ್ಸಿನಿಂದಲ್ಲ, ಬದಲಾಗಿ ಸೌಹಾರ್ದತೆಗೆ ಹೆಸರಾಗಿರುವ ನೆಲದಲ್ಲಿ ಕೋಮುವಾದಿಗಳು ಕಾಲಿಡಬಾರದು ಎಂದು ಕಾಂಗ್ರೆಸ್‌ಅನ್ನು ಬೆಂಬಲಿಸಿದ್ದರು. ಆದರೆ ಕೋಳಿವಾಡ ಗೆಲುವು ಸಿಕ್ಕಾಗಲೆಲ್ಲಾ ಬೆಂಗಳೂರನ್ನೇ ತನ್ನ ಕೇಂದ್ರ ಸ್ಥಾನವನ್ನಾಗಿಸಿ









ಕೊಂಡು ಕ್ಷೇತ್ರದ ಅಭಿವೃದ್ಧಿ ಮರೆತನಲ್ಲದೆ, ಪಕ್ಷದ ಕಾರ್ಯಕರ್ತರನ್ನೂ ಕೀಳುಮಟ್ಟದಲ್ಲಿ ಕಾಣುತ್ತಿದ್ದ. ಇವನ ಈ ವರ್ತನೆಯಿಂದ ಬೇಸತ್ತ ಕಾಂಗ್ರೆಸ್ ಕಾರ್ಯಕರ್ತರೇ ಇವನ ವಿರುದ್ಧ ಚಿತಾವಣೆ ಮಾಡಿ ಬಿಜೆಪಿಯ ಗೆಲುವಿಗೆ ಕಾರಣರಾದರು.

ಸದ್ಯ ಎದುರಾಗಲಿರುವ ವಿಧಾನಸಭೆ ಚುನಾವಣೆಯಲ್ಲಿ ಮತ್ತೆ ಕಾಂಗ್ರೆಸ್ ಅಭ್ಯರ್ಥಿಯಾಗುವ ಹಗಲುಕನಸಿನಲ್ಲಿರುವ ಕೋಳಿವಾಡ ಚುನಾವಣೆ ಜರುಗುವುದಕ್ಕೂ ಮುನ್ನವೇ ಗೆದ್ದು ಮಂತ್ರಿಯಾದವನಂತೆ ವರ್ತಿಸುತ್ತಿದ್ದಾನೆ. "ಈ ಹಿಂದೆ ನನ್ನ ಅಧಿಕಾರದಿಂದ ಬೇಸತ್ತಿದ್ದ ರಾಣೆಬೆನ್ನೂರ ಜನ ಈಗ ಬಿಜೆಪಿಯ ಜಿ.ಶಿವಣ್ಣನ ಅಧಿಕಾರದಿಂದ ರೋಸಿಹೋಗಿದ್ದಾರೆ. ಮುಂದೆ ನನ್ನನ್ನೇ ಗೆಲ್ಲಿಸುತ್ತಾರೆ. ರಾಜ್ಯದಲ್ಲಿ ಬಿಜೆಪಿ ವಿರುದ್ಧ ವಾತಾವರಣವಿದೆ. ಕಾಂಗ್ರೆ ಸರ್ಕಾರ ಅಧಿಕಾರಕ್ಕೇರಲಿದೆ. ಅದರಲ್ಲಿ ನಾನು ಮಂತ್ರಿ ಆಗುವುದು ಗ್ಯಾರಂಟಿ. ಪಕ್ಷದ ಕಾರ್ಯಕರ್ತರು ನನ್ನ ಪರವಾಗಿ ದುಡಿಯದಿದ್ದರೂ ನಾನು ಗೂಟದ ಕಾರು ಹತ್ತುವುದನ್ನು ಯಾರಿಂದಲೂ ತಪ್ಪಿಸಲಾಗದು" ಎಂದೆಲ್ಲ ಕುಂತಲ್ಲೇ ಕೋಳಿವಾಡ ಲೆಕ್ಕಹಾಕುತ್ತಿದ್ದಾನೆ. ಇವನ ಈ ರೀತಿಯ ಅಂತೆಕಂತೆಯ ಲೆಕ್ಕಾಚಾರದಿಂದ ಕ್ಷೇತ್ರದಲ್ಲಿ ಕಣ್ಮರೆಯಾಗುತ್ತಿರುವ ಕಾಂಗ್ರೆಸ್ಸಿಗೆ ಈತನೇ ಪಾಯಿಜನ್ ಆಗುತ್ತಿರುವುದರ ಬಗ್ಗೆ ಎರಡು ಮಾತಿಲ್ಲ.

ಚಿಲ್ಲರೆ ರಾಜಕಾರಣ

ಮಾಜಿ ಮಂತ್ರಿ ಕೋಳಿವಾಡನ ಕ್ಷೇತ್ರದ ರಾಜಕೀಯ ಇತಿಹಾಸದ ಪುಟಗಳನ್ನು ಕೆದಕುತ್ತಾ ಹೋದರೆ ಅಲ್ಲಿ ಸಿಗುವುದೆಲ್ಲಾ ಚಿಲ್ಲರೆ ರಾಜಕಾರಣ.


ಕ್ಷೇತ್ರದ ಕಾಂಗ್ರೆಸ್ ಪಕ್ಷದಲ್ಲಿ ತನಗಿಂತ ಯಾರೊಬ್ಬರೂ ಹೆಚ್ಚು ಪ್ರಚಾರಕ್ಕೆ ಬರಬಾರದು, ತಾನೊಬ್ಬನೇ ಪ್ರಚಾರದಲ್ಲಿರಬೇಕು, ಎಲ್ಲರೂ ತನ್ನನ್ನೇ ದಂಡನಾಯಕ ಎಂದು ಕರೆಯಬೇಕು ಎಂಬ ಹುಚ್ಚು ಹಪಾಹಪಿಗೆ ಬಿದ್ದಿರುವ ಕೋಳಿವಾಡ ಇಲ್ಲಿಯವರೆಗೂ ಪಕ್ಷದಲ್ಲಿ ಯಾರನ್ನೂ ಬೆಳೆಯಲು ಬಿಟ್ಟಿಲ್ಲ. ಬೆಳೆಯಲು ಪ್ರಯತ್ನಿಸಿದವರನ್ನು ರಾಜಕೀಯವಾಗಿ ಮೂಲೆಗುಂಪಾಗಿಸುವ ಕೆಲಸವನ್ನು ಆತ ನಿಯತ್ತಾಗಿ ಮಾಡುತ್ತಾ ಬಂದಿದ್ದಾನೆ.

ಈ ಹಿಂದೆ ಈ ಪ್ರದೇಶದಲ್ಲಿ ಕಾಂಗ್ರೆಸ್ ಪಕ್ಷವನ್ನು ಕಟ್ಟಿ, ಬೆಳೆಸಿ ಇವನನ್ನು ಗೆಲ್ಲಿಸುತ್ತಾ ಬಂದಿದ್ದ ಮುಖಂಡರಾದ ಚನ್ನಬಸಪ್ಪ ವಕೀಲರು, ಕುರವತ್ತಿ ಬಸಣ್ಣ ಟ್ರಾನ್ಸ್‌ಪೋರ್ಟ್ ವ್ಯಾಪಾರಿ ಪಾಸ್ತೆ ತರಹದವರು ಕೋಳಿವಾಡನ ವರ್ತನೆಯನ್ನು ಸಹಿಸಲಾಗದೆ, ಹತ್ತು ವರ್ಷದ ಹಿಂದೆಯೇ ಕಾಂಗ್ರೆಸ್‌ಗೆ ಗುಡ್‌ಬೈ ಹೇಳಿ ಬೇರೆ ಪಾರ್ಟಿಗೂ ಕಾಲಿಡದೆ ತಟಸ್ಥ ಉಳಿದಿದ್ದಾರೆ. ಸದ್ಯ ಇಂತಹವರ ಸಂಖ್ಯೆ ನೂರರ ಗಡಿದಾಟಿದೆ.

ಕಳೆದ ಎರಡು ವಿಧಾನಸಭಾ ಚುನಾವಣೆಯಲ್ಲಿ ಸತತವಾಗಿ ಮಣ್ಣು ಮುಕ್ಕಿರುವ ಕೋಳಿವಾಡ ತನ್ನ ಸೋಲಿಗೆ ಕಾರಣ ಹುಡುಕುವ ಪ್ರಯತ್ನ ಮಾಡಿಲ್ಲ. ಬದಲಾಗಿ ಪಕ್ಷದ ಮುಖಂಡರ ಮೇಲೆ ಸೇಡಿನ ರಾಜಕಾರಣ ನಡೆಸಿದ್ದಾನೆ. ಬ್ರಿಟಿಷ್ ಪಾಲಿಸಿಯಾಗಿದ್ದ ಒಡೆದಾಳುವ ನೀತಿಯನ್ನು ಜಾರಿಗೆ ತಂದಿರುವ ಕೋಳಿವಾಡ ಇಂದಿಗೂ ಇಬ್ಬರ ಜಗಳಗಳಲ್ಲಿ ಲಾಭ ಪಡೆಯಲು ಮುಂದಾಗುತ್ತಾನೆ. ವಿವಿಧ ಜಾತಿಗಳ ಮುಖಂಡರ ನಡುವೆ ಒಡಕು ಸೃಷ್ಟಿಸಿ ಆನಂತರ ತಾನೇ ಮುಂದೆ ನಿಂತು ಅದನ್ನು ಸರಿಪಡಿಸುವ ಸೋಗಿನಾಟವಾಡುವ ಈತನ ಫಾರ್ಮುಲ ಹೊಸದೇನಲ್ಲ.

ನಕಲಿ ಶಾಲೆಯನ್ನು ಕೋಟಿಗೆ ಮಾರಿದ

ಕೋಳಿವಾಡ ಸ್ಟಾರ್ಚ್ ಹಾಕಿದ ಖಾದಿ ಅರಿವೆ ತೊಟ್ಟು, ಬಾಯಲ್ಲಿ ಎಲೆ ಅಡಿಕೆ ತುಂಬಿಕೊಂಡು ತನ್ನ ಮನೆಯಿಂದ ಹೊರಬಿದ್ದನೆಂದರೆ ಯಾವುದಾದರೊಂದು ಮಿಕ ಆತನ ಬಲೆಗೆ ಬಿತ್ತು ಎಂದೇ ಲೆಕ್ಕ. ಕೋಳಿವಾಡನ ಕ್ರಿಮಿನಲ್ ಬ್ರೇನ್‌ಗೆ ಇತ್ತೀಚೆಗಷ್ಟೇ ಒಂದು ಬಕರಾ ಬಲಿಬಿದ್ದು ಒಂದು ಕೋಟಿ ರೂಪಾಯಿ ಕಳೆದುಕೊಂಡ ಪ್ರಸಂಗ ನಡೆದಿದೆ.



ಕೋಳಿವಾಡ ಅಧಿಕಾರದಲ್ಲಿದ್ದಾಗ ತನ್ನ ಪ್ರಭಾವ-ಬಳಸಿ ರಾಣೇಬೆನ್ನೂರು ನಗರಸಭೆಯಿಂದ ಐದು ಕುಂಟೆ ಜಾಗ ಪಡೆದಿದ್ದ ಆ ಐದು ಕುಂಟೆ ಜಾಗೆಯ ಎರಡು ಕುಂಟೆಯಲ್ಲಿ ನ್ಯಾಷನಲ್ ಪಬ್ಲಿಕ್ ಸ್ಕೂಲ್ ಎಂಬ ಹೆಸರಿನ ಶಾಲೆ ತೆರೆದಿದ್ದ. ತನ್ನ ಕುಟುಂಬದ ಸದಸ್ಯರು ಹಾಗೂ ತನ್ನ ಹಿಂಬಾಲಕರನ್ನೊಳಗೊಂಡ ಕಮಿಟಿಯೊಂದನ್ನು ರಚಿಸಿಕೊಂಡು ಆ ಶಾಲೆಯ ಮುಂದೆ ಸಿಬಿಎಸ್‌ಸಿ ಸಿಲೇಬಸ್ ಹೆಸರಿನ ಬೋರ್ಡ್ ನೇತು ಹಾಕಿ, ಭರ್ತಿ ಸುಲಿಗೆಗೆ ಇಳಿದಿದ್ದ. ಅಷ್ಟೇ ಅಲ್ಲ, ಶಾಸಕ-ಸಂಸದರ ಅನುದಾನದಲ್ಲಿ ಬಿಲ್ಡಿಂಗ್ ಕಟ್ಟಿಸಿಕೊಂಡಿದ್ದ. ಅಸಲಿಗೆ ಈ ಶಾಲೆಯ ಪರವಾನಗಿ ಪಡೆಯಲು ಖೊಟ್ಟಿ ದಾಖಲೆ ನೀಡಿದ್ದ!

ಸಿಬಿಎಸ್‌ಸಿ ಪಠ್ಯಕ್ರಮದ ಶಾಲೆಗೆ ನಿಯಮದ ಪ್ರಕಾರ ಎರಡು ಎಕರೆ ಜಾಗ ಬೇಕು. ಆದರೆ ಅದು ಕೋಳಿವಾಡನ ಹತ್ತಿರ ಇರಲಿಲ್ಲ, ಹೀಗಾಗಿ ನಕಲಿ ದಾಖಲೆಯೊಂದನ್ನು ಹುಟ್ಟು ಹಾಕಿ ಸಬ್‌ರೆಜಿಸ್ಟ್ರಾರ್ ಸಹಿಯನ್ನು ಫೋರ್ಜರಿ ಮಾಡಿ ಪರವಾನಗಿ ಸಲ್ಲಿಸಿದ್ದ. ಈ ಕುರಿತು ವಿಚಾರಣೆಗೆ ಅಧಿಕಾರಿಗಳು ಬಂದ ಸಂದರ್ಭದಲ್ಲಿಯೂ ಅವರನ್ನೆಲ್ಲ ದಾರಿ ತಪ್ಪಿಸಿದ್ದ. ಹೀಗಾಗಿ ಇದು ಬಹಳ ದಿನ ಯಾರಿಗೂ ತಿಳಿಯಲೇ ಇಲ್ಲ.

ಕೋಳಿವಾಡನ ಇಂತಹ ಅಕ್ರಮಗಳ ವಿರುದ್ಧ ಪ್ರಕಾಶ ನಾಯಕ ಎಂಬುವರು ಹೈಕೋರ್ಟ್‌ನಲ್ಲಿ ಮೊಕದ್ದಮೆ ದಾಖಲಿಸಿದ್ದರು. ಇದಕ್ಕೆ ಸಂಬಂಧಿಸಿದಂತೆ ವಾರೆಂಟ್ ಪ್ರತಿ ಹಿಡಿದು ಪೊಲೀಸರು ಕೋಳಿವಾಡನ ಮನೆ ಮುಂದೆ ನಿಂತಾಗ ಬೆಂಗಳೂರಿಗೆ ಕೋಳಿವಾಡ ಕಾಲ್ಕಿತ್ತ. ಅಷ್ಟೇ ಅಲ್ಲ, ಈ ಶಾಲೆಗೆ ಸಂಬಂಧಿಸಿದಂತೆ ನಡೆದಿರುವ ಅಕ್ರಮಗಳ ಬಗ್ಗೆ ಒಂದಿಷ್ಟೂ ಗೊತ್ತಿರದ ಒಬ್ಬ ಬಕರಾನನ್ನು ಹಿಡಿದು ಆತನಿಗೆ ಒಂದೂವರೆ ಕೋಟಿಗೆ ಶಾಲೆಯನ್ನು ಮಾರಿ ಕೈತೊಳೆದುಕೊಂಡಿದ್ದ.

ಅಧಿಕಾರದಲ್ಲಿದ್ದಾಗ ಜಿಲ್ಲೆಯ ಗಡಿಭಾಗ ಕುಮಾರಪಟ್ಟಣಂನಲ್ಲಿ ಈತ ಜನ್ಮ ನೀಡಿದ್ದ ಮಟ್ಕಾ ದ ಇಂದಿಗೂ ಜೀವಂತವಾಗಿದೆ. ಆದರೆ ಅದರಿಂದ ಮ ಮತ ಕಳೆದುಕೊಂಡ ಸಾವಿರಾರು ಜನರು ಬೀದಿಗೆ ಬಿದ್ದಿದ್ದಾ ಈತ ಅಧಿಕಾರದಲ್ಲಿದ್ದಾಗ ರಾಣೆಬೆನ್ನೂರಿನ ರಾಜಾರೋಷವಾಗಿ ಮಾಂಸದಡ್ಡೆ ನಡೆಸುತ್ತಿದ್ದ ಬಸಂತಿ ಎಂ ಘರವಾಲಿ ಮಾತ್ರ ಈತ ಮಾಜಿಯಾಗುತ್ತಲೇ ಬಳ್ಳಾ ಜೈಲು ಸೇರಿದವಳು ಇನ್ನೂ ಹೊರಗೆ ಬಂದಿಲ್ಲ.

ಈ ಕ್ಷೇತ್ರದಲ್ಲಿ ದೋ ನಂಬರ್ ದಂಧೆಕೋರರ ಕಾಂಗ್ರೆಸ್ ಗಿಡದಂತೆ ಬೆಳೆಸಿದ ಕೋಳಿವಾಡ ಅ ನಿಷ್ಠೆಯಿಂದ ಪಕ್ಷ ಹಾಗೂ ಕಾರ್ಯಕರ್ತರನ್ನ ಬೆಳೆಸಿದ ಇವತ್ತು ಆತ ಅಧಿಕಾರದಲ್ಲಿರುತ್ತಿದ್ದ ಮಾತ್ರವಲ್ಲ ಈ ಕ್ಷೇತ್ರದ ಚಿಡ್ಡಿಗಳು ಕಾಲಿಡುವ ಸ್ಥಿತಿ ನಿರ್ಮಾಣವಾಗುತ್ತಿರಲಿಲ್ಲ, ಅ ಕೋಳಿವಾಡನಿಗೆ ಅರ್ಥವಾಗದ ಮಾತು ಬಿಡಿ.

ಪಕ್ಷದವರಿಗೂ ಕಾಟ ಕೊಟ್ಟ

ರಾಣೆಬೆನ್ನೂರಿನಲ್ಲಿ ಕಾಂಗ್ರೆಸ್ಸಿಗೆ ಇನ್ನೂ ಸ್ವಲ್ಪ ಉಸಿ ಇದ್ದರೆ ಅದಕ್ಕೆ ಕಾರಣ ಕೆಪಿಸಿಸಿ ಕಾರ್ಯದರ್ಶಿ ರುಕ್ಮಿ ಸಾಹುಕಾರ ಎಂಬ ಮಹಿಳೆ. ತಮ್ಮ ತಂದೆ ಮಾಜಿ ವಿಧಾ ಪರಿಷತ್ ಸದಸ್ಯ ಧಿ. ಎಲ್.ಹೆಚ್.ಹಿರೇಗೌಡರ ಗರಡಿಯ ಪಳಗಿದ ರುಕ್ಮಿಣಿ ಜನರ ಸಮಸ್ಯೆಯನ್ನು ಅರ್ಥೈಸಿಕೊಂಡ ಅದಕ್ಕೆ ಪರಿಹಾರ ಕಲ್ಪಿಸುವ ಸಾಮರ್ಥ್ಯ ಹೊಂದಿದ್ದಾ ಹೀಗಾಗಿ ಇವರ ಜನಸಂಪರ್ಕ ಕಚೇರಿ ಮುಂದೆ ಕ್ಷೇತ್ರ ಜನ ಸಾಲುಗಟ್ಟಿ ನಿಂತು ಪರಿಹಾರ ಕಂಡುಕೊಳ್ಳುತ್ತಿದ್ದಾ

ರಾಣೆಬೆನ್ನೂರಿನ ಸಿದ್ದೇಶ್ವರ ನಗರದಲ್ಲಿ ಕಳೆದ 6 ವರ್ಷಗಳಿಂದ ವಾಸವಾಗಿರುವ ನಿವಾಸಿಗಳಿಗೆ ಪ ನೀಡಬೇಕು ಎಂದು ಚಿಡ್ಡಿ ಸರ್ಕಾರದ ವಿರುದ್ಧ ಹೋರಾ ಕ್ಕಿಳಿದ ರುಕ್ಮಿಣಿ ಸಾಹುಕಾರರ ವಿರುದ್ಧ ಬಿಜೆಪಿಗಳ್ಯಾರು ವಿರೋಧ ಮಾಡಲಿಲ್ಲ. ಆದರೆ ಕೋಳಿವಾಡ ಮಾತ್ರ ಆಕೆಯ ಹೋರಾಟಕ್ಕೆ ಅಡ್ಡಗಾಲು ಹಾಕಿ ದಾರಿ ತಪ್ಪಿಸುವಂ ಮಾಡಿದ್ದ.

ರಾಜ್ಯದಲ್ಲೇ ಅತಿ ಹೆಚ್ಚು ಉದ್ಯಾನವನ ಅಭಿವೃ ಹಣ ಪಡೆಯುವ ಇಲ್ಲಿಯ ನಗರಸಭೆ ಕೋಟ್ಯಾಂತ ರೂಪಾಯಿ ಅವ್ಯವಹಾರಕ್ಕಿಳಿದಿದೆ. ಇದನ್ನು ದಾಖಲೆ ಸಮೇ ಬಹಿರಂಗಪಡಿಸಿದ ರುಕ್ಮಿಣಿ ನ್ಯಾಯಕ್ಕಾಗಿ ಸಂಗಮ ಸರ್ಕಲ್‌ನಲ್ಲಿ ಮೂರು ದಿನ ಉಪವಾಸ ಸತ್ಯಾಗ್ರಹ ನಡೆಸಿದ್ದರು ಆಗ ಅವರ ಬೆನ್ನಿಗೆ ಇಡೀ ರಾಣೆಬೆನ್ನೂರಿನ ಜನ ನಿಂತಿದ್ದರು ಆದರೆ ಕೋಳಿವಾಡ ಕಾಂಗ್ರೆಸ್ ಹೈ ಕಮಾಂಡ್‌ನಿಂ ರುಕ್ಮಿಣಿ ವಿರುದ್ಧವೇ ನೋಟಿಸು ಕೊಡಿಸಿ ಬೆದರಿಸಲ ನೋಡಿದ್ದ.

ಕೋಳಿವಾಡನ ಇಂತಹ ವರ್ತನೆ ರುಕ್ಮಿಣಿ ಅವರಿ ಹೊಸದೇನಲ್ಲ. ಚಿಕ್ಕಂದಿನಿಂದ ಇವನ ಪುಂಡಾಟ ನೋಡುತ್ತಲೇ ರಾಜಕಾರಣಕ್ಕೆ ಬಂದಿರುವ ಇವರು ಕಳೆ ತಿಂಗಳು ಕ್ಷೇತ್ರದ ನೂರಕ್ಕೂ ಹೆಚ್ಚು ಹಳ್ಳಿಗಳ ಮನೆಮನೆ ಭೇಟಿ ನೀಡಿ ಸಮಸ್ಯೆಗಳ ಪಟ್ಟಿ ತಯಾರಿಸಿ ಪಕ್ಷದ ವರಿಷ್ಠರಿ ನೀಡಿದ್ದಾರೆ. ಇದು ಕೋಳಿವಾಡನ ತಳಕ್ಕೆ ಖಾರ ಇಟ್ಟಂತಾಗಿದ ಎಲ್ಲಿ ತನಗೆ ಟಿಕೆಟ್ ತಪ್ಪಿ ರುಕ್ಮಿಣಿ ಸಾಹುಕಾರರಿ ಸಿಕ್ಕಿಬಿಡುತ್ತೋ ಎಂಬ ಭಯದಲ್ಲಿ ಕಂಡಕಂಡವರ ಮುಂ ಈಗ ಹಲ್ಲುಗಿಂಜುತ್ತಾ ನಿಂತಿದ್ದಾನೆ.


ತಾರತಮ್ಯ ಮಾಡಿದರೆ ಚುನಾವಣೆಯಲ್ಲಿ ತಕ್ಕ ಪಾಠ

ಪರಿಶಿಷ್ಟ ಜಾತಿಗಳ ಚಾರಿತ್ರಿಕ ಹುಟ್ಟು, ಬೆಳವಣಿಗೆಗಳ ಕಾರಣದಿಂದ ಅವುಗಳ ಮಧ್ಯೆ ಅಗಾಧವಾದ ಭಿನ್ನತೆಗಳಿವೆ. ಕೆಲವು ಜಾತಿಗಳು ಸಾಪೇಕ್ಷವಾಗಿ ಮುಂದುವರೆದಿವೆ ಹಾಗೂ ಕೆಲವು ಹಿಂದುಳಿದಿವೆ. ಈ ಹಿನ್ನೆಲೆಯಲ್ಲಿ ಬಲಹೀನ/ಹಿಂದುಳಿದ ಪ.ಜಾತಿಗಳ ಸೌಲಭ್ಯವನ್ನು ಇತರರು ಕಬಳಿಸುವುದನ್ನು ಕಡಿವಾಣ ಹಾಕುವುದೇ ಮೀಸಲಾತಿ ವರ್ಗೀಕರಣದ ಮೂಲ ಉದ್ದೇಶ. ಕಟ್ಟಕಡೆಯ ಮನುಷ್ಯನಿಗೆ ಮೊಟ್ಟಮೊದಲ ಆದ್ಯತೆ ನೀಡಬೇಕೆಂಬುದು ಸಾಮಾಜಿಕ ನ್ಯಾಯದ ತಿರುಳು.

ಸಂವಿಧಾನದ ಪರಿಚ್ಛೇದ - 46 ರ ಪ್ರಕಾರ ಪ.ಜಾತಿ ಮತ್ತು ವರ್ಗಗಳ ಶಿಕ್ಷಣ ಮತ್ತು ಆರ್ಥಿಕ ಅಭಿವೃದ್ಧಿ ಕುರಿತು ಯೋಜನೆ ರೂಪಿಸುವುದು ಹಾಗೂ ಎಲ್ಲಾ ಬಗೆಯ ಅನ್ಯಾಯಗಳನ್ನು ತಡೆಗಟ್ಟುವುದು ಸರಕಾರದ ಆದ್ಯ ಕರ್ತವ್ಯ. ಪರಿಚ್ಛೇದ 162,16(4) ರನ್ವಯ ರಾಜ್ಯ ಸರ್ಕಾರಕ್ಕೆ ಕಾನೂನು ಮಾಡುವ ಅಧಿಕಾರವಿದೆ ಹಾಗೂ ಮೀಸಲಾತಿ ಅನುಷ್ಠಾನಕ್ಕೆ ಸಂಬಂಧಿಸಿದಂತೆ ತಾರತಮ್ಯವಾಗದಂತೆ ನೋಡಿಕೊಳ್ಳುವ ಕರ್ತವ್ಯವೂ ಇದೆ.

ಈಗಾಗಲೇ ಕೆಲವು ರಾಜ್ಯಗಳು ಮೀಸಲಾತಿ ವರ್ಗೀಕರಣ ಮಾಡಿ ಅನುಷ್ಠಾನಕ್ಕೆ ತಂದಿವೆ. 1978 ರಲ್ಲಿ ಪಂಜಾಬ್, ಹರಿಯಾಣ ರಾಜ್ಯಗಳಲ್ಲಿ, 2001ರಲ್ಲಿ ಉತ್ತರ ಪ್ರದೇಶ ರಾಜ್ಯದಲ್ಲಿ ಹಾಗೂ 2010ರಲ್ಲಿ ತಮಿಳುನಾಡಿನಲ್ಲಿ ವರ್ಗೀಕರಣ ಆಗಿದೆ.

ಕರ್ನಾಟಕದಲ್ಲಿ ಮೀಸಲಾತಿ ಅನುಷ್ಠಾನದಲ್ಲಿರುವ ತಾರತಮ್ಯವನ್ನು ಗಮನದಲ್ಲಿಟ್ಟುಕೊಂಡು ಕಳೆದ 10 ವರ್ಷಗಳಿಂದಲೂ ಮಾದಿಗ ಮೀಸಲಾತಿ ಹೋರಾಟ ಸಮಿತಿ ಹಾಗೂ ಇತರ ಸಂಘಟನೆಗಳು ಜೊತೆಯಾಗಿ ಒಳಮೀಸಲಾತಿ ವರ್ಗೀಕರಣ ಚಳವಳಿ ನಡೆಸಿದ ಫಲವಾಗಿಯೇ 2004ರಲ್ಲಿ ಅಂದಿನ ಮುಖ್ಯಮಂತ್ರಿಯಾದ ಎಸ್.ಎಂ.ಕೃಷ್ಣ ನೇತೃತ್ವದ ಕಾಂಗ್ರೆಸ್ ಸರ್ಕಾರ ನಿವೃತ್ತ ನ್ಯಾಯಮೂರ್ತಿ ಎನ್.ವೈ. ಹಣಮಂತಪ್ಪರ ಏಕಸದಸ್ಯ ಆಯೋಗವನ್ನು ನೇಮಿಸಿದೆ. ಆ ಸಂದರ್ಭದಲ್ಲಿ ಬಲಗೈ ಗುಂಪಿನವರಾದ ಶ್ರೀಮತಿ ಮೋಟಮ್ಮ, ಮಲ್ಲಿಕಾರ್ಜುನ ಖರ್ಗೆ, ಡಾ.ಜಿ.ಪರಮೇಶ್ವರ್



ಹಾಗೂ ದಿವಂಗತ ಕೆ.ಎಚ್.ರಂಗನಾಥ್ - ಇವರೆಲ್ಲರೂ ಕ್ಯಾಬಿನೆಟ್ ದರ್ಜೆಯ ಸಚಿವರಾಗಿದ್ದರು. ವಿಷಯ ಹೀಗಿರುವಾಗ ಈಗ ಮೋಟಮ್ಮ ಮತ್ತು ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್ ಅವರು ಸದಾಶಿವ ಆಯೋಗದ ನೇಮಕಾತಿಯೇ ಅಸಂವಿಧಾನಿಕ ಹಾಗೂ ಕಾನೂನುಬಾಹಿರ ಎನ್ನುತ್ತಾ ಆಯೋಗದ ವಿರುದ್ಧವಾಗಿ ಮಾತನಾಡುತ್ತಿರುವುದು ಖೇದಕರ ಸಂಗತಿ.

ಹಾಗಾದರೆ ಜನಸಂಖ್ಯಾಧಾರಿತ ಒಳಮೀಸಲಾತಿ ವರ್ಗೀಕರಣಕ್ಕೆ ಕಾಂಗ್ರೆಸ್ ಪಕ್ಷ ವಿರುದ್ಧವಿದೆಯೆಂಬುದು ಇವರ ಮಾತಿನ ಅರ್ಥವೇ? ಕಾಂಗ್ರೆಸ್ ಕೇವಲ ಬಲಗೈ ಮತ್ತು ಲಂಬಾಣಿಗಳಿಗೆ ಮಾತ್ರ ಪರಿಶಿಷ್ಟರ ಕೋಟಾ ಅನ್ವಯಿಸುತ್ತಿದೆಯೆ? ಎಂಬ ಪ್ರಶ್ನೆಗಳಿಗೆ ಅವರು ಉತ್ತರಿಸಬೇಕಾಗುತ್ತದೆ.

ಈ ಹಿಂದಿನ ಎಲ್ಲಾ ಆಯೋಗಗಳ ವರದಿಗಳಿಂದ ಮಾದಿಗ ಜನಾಂಗವೇ ಪರಿಶಿಷ್ಟರಲ್ಲಿ ಬಹುಸಂಖ್ಯಾತರು ಎಂಬ ಮಾಹಿತಿ ದೃಢಪಟ್ಟಿದೆ ಹಾಗೂ ಮೀಸಲಾತಿ ಹಂಚಿಕೆಯಲ್ಲಿ ಅವರಿಗೆ ತಾರತಮ್ಯವಾಗಿದೆಯೆಂದೂ ವರದಿಗಳು ಸಾರಿ ಹೇಳುತ್ತಿವೆ. ವಿಷಯ ಹೀಗಿರುವಾಗ ಈ ಕಟುಸತ್ಯವನ್ನು ಮರೆಮಾಚುತ್ತಿರುವುದರ ಹಿಂದೆ ರಾಜಕೀಯ ದುರುದ್ದೇಶ ಇದೆಯೆಂಬುದು ಸ್ಪಷ್ಟ. 2004ರಿಂದ 2012ರವರೆಗೆ ನ್ಯಾ.ಸದಾಶಿವ ಆಯೋಗ ಪರಿಶಿಷ್ಟರ ಮನೆಮನೆಗೆ ತೆರಳಿ ಕುಟುಂಬ ಸಮೀಕ್ಷಾ ಕಾರ್ಯ ನಡೆಸಿ, ವೈಜ್ಞಾನಿಕವಾದ ಸಮರ್ಪಕವಾದ ವರದಿಯನ್ನು ಸರಕಾರಕ್ಕೆ ಸಲ್ಲಿಸಿದೆ. ಈ ಸಂದರ್ಭದಲ್ಲಿ ಟೀಕೆ ಮಾಡುತ್ತಿರುವವರು ಆಯೋಗದ ಕಾರ್ಯವೈಖರಿ ಬಗ್ಗೆ ಈ ಮೊದಲೇ ಕಿಂಚಿತ್ತಾದರೂ ಕಾಳಜಿ ವಹಿಸಬಹುದಿತ್ತಲ್ಲವೆ? ಸಮೀಕ್ಷಾ ಸಂದರ್ಭದಲ್ಲಿ ತಮಗೆ ತಾರತಮ್ಯವಾಗಿದ್ದರೆ ಆ ಬಗ್ಗೆ ಮಾಹಿತಿ ನೀಡಲಿಲ್ಲ ಯಾಕೆ? ಈ ಬಗ್ಗೆ ಮಾನ್ಯರು ಆತ್ಮಾವಲೋಕನ ಮಾಡಿಕೊಳ್ಳಬೇಕು.

ಸದಾಶಿವ ಆಯೋಗದ ವರದಿಯನ್ನು ವಿರೋಧಿಸುತ್ತಿರುವ ರಾಜಕಾರಣಿಗಳು ವಿಶೇಷವಾಗಿ ಭೋವಿ, ಲಂಬಾಣಿ, ಕೊರಮ ಇತ್ಯಾದಿ ನಾಯಕರು ಸತ್ಯಾಂಶವನ್ನು ಮರೆಮಾಚಿ ಅಪಪ್ರಚಾರ ಮಾಡುತ್ತಿದ್ದಾರೆ. 1976ರಲ್ಲಿ ಮೀಸಲಾತಿ ತಿದ್ದುಪಡಿ ತಂದು ಸ್ಪೃಶ್ಯ ಜಾತಿಗಳನ್ನು ಸೇರಿಸಿದಾಗ ಅದಕ್ಕೆ ವಿರೋಧ ವ್ಯಕ್ತಪಡಿಸದೆ ಹಂಚಿ ತಿನ್ನುವ ಔದಾರ್ಯ ತೋರಿಸಿದ್ದು ನಮ್ಮ ತಪ್ಪೆ? ಅಂದು ದಲಿತ ಚಳವ ತುಂಬಾ ಬಲಾಢ್ಯವಿತ್ತು. ಆದಾಗ್ಯೂ ತಾಯ್ತನದ ಭಾವನೆಯಿಂದ ತಿದ್ದುಪಡಿಯನ್ನು ಒಪ್ಪಿಕೊಂಡಿದ್ದಕ್ಕೆ ಈಗ ನಮ್ಮ ಮಾದಿಗ ಮತ್ತು ಹೊಲೆಯ ಸಂಬಂಧಿತ ಜಾತಿಗಳ ವಿರುದ್ಧ ಷಡ್ಯಂತ್ರ ಮಾಡುತ್ತಿರುವುದು ಖಂಡನೀಯ ಹಾಗೂ ಅದು ಅಕ್ಷಮ್ಯ ಅಪರಾಧ.

ಈ ಸದಾಶಿವ ವರದಿಯಿಂದ ಚಲವಾದಿ, ಮಾದಿಗ ಹಾಗೂ ಇನ್ನಿತರ ಅಸ್ಪೃಶ್ಯ ಸಮುದಾಯಗಳು ಒಂದುಗೂಡಲಿಕ್ಕೆ ಸಹಕಾರಿಯಾಗಿದೆ. ಈ ಹಿಂದೆ ಪರಿಶಿಷ್ಟ ಜಾತಿಯ ರಾಜಕಾರಣಿಗಳಂತೂ ಅಸ್ಪೃಶ್ಯ ಸಮುದಾಯಗಳನ್ನು ಒಂದುಗೂಡಿಸುವ ಕೆಲಸ ಮಾಡಲಿಲ್ಲ. ಈ ಆಯೋಗದ ವರದಿಯ ಹಿನ್ನೆಲೆಯಲ್ಲಾದರೂ ಒಗ್ಗೂಡುತ್ತಿರುವುದನ್ನು ಸ್ವಾಗತಿಸುವುದನ್ನು ಬಿಟ್ಟು ಕೆಡಿಸುತ್ತಿರುವುದು ಸಮಂಜಸವಲ್ಲ. ಚಲವಾದಿ, ಮಾದಿಗ ಸಮುದಾಯದ ಬುದ್ಧಿಜೀವಿಗಳು ಹೋರಾಟಗಾರರು ಐಕ್ಯ ವೇದಿಕೆ ನಿರ್ಮಿಸಲು ಶ್ರಮಿಸುತ್ತಿರುವಾಗ ಪರಮೇಶ್ವರ, ಮೋಟಮ್ಮ ಮತ್ತು ಪ್ರಕಾಶ ರಾಠೋಡ ಅಂಥವರಿಂದ ವಿರೋಧದ ಹೇಳಿಕೆ ಬಂದಿರುವುದು ಆಶ್ಚರ್ಯದ ಸಂಗತಿ.

ಅವರಿಗೆ ನಿಜಕ್ಕೂ ಪರಿಶಿಷ್ಟರ ಬಗ್ಗೆ ನಿಜವಾದ ಕಾಳಜಿಯಿದ್ದರೆ ಕೆಪಿಸಿಸಿ ಕಚೇರಿಯಲ್ಲಿಯೇ ಸದಾಶಿವ ಆಯೋಗದ ವರದಿಯ ಬಗ್ಗೆ ಬಹಿರಂಗ ಚರ್ಚೆಗೆ ವೇದಿಕೆ ಒದಗಿಸಿಕೊಡಲಿ. ಆಗ ಅವರ ಸಾಮಾಜಿಕ ಕಾಳಜಿ ಎಷ್ಟು ಎಂಬುದು ಗೊತ್ತಾಗುತ್ತದೆ. ಹಿಂದಿನ ಕಾಂಗ್ರೆಸ್ ಸರ್ಕಾರಗಳು ಒಳಮೀಸಲಾತಿ ವರ್ಗೀಕರಣ ಹೋರಾಟಕ್ಕೆ ಸ್ಪಂದಿಸದೆ ಹೋಗಿದ್ದರಿಂದಲೇ ಕಾಂಗ್ರೆಸ್ಸೇತರ ಸರ್ಕಾರಗಳ

...ಕ್ಕೆ ಬಿಸಿನೀರು ಬಿಟ್ಟ ಆರ್.ಶಂಕರ್

...ತದಲ್ಲಿ ಹಳ ಹಿಡಿದಿದ್ದ ಪಕ್ಷವನ್ನು ಇದ್ದುದರಲ್ಲೇ ...ು ಇಟ್ಟುಕೊಳ್ಳುತ್ತಿದ್ದ ರುಕ್ಮಿಣಿ ಸಾಹುಕಾರ ಒಬ್ಬರೇ ಕೋಳಿ ...ಗ ವಿರೋಧಿಯಾಗಿದ್ದರು. ಆದರೀಗ ಆರ್. ಶಂಕರ್ ...ಕ ತಾನೂ ಕಾಂಗ್ರೆಸ್ ಮುಖಂಡ ಎಂದು ಘೋಸು ...ವ್ವಾನೆ. ಮೂರು ತಿಂಗಳ ಹಿಂದೆ ಬೆಂಗಳೂರಿನಿಂದ ...ಳ್ಳೂರಿಗೆ ಬಂದಿಳಿದಿರುವ ಶಂಕರ್ ಈಗಾಗಲೇ ಒಂದು ...ಗೂ ಹೆಚ್ಚು ಹಣ ಸುರಿದಿದ್ದಾನೆ. ಮಹಿಳೆಯರಿಗೆ ...ಯುವಕರಿಗೆ ಟೀ ಶರ್ಟ್, ಸಮಸ್ಯೆ ಎಂದು ...ಂದು ಬಂದ ಜನರಿಗೆಲ್ಲಾ 10-20 ಸಾವಿರ ಕೊಟ್ಟು ...ುತ್ತಿರುವ ಶಂಕರ್ ತಾನೇ ಮುಂದಿನ ಕಾಂಗ್ರೆಸ್ ... ಎಂದು ಬಹಿರಂಗವಾಗಿ ಹೇಳಿಕೊಂಡು ...ುತ್ತಿದ್ದಾನೆ.

...ವು ತಿಂಗಳ ಹಿಂದೆ ದಾವಣಗೆರೆಯಲ್ಲಿ ಜರುಗಿದ ...ದ ಸಮಾವೇಶದಲ್ಲಿ ವಿರೋಧ ಪಕ್ಷದ ನಾಯಕ ...ಮಯ್ಯ ಅವರಿಂದ ದೀಕ್ಷೆ ಪಡೆದುಕೊಂಡು ...ವುದಾಗಿ ಹೇಳುವ ಶಂಕರ್ ತನ್ನ ಕುರುಬ ಸಮಾಜದ ...ು ಹೆಚ್ಚಿರುವ ಈ ಕ್ಷೇತ್ರವನ್ನು ಗುರಿಯಾಗಿಸಿಕೊಂಡು ...ಾಲಿಟ್ಟಿದ್ದಾನೆ ಎಂಬುದು ಮಾತ್ರ ರಹಸ್ಯವಾಗೇನೂ ... ಲಿಂಗಾಯತರನ್ನ ಹೊರತುಪಡಿಸಿದರೆ ಕುರುಬರು ...ರಡನೇ ಸ್ಥಾನದಲ್ಲಿದ್ದಾರೆ.

ಹಿಂದೆ ಎಸ್.ಎಂ.ಕೃಷ್ಣ ಮುಖ್ಯಮಂತ್ರಿಯಾಗಿದ್ದ ...ಮಲ್ಲಿ ಬೃಹತ್ ಬೆಂಗಳೂರಿನ ಮಹಾನಗರ ಪಾಲಿಕೆಯ ...ೇಯರ್ ಆಗಿದ್ದ ಶಂಕರ್ ಕಳೆದ ವಿಧಾನಸಭಾ ...ಣೆಯಲ್ಲಿ ಬಿಜೆಪಿಯ ಅಭ್ಯರ್ಥಿಯಾಗಿ ಬೆಂಗಳೂರು ...ನಗರ ಕ್ಷೇತ್ರದಿಂದ ಸ್ಪರ್ಧಿಸಿ ಸೋಲುಂಡಿದ್ದ. ಆದರೆ, ...ದ್ದಕ್ಕಿದ್ದಂತೆ ತಾನು ಕಾಂಗ್ರೆಸ್ಸಿಗ ಎಂದು ಹೇಳಿಕೊಂಡು ... ಮುಖಂಡರ ಭಾವಚಿತ್ರದೊಂದಿಗೆ ತನ್ನದೂ ...ೋ ಹಾಕಿಕೊಂಡು ಊರು ತುಂಬ ಫ್ಲೆಕ್ಸ್ ಕಟ್ಟಿದ್ದಾನೆ. ...ನಾರದ ಗಣೇಶ ಹಬ್ಬದ ಸಂದರ್ಭದಲ್ಲಿ ನೂರಕ್ಕೂ ...ಸಾರ್ವಜನಿಕ ಗಣೇಶೋತ್ಸವ ಸಂಘಗಳಿಗೆ ಬಿಂದಾಸ್ ...ಂಚಿ ರಾತ್ರೋರಾತ್ರಿ ಹೀರೋ ಆಗಿದ್ದಾನೆ. ಇದು ...ವಾಡನ ಬುಡಕ್ಕೆ ಬಿಸಿನೀರು ಬಿಟ್ಟಂತಾಗಿದೆ.

...ಕರನ ಹಣದ ಹರಿವಿನ ಕಾವು ತಡೆಯಲಾಗದೆ ...ವಾಡ ಪಕ್ಷದ ಹೈಕಮಾಂಡ್ ಮುಂದೆ ಬಾಯಿ ... ಬಡಿದುಕೊಳ್ಳುತ್ತಿದ್ದಾನೆ. ಅಷ್ಟೇ ಅಲ್ಲ, ಕಾಂಗ್ರೆಸ್ ...ಪ್ರಾಥಮಿಕ ಸದಸ್ಯತ್ವವನ್ನೂ ಪಡೆದಿರದ ಶಂಕರ್‌ನನ್ನು ...ದಲೇ ಉಚ್ಚಾಟನೆ ಮಾಡಿರುವುದಾಗಿ ಕೋಳಿವಾಡ ...ಬ್ಬರ್ ಸ್ಟ್ಯಾಂಪ್‌ನಂತಿರುವ ಜಿಲ್ಲಾ ಕಾಂಗ್ರೆಸ್ಸ್ ಅಧ್ಯಕ್ಷ ...ೀಹರ ಎಂಬಾತನ ಮೂಲಕ ಪ್ರಕಟಣೆ ...ಸಿದ್ದಾನೆ.

...ಂಗ್ರೆಸ್ಸಿನ ನಿಷ್ಠಾವಂತ ಕಾರ್ಯಕರ್ತರು, ಮುಖಂಡರು ... ಹಣಕ್ಕಾಗಲಿ ಅಥವಾ ಕೋಳಿವಾಡನ ಕ್ರಿಮಿನಲ್ ...ಂಗಲೀ ಇಲ್ಲಿವರೆಗೂ ಬಲಿಯಾಗಿಲ್ಲ. ಬರಲಿರುವ ...ವಣೆಯಲ್ಲಿ ಒಬ್ಬ ಸಜ್ಜನ ಅಭ್ಯರ್ಥಿಯನ್ನು ...ೇಕೆಂದು ತಮ್ಮ ಪಕ್ಷದ ಹೈಕಮಾಂಡ್‌ಗೆ ಮನವರಿಕೆ ...ಣಕ್ಕಿಳಿಸುವ ಉಮೇದಿನಲ್ಲಿ ಅವರೆಲ್ಲರೂ ಇದ್ದಾರೆ. ...ಟ್ಟನಲ್ಲಿ ಕೋಳಿವಾಡ ಇಷ್ಟೂ ದಿನ ಪಕ್ಷಕ್ಕೆ ಹಾಕುತ್ತಾ ...ವ ಸ್ಲೋ ಪಾಯಿಜನ್ ಮಾರಕ ಆಗುವ ಮುನ್ನ ... ಹೈಕಮಾಂಡ್ ಎಚ್ಚೆತ್ತುಕೊಳ್ಳುವುದು ಒಳಿತು.

● **ಹುರಳಿಕುಪ್ಪಿ ವಿನಯ**

...ಮಾಗಲಿಕ್ಕೆ ಕಾರಣೀಭೂತವಾಯಿತೆಂಬುದನ್ನು ಅವರು ...ಲ್ಲಿಡಬೇಕು.

...ನ್ನು ಆಡಳಿತಾರೂಢ ಬಿಜೆಪಿ ವಿಷಯಕ್ಕೆ ...ದಾದರೆ, ಸರ್ಕಾರದಲ್ಲಿರುವ ಅಸ್ಪೃಶ್ಯ ಸಮುದಾಯದ ...ಾದ ಗೋವಿಂದ ಕಾರಜೋಳ, ನಾರಾಯಣಸ್ವಾಮಿ ...ಾದವರು ವರದಿಯನ್ನು ಸರ್ಕಾರ ಅಂಗೀಕರಿಸುವಂತೆ ...ವ ಪ್ರಯತ್ನದಲ್ಲಿದ್ದಾರೆ. ಇನ್ನೊಂದು ಕಡೆ ಅದೇ ... ಕೆಲವು ನಾಯಕರು ಅಸ್ಪೃಶ್ಯರ ವಿರುದ್ಧ ಭೋವಿ, ...ಗಳನ್ನು ಎತ್ತಿಕಟ್ಟಿ ಜಾತಿಸಂಘರ್ಷ ಸೃಷ್ಟಿಸಿ ತಮ್ಮ ...ಯ ಲಾಭ ಮಾಡಿಕೊಳ್ಳುವ ಲಾಬಿಯೂ ...ತ್ತಿದೆ.

...ಗಾಗಲೇ ಹಲವಾರು ಅಸ್ಪೃಶ್ಯ ಜಾತಿಗಳು ಒಂದೇ ...ಡಿ ಸಂಘಟಿತರಾಗುತ್ತಿದ್ದಾರೆ. ಒಂದು ವೇಳೆ ಬಿಜೆಪಿ ...ರ್ಗೀಕರಣದ ಕರ್ತವ್ಯದಿಂದ ಹಿಂದೆಸರಿದರೆ ಬಿಜೆಪಿ ...ವ ಕಾರಜೋಳ, ನಾರಾಯಣಸ್ವಾಮಿ, ಕೆ.ಬಿ.ಶಾಣಪ್ಪ ...ಪ್ಪ ಹಾಲಹರವಿ, ಸಂಸದರಾದ ರಮೇಶ ಜಿಗಜಿಣಗಿ ...ಾದ ಮಾದಿಗ ರಾಜಕಾರಣಿಗಳು ಬಿಜೆಪಿ ಬಿಟ್ಟು ...ರಬೇಕೆಂದು ಮಾದಿಗರು ಫರ್ಮಾನು ಹೊರಡಿಸಿ ...ಳಮೀಸಲಾತಿ ವರ್ಗೀಕರಣಕ್ಕೆ ಯಾವ ಪಕ್ಷ ಬದ್ಧತೆ ...ತ್ತದೋ ಆ ಪಕ್ಷಕ್ಕೆ 2013ರ ಚುನಾವಣೆಯಲ್ಲಿ ...ು ಬೆಂಬಲಿಸಬೇಕೆಂಬ ನಿರ್ಣಯವನ್ನು ಈಗಾಗಲೇ ...ಕೊಳ್ಳಲಾಗಿದೆ. ಈ ನಿಟ್ಟಿನಲ್ಲಿ ಯಾವುದೇ ರಾಜಕೀಯ ...ಇದನ್ನು ರಾಜಕಾರಣ ಮಾಡಿದ್ದೇ ಆದರೆ ಅದರ ...ಮವನ್ನು ಬರಲಿರುವ ಚುನಾವಣೆಯಲ್ಲಿ ತಪ್ಪದೇ ...ಸಬೇಕಾಗುತ್ತದೆ ಎಂಬುದನ್ನು ನೆನಪಿಸಲಿಚ್ಛಿಸುತ್ತೇವೆ.

● **ಮುತ್ತಣ್ಣ ಬೆಣ್ಣೂರ** (ಬಾಗಲಕೋಟೆ),
ರಾಜ್ಯ ಪ್ರಧಾನ ಕಾರ್ಯದರ್ಶಿ,
ಮಾದಿಗ ಮೀಸಲಾತಿ ಹೋರಾಟ ಸಮಿತಿ

ಹುಬ್ಬಳ್ಳಿ: ಎಚ್‌ಡಿಕೆ ರೋಡ್ ಶೋ

ವಿಧಾನ ಪರಿಷತ್ ಸದಸ್ಯ ಬಸವರಾಜ ಹೊರಟ್ಟಿಯವರ 'ಅಪ್ಪ ಟ್ರಸ್ಟ್' ಮೊನ್ನೆ ಮಾಜಿ ಪ್ರಧಾನಿ ದೇವೇಗೌಡರನ್ನು ಹುಬ್ಬಳ್ಳಿಯಲ್ಲಿ ಸನ್ಮಾನಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಉತ್ತರ ಕರ್ನಾಟಕದ ಗಂಡು ಮೆಟ್ಟಿದ ನೆಲದಲ್ಲಿ ಮಣ್ಣಿನ ಮಕ್ಕಳನ್ನು ಸನ್ಮಾನಿಸುವ ಈ ಕಾರ್ಯಕ್ರಮ ತೆನೆಹೊತ್ತ ರೈತ ಮಹಿಳೆಯ ಮುಖದಲ್ಲಿ ಮಂದಹಾಸ ಚಿಮ್ಮಿಸಿತ್ತು. ಇದು ಉತ್ತರ ಕರ್ನಾಟಕದಲ್ಲಿ ಜಾತ್ಯತೀತ ಜನತಾದಳಕ್ಕೆ ಸುಭದ್ರ ನೆಲೆ ಕಲ್ಪಿಸಿಕೊಳ್ಳುವ ತಾಲೀಮು ಆಗಿತ್ತು.

ಮಾತೆತ್ತಿದರೆ ಟೆರರಿಸ್ಟ್ ಎಂದು ಆರೋಪಿಸಿ ಜೈಲಿಗೆ ತಳ್ಳಿ ಕೊಳೆಸುವ ಪೊಲೀಸರ ಕೇಸರಿ ಕ್ರೌರ್ಯಕ್ಕೆ ಬಲಿಯಾಗಿರುವ ಇಲ್ಲಿನ ಮುಸಲ್ಮಾನರು ಹೀನಾಯವಾಗಿ ಬದುಕುತ್ತಿದ್ದಾರೆ. ಹೆದರಿಕೆಯಿಂದ ಕಂಗಾಲಾಗಿದ್ದಾರೆ. ಯಥಾ ಕಾಂಗ್ರೆಸ್ಸಿನ ತಥಾ ಓಟ್‌ಬ್ಯಾಂಕ್‌ನಂತಿದ್ದ ಮುಸಲ್ಮಾನರು 'ಹಸ್ತ'ದ ಪೊಳ್ಳು ಭರವಸೆಗಳಿಂದ ಸುಸ್ತಾಗಿ ದೂರ ಸರಿದಿದ್ದಾರೆ. ಇದು ಜೆಡಿಎಸ್ ಪಾಲಿಗೆ ಬಕ್ರೀದ್ ಹಬ್ಬದ ಬಿರಿಯಾನಿ ಔತಣಕೂಟಕ್ಕೆ ಆಹ್ವಾನ ನೀಡಿದಂತಾಗಿದೆ. ಸಾಲಿಡ್ ಬಾಡೂಟಕ್ಕೆ ಹಸಿದಿರುವ ಗೌಡರು ಇಂಥದೊಂದು ದಾವತ್‌ಖಾನಾ ಮಿಸ್ ಮಾಡಿಕೊಳ್ಳುವ ಮಾತೆಲ್ಲಿ?

ಕೋಮುವಾದಿ ಸರ್ಕಾರ, ಕೇಸರಿ ಪಟಾಲಂ ಪೊಲೀಸರು ಮತ್ತು ವಾನರ ಸೇನೆಗಳ ದಾಳಿಯಿಂದ ತತ್ತರಿಸಿರುವ ಮುಸಲ್ಮಾನರು ಕಾಂಗ್ರೆಸ್ ಪಕ್ಷದ ಬಗ್ಗೆ ನಂಬಿಕೆ ಕಳೆದುಕೊಂಡು, ತಮ್ಮನ್ನು ಪೊರೆಯುವ ಭರವಸೆ ನೀಡುವ ಪಕ್ಷಗಳತ್ತ ಮುಖ ಮಾಡಿದ್ದಾರೆ. ಅಮಾಯಕ ಹುಡುಗರನ್ನು ಶಂಕಿಸಿ, ಬಂಧಿಸಿ, ಅಪರಾಧಿಗಳನ್ನಾಗಿ ಮಾಡುತ್ತಿರುವ ಪೊಲೀಸರು ಮತ್ತು ಸರ್ಕಾರದ ವಿರುದ್ಧ ದೇವೇಗೌಡರು ಗುಟುರಾದರೂ ಹಾಕುತ್ತಾರೆ. ಅದಕ್ಕೆ ಹೋಲಿಸಿದರೆ ಕಾಂಗ್ರೆಸ್ ಉಸಿರೇ ಬಿಡುವುದಿಲ್ಲ. ಇಂಥ ಸಮಯದಲ್ಲಿ ಮುಸಲ್ಮಾನರು ಜೆಡಿಎಸ್‌ನ್ನು ಅಪ್ಪಿಕೊಂಡು ಅದಾಗಲೇ ಈದ್ ಮುಬಾರಕ್ ವಿಶ್ ಮಾಡಿಕೊಂಡಾಗಿದೆ. ಮುಸಲ್ಮಾನರು ನೀಡಿದ ದಾವತ್‌ಗೆ ಜಮೀರ್‌ನೆಂಬ ಖಾಜಿಯೊಂದಿಗೆ ಜೆಡಿಎಸ್ ಅಣಿಯಾಗಿಬಿಟ್ಟಿದೆ. ಈ ಸಲದ ಬಕ್ರೀದ್‌ನಲ್ಲಿ ಕುರ್ಬಾನಿಯ ಕುರಿಗಳು ಅದೆಷ್ಟು ಬೀಳಲಿವೆಯೋ ಏನೋ?

ಜೆಡಿಎಸ್ ತೊರೆದು ಕಾಂಗ್ರೆಸ್ ಪಾಲಾಗಿದ್ದ ಕೊಪ್ಪಳ ಜಿಲ್ಲೆಯ ಗಂಗಾವತಿಯ ಇಕ್ಬಾಲ್ ಅನ್ಸಾರಿಯನ್ನು ಕುಮಾರಣ್ಣ ಮೊನ್ನೆ ತಾನೇ ಮತ್ತೆ ಭಾಯಿಜಾನ್ ಅಂತ ಅಪ್ಪಿಕೊಂಡಾಗಿದೆ. ಅನ್ಸಾರಿ ಕೂಡಾ ಇಂಕಿಲಾಬ್ ಹೇಳಿದ್ದಾರೆ. ಇವರ ಪಕ್ಕದಲ್ಲೇ ಇದ್ದ ಜಮೀರ್ ಜಿಂದಾಬಾದ್ ಎಂದು ಕೂಗು ಹಾಕಿದ್ದಾನೆ.


ಲಿಂಗಾಯತರ ಅಖಾಡ ಆಗಿಹೋಗಿರುವ ಉತ್ತರ ಕರ್ನಾಟಕದಲ್ಲಿ ಜೆಡಿಎಸ್ ಏದುಸಿರುಬಿಡುತ್ತಿತ್ತು. ಈಗ ಅದರ ಶ್ವಾಸ ಕೊಂಚ ನಿರಾಳವಾಗಿರುವ ಯೋಗಲಕ್ಷಣಗಳು ಕಂಡುಬರುತ್ತಿವೆ. ಕೋಮುವಾದಿಗಳೊಂದಿಗೆ ಕೈ ಜೋಡಿಸಿ 'ಅರ್ಜೆಂಟ್ ಕ್ರಾಂತಿ' ಮಾಡಿಕೊಂಡಿದ್ದ ಕುಮಾರಣ್ಣ ಮುಖ್ಯಮಂತ್ರಿಯಾಗಿದ್ದಾಗ "ನನಗೆ ಸೆಕ್ಯೂಲರ್ ಶಬ್ದದ ಅರ್ಥ ಗೊತ್ತಿಲ್ಲ" ಅಂದಿದ್ದರು. ಈಗ ಜಾತ್ಯತೀತ ಪದವನ್ನೇ ಉರು ಹೊಡೆಯುತ್ತಿದ್ದಾರೆ. ಮೊನ್ನೆ ಮೊನ್ನೆ ತಾನೆ ಬಿಜೆಪಿಯಿಂದ ಜೆಡಿಎಸ್‌ಗೆ ವಲಸೆ ಬಂದು ಹಸಿರು ಟಾವೆಲ್ ಹಿಡಿದಿರುವ ಬಸವನಗೌಡ ಪಾಟೀಲ್ ಯತ್ನಾಳನೂ ಜಾತ್ಯತೀತ ಭಾಷಣ ಬಿಗಿಯಲು ಯತ್ನಿಸುತ್ತಿದ್ದಾನೆ.

ಯತ್ನಾಳರನ್ನು ತಮ್ಮ ಪಕ್ಷಕ್ಕೆ ಎತ್ತಾಕಿಕೊಂಡಿದ್ದರಿಂದ ಲಿಂಗಾಯತರು ಜೆಡಿಎಸ್ ಅಪ್ಪಿಕೊಳ್ಳುತ್ತಾರೆ ಎಂಬುದು ಕುಮಾರಣ್ಣನ ಲೆಕ್ಕಾಚಾರವಾಗಿತ್ತು. ಆದರೆ, ಜಮೀದಾರಕ್ಕೇನೂ ಕಮ್ಮಿಯಿಲ್ಲ ಎಂಬಂತೆ ಶಿವದಾರ ಮುಸೆಯುತ್ತಿರುವ ಲಿಂಗಾಯತರು ಕುಮಾರಣ್ಣನಿಗೆ ಥ್ಯಾಂಕ್ಸ್ ದಿಲ್‌ಖುಷ್ ಎಂದು ಹಾದಿ ತಿರುಗಿಸಿಬಿಟ್ಟಿದ್ದಾರೆ. ಲಿಂಗಾಯತರ ಏಕಚಕ್ರಾಧಿಪತಿಯಂತೆ ವರ್ತಿಸುತ್ತಿರುವ ಯಡ್ಡಿಯನ್ನು ಲಿಂಗಾಯತರು ಆತಂಕದಿಂದ ನೋಡುತ್ತಿದ್ದಾರೆ. ಯಡ್ಡಿ ತನ್ನ ಉಳಿವಿಗಾಗಿ ಯಾವುದಾದರೂ ರಾಷ್ಟ್ರೀಯ ಪಕ್ಷದ ಆಶ್ರಯ ಪಡೆಯಬೇಕಾಗಿರುವ ತುರ್ತಿನ ಲೆಕ್ಕಾಚಾರದಲ್ಲಿದ್ದಾರೆ.



ಸ್ಥಳೀಯವಾಗಿಯೂ ಕಾಂಗ್ರೆಸ್‌ನಲ್ಲಿರುವ ಒಳಜಗಳ, ಗುಂಪುಗಾರಿಕೆ, ಕಬಡ್ಡಿ ಪಂದ್ಯಾವಳಿಗಳಿಂದಾಗಿ ಚುನಾವಣೆ ಸಮೀಪಿಸುತ್ತಿರುವ ಈ ಸಂದರ್ಭದಲ್ಲಿ ಹಲವರು ಕಾಂಗ್ರೆಸ್ ತೊರೆದು ಜೆಡಿಎಸ್ ಸೇರುತ್ತಿದ್ದಾರೆ. ತೆನೆಹೊತ್ತ ರೈತ ಮಹಿಳೆಯ ನಡು ನೆಟ್ಟಗಾಗುವ ಕಾಲ ಬಂದೇಬಿಟ್ಟಿದೆ ಎಂದು ಜಮೀರ್ ಪುಳಕಗೊಳ್ಳುತ್ತಿದ್ದಾರೆ.

ಈ ಸಂದರ್ಭದಲ್ಲಿ ದೇವೇಗೌಡರ ಸನ್ಮಾನ ಕಾರ್ಯಕ್ರಮ, ಕುಮಾರಣ್ಣನ ರೋಡ್ ಶೋ...... ಎಲ್ಲವೂ ಉತ್ತರ ಕರ್ನಾಟಕದ ಗಡಿಯಲ್ಲಿ ಜೆಡಿಎಸ್ ನಡೆಸುತ್ತಿರುವ ಕವಾಯಿತು. ಹನುಮಂತಪ್ಪ ಆಲ್ಕೋಡ್ ಎಂಬ ವಲಸೆ ಗಿರಾಕಿಯನ್ನು ಮುಂದುಮಾಡಿಕೊಂಡು ಕುಮಾರಣ್ಣ ರೋಡ್ ಶೋ ನಡೆಸುವ ಅಗತ್ಯಗಳೇನಿವೆಯೋ ಗೊತ್ತಿಲ್ಲ. ಆದರೆ, ಈ ಬಾರಿ ಹುಬ್ಬಳ್ಳಿ-ಧಾರವಾಡದ ಪೂರ್ವ ವಿಧಾನಸಭಾ ಕ್ಷೇತ್ರದ ಟಿಕೆಟು ತನಗೇ ಖಾತ್ರಿ




ಹನುಮಂತಪ್ಪ ಹಾಲ್ಕೋಡ್



ಪಿ.ಸಿ.ಸಿದ್ದನಗೌಡರ್



ರಾಜಣ್ಣ ಕೊರ್ವಿ



ಬಸವರಾಜ್ ಹೊರಟ್ಟಿ

ಎಂದುಕೊಂಡಿರುವ ಈ ಆಲ್ಕೋಡ ಹುಬ್ಬಳ್ಳಿಯ ಐಬಿಯನ್ನೇ ತನ್ನ ಕೇರಾಫ್ ಅಡ್ರೆಸ್ ಮಾಡಿಕೊಂಡು ಕುಂತಿದ್ದಾನೆ. ಇವನ ಹಕೀಕತ್ತು ಹರ್ಕತ್ತುಗಳನೆಲ್ಲಾ ಬಲ್ಲ ಸ್ಥಳೀಯ ಸುಪ್ರಿಮೋಗಳಾದ ಹೊರಟ್ಟಿ, ಪಿ.ಸಿ.ಸಿದ್ದನಗೌಡ್ರು, ಜಿಲ್ಲಾಧ್ಯಕ್ಷ ಮುಜಹಿದ್ ಕಂಟ್ರಾಕ್ಟರ್, ಮಹಾನಗರ ಅಧ್ಯಕ್ಷ ರಾಜಣ್ಣ ಕೊರವಿ ತರಹದ ಘಟಾನುಘಟಿಗಳನ್ನು ಹೇಳದೆಕೇಳದೆ ಕುಮಾರಣ್ಣ ಎರಡು ದಿನಗಳ ಮಟ್ಟಿಗೆ ಹುಬ್ಬಳ್ಳಿಯಲ್ಲಿ ಸುತ್ತಾಡಿ ಹವಾ ಎಬ್ಬಿಸಿ ಹೋಗಿದ್ದಾರೆ. ಈ ಆಲ್ಕೋಡನ ಜಾತಕ ಇಟ್ಟುಕೊಂಡು ಹೊರಟ್ಟಿ ಮತ್ತು ಪಿ.ಸಿ.ಸಿದ್ದನಗೌಡ್ರು ಏನೇನನ್ನೊ ಜಾಲಾಡುತ್ತಿದ್ದಾರಂತೆ. ಸಮಯ ಬಂದಾಗ ಅವರು ಜಾಲಾಡಿದ ಜಾತಕವನ್ನು ಹೊರತೆಗೆಯಲಿದ್ದಾರೆ. ಈಗ ಆಲ್ಕೋಡನ ಆಲೋಪತಿ ಮುಲಾಮಿಗೆ ತಲೆದೂಗುತ್ತಿರುವ ಕುಮಾರಣ್ಣ ನಂತರ ತೆನೆಯ ಹೊರೆಯನ್ನು ಯಾರ ಮೇಲೆ ಹೊರಿಸುತ್ತಾರೋ ನೋಡಬೇಕು.

ಜಾತ್ಯತೀತ ಜನತಾ ದಳದ ಹುರಿಯಾಳುಗಳು ಈ ಭಾಗದಲ್ಲಿ ಜೆಡಿಎಸ್‌ಅನ್ನು ಬಲಪಡಿಸುತ್ತಿರುವುದೇನೋ ಪಕ್ಷದ ಹಿತದೃಷ್ಟಿಯಿಂದ ಸರಿ. ಆದರೆ, ಬಿಜೆಪಿ-ಕಾಂಗ್ರೆಸ್‌ನಿಂದ ಅತೃಪ್ತರಾಗಿ ವಲಸೆ ಬಂದಿರುವ ಗಿರಾಕಿಗಳಿಗೆ ಟಿಕೆಟು ಕಲ್ಪಿಸಲಿರುವ ಕುಮಾರಣ್ಣ ಬಿಜೆಪಿಯ ಗೆಲುವಿಗೆ ರಹದಾರಿ ತೋರಿದಂತಾಗುತ್ತದೆಯಲ್ಲವೇ! ಪಕ್ಷಾಂತರಿಗಳನ್ನು ಜನ ತಿರಸ್ಕರಿಸುತ್ತಿದ್ದಾರೆ. ಯಾವುದೇ ಪಕ್ಷದಲ್ಲಿದ್ದರೂ ಜನಪರ ಕೆಲಸಗಳನ್ನು ಮಾಡದೆ ಸದಾ ತಮ್ಮ ವೈಯಕ್ತಿಕ ಅತೃಪ್ತಿಗಳಿಂದ ಪಕ್ಷಾಂತರ ಮಾಡುವ ಇಂಥಾ ಗಿರಾಕಿಗಳು ಗೆಲುವ ಲಕ್ಷಣಗಳಂತೂ ಇಲ್ಲದಿಲ. ಇಲ್ಲಿ ಕುಮಾರಣ್ಣನ ನಡೆ ನಿರ್ಣಾಯಕ ಪಾತ್ರ ವಹಿಸಲಿದೆ.

ಕಳೆದ ಬಾರಿ ಶಿರಹಟ್ಟಿ ವಿಧಾನಸಭಾ ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಆಲ್ಕೋಡನ ಡಿಪಾಜಿಟ್ಟೆ ಜಪ್ತಾಗಿತ್ತು, ಅದಕ್ಕೂ ಮುನ್ನ ಆದು ಹೇಗೋ ದೇವೇಗೌಡರ ಆಶೀರ್ವಾದದಿಂದ ವಿಧಾನ ಪರಿಷತ್ ಸದಸ್ಯನ ಸ್ಥಾನ ಅಲಂಕರಿಸಿದ್ದ ಆಲ್ಕೋಡ 2004ರಲ್ಲಿ ರಾಯಚೂರು ಜಿಲ್ಲೆಯ ದೇವದುರ್ಗದಿಂದ ಸ್ಪರ್ಧಿಸಿ ಗೆದ್ದು ಬಂದಿದ್ದ. ಆಗ ಗೌಡರ ಕೃಪೆಯಿಂದ ಆತನಿಗೆ ಮಂತ್ರಿಗಿರಿಯೂ ಸಿಕ್ಕಿತ್ತು. ಮಂತ್ರಿ ಆಗಿದ್ದಾಗ ತನ್ನ ಥೈಲಿ ತುಂಬಿಕೊಳ್ಳುವ ಕೆಲಸವೊಂದನ್ನು ಬಿಟ್ಟು ಬೇರೇನೂ ಮಾಡದಿದ್ದುದೇ ಈತನ ಸಾಧನೆ. ಈಗ ಕ್ಷೇತ್ರದ ಜನ ಈತನ ಹೆಸರು ಹೇಳಿದರೆ ಶಾಪ ಹಾಕುತ್ತಿದ್ದಾರೆ. ಇನ್ನು ಓಟ್ ಹಾಕುವ ಮಾತು ದೂರ. ಹಾಗಾಗಿ ಈತ ಈಗ ಹುಬ್ಬಳ್ಳಿಗೆ ಬಂದು ವಕ್ಕರಿಸಿದ್ದಾನೆ. ಹುಬ್ಬಳ್ಳಿ ಜನ ಹೇಗೋ ಏನೋ ಅಂತ ಪಿಳಿಪಿಳಿ ನೋಡುತ್ತಿದ್ದಾರೆ.

ಪಿ.ಸಿ.ಸಿದ್ದನಗೌಡನಿಗೆ ಜೆಡಿಎಸ್‌ನಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ ಸ್ಥಾನ ಕೊಟ್ಟರೂ ಆತ ಕಿಸಿದಿದ್ದು ಅಷ್ಟರಲ್ಲೇ ಇದೆ. ತನ್ನ ಅಳಿಯನೆದುರೇ ಸೋತು ಕಲಘಟಗಿಯಲ್ಲಿ ನೆಲೆ ಕಳೆದುಕೊಂಡಿರುವ ಸಿದ್ಧನಗೌಡನಿಗೆ ಟಿಕೆಟು ಕೊಡುವುದೇ ವೇಸ್ಟು ಎಂದು ಕಾರ್ಯಕರ್ತರೇ ಹೇಳುತ್ತಿದ್ದಾರೆ. ಹೊರಟ್ಟಿಯ ಬಲಗೈನಂತಿದ್ದ ನವಲಗುಂದದ ಎನ್.ಎಚ್.ಕೋನರೆಡ್ಡಿ ಧಾರವಾಡದಲ್ಲಿ ಮನೆ ಕಟ್ಟಿಕೊಂಡು ಅಲ್ಲೇ ತಳವೂರಿದ್ದಾನೆ. ಇನ್ನು ರಾಜಣ್ಣ ಕೊರವಿ ಪಾಲಿಕೆಗಷ್ಟೇ ಸೀಮಿತ. ಮುಜಾಹಿದ ಕಂಟ್ರಾಕ್ಟರ ಹೆಸರಿಗಷ್ಟೆ ಅಧ್ಯಕ್ಷ. ಕಳೆದ ಬಾರಿ ಧಾರವಾಡ ಶಹರದಿಂದ ಸ್ಪರ್ಧಿಸಿದ್ದ ಇಸ್ಮಾಯಿಲ್ ತಮಾಟಗಾರ ಈ ಬಾರಿ ಗ್ರಾಮೀಣ ಕ್ಷೇತ್ರಕ್ಕೆ ವಲಸೆ ಹೋಗುವ ಮೂಲಕ ಬಿಜೆಪಿಯ ಸೀಮಾ ಮಸೂತಿಗೆ ಸುಲಭದ ದಾರಿ ಮಾಡಿಕೊಡುವಂತೆ ಕಾಣುತ್ತಿದೆ.

ಈ ಮಧ್ಯೆ ಜಿಲ್ಲಾ ಪಂಚಾಯತಿಯ ಮಾಜಿ ಉಪಾಧ್ಯಕ್ಷ ನಿಜನಗೌಡ ಪಾಟೀಲನೂ ಧಾರವಾಡ ಶಹರದಿಂದ ಸ್ಪರ್ಧೆಗೆ ತಯಾರಿ ನಡೆಸಿದ್ದಾನೆ. ಬಿಜೆಪಿ ಸಂಸದ ಪ್ರಹ್ಲಾದ ಜೋಶಿ ತನ್ನ ಲೋಕಸಭಾ ಸ್ಥಾನವನ್ನು ಅನಂತಕುಮಾರರಿಗೆ ಬಿಟ್ಟುಕೊಟ್ಟು ಈ ಭಾಗದಿಂದ ಸ್ಪರ್ಧಿಸುವ ಸೂಚನೆಗಳಿವೆ. ಇದರ ಅರ್ಥ ಬಿಜೆಪಿಯ ಬೆಲ್ಲದ ಎಂಬ ಅಜ್ಜನ ಎಮ್ಮೆಲ್ಲೆಗಿರಿಯ ಅವಧಿ ಇದೇ ಕೊನೆ...

ಈ ಹಿಂದಿನ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸಿದ್ದ ಶಿವು ಹಿರೇಕೆರೂರ ಈಗ ನೇಪಥ್ಯಕ್ಕೆ ಸರಿದಿದ್ದಾನೆ. ಅವನ ಸಹೋದರ ಸಂತೋಷ ಹಿರೇಕೆರೂರ ಕಾಂಗ್ರೆಸ್ ಸೇರಿದ್ದಾನೆ. ರಿಯಲ್ ಎಸ್ಟೇಟ್ ಕುಳ ಹನುಮಂತಪ್ಪ ಬಂಕಾಪುರ ಎಂಬಾತ ಈ ಮೊದಲು ಕಾಂಗ್ರೆಸ್‌ನಲ್ಲಿದ್ದ. ಅನಂತರ ಕುಮಾರಣ್ಣನ ಸಮ್ಮುಖದಲ್ಲಿ ಜೆಡಿಎಸ್‌ಗೆ ಸೇರ್ಪಡೆಗೊಂಡಿದ್ದ. ಈತ ದಲಿತ ಕಾರ್ಮಿಕರ ಸಂಘವೊಂದನ್ನು ಸ್ಥಾಪಿಸಿ ತಿರುಗುತ್ತಿದ್ದ. ಆದರೆ ಆಲ್ಕೋಡನ ಹವಾ ಪ್ರಾರಂಭವಾದಾಗಿನಿಂದ ಅದ್ಯಾಕೋ ಈತ ಮನೆ ಸೇರಿಬಿಟ್ಟಿದ್ದಾನೆ.

ಆಲ್ಕೋಡ್ ಗುಂಪಿಗೆ ಹೊನ್ನಳ್ಳಿ ಬೆಂಬಲ

ಇತ್ತೀಚೆಗೆ ಅಂಜುಮನ್ ಸಂಸ್ಥೆಯ ಚುನಾವಣೆಯಲ್ಲಿ ಗೆದ್ದ ಮಾಜಿ ಸಚಿವ ಜಬ್ಬಾರ್ ಖಾನ್ ಹೊನ್ನಳ್ಳಿ ಹಾಗು ಅಂಜುಮನ್‌ನ ಉಪಾಧ್ಯಕ್ಷರಾಗಿರುವ ಇಸ್ಮಾಯಿಲ್ ಕಾಲೆಬುಡ್ಡೆ ಈಗ ಜೆಡಿಎಸ್‌ನಲ್ಲಿದ್ದಾರೆ. ಎಚ್.ಕೆ.ಪಾಟೀಲರನ್ನು ಮತ್ತು ಹಿಂಡಸಗೇರಿ ಗುಂಪನ್ನು ತನ್ನ ಆಜನ್ಮ ಶತ್ರುಗಳೆಂದು ಬಗೆಯುವ ಹೊನ್ನಳ್ಳಿ ಅವರನ್ನೆಲ್ಲ ವಿರೋಧಿಸುತ್ತಾ ಬಂದಿದ್ದಾರೆ. ಇದೊಂದೆ ಕಾರಣಕ್ಕೆ ಹೊನ್ನಳ್ಳಿಯನ್ನು ಡಿ.ಕೆ.ಶಿವಕುಮಾರ ಬೆಂಬಲಿಸುತ್ತಿದ್ದಾರೆ. ಹಿಂಡಸಗೇರಿ ಗುಂಪಿನ ಎಫ್.ಎಚ್.ಜಕ್ಕಪ್ಪನವರ ಕಳೆದ ಬಾರಿ ಹುಬ್ಬಳ್ಳಿಯ ಮೀಸಲು ಕ್ಷೇತ್ರದಿಂದ ಸ್ಪರ್ಧಿಸಿ ಸೋತಿದ್ದರು. ಇವರ ಸೋಲಿನ ಹಿಂದೆ ಇದೇ ಹೊನ್ನಳ್ಳಿಯ ಕೈ ಕೆಲಸ ಮಾಡಿತ್ತು. ಈಗ ಬರುವ ಚುನಾವಣೆಯಲ್ಲಿ ಆಲ್ಕೋಡ್ ಹನುಮಂತಪ್ಪನನ್ನು ಬೆಂಬಲಿಸುವಂತೆ ತನ್ನ ಶಿಷ್ಯರಿಗೆ ಹೊನ್ನಳ್ಳಿ ಸೂಚಿಸಿದ್ದಾರೆ. ಹುಬ್ಬಳ್ಳಿಯಲ್ಲಿ ನಡೆದ ಕುಮಾರಣ್ಣನ ರೋಡ್ ಶೋ, ಮಸೀದಿ-ಚರ್ಚುಗಳ ಭೇಟಿ, ಸಭೆಗಳಿಗೆಲ್ಲ ಜನರನ್ನ ಕಳಿಸಿದ್ದು ಕೂಡ ಹೊನ್ನಳ್ಳಿ ಸಾಹೇಬರೇ ಎಂಬುದು ರಹಸ್ಯವಾಗಿ ಉಳಿದಿಲ್ಲ.

ಹೇಗಿದ್ದರೂ ಆಲ್ಕೋಡ ಸೋಲುವುದು ಗ್ಯಾರಂಟಿ. ಇನ್ನು ಹೊನ್ನಳ್ಳಿಯೇ ಜಕ್ಕಪ್ಪನಿಗೆ ಅಡ್ಡಗಾಲು ಹಾಕಿ ಉರುಳಿಸುತ್ತಾನೆ. ಇದೆಲ್ಲವರ ನಡುವೆ ಹಾಲಿ ಬಿಜೆಪಿಯ ಶಾಸಕ ವೀರಭದ್ರಪ್ಪ ಹಾಲಹರವಿ ಗೆಲುವಿಗೆ ಸಮೀಪವಾಗುತ್ತಿದ್ದಾನೆ. ಪಕ್ಷ ಬಲಪಡಿಸುವ ಭರದಲ್ಲಿ ಅನೇಕ ತಪ್ಪುಗಳನ್ನು ಮಾಡುತ್ತಿರುವ ಜೆಡಿಎಸ್ ಮತ್ತು ಕಾಂಗ್ರೆಸ್ ಪಕ್ಷಗಳೇ ಬಿಜೆಪಿಯ ಗೆಲುವಿಗೆ ದಾರಿ ಮಾಡಿಕೊಡುತ್ತಿವೆ.

● **ಹುಬ್ಬಳ್ಳಿಯಾಂವ**

ಗಣೇಶನ ಜೊತೆಗಿರುವ ಗೌರಿಗೆ ರೇಷ್ಮೆ ಬಟ್ಟೆ ಉಟಿಸಕೂಡದು. ಕಾರಣ ಹುಳುಗಳನ್ನು ಜೀವಂತ ಬೇಯಿಸಿ ತಯಾರಿಸಿದ ರೇಷ್ಮೆ ಬಟ್ಟೆ ವಿಪರೀತ ತಾಮಸ ಗಣ ಹೊಂದಿರುತ್ತದ, ಅದು ಪೂಜೆಗೆ ಯೋಗ್ಯವಲ್ಲ. ಗೌರಿಯ ಮೂಗಿಗೆ ಮರಾಠಿಗರಂತಹ ದೊಡ್ಡ ಮೂಗುತಿ ವರ್ಜ್ಯ, ಕಾರಣ ಈ ದೊಡ್ಡ ಮೂಗುತಿ ಈಜಿಪ್ಟ್ ಮೂಲದ್ದು, ಪರ್ಶಿಯಾ ಮೂಲಕ ಮೊಘಲರ ಕಾಲದಲ್ಲಿ ಭಾರತಕ್ಕೆ ಬಂದದ್ದು, ವೇದಕಾಲದಲ್ಲಿ ಇವೆಲ್ಲ ಇರಲಿಲ್ಲ. ಗೌರಿಗೆ ಹಸಿರು ಗಾಜಿನ ಬಳೆಗಳೂ ವರ್ಜ್ಯ, ಕಾರಣ ಗಾಜನ್ನು ಕಂಡುಹಿಡಿದವರು ಹಾವು ತಿನ್ನುವ ಚೀನಾ ದೇಶದವರು, ಭಾರತಕ್ಕೆ ಗಾಜು ಬಂದಿದ್ದು 5ನೇ ಶತಮಾನದಲ್ಲಿ. ಅದಕ್ಕೆ ಮೊದಲು ಭಾರತೀಯರು ಮುಖ ನೋಡಲು ನೀರಿನ ತಾಟು ಅಥವಾ ನಯವಾದ ಹರಿವಾಣ ಬಳಸುತ್ತಿದ್ದರು.

ಅಪ್ರಸ್ತುತವಾಗಿರುವ ಗಣೇಶೋತ್ಸವ

ವಿಶೇಷ ಲೇಖ

● ಪ್ರವೀಣ್ ಎಸ್. ಶೆಟ್ಟಿ

ಮಳೆ ಎಂದೋ ನಿಂತಿದೆ. ನಾವು ಮನೆಯೊಳಗೆ ಬಂದಾಗಿದೆ. ಆದರೂ ನಾವು ಕೊಡೆ ಬಿಡಿಸಿ ಹಿಡಿದುಕೊಂಡಿರಬೇಕೇ? ಕೋಲ ಮುಗಿದು ಒಂದು ಯುಗವಾದರೂ ವೇಷ-ಮುಖವಾಡ ಕಳಚಬಾರದೇ? ಹೌದು, ಇದು ಸಾರ್ವಜನಿಕ ಗಣೇಶ ಚತುರ್ಥಿಗೆ ಅನ್ವಯ. ಲೋಕಮಾನ್ಯ ತಿಲಕರು ಸ್ವಾತಂತ್ರ್ಯ ಹೋರಾಟಗಾರರು ಬ್ರಿಟಿಷ್ ಏಜೆಂಟರ ಗಮನಕ್ಕೆ ಬಾರದಂತೆ ಒಂದೆಡೆ ಸೇರಲು ಅನುವಾಗಲೆಂದು ಸಾರ್ವಜನಿಕ ಗಣೇಶೋತ್ಸವವನ್ನು 1894 ರಲ್ಲಿ ಪ್ರಾರಂಭಿಸಿದರು, ಇದರಲ್ಲಿ ಅವರಿಗೆ ಯಾವುದೇ ಧಾರ್ಮಿಕ ಉದ್ದೇಶವೇ ಇರಲಿಲ್ಲ, ಆದರೂ ತಿಲಕರ ಸಮಕಾಲೀನ



ಸ್ವಾತಂತ್ರ್ಯ ಹೋರಾಟಗಾರರು ಹಾಗೂ ತಿಲಕರಂತೇ ಚಿತ್‌ಪಾವನ ಬ್ರಾಹ್ಮಣರಾಗಿದ್ದ ಗೋಖಲೆ ಹಾಗೂ ರಾನಡೆ ಇವರು ತಮ್ಮ ಕುಲದೇವರನ್ನೇ ಬೀದಿಗಿಳಿಸಿದ್ದನ್ನು ಆಕ್ಷೇಪಿಸಿದಾಗ ತಿಲಕರು ಹೇಳಿದ್ದು ಒಂದೇ-"ಇದು ಕೇವಲ ಸ್ವಾತಂತ್ರ್ಯ ಸಂಗ್ರಾಮದಲ್ಲೊಂದು ಆಯುಧ ಅಷ್ಟೇ. ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕ ಕೂಡಲೇ ಗಣೇಶೋತ್ಸವದ ಮೂಲ ಉದ್ದೇಶವೇ ಮುಕ್ತಾಯವಾಗಿ ಅದು ತಾನೇತಾನಾಗಿ ನಿಲ್ಲುತ್ತದೆ." ಆದರೆ ಅವರ ಈ ನಿರೀಕ್ಷೆ ಹುಸಿಯಾಗಿದ್ದನ್ನು ನೋಡಲು ಅವರು ಜೀವಂತ ಉಳಿಯಲಿಲ್ಲ, 1920 ರಲ್ಲೇ ಅವರು ತೀರಿಕೊಂಡರು. ಈ ವಿಷಯಕ್ಕೆ ಸಾಕ್ಷಿಯಾಗಿದ್ದ ಗೋಖಲೆ ಹಾಗೂ ರಾನಡೆ ಎಂಬ ಸ್ವಾತಂತ್ರ್ಯ ಹೋರಾಟಗಾರರೂ ತಿಲಕರಿಗಿಂತ ಮುಂಚೆಯೇ ತೀರಿಕೊಂಡಿದ್ದರು.

ತಾವು ಪ್ರಾರಂಭಿಸಿದ ಸಾರ್ವಜನಿಕ ಗಣೇಶೋತ್ಸವ ಈಗ ಸ್ವತಂತ್ರ ಭಾರತದಲ್ಲಿ ಪಡೆದಿರುವ ವಿಕಾರ ಸ್ವರೂಪ ಕಂಡು ತಿಲಕರ ಆತ್ಮ ಅದೆಷ್ಟು ನೊಂದುಕೊಳ್ಳುತಿದೆಯೋ? ಮುಂಬೈ ಮಹಾನಗರವೊಂದರಲ್ಲೇ ಸುಮಾರು 500 ಕ್ಕೂ ಹೆಚ್ಚು ಸಾರ್ವಜನಿಕ ಗಣೇಶೋತ್ಸವಗಳು ಸ್ಥಾಪನೆಯಾಗಿ ಅಖಂಡ 11 ದಿನ ನಡೆಯುತ್ತವೆ. ಇದರಲ್ಲಿ ಅರ್ಧದಷ್ಟು ಗಣೇಶಗಳು ಭೂಗತ ಜಗತ್ತಿನ ಪಂಟರ್‌ಗಳಿಂದ ಸ್ಥಾಪಿತವಾದರೆ, ಇನ್ನುಳಿದ ಅರ್ಧ ಜಾತಿವಾದಿ ರಾಜಕೀಯ ನೇತಾರರಿಂದ ಸ್ಥಾಪಿತವಾದವುಗಳು. ಸ್ವಯಂಸೇವಕರು ಎಂದು ಹೇಳಿಕೊಂಡು ಸಾರ್ವಜನಿಕರಿಂದ ಬಲಾತ್ಕಾರದ ಚಂದಾ ವಸೂಲಿಗಿಳಿಯುವವರೆಲ್ಲಾ ಅರೆಸಾಕ್ಷರ ಪಡ್ಡೆಗಳು. ಮುಂಬೈ ಒಂದರಲ್ಲೇ ನೂರು ಕೋಟಿಗೂ ಮಿಕ್ಕ ಕಲೆಕ್ಷನ್ ಆಗುತ್ತದೆ. ಇದಕ್ಕೆ ಲೆಕ್ಕಪಕ್ಕ ಆಡಿಟಿಂಗ್ ಒಂದೂ ಇಲ್ಲ.

ಭಾರತದ ಧಾರ್ಮಿಕ ಇತಿಹಾಸ ನೋಡಿದಾಗ ಒಂದು ವಿಷಯ ಬಹಳವಾಗಿ ಗಮನ ಸೆಳೆಯುತ್ತದೆ. ಅದೇನೆಂದರೆ ಶಿವನು ಉತ್ತರ ಭಾರತ ಹಾಗೂ ಮಹಾರಾಷ್ಟ್ರದಲ್ಲಿ ಅತ್ಯಂತ ಜನಪ್ರಿಯ ದೇವರಾಗಿದ್ದರೂ, ಪಾರ್ವತಿಯನ್ನೂ ಬೇರೆ-ಬೇರೆ ರೂಪದಲ್ಲಿ ಉತ್ತರ ಭಾರತ ಹಾಗೂ ಮಹಾರಾಷ್ಟ್ರದಲ್ಲಿ ಬಹಳವಾಗಿ ಪೂಜಿಸುತ್ತಿದ್ದರೂ, ಅವರ ಮಕ್ಕಳಾದ ಕಾರ್ತಿಕೇಯ ಹಾಗೂ ಗಣಪತಿಗೆ ಅಲ್ಲಿ ಪ್ರಾಮುಖ್ಯತೆ ಇರಲೇ ಇಲ್ಲ, ಹಾಗಾಗಿ ಉತ್ತರ ಭಾರತ ಹಾಗೂ ಮಹಾರಾಷ್ಟ್ರದಲ್ಲಿ ಪುರಾತನ ಗಣಪತಿ ದೇವಸ್ಥಾನಗಳು ತುಂಬಾ ವಿರಳ ಮತ್ತೂ ಕಾರ್ತಿಕೇಯ (ಸುಬ್ರಹ್ಮಣ್ಯ) ದೇವಸ್ಥಾನವಂತೂ ಒಂದೂ ಇಲ್ಲ. ಮಹಾರಾಷ್ಟ್ರದಲ್ಲಿ ಎರಡು-ಮೂರು ಪ್ರಸಿದ್ಧ ಗಣಪತಿ ದೇವಸ್ಥಾನಗಳು ಈಗ ಇವೆಯಾದರೂ ಅವು ಪೇಶ್ವೆ ರಾಜರ ಕಾಲದಲ್ಲಿ ಕಟ್ಟಿಸಿದವುಗಳು. ಕಾರಣ ಚಿತ್‌ಪಾವನ ಬ್ರಾಹ್ಮಣರಾಗಿದ್ದ ಪೇಶ್ವೆಗಳ ಕುಲದೇವರು ಗಣೇಶನಾಗಿದ್ದ. ಇದಕ್ಕಿಂತ ಮುಂಚಿನ ಗಣೇಶ ದೇವಳಗಳು ಮಹಾರಾಷ್ಟ್ರದಲ್ಲೆಲ್ಲೂ ಇಲ್ಲ. ಸುಬ್ರಹ್ಮಣ್ಯ ದೇವರ ಒಂದೂ ದೇವಳ ಮಹಾರಾಷ್ಟ್ರದಲ್ಲಿ ಇಲ್ಲವೇ ಇಲ್ಲ. ಕೇವಲ ದಕ್ಷಿಣ ಭಾರತದಲ್ಲಿ ಮಾತ್ರ ಶಿವನ ಮಕ್ಕಳಾದ ಗಣಪತಿ ಹಾಗೂ ಕಾರ್ತಿಕೇಯ ಬಹುಪುರಾತನ ಕಾಲದಿಂದಲೂ ಜನಪ್ರಿಯರಾಗಿದ್ದರು. (ಹರಿಹರ ಪುತ್ರ ಮಣಿಕಂಠ ಕೇರಳೀಯರ ಇತ್ತೀಚಿನ ಸೇರ್ಪಡೆ).

ಮಹಾರಾಷ್ಟ್ರದಲ್ಲಿ ಗಣಪತಿಯನ್ನು ಕುಲದೇವರಾಗಿ ಪೂಜಿಸುವ ಚಿತ್‌ಪಾವನರದ್ದು ಒಂದು ಸಣ್ಣ ಬ್ರಾಹ್ಮಣ ಜನಾಂಗ, ಅದೂ ಕೇವಲ ಮಹಾರಾಷ್ಟ್ರದ ಕರಾವಳಿಗೆ ಮೀಸಲಾದ ಜನಾಂಗ. ಒಳನಾಡಿನಲ್ಲಿರುವ ಮರಾಠಿ ಬ್ರಾಹ್ಮಣರಿಗೆ "ದೇಶಸ್ಥ" ಎಂದು ಕರೆಯಲಾಗುತ್ತಿದ್ದು ಇವರು ವಿಠಲ-ರುಕುಮಾಯಿ ಅಥವಾ ಮಹಾದೇವನನ್ನು ಕುಲದೇವರಾಗಿ ಹೊಂದಿದ್ದರು. ಹಾಗಾಗಿ ತಿಲಕರು ಸಾರ್ವಜನಿಕ ಉತ್ಸವಕ್ಕಾಗಿ ಗಣೇಶನನ್ನು ಆರಿಸಿದಾಗ ಅವರದೇ ಚಿತ್‌ಪಾವನ ಜಾತಿಯವರು ಆಕ್ಷೇಪಿಸಿದರೆ, ಇನ್ನುಳಿದ ಜಾತಿಯವರು ಗಣೇಶ ತಮ್ಮ ಕುಲದೇವರಲ್ಲವಾದುದರಿಂದ ಈ ಬಗ್ಗೆ ಆಸಕ್ತಿ ತೋರಿಸಲಿಲ್ಲ, ಬಹುಸಂಖ್ಯಾತರಾಗಿರುವ ಮರಾಠ ಜಾತಿಯ ಕುಲದೇವರು ಭವಾನಿ ಹಾಗೂ ಈಶ್ವರ. ಅದಾಗಲೇ ಬಂಗಾಳಿಗಳು ಕಲ್ಕತ್ತಾದಲ್ಲಿ ಕಾಳಿಯನ್ನು ಬೀದಿಗಿಳಿಸಿಯಾಗಿತ್ತು, ಹಾಗಾಗಿ ಮಹಾರಾಷ್ಟ್ರದಲ್ಲೂ ಕೆಲವರು ತಿಲಕರಿಗೆ ಕಾಳಿ, ಸರಸ್ವತಿ ಅಥವಾ ವಿಠ್ಠಲನನ್ನು ಸಾರ್ವಜನಿಕ ಉತ್ಸವಕ್ಕೆ ಬಳಸುವಂತೆ ಸೂಚಿಸಿದ್ದರೂ ತಿಲಕರು ಒಪ್ಪದೇ ತಮ್ಮ ಕುಲದೇವರನ್ನೇ ಆರಿಸಿದರು. 1894 ರಲ್ಲಿ ಇದು ಶುರುವಾದಾಗ ವಿ.ಡಿ. ಸಾವರ್‌ಕರ್ ಕೇವಲ 12 ವರ್ಷದ ಪೋರ. 15 ವರ್ಷದ ನಂತರ ಅವರು ಯುವಕರಾಗಿ ಸಾರ್ವಜನಿಕ ಕ್ಷೇತ್ರಕ್ಕೆ ಬಂದಾಗ, ಅವರೂ ಚಿತ್‌ಪಾವನ ಬ್ರಾಹ್ಮಣರಾಗಿದ್ದುದರಿಂದ ತಮ್ಮ ಕುಲದೇವರನ್ನು ಹೀಗೆ ಬೀದಿಗಿಳಿಸಿದ್ದನ್ನು ಆಕ್ಷೇಪಿಸಿದ್ದರು. ಆದರೆ ಅವರು ನಂತರ ಕಟ್ಟಾ ನಾಸ್ತಿಕರಾಗಿ ಪರಿವರ್ತಿತರಾಗಿದ್ದುದರಿಂದ ಈ ಬಗ್ಗೆ ಅವರು ಹೆಚ್ಚು ತಲೆಕೆಡಿಸಿಕೊಳ್ಳಲಿಲ್ಲ. (ನಾಸ್ತಿಕರಿಗೆ ಯಾವುದೇ ಧರ್ಮವಿರದಿದ್ದರೂ ಸಾವರ್‌ಕರರು ಹಿಂದೂ ಮಹಾಸಭಾ ಸೇರಿದ್ದು ಕೌತುಕ ಪೂರ್ಣ). ನಮ್ಮ ದೇಶದ ಎರಡು ಪ್ರಮುಖ ಸ್ವಾತಂತ್ರ್ಯ ಸೇನಾನಿಗಳ ಆಶಯ ನೆರವೇರಲೇ ಇಲ್ಲ. ಅದೆಂದರೆ, ತಿಲಕರ ಸ್ವಾತಂತ್ರ್ಯ ಬಂದ ನಂತರ ಸಾರ್ವಜನಿಕ ಗಣೇಶೋತ್ಸವ ನಿಲ್ಲಬೇಕು ಮತ್ತೂ ಜನರ ತಮ್ಮತಮ್ಮ ಮನೆಯೊಳಗೆ ಮಾತ್ರ ಗಣೇಶ ಚತುರ್ಥಿ ಆಚರಿಸಬೇಕೆಂಬ ಆಶಯ ಹಾಗೂ ಗಾಂಧೀಜಿಯ ಸ್ವಾತಂತ್ರ್ಯ ಬಂದನಂತರ ಕಾಂಗ್ರೆಸ್ ಪಕ್ಷ ವಿಸರ್ಜಿಸಬೇಕೆಂಬ ಆಶಯ. ಇವೆರಡೂ ಶಾಶ್ವತವಾಗಿ ನೆರವೇರುವಂತೆ ಕಾಣುತ್ತಿಲ್ಲ. ಅಷ್ಟೇ ಅಲ್ಲ, ದುರದೃಷ್ಟವೆಂದರೆ ಇವರಿಬ್ಬರ ಕೂಸುಗಳು ಇಂದು ಕುರೂಪವಾಗಿ ಬೆಳೆದುಬಿಟ್ಟಿವೆ.



ಲೋಕಮಾನ್ಯ ತಿಲಕರ ಸಾರ್ವಜನಿಕ ಗಣೇಶೋತ್ಸವದ ಬಗ್ಗೆ ಕೇಳಿಬಂದ ಟೀಕೆಗಳೆಂದರೆ, ಸಾರ್ವಜನಿಕ ರಸ್ತೆ-ಮೈದಾನಗಳಲ್ಲಿ ಜನರ ನಡೆದಾಡಿರುತ್ತಾರೆ, ಉಗುಳಿರುತ್ತಾರೆ, ನಾಯಿ-ಹಂದಿಗಳು ಮಲಮೂತ್ರ ವಿಸರ್ಜಿಸಿರುತ್ತವೆ. ಸಮೀಪದಲ್ಲಿ ಗಟಾರು-ತಿಪ್ಪೆಗುಂಡಿಗಳಿರುತ್ತವೆ. ಹಾಗಾಗಿ ರಸ್ತೆ ಅಥವಾ ಮೈದಾನಗಳಲ್ಲಿ ಯಾವಾಗಲೂ ಅಪವಿತ್ರ ಶಕ್ತಿಗಳು (ನೆಗೆಟಿವ್ ಎನರ್ಜಿ) ತುಂಬಿಕೊಂಡಿರುತ್ತದೆ. ಹಾಗಾಗಿ ಪವಿತ್ರ ಗಣೇಶೋತ್ಸವಕ್ಕೆ ರಸ್ತೆ-ಮೈದಾನ ಯೋಗ್ಯವಲ್ಲ. ಕೇವಲ ಸಾತ್ವಿಕರ ಮನೆಗಳು ಮಾತ್ರ ಗಣೇಶ್ ಸ್ಥಾಪನೆಗೆ ಯೋಗ್ಯ.

ಮೊದಲು ಗಣೇಶೋತ್ಸವ ಕೇವಲ ಮೂರು ದಿನಕ್ಕೆ ಮನೆಗಳಲ್ಲಿ ಸೀಮಿತವಾಗಿದ್ದಂತೆ, ಸಾರ್ವಜನಿಕ ಉತ್ಸವವನ್ನೂ 3 ದಿನಕ್ಕೇ ಸೀಮಿತಗೊಳಿಸಬೇಕು. 11, 13, 21 ದಿನ ಗಣೇಶನನ್ನು ಇಡುವುದು ಸರಿಯಲ್ಲ. ಗಣೇಶಮೂರ್ತಿಯ ತಲೆ ಬಿಳಿಯಾಗಿರುವುದು ಸರಿಯಲ್ಲ, ಕಾರಣ ಆನೆಯ ತಲೆ ಯಾವಾಗಲೂ ಕಪ್ಪು (ಬಿಳಿ ಆನೆಯೆಂಬುದು ಕೇವಲ ಶಬ್ದಕೋಶದಲ್ಲಿ ಮಾತ್ರ ಇರುವುದು). ಗಣೇಶ ಸ್ತೋತ್ರದಲ್ಲೂ ಅವನನ್ನು ಶ್ಯಾಮಲವರ್ಣ ಎನ್ನಲಾಗಿದೆ. ಪಾರ್ವತಿಯ ಮೈಯ ಕೊಳೆಯಿಂದ ಮಾಡಿರುವ ಗಣೇಶನ ದೇಹ ಸಹಾ ಕಪ್ಪು ಇರುವುದೇ ಸರಿ. ಗಣೇಶನ ಜೊತೆಗಿರುವ ಗೌರಿಗೆ ರೇಷ್ಮೆ ಬಟ್ಟೆ ಉಡಿಸಕೂಡದು. ಕಾರಣ ಹುಳುಗಳನ್ನು ಜೀವಂತ ಬೇಯಿಸಿ ತಯಾರಿಸಿದ ರೇಷ್ಮೆ ಬಟ್ಟೆ ವಿಪರೀತ ತಾಮಸ ಗಣ ಹೊಂದಿರುತ್ತದೆ, ಅದು ಪೂಜೆಗೆ ಯೋಗ್ಯವಲ್ಲ. ಗೌರಿಯ ಮೂಗಿಗೆ ಮರಾಠಿಗರಂತಹಾ ದೊಡ್ಡ ಮೂಗುತಿ ವರ್ಜ್ಯ, ಕಾರಣ ಈ ದೊಡ್ಡ ಮೂಗುತಿ ಈಜಿಪ್ಟ್ ಮೂಲದ್ದು ಪರ್ಶಿಯಾ ಮೂಲಕ ಮೊಘಲರ ಕಾಲದಲ್ಲಿ ಭಾರತಕ್ಕೆ ಬಂದದ್ದು, ವೇದಕಾಲದಲ್ಲಿ ಇವೆಲ್ಲಾ ಇರಲಿಲ್ಲ. ಗೌರಿಗೆ ಹಸಿರು ಗಾಜಿನ ಬಳೆಗಳೂ ವರ್ಜ್ಯ, ಕಾರಣ ಗಾಜನ್ನು ಕಂಡುಹಿಡಿದವರು ಹಾವು ತಿನ್ನುವ ಚ
ದೇಶದವರು, ಭಾರತಕ್ಕೆ ಗಾಜು ಬಂದಿದ್ದು
ಶತಮಾನದಲ್ಲಿ, ಅದಕ್ಕೆ ಮೊದಲು ಭಾರತೀಯರು ಮ
ನೋಡಲು ನೀರಿನ ತಾಟು ಅಥವಾ ನಯವಾದ ಹರಿ
ಬಳಸುತ್ತಿದ್ದರು. ಸೂಜಿಯಿಂದ ಹೊಲಿದ ಬಟ್ಟೆ
ದೇವರಿಗೆ ವರ್ಜ್ಯ. ಕಾರಣ ವೇದಕಾಲದಲ್ಲಿ ಭಾರತೀಯ
ಜಗತ್ತಿನಲ್ಲೇ ಅತ್ಯುತ್ತಮ ಹತ್ತಿಬಟ್ಟೆ ನೇಯುವುದು ಗೊ
ವಿನಃ ಅದನ್ನು ದೇಹದ ಆಕಾರಕ್ಕೆ ತಕ್ಕಂತೆ ಕಟ್ ಮ
ಸೂಜಿ-ನೂಲಿನಿಂದ ಹೊಲಿಯುವ ಕಲೆ ಗೊತ್ತಿರ
ಬಟ್ಟೆ ಕಟ್ ಮಾಡುವುದೂ ಅಪಶಕುನವೆನಿಸಿತ್ತು, ಲೊ
ಸೂಜಿ ಬಳಸಿ ಬಟ್ಟೆ ಹೊಲಿಯುವ ಕಲೆ ಅಲೆಕ್ಸಾಂ
ಸೈನಿಕರೊಂದಿಗೆ ಬಂದಿದ್ದ ಗ್ರೀಕ್ ಹಾಗೂ ಪರ್ಶಿಯ
ದರ್ಜಿಗಳು ಭಾರತಕ್ಕೆ ತಂದಿದ್ದು; ಅವರೂ ಹಿಂದೂಗ
ಇಲ್ಲೇ ಉಳಿದರು. ಸೀರೆಯೂ ಗ್ರೀಸ್ ಮೂಲದ್ದು ಸ
ಹಿಂದೆ ಹಾಕಿ ಎದುರಿಗೆ ನೆರಿಗೆ ಹಾಕಿ ಸೀರೆ ಉಡುತ್ತಿದ
ಗ್ರೀಸ್‌ನ ರಾಜಮನೆತನದವರು, ಅದೂ ಹೆಂಗಸ

ಗಂಡಸರು! ಇದೇ ಕಾರಣಕ್ಕೆ 2500 ವರ್ಷ ಹ
ಅಜಂತಾ ಅಥವಾ ಬೇರೆ ಭಿತ್ತಿ ಚಿತ್ರ-ಶಿಲ್ಪಗಳಲ್ಲಿ ಸೀರೆಯ
ಹೆಂಗಸರ ಚಿತ್ರಗಳೇ ಇಲ್ಲ. ಸೊಂಟದ ಮೇಲ್ಭಾಗ
ಹೆಂಗಸರು ಒಂದು ಅಡ್ಡ ಬಟ್ಟೆಯಿಂದ ಮುಚ್ಚಿ
ಗಂಡಸರು ಸೊಂಟದ ಮೇಲೆ ಬಟ್ಟೆಯೇ ಉಡುತ್ತಿರ
ಕೇವಲ ಆಭರಣಗಳಿಂದ ಶೃಂಗರಿಸುತ್ತಿದ್ದರು. ಹೊ
ಮೇಲ್ವಸ್ತ್ರಗಳು ವೇದಕಾಲದಲ್ಲಿ ಇರಲಿಲ್ಲ, ಆಂಧ್ರದ ವ
ಜನಾಂಗ ಅದನ್ನು ಇತ್ತೀಚಿನವರೆಗೂ ಪಾಲಿಸುತ್ತಿತ್ತು.

ಹನ್ನೊಂದು ದಿನಗಳ ಗಣೇಶೋತ್ಸವದ ನಡುವೆ ಒ
ದಿನ ಸಾರ್ವಜನಿಕ ಸತ್ಯನಾರಾಯಣ ಪೂಜೆ ಮಾ
ಪದ್ಧತಿ ಕೆಲವೆಡೆ ಪಾಲಿಸಲಾಗುತ್ತದೆ. ಇದೂ ಸಹ ಕೆಲ
ಆಕ್ಷೇಪಕ್ಕೆ ಗುರಿಯಾಗಿದೆ. ಕಾರಣ ಗಣೇಶ ವೇದಕಾ
ದೇವರಾದರೆ ಸತ್ಯನಾರಾಯಣ ಎಂಬ ದೇವರು ಪ್ರಚಲ
ಬಂದಿದ್ದು 1825 ರ ಹೊತ್ತಿಗೆ. ಅದಕ್ಕಿಂತ ಮೊ
ಈ ಪೂಜೆ ಇದ್ದ ಐತಿಹ್ಯವೇ ಇಲ್ಲ. 19ನೇ ಶತಮಾ
ಮೊದಲ ಭಾಗದಲ್ಲಿ ಯಾರೋ ವೈಶ್ಯ ವ್ಯಾ
ಕುಟುಂಬದಲ್ಲಿ ಹುಟ್ಟಿದ "ಕಥಾಕಾಲಕ್ಷೇಪ" ಅಷ್ಟೇ ಅ
ಈ ಸತ್ಯನಾರಾಯಣ ಪೂಜೆ. ಅದಕ್ಕೆ ಅಧಿಕೃತ ವೈ
ಮುದ್ರೆ ಇರಲಿಲ್ಲ, ಇಷ್ಟೆಲ್ಲಾ ಆಕ್ಷೇಪಗಳ ನಡುವೆ ನಡೆದು
ಸಾರ್ವಜನಿಕ ಗಣೇಶೋತ್ಸವಕ್ಕೆ ಈಗ 118 ವರ್ಷ ಆ
ಈ ನಡುವೆ ಯಾವಾಗಲೋ ಅದು ನಿಸ್ವಾರ್ಥ ಸ್ವಾ
ಸೇನಾನಿಗಳ ಕೈಯಿಂದ ಜಾರಿ ಕೋಮುವಾದಿಗಳ
ದಾಟಿ ಬಿಟ್ಟಿದೆ.


ಮುಂಗಡವಾಗಿಯೇ

ತಯಾರಿಲ್ಲ
ಬೆರಳುಗಳಿರುವೆಡೆಯಲ್ಲಿ
ಮುಳ್ಳುಮೊಳೆತ್ತಿರುವವರ ಕೈಕುಲುಕಲು.

ಒತ್ತಾಯಿಸಬೇಡಿರಿ
ಗೊಂಬೆಗಳ ರಾಜ್ಯದಲಿ ಪ್ರಜೆಯಾಗುವಂತೆ
ಒಗ್ಗದು
ನಿಮ್ಮೆಯ ಕುಲುಮೆಯಲಿ ಅಚ್ಚಾದ ಮುಖವಾಡಗಳು

ಮನಪೊಪ್ಪುವುದಿಲ್ಲ-ನೀವು
ನಡೆದ ಬೀದಿಗಳಲಿ ಹೆಜ್ಜೆ ಮೂಡಿಸಲು

ಕುಪಿತರಾಗದಿರಿ
ಸಂದಾದುಗಳಲಿ ಉಣ್ಣುವ ನಿಮ್ಮ
ಜಿಣಾಕೂಟಗಳಲಿ ಪಾಲ್ಗೊಳ್ಳದಿರಲು



ಮನ್ನಿಸಿರಿ
ಎಂದಿಗೂ ಯಾಕಾಗಿಯೂ ಕ್ಷಮೆ ಕೋರದಿರಲು
ಏಕಾಂತದಲ್ಲಿರಲು ಬಿಡಿರಿ
ಈವ್-ಆದಾಮರಿಲ್ಲದ ಆದಿಶೂನ್ಯದಲಿ

ಮರುಜೀವ ಪಡೆವ ಅಮೀಬಾಗಳಾದರು
ಮನುಜರಿಗಿಂತಲು ಸಾಚಾ ಜೀವಿಗಳ ಸೃಜಿಸಬಹುದು.

ನೀವು ಕಳೆದುಕೊಳ್ಳುವಂತದ್ದೇನಿಲ್ಲ
ಸಕಲರ ಸಮಾಧಿಗಳಿಗಾಗುವಷ್ಟು
ಹೂಗುಚ್ಛಗಳನು ಮುಂಗಡವಾಗಿಯೆ
ತಂದಿರಿಸಿ ಹೋಗುತಲಿದ್ದೇನೆ

ತಮಿಳು ಮೂಲ: ಆದವನ್ ದೀಚ
ಕನ್ನಡಕ್ಕೆ: ಆರನಕಟ್ಟೆ ರಂಗನಾ

...ರದಿ, ಪ್ರೇಮ ಕಥೆ, ರಾಜಕೀಯ

ಗುಮಾಸ್ತನ ಬ್ಲಾಗ್—1 ● ಕೆ.ಫಣಿರಾಜ್



...ದೇಶ ಸುತ್ತು, ಕೋಶ ಓದು' ಎಂಬ ಕನ್ನಡದ ಗಾದೆ, ಸದ್ಯಕ್ಕೆ ...ದಲ್ಲಿ ನಡೆದಷ್ಟೂ ನಾಡು ಎಂದು ಅಲೆಯುವ ಮಹಾಪಂಡಿತ ...ಕಾಚಾರ್ಯರೊಬ್ಬರಿಗೆ ಮಾತ್ರ ಒಗ್ಗುವ ಮಾತು. 'ಇದ್ದಲ್ಲೇ ಊರು ...ಲ್ಲೇ ಖಬರಸ್ತಾನ್' ಎಂಬ ಒಕ್ಕಲಿಗೆ ಸೇರಿದ ಲೋಕಜ್ಞಾನಿ ಮಹಾ ...ಂತರೂ ನಮ್ಮೂರಲ್ಲಿ ಒಬ್ಬರಿದ್ದಾರೆ. ಅವರು ಉಡುಪಿ ಮತ್ತು ...ಪಾಸಿನ ಹತ್ತೂರಿನ ಓಣಿ ಓಣಿಗಳಲ್ಲಿನ ಲೈಬ್ರರಿಗಳನ್ನೇ ವಾಸಸ್ಥಾನ ...ಡಿಕೊಂಡವರು. ಕಾಲ್ನಡಿಗೆ, ಸಾರ್ವಜನಿಕ ಬಸ್ಸಿನ ಪ್ರಯಾಣದಲ್ಲಿ ...ಸಾಮಾನ್ಯ ಜನರ ಬದುಕನ್ನು ಕಂಡು, ಲೈಬ್ರರಿಯಲ್ಲಿ ಓದಿದ ಪತ್ರಿಕೆಗಳ ...ತೆ ಹೆಣೆದು ಖಡಕ್ ಮಾತು, ನಿಖರ ಕನ್ನಡ ಗದ್ಯದಲ್ಲಿ ಅವರು ಕಟ್ಟಿಕೊಡುವ ...ಕಾನುಭವವೊಂದು ಇಲ್ಲದಿದ್ದರೇ, ಬೇರೆಯವರದ್ದು ಎಂತೋ ಏನೋ, ನಾನಂತೂ ...ರಕುಕ್ಷಿಯಾಗಿಬಿಡುತ್ತಿದ್ದೆ. 'ಇದ್ದಲ್ಲೇ ಊರು, ಸಿನಿಮಾ ಸಿಕ್ಕಲ್ಲೇ ಥಿಯೇಟರು, ...ಮ ಬಿದ್ದಲ್ಲೇ ಬಾರು' ಎಂಬ ನನ್ನಂಥ ಲಂಪಟ ಸೋಮಾರಿಗೆ ಮಹಂತರು ...ಕ್ಷೆ ನೀಡಿದ್ದರಿಂದ, ದಿನಕ್ಕೆ ಎರಡು ಮೂರು ದಿನಪತ್ರಿಕೆಗಳನ್ನು ಕಣ್ಣಿಟ್ಟು ಓದುವ ಅಭ್ಯಾಸ ...ಡಿಕೊಂಡಿದ್ದೇನೆ. ಆದರಲ್ಲೇ ದೇಶ-ಕೋಶ ದರ್ಶನಕ್ಕೆ ಹಂಬಲಿಸುವ ನನ್ನಂಥ ಪಡಪೋಶಿ ...ರ ಗುಮಾಸ್ತ'ನೇ ಸರಿ. ಇದೆಲ್ಲ ಕಥಾ ಕಾಲಕ್ಷೇಪ ಈಗ ಯಾಕೆ ಅನ್ನುತ್ತೀರ? ಹೇಳುತ್ತೇನೆ. ಖ್ಯಾತ ...ಕ ರೇಮಂಡ್ ವಿಲಿಯಮ್ಸ್, ತನ್ನ ಬಹು ಚರ್ಚಿತ ಕೃತಿ 'ಕಮ್ಯುನಿಕೇಶನ್ಸ್'ನಲ್ಲಿ (ಮೂರನೇ ...ತ್ತಿ, 1976) ಆಧುನಿಕ ಸಂವಹನೆಯ ಮಾಧ್ಯಮಗಳಾದ ದಿನಪತ್ರಿಕೆ, ದೃಶ್ಯ ಮಾಧ್ಯಮಗಳ ಬಗ್ಗೆ (ಈಗ ಇಂಟರ್ನೆಟ್ ಸಂವಹನೆಯನ್ನೂ ಇದಕ್ಕೆ ಸೇರಿಸಿಕೊಳ್ಳೋಣ) ಒಂದು ಮಾತು ಹೇಳಿದ್ದಾನೆ: "ಸಂವಹನ ಮಾಧ್ಯಮಗಳಿಗೆ ತಮ್ಮದೇ ಆದ ಸ್ವಂತ ಅಸ್ತಿತ್ವವಿಲ್ಲ ಎಂಬ ತಪ್ಪು ಅಭಿಪ್ರಾಯ ನಮ್ಮಲ್ಲಿದೆ. ಲೋಕದ ನೈಜ ವಿದ್ಯಮಾನಗಳನ್ನು, ಸಂವಹನ ಮಾಧ್ಯಮಗಳು ಯಥಾವತ್ತಾಗಿ ಪ್ರತಿಬಿಂಬಿಸುತ್ತವಷ್ಟೇ ಎನ್ನುವುದು ಜನರಲ್ಲಿರುವ ಸಾಮಾನ್ಯ ಜ್ಞಾನ...... ಆದರೆ, ಸಂವಹನಾ ಮಾಧ್ಯಮಗಳು ವಾಸ್ತವಿಕತೆಯನ್ನು ಕಟ್ಟಿ, ನಿರೂಪಿಸಿ, ನಮ್ಮ ಬುದ್ಧಿ-ಭಾವಗಳಲ್ಲಿ ಊರುವ ಸಂಸ್ಥೆಗಳಾಗಿವೆ ಎನ್ನುವ ಅರಿವು ನಮಗಿರಬೇಕು. ಹಾಗಿದ್ದಾಗ ಮಾತ್ರ ಅಂಥ ವಾಸ್ತವಗಳನ್ನು ಅರಿತು ಬದಲಾಯಿಸಲು ಸಾಧ್ಯವಾಗುತ್ತದೆ. ಸಮಾಜದ ರಾಜಕೀಯ-ಆರ್ಥಿಕ ಸಂಘರ್ಷಗಳಷ್ಟೇ ಇದು ಮುಖ್ಯವಾದದ್ದು." ಹೀಗಾಗಿ, ದಿನಪತ್ರಿಕೆ, ದೃಶ್ಯ-ಇಂಟರ್ನೆಟ್ ಮಾಧ್ಯಮಗಳ ಓದಿನಿಂದಲೂ, ಸಮಾಜದಲ್ಲಿ ಯಜಮಾನಿಕೆ ಗಳಿಸಿರುವ ಅಧಿಕಾರಸ್ಥ ಧೋರಣೆಗಳನ್ನು ಅರಿಯಲು ಸಾಧ್ಯವಿದೆ ಎನ್ನುವ ಸಮಜಾಯಿಷಿ ಕೊಟ್ಟುಕೊಳ್ಳುವೆ. ಆ ಮೂಲಕ ದಿನದ ಪಾಮರನ ಓದಿನಲ್ಲೂ ಲೋಕದ ಅರಿವು ಪಡೆಯಲು ಹೆಣಗುವೆ. ಗುಮಾಸ್ತನ ಈ ಆಶೆಗೆ ಕುಮ್ಮಕ್ಕು ಕೊಡುವಂತೆ, ಕೆಲವು ವರದಿಗಾರರ ವರದಿಗಳು, ಕೆಲವು ಪತ್ರಿಕೆ ಬರಹಗಳು ನನ್ನ ಬುದ್ಧಿಯಲ್ಲಿ ಊರಿಕೊಂಡಿರುವ ವಿಚಾರಗಳನ್ನು ಕೆಣಕುತ್ತವೆ; ಬೇರೆ ಬಗೆಯಲ್ಲಿ ಆಲೋಚಿಸುವಂತೆ ಪ್ರಚೋದಿಸುತ್ತವೆ; ಲೋಕ ಕುತೂಹಲವನ್ನು ಹೆಚ್ಚಿಸುತ್ತವೆ. ಹಾಗೆ ಅನುಭವಕ್ಕೆ ಬಂದ ವರದಿ-ಬರಹಗಳನ್ನು ಪತ್ರಿಕೆಯ ಓದುಗರ ಜೊತೆ ಹಂಚಿಕೊಳ್ಳಬಹುದು ಅನಿಸಿತು. ನಿಯಮಿತವಾಗಿ ಬರೆಯುವುದು ನನ್ನ ಜಾಯಮಾನವೇ ಅಲ್ಲವಾದ್ದರಿಂದ, ಆಗಾಗ ಹೊಳೆದು ಬರೆಯುವ 'ಗುಮಾಸ್ತನ ಬ್ಲಾಗ್'ನ ಪುಟಗಳನ್ನು ನಿಮಗೆ ಓದಲು ಕೊಡುವೆ (ಸಂಪಾದಕರ, ವರದಿಗಾರರ, ವಿಶ್ಲೇಷಕರ ಡೈರಿಗಳು ಎಂಬ ಪ್ರಕಾರ ಪತ್ರಿಕೆ ಬರಹಗಳಲ್ಲಿ ಹ್ಯಾಗೂ ಇದೆಯಲ್ಲ, ಹಾಗೆ ಇದು ಓದುಗನ ಬ್ಲಾಗ್ ಎಂಬ ಅರ್ಥದಲ್ಲಿ ಸ್ವೀಕರಿಸಿ).


...ನಾಪತ್ತೆಯಾದ ಸಂಸಾರ'ದ ಕುತೂಹಲಕರ ಕಥೆ

...ದಿ ಹಿಂದು' ಇಂಗ್ಲಿಷ್ ದಿನಪತ್ರಿಕೆಯ ಕರ್ನಾಟಕ ...ಯ 4,5,7 ಮತ್ತು 8ನೇ ಪುಟಗಳು 'ಪ್ರಾದೇಶಿಕ' ...ಚಾರಗಳಿಗೆ ಮೀಸಲು. ಇಲ್ಲಿ 'ಪ್ರಾದೇಶಿ' ಅಂದರೆ- ...ಟಕ ರಾಜ್ಯದೊಳಗಿನ- ಅಂತ ಅರ್ಥ. ಈ ಪುಟಗಳು ...ವ ಎಲ್ಲಾ ಜಿಲ್ಲಾ ಆವೃತ್ತಿಗಳಿಗೂ ಸಾಮಾನ್ಯವಾದವು. ...ಂದು' ಪತ್ರಿಕೆಯ ಮಟ್ಟಿಗೆ ಇವು 'ಸ್ಟೇಟ್ ಪೇಜ್' ...ಪುಟ). ಬೇರೆ ಜಿಲ್ಲೆಗಳ ವರದಿಗಾರರು ಮಾಡಿದ ...ಗಳು 'ವಿಶೇಷ'ವಾಗಿದ್ದಲ್ಲಿ (ಅದು ಸಂಪಾದಕೀಯ ...) ಅವು ಈ ಪುಟಗಳಲ್ಲಿ ರಾಜ್ಯದ ಎಲ್ಲ ಜಿಲ್ಲೆಯ ...ಗರಿಗೂ ಸಿಗುತ್ತವೆ. ನಾನು ಗಮನಿಸಿದ ಹಾಗೆ, ಪುಟ ... ಹೆಚ್ಚಾಗಿ ಬೆಂಗಳೂರು ವರದಿಗಾರರು ಮಾಡಿದ ...ಗಳೇ ಇರುತ್ತವೆ. ಎಷ್ಟಿದ್ದರೂ ಬೆಂಗಳೂರು ...ಧಾನಿಯಲ್ಲವೇ! ಇಲ್ಲಿನ ವಿದ್ಯಮಾನಗಳು ರಾಜ್ಯದ ...ಗೆ ತಿಳಿದಿರಬೇಕು ಎನ್ನುವುದು ಸಂಪಾದಕೀಯ ...ವ, ಇದು ಅಂತಾರಾಷ್ಟ್ರೀಯ-ರಾಷ್ಟ್ರೀಯ- ರಾಜ್ಯ-ಜಿಲ್ಲೆ- ... ವಿದ್ಯಮಾನಗಳ ಪ್ರಾಮುಖ್ಯತೆಯ ಶ್ರೇಣೀಕರಣದ ...ಮೂಲಿ ಯಜಮಾನ ಗ್ರಹಿಕೆ. ಆದರೂ, ಪ್ರಸ್ತುತ 'ದಿ ...ದು' ಪತ್ರಿಕೆಯ ಬೆಂಗಳೂರು ಕೇಂದ್ರದ ಬಹುಪಾಲು ...ಗಾರರು ವಿವೇಕಿಗಳೂ, ಶ್ಯಾಣ್ಯಾರೂ ಆಗಿದ್ದಾರೆ; ...ನಗರದ ವರದಿಗಾರಿಕೆಯ ಅಹಂಕಾರಿ ಗತ್ತಿಲ್ಲದೆ, ... ರಾಜ್ಯದ ಜನರೆಲ್ಲರಿಗೂ ಪ್ರಸಾರವಾಗುವ ವರದಿ ... ಜವಾಬ್ದಾರಿಯುತ ಶೈಲಿಯಲ್ಲಿ ಅವರು ವರದಿ ...ಡುತ್ತಾರೆ. ಹಾಗಾಗಿ ದೂರಿಗೆ ಕಾರಣವಿಲ್ಲ ಓದುಗರಿಗೂ ... ಈ ವ್ಯಾಖ್ಯಾನ ಅಂತಿರಲಿ, ಆಚೆಗೆ ಇಡಿ.

...ಸೆಪ್ಟೆಂಬರ್ 27, 2012, ಗುರುವಾರದಂದು ಇಂತಪ್ಪ ... ಪುಟದಲ್ಲಿ ಇಡುಕಿರಿದಿದ್ದ ರಾಜಕೀಯ ವರದಿಗಳ ...ವೆ, ತನಗೂ ಸ್ಥಾನ ಬೇಕು ಎಂದು ಹಟಮಾಡಿ ...ಪಡೆದಂತೆ ಕಾಣುವ "ದಿ 'ಮಿಸ್ಸಿಂಗ್' ಫ್ಯಾಮಿಲಿ ... ಭಟ್ಕಳ್ ಟ್ರೇಸ್ಡ್" (ನಾಪತ್ತೆಯಾದ' ಭಟ್ಕಳದ ಕುಟುಂಬ ...ಯಾಗಿದೆ) ಎಂಬ ಪುಟ್ಟ ವರದಿ ಪ್ರಕಟವಾಗಿದೆ. ತನ್ನ ...ರಚಕದಿಂದಲೇ ಗಮನ ಸೆಳೆದ ಈ ವರದಿಯನ್ನು ... ಮುಗಿಸಿದ ಕೂಡಲೇ ಸಿನಿಮಾದ ಒಂದು ಭರ್ಜರಿ ... ನೋಡಿ ಅಥವಾ ಡೈಲಾಗ್ ಕೇಳಿ ಸೀಟಿ ...ಡೆಯುತ್ತೇವಲ್ಲ, ಹಾಗೆ ಸೀಟಿ ಹೊಡೆಯಬೇಕೆನಿಸಿತು. ...ವರದಿಯ ಪೂರ್ಣಪಾಠ ಇಂತಿದೆ:

...ಬೆಂಗಳೂರು: ಒಂದೇ ಕುಟುಂಬದ ಏಳು ಜನ ...ಯಾಗಿದ್ದ ನಿಗೂಢ ಘಟನೆಗೆ ಒಂದು ಕುತೂಹಲಕಾರಿ ...ವು ಇರುವಂತಿದೆ. ಇಬ್ಬರು ಹೆಂಗಸರು (ಅಕ್ಕ-ತಂಗಿ) ...ತ್ತು ಅವರ ಐದು ಜನ ಮಕ್ಕಳನ್ನು (ಆಂಧ್ರಪ್ರದೇಶದ, ...ದು ಗೋದಾವರಿ ಜಿಲ್ಲೆಯ) ಗುಂಟೂರು ಸಮೀಪದ ...ರಾವ್ ಪೇಟ್‌ನಲ್ಲಿರುವ ಮನೆಯೊಂದರಲ್ಲಿ ಇರುವುದನ್ನು ...ಪತ್ತೆಹಚ್ಚಿರುವ ವಿಜಯವಾಡದ ಪೊಲೀಸರ ಪ್ರಕಾರ ಇದು ...ರಿಯಾದ ಪ್ರಸಂಗವಾಗಿದೆ. ವಿವಾಹಿತರಾದ ಈ ಇಬ್ಬರು ...ಗಸರು ತಮ್ಮ ಮಕ್ಕಳೊಡನೆ ಸೆಪ್ಟೆಂಬರ್ 1 ರಿಂದ ...ರಾವ್ ಪೇಟ್‌ನಲ್ಲಿರುವ ಮನೆಯಲ್ಲಿ ಇಬ್ಬರು ಯುವಕರ ...ತೆ ವಾಸಿಸುತ್ತಿರುವುದನ್ನು, ವಿಜಯವಾಡ ಪೊಲೀಸ್ ...ಸ್ಪೆಕ್ಟರ್ ಪ್ರಸಾದ್‌ರಾವ್ ಮತ್ತವರ ತಂಡ ಕಂಡುಹಿಡಿ... ಆ ಇಬ್ಬರು ಹೆಂಗಸರು ತಾವು ಆ ಮನೆಬಿಟ್ಟು ...ಸ್ಸದಿಲ್ಲವೆಂದೂ, ತಮ್ಮ 'ಯುವಸ್ನೇಹಿತರ' ಜೊತೆಗೇ ...ಸಲೆಂದೂ ಇಚ್ಛಿಸಿ ಓಡಿದರು. "ಆದರೆ, ನಾವು ಆ ...ಗಸರು ಮತ್ತು ಮಕ್ಕಳನ್ನು ವಿಜಯವಾಡದ ರಕ್ಷಣಾಗೃಹಕ್ಕೆ ...ಸಿಕೊಂಡು ಹೋಗಿ ಸೇರಿಸಿ, ಅವರ ಕುಟುಂಬಗಳಿಗೆ ... ತಿಳಿಸಿದ್ದೇವೆ" ಎಂದು ಪ್ರಸಾದ್ ರಾವ್ ಹೇಳಿದರು.

ಇಬ್ಬರು ಹೆಂಗಸರು ತಮ್ಮ ಮಕ್ಕಳೊಡನೆ ಭಟ್ಕಳದ ಬಸ್ಸು ಹತ್ತುವುದಾಗಿ ತಿಳಿಸಿ, ವಿಜಯವಾಡದ ತಮ್ಮ ಬಂಧುಗಳ ಮನೆಯಿಂದ ಹೊರಟಿದ್ದರು; ಆದರೆ ಮನಸ್ಸು ಬದಲಾಯಿಸಿ ತಮ್ಮ ಯುವಸ್ನೇಹಿತರ ಜೊತೆ ಜೀವಿಸಲು ಹೋಗಿರುವುದು ಪ್ರಾಥಮಿಕ ವಿಚಾರಣೆಯಿಂದ ತಿಳಿದುಬಂದಿದೆ ಎಂದು ವಿಜಯವಾಡ ಪೊಲೀಸರು ತಿಳಿಸಿದ್ದಾರೆ. ಬಸ್ಸು ಹತ್ತಿ ವಾಪಸ್ಸು ಬರುತ್ತಿದ್ದೇವೆ ಎಂದ ಹೆಂಗಸರು ಊರು ತಲುಪದೇ ಇದ್ದಾಗ ಗಂಡಂದಿರು ಕಂಗಾಲಾದರು. ತಮ್ಮ ಕುಟುಂಬ



'ನಾಪತ್ತೆಯಾಗಿದೆ' ಎಂದು ಪೊಲೀಸರಿಗೆ ದೂರು ನೀಡಿದರು. ದೂರನ್ನಾಧರಿಸಿ ಪೊಲೀಸರು ನಾಪತ್ತೆಯಾದ ಕುಟುಂಬದ ಫೋಟೋಗಳನ್ನು ಮಾಧ್ಯಮಗಳಲ್ಲಿ ಪ್ರಸಾರ ಮಾಡಿದರು. ಅವರ ಪ್ರಯತ್ನ ಸಫಲವಾಯಿತು-ಯುವಸ್ನೇಹಿತರಿಗೆ ಮನೆಯನ್ನು ಬಾಡಿಗೆಗೆ ಕೊಟ್ಟಿದ್ದ ಮಾಲಿಕ ಪೊಲೀಸರಿಗೆ ಸುಳಿವು ನೀಡಿದ. ಪೊಲೀಸರು ವಿಜಯವಾಡದಿಂದ 50 ಕಿ.ಮಿ. ದೂರದ ಲ್ಲಿರುವ ನರಸರಾವ್ ಪೇಟ್‌ನಲ್ಲಿ ಏಳು ಜನರನ್ನು ಪತ್ತೆ ಮಾಡಿದರು.

ಘಟನೆ ಜನಪ್ರಿಯ ಸಿನಿಮಾದ ಚಿತ್ರಕತೆಯ ಹಾಗಿದೆ. ವರದಿ ಪತ್ತೇದಾರಿ ವರದಿಯ ರೋಚಕ ಶೈಲಿಯಲ್ಲಿದೆ. ಸಿನಿಮಾದ ಹುಚ್ಚನಾದ ನನಗೆ ಇಷ್ಟಕ್ಕೆ ಇದು ಸೀಟಿ ಹೊಡೆಸಿರಬೇಕು ಅಂದುಕೊಂಡು ಸುಮ್ಮನಾಗಲು ನೋಡಿದೆ. ಆದರೂ ಮನಸ್ಸು ಕೇಳುತ್ತಿಲ್ಲ, ವರದಿಗಾರರ ಉದ್ದೇಶ ಬರಿ ಇಷ್ಟು ಹೇಳುವುದಲ್ಲ-ಇದಕ್ಕಿಂತ ಹೆಚ್ಚು ಇದರಲ್ಲಿದೆ, ಸಾಲುಗಳ ಅರ್ಥ ಬಿಡಿಸಿ ಓದಿ ಎಂದು ಒತ್ತಾಯಿಸುವಂತಿದೆ ಅನಿಸತೊಡಗಿತು. 'ವಿಜಯವಾಡ', 'ಭಟ್ಕಳ', 'ಹೋಗೊದಿಲ್ಲ' ಅನ್ನೋ ಮದುವೆಯಾಗಿ ಮಕ್ಕಳನ್ನು ಹೆತ್ತಿರುವ ಹೆಂಗಸರು, ಅವರ 'ಯುವಸ್ನೇಹಿತರು'-ವರದಿಗಾರ ಸಾಕಷ್ಟು ಬಾಣದ ಗುರುತುಗಳನ್ನು ಕೊಟ್ಟಿದ್ದಾನೆ; ನೋಡೇ ಬಿಡಬೇಕು ಅನ್ನೋ ಆಸೆ ಬಲವಾಯಿತು. 'ಭಟ್ಕಳ'-ಇದು ಒಂದು ನವಾಯತಿ ಮುಸ್ಲಿಮ್ ಕುಟುಂಬದಲ್ಲಿ ನಡೆದ ಘಟನೆಯೇ? ಆಂಧ್ರದ ವಿಜಯವಾಡಕ್ಕೇನು ಸಂಬಂಧ? ಹೆಂಗಸರು ಹಾಗು ಅವರ ಯುವಸ್ನೇಹಿತರು ಗುಂಟೂರು ಕಡೆಯ ಮುಸಲ್ಮಾನರೇ? ಬಡ ಕುಟುಂಬಕ್ಕೆ ಸೇರಿದವರೇ? ಚಿತ್ರಕತೆಯನ್ನು ಹೀಗೆ ಹೊಂದಿಸಿಕೊಂಡು, ಕರ್ನಾಟಕ ಕೋಮು ಸೌಹಾರ್ದ ವೇದಿಕೆಯಲ್ಲಿ ಕ್ರಿಯಾಶೀಲವಾಗಿ ತೊಡಗಿಸಿಕೊಂಡಿರುವ ಯುವ ನವಾಯತಿ ಮುಸ್ಲಿಮ್ ಮಿತ್ರನನ್ನು ಕೇಳಿದೆ -

"ಏನಯ್ಯ, ಈ ಭಟ್ಕಳದ ನವಾಯತರು ಎಲ್ಲೆಲ್ಲಿಂದೆಲ್ಲ ಹೆಣ್ಣು ತಂದುಕೊಳ್ಳುತ್ತಾರೆ?" ಆತ ಅದಕ್ಕೆ - "ಭಾರತದ ಹಾಗು ಗಲ್ಫ್ ಪ್ರದೇಶದ ಎಲ್ಲಾ ಮೂಲೆಗಳಿಂದಲೂ ಹೆಣ್ಣು ತಂದುಕೊಳ್ಳುತ್ತಾರೆ ಸಾರ್. ವ್ಯಾಪಾರಸ್ಥರಾಗಿರೋದ್ರಿಂದ ಭಾರತದ ನೂರಾರು ಸಣ್ಣಪುಟ್ಟ ನಗರಗಳಲ್ಲಿ ಭಟ್ಕಳಿಗಳ ಬಜಾರುಗಳಿವೆ. ವಿಜಯವಾಡದಲ್ಲಂತೂ ಲಾಗಾಯ್ತಿನಿಂದ ದೊಡ್ಡ ವ್ಯಾಪಾರವನ್ನೇ ಭಟ್ಕಳಿಗಳು ನಡೆಸುತ್ತಿದ್ದಾರೆ. ನೀವು ಹೇಳುವ ಕತೆಯಲ್ಲಿ ಅಚ್ಚರಿಪಡುವಂಥದ್ದೇನು ಇಲ್ಲ, ಸಹಜವಾಗಿದೆ" ಅಂದ. ಆದರೆ ಅಷ್ಟಕ್ಕೆ ನಿಲ್ಲಿಸದೆ "ಸಾರ್, ಭಟ್ಕಳದಲ್ಲಿ ವ್ಯಾಪಾರದಲ್ಲಿ ಶ್ರೀಮಂತಿಕೆ ಗಳಿಸಿದ ನವಾಯತರ ಕುಟುಂಬಗಳಿಗಿಂತ ದೊಡ್ಡ ಸಂಖ್ಯೆಯಲ್ಲಿ ಕಡುಬಡವರಾದ ನವಾಯತರ ಕುಟುಂಬಗಳಿವೆ. ನವಾಯತರು ಇತ್ತೀಚಿನ ವರೆಗೂ ತಮ್ಮ ಹೆಣ್ಣುಮಕ್ಕಳನ್ನು ಹೊರಗೆ ಮದುವೆ ಮಾಡಿಕೊಡುತ್ತಿರಲಿಲ್ಲ. ಬಡವರಾದ ನವಾಯತರ ಕುಟುಂಬದ ಯುವತಿಯರ ಮದುವೆ ಕಷ್ಟವಾಗಿದೆ. ಮತ್ತು ಅವರ ಹೆಂಗಸರು ಸಮಾಜದ ಎಲ್ಲ ನಮೂನೆಯ ಮೋಸಗಳಿಗೂ ಬಲಿಪಶುಗಳಾಗಿದ್ದಾರೆ" ಎಂದು ಹೇಳಿದ. ವರದಿಯಲ್ಲಿರುವ ಹೆಂಗಸರು ಗುಂಟೂರು ಕಡೆಯ ಮುಸಲ್ಮಾನರಿರಬೇಕು ಎನ್ನುವ ಊಹೆ ಪಕ್ಕಾಗತೊಡಗಿತು. ಆದರೆ ಅವರು ಬಡಕುಟುಂಬಕ್ಕೆ ಸೇರಿದ್ದು, ಶ್ರೀಮಂತ ಕುಟುಂಬಕ್ಕೆ ಮದುವೆಯಾಗಿ ಹೋಗುವ ಬಡತನದ ದಾಕ್ಷಿಣ್ಯಕ್ಕೆ ಬದ್ಧಿದ್ದಾರೆ ಎಂಬ ಚಿತ್ರಕತೆ ಬುಡಮೇಲಾಯಿತು. ಕೂಡಲೇ ಆಂಧ್ರದ ಜನಜೀವನ ಬಲ್ಲ ಬೆಂಗಳೂರಿನ ಪ್ರೊ.ಬಾಬಯ್ಯ ಅವರಿಗೆ ಫೋನ್ ಮಾಡಿ, ಈ ಕತೆ ಹೇಳಿ, ಗುಂಟೂರು ಕಡೆ ಮುಸಲ್ಮಾನರ ಸಾಮಾಜಿಕ ಸ್ಥಿತಿಗತಿ ಹೇಗೆ ಎಂದು ಕೇಳಿದೆ. ಬಾಬಯ್ಯ "ಗುಂಟೂರು ಕಡೆಯ ಹೆಚ್ಚು ಮುಸಲ್ಮಾನರು ಸ್ಥಿತಿವಂತರು. ಶುದ್ಧ ತೆಲುಗು ಮಾತನಾಡುವವರು. ಹಾಗೇ ತಮ್ಮ ಅಂತಸ್ತಿನ ಬಗ್ಗೆ ಪ್ರತಿಷ್ಠೆ ಉಳ್ಳವರೂ ಹೌದು" ಎಂದು ತಿಳಿಸಿದರು.

ಈಗ ಚಿತ್ರಕತೆ ಸ್ಪಷ್ಟವಾಗತೊಡಗಿತು. ಸ್ಥಿತಿವಂತ ಕುಟುಂಬದ ಮುಸಲ್ಮಾನ ಹುಡುಗಿಯರಿಬ್ಬರು, ಅಷ್ಟೇನೂ ಸ್ಥಿತಿವಂತರಲ್ಲದ ಇಬ್ಬರು ಮುಸಲ್ಮಾನ ಹುಡುಗರನ್ನು ಪ್ರೀತಿಸಿದ್ದಾರೆ. ಆದರೆ ಹುಡುಗಿಯರ ಕುಟುಂಬ ತಮ್ಮ ಅಂತಸ್ತಿಗೆ ತಕ್ಕ ನವಾಯತರ ಶ್ರೀಮಂತ ಕುಟುಂಬಕ್ಕೆ ಮದುವೆ ಮಾಡಿಕೊಟ್ಟಿದ್ದಾರೆ. ಮದುವೆಯಾಗಿ, ಮಕ್ಕಳು ಹೆತ್ತರೂ ಆ ಹೆಂಗಸರಿಗೆ ಪ್ರೇಮವನ್ನು ಮರೆಯಲಾಗಲಿಲ್ಲ. ಮಕ್ಕಳನ್ನು ಬಿಡುವ ಮನಸಿಲ್ಲ, ಅವಕಾಶ ಕಾದು, ಯೋಚಿಸಿ 'ನಾಪತ್ತೆಯಾಗಿದ್ದಾರೆ'. ಆ ಹೆಂಗಸರ, ಅವರ ಪ್ರೇಮಿಗಳ ಲೆಕ್ಕಾಚಾರ ತಲೆಕೆಳಗಾಗಿ 'ಪತ್ತೆ'ಯಾಗಿಬಿಟ್ಟಿದ್ದಾರೆ. ಈ ಊಹೆಯ ಚಿತ್ರಕತೆ ನಿಜವೋ? ಬೆಂಗಳೂರಿನ ನನ್ನ 'ಬಲ್ಲ ಮೂಲಗಳ' ಮೂಲಕ ಘಟನೆಯ ನೈಜ ವಿವರಗಳನ್ನು ಪಡೆದುಕೊಂಡೆ. ಅದು ಹಾಗೇ ಆಗಿತ್ತು.

ವರದಿ ಮಾಡಿದವರಿಗೆ ಭಟ್ಕಳದ ಬಡ ನವಾಯತಿ ಹೆಂಗಸರ ಪಾಡು ಗೊತ್ತಿದ್ದು, ಆ ವಿಸ್ತಾರ ಹಿನ್ನೆಲೆಯಲ್ಲಿ ಗುಂಟೂರಿನ ಮುಸಲ್ಮಾನ ಹೆಂಗಸರ ಪ್ರೇಮಕ್ಕೆ ಒದಗಿದ ಪಾಡನ್ನು ಕಂಡು, ಸಮುದಾಯದ ಬದುಕಿನ ತಳಮಳ, ಅದರೊಳಗಿನ ಮನುಷ್ಯ ಮಾತ್ರರ ತಳಮಳಗಳ ಝಲಕ್ ತೋರಿಸುವ ಉದ್ದೇಶವಿತ್ತೆ? ಈ ಪ್ರಶ್ನೆ ಅಹಂಕಾರದ್ದು. ಕತೆಗಾರರಿಗೆ, ಕವಿಗಳಿಗೆ ಕೇಳದ ಪ್ರಶ್ನೆಗಳನ್ನು ವರದಿಗಾರರಿಗೆ ಕೇಳಕೂಡದು. ಒಂದು ವರದಿ ಇಷ್ಟು ಆಲೋಚನೆಗಳನ್ನು ಪ್ರೇರೇಪಿಸಬಹುದಾದರೆ, ಅದರ ವ್ಯಾಕರಣದಲ್ಲೇ ಆ ಗುಣವಿದೆ ಎಂದು ನನ್ನ ವಾದ. ಅವರು ಈ ವರದಿ ಬರೆಯದೇ ಹೋಗಿದ್ದರೆ, ಕೊಡಬೇಕಾದ ಬಾಣದ ಗುರುತುಗಳನ್ನು ಕೊಡದೆಹೋಗಿದ್ದರೆ, ನಾವಿದನ್ನೆಲ್ಲ ಯೋಚಿಸಬಹುದಿತ್ತೆ? ವರದಿಗಾರನ ಪ್ರತಿಭೆಗೆ ಹೇಳಬೇಕಾದ 'ಥ್ಯಾಂಕ್ಸ್ ಕಣ್ರಿ' ಹೇಳೋಣ.

ಆ ವರದಿ ಇಷ್ಟು ಹುಡುಕಾಟ, ಆಲೋಚನೆಗಳನ್ನು ಪ್ರಚೋದಿಸಿದ ನಂತರ, ನಾನು ಉಡುಪಿಯ ನನ್ನ ನವಾಯತಿ ಯುವಮಿತ್ರನಿಗೆ ಇದನ್ನೆಲ್ಲ ತಿಳಿಸಿದೆ. ಹೋರಾಟದ ಬದುಕಿನಲ್ಲಿ ಪಳಗಿರುವ ಆ ಹುಡುಗ, ಇಂಥ ಚಿತ್ರಕತೆಗಳು ಉಡುಪಿಯ ಆಸುಪಾಸಿನ ಹಳ್ಳಿಗಳಲ್ಲಿ, ತನ್ನ ಬಂಧು-ಬಾಂಧವರ ಕುಟುಂಬಗಳಲ್ಲಿ ನಡೆದಿವೆ; ಇಷ್ಟವಿಲ್ಲದ ಇಂಥ ಸಾಂಸಾರಿಕ ಬಂಧಗಳಿಂದ ರೋಸಿದ ಹೆಂಗಸರು, ತಮ್ಮ ಸಂಸಾರ ತೊರೆದು ಪ್ರೇಮಿಗಳ ಜೊತೆ ಬದುಕುತ್ತಿದ್ದಾರೆ - ಆ ಪ್ರೇಮಿಗಳು ಮುಸಲ್ಮಾನ ಯುವಕರು ಮಾತ್ರವಾಗಿರದೇ, ಮೊಗವೀರ, ಬಿಲ್ಲವ ಹುಡುಗರೂ ಆಗಿದ್ದಾರೆ ಎಂದು ಯಾವ ಮೇಲ್ಮೆಯೂ ಇಲ್ಲದೆ ತಿಳಿಸಿದ. "ಬದುಕಿನಲ್ಲಿ ಇದನ್ನೆಲ್ಲ ಸಹಜ ಅಂತ ಒಪ್ಪಿಕೊಳ್ಳಬೇಕಲ್ಲವ ಸಾರ್" ಎಂದ. ಅವನ ಅರಿವಿಗೂ ಥ್ಯಾಂಕ್ಸ್.

ಆದರೆ ಇಷ್ಟೆಲ್ಲ ಅರಿತ ನಂತರ ಒಂದು ದುರಂತ ಪ್ರಶ್ನೆ ಎದ್ದುಬಿಟ್ಟಿತು. ಭಟ್ಕಳ, ಉಡುಪಿ ಹಾಗು ಕರ್ನಾಟಕದ ಅನೇಕ ಊರುಗಳಲ್ಲಿ ಮುಸಲ್ಮಾನ ಸಮುದಾಯದಲ್ಲಿ ಇರುವ ಈ ಸಾಂಸಾರಿಕ ತಳಮಳಗಳು, 'ಹಿಂದೂಗಳು' ಎಂದು ನಾವು ಗುರುತಿಸಿಕೊಳ್ಳುವ ಜಾತಿ ಸಮುದಾಯಗಳಲ್ಲೂ ಇವೆಯಲ್ಲ, ಹಾಗಿದ್ದ ಮೇಲೆ 'ನಮ್ಮವು' ಮಾತ್ರ ಮನುಷ್ಯರ ಲೌಕಿಕ ತಳಮಳಗಳಾಗಿ ನಾವು 'ಮನುಷ್ಯ'ರಾಗಿದ್ದ ಮೇಲೆ, ನಮ್ಮ ನಡುವೆ ಇದೇ ತಳಮಳಗಳಲ್ಲಿ ಬಿದ್ದ 'ಮುಸಲ್ಮಾನ'ರನ್ನು ನಾವು ಯಾಕೆ 'ಮನುಷ್ಯ ಮಾತ್ರರು' ಎಂದು ಗುರುತಿಸದೇ 'ಭಯೋತ್ಪಾದಕರು', 'ಧರ್ಮಾಂಧರು', 'ಲವ್ ಜಿಹಾದಿಗಳು' ಎಂಬ ಹಾಗೆ ಕಾಣಲು ತೊಡಗಿದ್ದೇವೆ? ಭಟ್ಕಳ ಯಾಕೆ ಇಂಥ ತಳಮಳಗಳನ್ನು ಅನುಭವಿಸುವ ಸಾಮಾನ್ಯರಿಗೂ 'ಭಯೋತ್ಪಾದಕರ ಕೇಂದ್ರ'ವಾಗಿ ತೋರುತ್ತದೆ? ಹೀಗೆ ತಳಮಳದಲ್ಲಿರುವ ಜನಸಮುದಾಯವನ್ನು ಒಡೆಯುವುದರಲ್ಲಿ 'ಹಿಂದುತ್ವವಾದಿ' ರಾಜಕೀಯದ ಪಾತ್ರವೇನು ಎಂದು ಯೋಚಿಸಲು ಪ್ರಸ್ತುತ ವರದಿ ಪ್ರೇರೇಪಿಸುತ್ತದೆ. ಒಬ್ಬ ಕ್ರೈಂ ಬೀಟ್ ವರದಿಗಾರ ಮಾಡಿದ ವರದಿಯಲ್ಲಿ ರಾಜಕೀಯ ಒಳನೋಟಗಳಿರುವುದಿಲ್ಲ ಎಂದು ಯಾವ ಧೈರ್ಯದಿಂದ ಹೇಳುವುದು!


● ಕೆ. ಫಣಿರಾಜ್

ಶ್ರೇಷ್ಠ ವ್ಯಕ್ತಿಯ ಆಯ್ಕೆ ಎಂಬ ಪ್ರಹಸನ

ಅನಿಲ್ ಅಂಬಾನಿಯ ರಿಲಯನ್ಸ್ ಮೊಬೈಲ್, ಸಿಎನ್‌ಎನ್-ಐಬಿಎನ್ ಮತ್ತು ಹಿಸ್ಟರಿ ಚಾನೆಲ್‌ಗಳು ಸೇರಿ ಆಯೋಜಿಸಿದ್ದ ಒಂದು ಮಾಧ್ಯಮ ತಮಾಷಾ ಅಂತೂ ಕೊನೆಗೊಂಡಿದೆ. ನಿರೀಕ್ಷೆಯಂತೆ ಬಾಬಾಸಾಹೇಬ್ ಅಂಬೇಡ್ಕರ್ 'ಶ್ರೇಷ್ಠ'ತೆಯ ಸ್ಪರ್ಧೆಯಲ್ಲಿ ಜಯಗಳಿಸಿದ್ದಾರೆ. ಈಗವರು 'ಗಾಂಧಿ ನಂತರ ಶ್ರೇಷ್ಠ ಭಾರತೀಯ' ಎಂಬ ಬಿರುದಿಗೆ ಪಾತ್ರರಾಗಿದ್ದಾರೆ. ಈ ಸ್ಪರ್ಧೆಯಿಂದ ಗಾಂಧಿಯನ್ನು ಮೊದಲೇ ಹೊರಗಿಟ್ಟು ಅವರ ನಂತರದ ಶ್ರೇಷ್ಠ ವ್ಯಕ್ತಿಯ ಹುಡುಕಾಟದಲ್ಲಿ ತೊಡಗಿದ್ದಕ್ಕೆ ದಲಿತರಲ್ಲಿ ಮೊದಮೊದಲು ಅಸಮಾಧಾನವಿದ್ದರೂ ಈಗ ಶ್ರೇಷ್ಠವ್ಯಕ್ತಿಯೆಂದು ಘೋಷಿಸಿದ ನಂತರ ಅವರ ಸಂಭ್ರಮಾಚರಣೆ ಮುಗಿಲು ಮುಟ್ಟಿದೆ. ಕೆಲವು ಪಂಡಿತರು ಈ ಫಲಿತಾಂಶವನ್ನು ವಿಶ್ಲೇಷಿಸುತ್ತಾ ಯುವಭಾರತ ಜಾತಿಪೂರ್ವಗ್ರಹದಿಂದ ಹೊರಬಂದಿದೆ ಎನ್ನಲು ಅಂಬೇಡ್ಕರ್ ಈ ಸ್ಪರ್ಧೆಯಲ್ಲಿ ಜಯ ಗಳಿಸಿರುವುದೇ ಸಾಕ್ಷಿ ಎನ್ನುತ್ತಿದ್ದಾರೆ. ನಿಜವಾಗಿಯೂ? ಇಂಥ ಸುದ್ದಿ ವಿಶ್ಲೇಷಣೆಗಳು ಮಾಧ್ಯಮಗಳಲ್ಲಿ ನಡೆಯುತ್ತಿರುವಾಗ ಟಿವಿ ಪರದೆಯ ಕೆಳಭಾಗದ ಸಾಲುಗಳು ಅಂಬೇಡ್ಕರ್ ಮೂರ್ತಿಗೆ ಉತ್ತರಪ್ರದೇಶದ ಹಲವು ಕಡೆ ಅವಮಾನ ಎಂಬ ಸುದ್ದಿಯನ್ನು ಪ್ರಸಾರ ಮಾಡುತ್ತಿರುವುದು ವರ್ತಮಾನದ ವೈರುಧ್ಯವನ್ನು ಎತ್ತಿ ತೋರಿಸುತ್ತದೆ.


ಅಂಬೇಡ್ಕರರನ್ನು ಕನಿಷ್ಠಗೊಳಿಸುವುದು

ಇಂಟರ್‌ನೆಟ್ ಮತ್ತು ಮೊಬೈಲ್ ಬಳಸುವ ಅತಿ ಕಡಿಮೆ ಸಂಖ್ಯೆಯ ದಲಿತ ಯುವಕರೇ ಈ ವಿಜಯದ ಹಿಂದಿರುವುದು ಎಂದು ಊಹಿಸಲು ಯಾವ ವಿಶೇಷ ಜ್ಞಾನವೂ ಬೇಕಾಗಿಲ್ಲ. ಅತಿ ಕಡಿಮೆ ಸಂಖ್ಯೆಯಲ್ಲಿದ್ದರೂ ಅವರಿಗೆ ಅಂಬೇಡ್ಕರ್ ಹೊರತಾಗಿ ಬೇರೆ ಆಯ್ಕೆಗಳಿರಲಿಲ್ಲ. ಈ ಕಾರಣದಿಂದಲೇ ಸಂಘಪರಿವಾರದ ಅವಶ್ಯಕತೆಗಳಿಗೆ ಹೊಂದಿಕೊಳ್ಳುವಂತಹ ಮುಸ್ಲಿಮರಾಗಿದ್ದ ಎ.ಪಿ.ಜೆ.ಅಬ್ದುಲ್ ಕಲಾಂ ಉಳಿದೆಲ್ಲರಿಗಿಂತ ಹೆಚ್ಚಿನ ಮತ ಗಳಿಸಿದರು. ಮೊದಲ ಅಸಮಾಧಾನದ ಹೊರತಾಗಿಯೂ ದಲಿತ ಯುವಜನತೆ ಅಂಬೇಡ್ಕರರನ್ನು ಗೆಲ್ಲಿಸಲೇಬೇಕೆಂದು ಒಗ್ಗಟ್ಟಿನಿಂದ ಮತ ಹಾಕಲು ಒತ್ತಾಯಿಸಿತು. ಅಂಬೇಡ್ಕರ್ ಪಡೆದಷ್ಟು ಬೆಂಬಲವನ್ನು ಯಾವ ಭಾರತೀಯ ನಾಯಕನೂ ಕೂಡಾ ಪಡೆಯಲಿಲ್ಲ. ಹೀಗಿರುವಾಗ ಭಾರತದ ಯುವಜನತೆ ಜಾತಿ ಪೂರ್ವಗ್ರಹ ತೊರೆದಿದೆ ಎಂದು ಭಾವಿಸುವುದು ಶುದ್ಧ ಭೋಳೇತನ. ಅಂಬೇಡ್ಕರರನ್ನು ಶ್ರೇಷ್ಠ ಭಾರತೀಯ ಎಂದು ಕರೆದಿರುವುದು ಇನ್ನೆಷ್ಟೋ ಜನರಿಗೆ ನುಂಗಲಾರದ ತುತ್ತಾಗಿರಬಹುದು. ಈ ಫಲಿತಾಂಶ ದಲಿತ ವಿರೋಧಿ ಭಾವನೆಯನ್ನು ಇನ್ನಷ್ಟು ಉದ್ದೀಪಿಸಬಹುದು. ಉತ್ತರ



ಪ್ರದೇಶದಲ್ಲಿ ಆದಂತೆ ಜಾತಿ ದೌರ್ಜನ್ಯ ಹೆಚ್ಚಿಸಬಹುದು.

ಹಾಗಿದ್ದರೆ ಇಂಥ ಸ್ಪರ್ಧೆಗಳಲ್ಲಿ ದಲಿತರೇಕೆ ಭಾಗವಹಿಸಬೇಕು? ಕಲಾಂ ಅಥವಾ ಯಾವುದೋ ಸಿನಿಮಾ ಹೀರೋ ಅಥವಾ ಕ್ರಿಕೆಟಿಗ ಗಾಂಧಿ ನಂತರದ ಗ್ರೇಟೆಸ್ಟ್ ವ್ಯಕ್ತಿ ಎನಿಸಿಕೊಂಡಿದ್ದರೆ ಏನಾಗುತ್ತಿತ್ತು? ಅದು ಅಂಬೇಡ್ಕರ್ ವ್ಯಕ್ತಿತ್ವವನ್ನು ಕ್ಷುಲ್ಲಕಗೊಳಿಸುತ್ತಿತ್ತೇ ಅಥವಾ ಅವರ ಮಹತ್ವವನ್ನು ಕಡಿಮೆ ಮಾಡುತ್ತಿತ್ತೇ? ಅವರು ಶ್ರೇಷ್ಠ ವ್ಯಕ್ತಿ ಎನ್ನಲು ಮಾಧ್ಯಮದ ದೃಢೀಕರಣ ಅಗತ್ಯವಿದೆಯೆ? ಮಾಧುರಿ ದೀಕ್ಷಿತ್ ಅಥವಾ ಅಮಿತಾಭ್ ಬಚ್ಚನ್ ಸಲಾಮು ಮಾಡಿ ಹಾಗೆಂದು ಹೇಳಬೇಕಾದ ಅಗತ್ಯವಿದೆಯೆ? ನೆನಪಿಡಿ: ನಟ ದಿಲೀಪ್ ಕುಮಾರ್ ಅವರಿಂದ ದೇಣಿಗೆ ಪಡೆಯಲು ಅಂಬೇಡ್ಕರ್ ನಿರಾಕರಿಸಿದ್ದರು. ಅದಕ್ಕವರು ನೀಡಿದ ಕಾರಣ ಸಿನಿಮಾ ಹೀರೋಗಳಿಗೆ ಕ್ಯಾರೆಕ್ಟರ್ ಇರುವುದಿಲ್ಲ ಎನ್ನುವುದು! ಮರಾಠಿ ತಮಾಷಾದ ದಂತಕಥೆ ಎನಿಸಿರುವ ಪತ್ತೆ ಬಾಪುರಾವ್ ಅವರಿಂದಲೂ ಮಹಾನ್ ಹೆಣ್ಣುಗಳನ್ನು ನರ್ತನ ತಂಡಗಳಲ್ಲಿ ಕುಣಿಸಲಾಗುತ್ತದೆನ್ನುವ ಕಾರಣ ಒಡ್ಡಿ 1927ರಲ್ಲಿ ದೇಣಿಗೆ ನಿರಾಕರಿಸಿದ್ದರು.



ಪ್ರಾಯೋಜಕರು ಅಂಬೇಡ್ಕರರಿಗಿಂತ ಗಾಂಧಿ ದೊಡ್ಡವರೆಂದು ಮೊದಲೇ ಭಾವಿಸಿ ಅವರನ್ನು ಸ್ಪರ್ಧಾಕಣದಿಂದ ಹೊರಗಿಟ್ಟಿದ್ದರ ಬಗೆಗೆ ದಲಿತ ಮನಸ್ಸುಗಳು ತಕರಾರು ತೆಗೆದು ಅಸಮಾಧಾನ ವ್ಯಕ್ತಪಡಿಸಿದ್ದನ್ನು ಅರ್ಥಮಾಡಿಕೊಳ್ಳಬಹುದು. ಆ ಯಾದಿಯಲ್ಲಿ ಗಾಂಧಿಯನ್ನು ಸೇರಿಸದೇ ಸ್ಪರ್ಧೆಯ ಪ್ರಾಯೋಜಕರು ತಮ್ಮ ಪೇಚಾಟ ಕಡಿಮೆ ಮಾಡಿಕೊಂಡಿದ್ದಾರೆನ್ನಬಹುದು. ಏಕೆಂದರೆ ಗಾಂಧಿ ಏನಾದರೂ ಅಲ್ಲಿದ್ದಿದ್ದರೆ ಅವರು ಖಂಡಿತ ಕೊನೆಯ ಸ್ಥಾನದಲ್ಲಿರುತ್ತಿದ್ದರು. ಅಂಬೇಡ್ಕರ್ ವ್ಯಕ್ತಿತ್ವ ಪ್ರಾಯೋಜಕರನ್ನು ಖಂಡಿತ ಕಸಿವಿಸಿಗೊಳಿಸಿರುತ್ತದೆ.

> ಹೋಲಿಕೆ, ಸ್ಪರ್ಧೆ, ಚರ್ಚೆ ಇವೆಲ್ಲ ನವಉದಾರವಾದದಿಂದ ಉತ್ತೇಜಿತಗೊಂಡ ಮಾರುಕಟ್ಟೆ ಭಾಷೆಯ ಪದಗಳು. ಈ ಜಗತ್ತಿನ ಪ್ರತಿಯೊಂದನ್ನೂ ಸರಕಾಗಿಸಿ, ಬೆಲೆ ಕಟ್ಟಿ, ಶ್ರೇಣೀಕರಣಗೊಳಿಸಬಹುದು ಎನ್ನುವುದು ಅದರ ಮೂಲಭೂತ ಧೋರಣೆ. ಜನರ ಪ್ರೀತಿ, ದ್ವೇಷ, ಸಿಟ್ಟನ್ನೂ ಮನರಂಜನಾ ಮೌಲ್ಯವುಳ್ಳ ಸರಕಾಗಿಸಿ ಅವರ ಗಮನವನ್ನು ಮುಖ್ಯ ವಿಷಯಗಳಿಂದ ಬೇರೆಡೆ ಸೆಳೆದು ಗ್ರಾಹಕ ಸಂಸ್ಕೃತಿಯನ್ನು ಪ್ರೋತ್ಸಾಹಿಸಿ, ಅದೇ ವೇಳೆಗೆ ಅದರಲ್ಲಿ ಪಾಲ್ಗೊಂಡಿದ್ದ ವ್ಯಾಪಾರೀ ಸಮೂಹಗಳಿಗೆ ಲಾಭ ಗಿಟ್ಟಿಸುವುದು ಅದರ ಉದ್ದೇಶ.

ಅಂಬೇಡ್ಕರ್ ಅವರನ್ನು ಆಯ್ಕೆ ಮಾಡಿ ಪ್ರಾಯೋಜಕರು ನಗೆಪಾಟಲಿಗೀಡಾಗದಂತೆ ದಲಿತರು ಪಾರುಮಾಡಿದ್ದಾರೆ. ದಲಿತರ ಮಟ್ಟಿಗೆ ಹೇಳುವುದಾದರೆ ಅವರ ಐಡೆಂಟಿಟಿಯನ್ನು ಅದು ಮತ್ತಷ್ಟು ಗಟ್ಟಿಗೊಳಿಸಿತು.

ಆದರೆ ಈ ಫಲಿತಾಂಶ ದಲಿತ ಯುವಜನತೆಯ ಆಶೋತ್ತರದಂತೆ ಅಂಬೇಡ್ಕರ್ ಅವರಿಗೆ ಯಾವ ಗೌರವವನ್ನೂ ತಂದಿಲ್ಲ. ಸ್ಪರ್ಧೆಯಲ್ಲಿ ಯಾರ್‍ಯಾರದೋ ಜೊತೆ ಅಂಬೇಡ್ಕರ್ ನಿಂತಿದ್ದು ಅಂಬೇಡ್ಕರ್ ವ್ಯಕ್ತಿತ್ವದ ಗೌರವ ಕಡಿಮೆ ಮಾಡಿದಂತಾಯಿತು. ಅಂಬೇಡ್ಕರರನ್ನು ಗಾಂಧಿಯ ನಂತರ ಎಂದು ಪರಿಗಣಿಸಿರುವುದರಿಂದ; ಅಟಲ್ ಬಿಹಾರಿ ವಾಜಪೇಯಿ, ಲತಾ ಮಂಗೇಶ್ಕರ್ ಅಂಥವರ ಸಾಲಿನಲ್ಲಿ ನಿಲ್ಲಿಸಿರುವುದರಿಂದ ಅವರನ್ನು ತೃಣವಾಗಿಸಲು ಅವಕಾಶ ಮಾಡಿದಂತಾಯಿತು. ಈ ಮತದಾನವನ್ನು ದಲಿತರು ಸಂಪೂರ್ಣ ಬಹಿಷ್ಕರಿಸಿದ್ದರೆ ಕೊನೆಪಕ್ಷ ತಮ್ಮ ನಾಯಕನನ್ನು ಅಂಥವರ ಸಾಲಿನಲ್ಲಿ ನಿಲ್ಲಿಸಿ ಹೋಲಿಸುವುದನ್ನು ಅವರು ಇಷ್ಟಪಡುವುದಿಲ್ಲ ಎಂಬ ಸಂದೇಶವಾದರೂ ರವಾನೆಯಾಗುತ್ತಿತ್ತು.

ಶ್ರೇಷ್ಠತೆಯ ಶ್ರೇಣೀಕರಣ

ಈ ಮಾಧ್ಯಮ ತಮಾಷೆ ಏನು ಮಾಡಿತೆಂದರೆ ಶ್ರೇಷ್ಠತೆಯನ್ನೇ ಕ್ಷುಲ್ಲಕಗೊಳಿಸಿತು. ಆ ಪಟ್ಟ ಬಿಂಬಿಸುವಂತೆ ವ್ಯಕ್ತಿತ್ವದ ಶ್ರೇಷ್ಠತೆ ಅವರ ಅತ್ಯುಚ್ಚ ಸಾಧನೆಯಲ್ಲಿದೆಯೆ? ಹಾಗಾದರೆ ಮಾಧ್ಯಮದ ಕಣ್ಣಿಗೇ ಬೀಳದ ಎಷ್ಟೋ ಸಾಧಕರು ನಮ್ಮಲ್ಲಿದ್ದಾರೆ. ಅದೇ ಮಾನದಂಡವಾಗಿದ್ದಲ್ಲಿ ನೊಬೆಲ್ ಪ್ರಶಸ್ತಿ ವಿಜೇತ ಸಿ.ವಿ.ರಾಮನ್ ಅವರನ್ನಾಗಲೀ ಅಥವಾ ಒಲಿಂಪಿಕ್‌ನಲ್ಲಿ ಭಾರತಕ್ಕೆ ಮೊದಲ ಚಿನ್ನ ಗೆದ್ದುಕೊಟ್ಟ ಅಭಿನವ್ ಬಿಂದ್ರಾ ಅವರನ್ನಾಗಲೀ ಆ ಪಟ್ಟಿಯಿಂದ ಹೇಗೆ ಕೈಬಿಟ್ಟರು?

ತಮ್ಮ ಅಸ್ಪೃಶ್ಯ ಹಿನ್ನೆಲೆಯಿಂದ ವಿದ್ವತ್ತಿನ ಅತ್ಯುನ್ನತ ನೆಲೆ ತಲುಪಿದರೆಂದು ಅಂಬೇಡ್ಕರ್ ಶ್ರೇಷ್ಠ ವ್ಯಕ್ತಿಯೆ? ಪ್ರತಿಷ್ಠಿತ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಿಂದ ಡಿಎಸ್‌ಸಿ ಪಡೆದ ಮೊದಲ ಭಾರತೀಯ ಅವರು ಎನ್ನುವುದು ಬಹಳ ಜನರಿಗೆ ಗೊತ್ತಿರಲಿಕ್ಕಿಲ್ಲ. ನಂತರವೂ ಹಲವು ಕ್ಷೇತ್ರಗಳಿಗೆ ವಿಸ್ತರಿಸಿದ ಅವರ ಪಾಂಡಿತ್ಯದ ಬಗೆಗೆ ಎಷ್ಟು ಬೇಕಾದರೂ ಹೇಳಬಹುದು. ಜನಪ್ರಿಯ ಅಭಿಪ್ರಾಯದಂತೆ ಅವರು ಸಂವಿಧಾನ ರಚಿಸಿದರೆಂದು ಶ್ರೇಷ್ಠ ವ್ಯಕ್ತಿಯೆ? ವೈಸರಾಯ್ ಅವರ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ, ಭಾರತದ ಮೊತ್ತಮೊದಲ ಕಾನೂನು ಮಂತ್ರಿಯಾಗಿ ಆಡಳಿತದ ಅತ್ಯುಚ್ಚ ಸ್ಥಾನದವರೆಗೆ ಏರಿದರೆಂದು ಶ್ರೇಷ್ಠರೇ? ತಾವು ಹುಟ್ಟಿದ ಅಸ್ಪೃಶ್ಯ ಸಮುದಾಯದ ಏಳ್ಗೆಗೆ ದುಡಿದರೆಂದು ಶ್ರೇಷ್ಠರೇ? ಬೌದ್ಧ ಧರ್ಮವನ್ನು ಅದು ಹುಟ್ಟಿದ ನಾಡಿನಲ್ಲೇ ಪುನರುಜ್ಜೀವನಗೊಳಿಸಿದರೆಂದು ಶ್ರೇಷ್ಠ ವ್ಯಕ್ತಿಯೆ? ಅಥವಾ ಅವರ ಮೂರ್ತಿಗಳು ಪ್ರಪಂಚದ ಮತ್ತಾರ ಪ್ರತಿಮೆಗಳಿಗಿಂತ ಅತಿಹೆಚ್ಚು ಸಂಖ್ಯೆಯಲ್ಲಿವೆಯೆಂದು; ಕಾಲಕ್ರಮೇಣ ಪ್ರಾಮುಖ್ಯತೆ ಹೆಚ್ಚುತ್ತಲೇ ಹೋಗುತ್ತಿರುವ ಏಕೈಕ ವ್ಯಕ್ತಿಯೆಂದು; ಅವರ ನೆನಪಿನ ಸಮಾರಂಭಗಳು ಲೆಕ್ಕವಿಲ್ಲದಷ್ಟು ಜನರನ್ನು ಆಕರ್ಷಿಸುವುದೆಂದು ಅವರು ಶ್ರೇಷ್ಠರೇ? ಇಲ್ಲ, ಅಂಬೇಡ್ಕರ್ ಈ ಯಾವುದೇ ಒಂದು ಕಾರಣದಿಂದ ಶ್ರೇಷ್ಠರೆನಿಸಿಕೊಳ್ಳುವುದಿಲ್ಲ. ನಾವು ಆ ತೆರನ ಸಾಧಕರಿಗೆ ಹಗುರವಾಗಿ ಶ್ರೇಷ್ಠ ಎಂಬ ಹಣೆಪಟ್ಟಿ ಕಟ್ಟಿಬಿಡುತ್ತೇವಾದರೂ ವೈಯಕ್ತಿಕ ಸಾಧನೆ ಶ್ರೇಷ್ಠತೆಯ ಮಾನದಂಡವಾಗಲು ಸಾಧ್ಯವಿಲ್ಲ. ಏಕೆಂದರೆ ಮೂಲತಃ ವೈಯಕ್ತಿಕ ಸಾಧನೆಯು ತನ್ನತನದ ವಿಸ್ತರಣೆಯೇ ಆಗಿರುತ್ತದೆ. ಯಾರು 'ಸ್ವ' ಕಲ್ಪನೆಯಿಂದ ತಮ್ಮ ವ್ಯಕ್ತಿತ್ವವನ್ನು ಹೊರತಂದು ವಿಶ್ವಾತ್ಮಕ ಉದ್ದೇಶ ಹೊತ್ತು ಕೆಲಸ ಮಾಡುತ್ತಾರೋ ಅವರನ್ನು ಮಾತ್ರ ಶ್ರೇಷ್ಠ ಎಂದು ಕರೆಯಬಹುದು.


ಅಂಬೇಡ್ಕರ್ ಏಕೆ ಶ್ರೇಷ್ಠವ್ಯಕ್ತಿಯೆಂದರೆ ಈ ಭೂಗ್ರಹ ಬದುಕಲು ಉತ್ತಮ ಸ್ಥಳವಾಗುವಂತೆ ಮಾಡಲು ಪ್ರಾಮಾಣಿಕವಾಗಿ ಯತ್ನಿಸಿದರು. ತಮ್ಮ ಜಾತಿಯ ಜನರ ಏಳ್ಗೆಗಾಗಿಯೇ ಹೋರಾಡಿದ ವ್ಯಕ್ತಿಯೆಂದು ಖಂಡಿತ ಅವರನ್ನು ಬಿಂಬಿಸಲಾಗದು. ಮನುಷ್ಯನ, ಅಷ್ಟೇಕೆ ಎಲ್ಲ ಜೀವಿಗಳ ನೈಸರ್ಗಿಕ ಪ್ರವೃತ್ತಿ ತಮ್ಮದೇ ಸಮುದಾಯಕ್ಕೆ ಒಳಿತನ್ನುಂಟುಮಾಡಲು ಯತ್ನಿಸುವುದು. ಅದು ಮೂಲಭೂತ ಬುಡಕಟ್ಟು ಗುಣ. ಅಂಥ ಸಾಮುದಾಯಿಕ ಕೆಲಸವನ್ನು ಸುತ್ತಲ ಬದುಕಿನೊಂದಿಗೆ ಅಂತರ್‌ಸಂಬಂಧ ಹೊಂದಿದ ತಮ್ಮ ವ್ಯಕ್ತಿತ್ವದ, ತಮ್ಮ ಕುಟುಂಬದ ವಿಸ್ತರಣೆಯಾಗಿ ಭಾವಿಸಿಯೂ ಮಾಡಬಹುದು. ಆದರೆ ಅಂಬೇಡ್ಕರರು ದಲಿತರ ಪರವಾಗಿ ತನ್ನ ಜಾತಿಯ ಜನ ಎಂದಷ್ಟೇ ನಿಂತಿದ್ದರೆ ಅವರನ್ನು ಶ್ರೇಷ್ಠ ವ್ಯಕ್ತಿಯೆಂದು ಹೇಳಲಾಗುತ್ತಿರಲಿಲ್ಲ. ಅವರ ದಲಿತ ಪ್ರಶ್ನೆ ಭಾರತೀಯ ಸಮಾಜವನ್ನು ಪ್ರಜಾಪ್ರಭುತ್ವವಾದಿಯನ್ನಾಗಿಸಿತು. ಇಲ್ಲದಿದ್ದರೆ ನಿಂತ ನೀರಾಗಿ ಕೊಳೆಯತೊಡಗಿದ್ದ ಅದು ಖಂಡಿತ ವಿನಾಶ ತಲುಪುತ್ತಿತ್ತು. ಶೋಷಣೆ ಮತ್ತು ವಂಚನೆಗಳಿಂದ ಮನುಷ್ಯನನ್ನು ಬಿಡುಗಡೆಗೊಳಿಸಲು ಅದು ಅತ್ಯವಶ್ಯಕ, ಅನಿವಾರ್ಯ ಕ್ರಮವಾಗಿತ್ತು. ಸಂಕುಚಿತ ರಾಷ್ಟ್ರೀಯತೆಯ ಧೋರಣೆಗಳಿಂದಾಚೆ ಅವರ ದೃಷ್ಟಿಕೋನ ಹರಡಿಕೊಂಡಿತ್ತು. ಮಾನವತ್ವವು ಸ್ವಾತಂತ್ರ್ಯ ಸೋದರತೆ ಮತ್ತು ಸಮಾನತೆಗಳಲ್ಲಿದೆಯೆಂಬ ದೃಢನಂಬಿಕೆ ಹೊಂದಿತ್ತು. ಕಮ್ಯುನಿಸ್ಟರಂತೆ ಮೊದಲೇ ಸಿದ್ಧಗೊಳಿಸಿದ ಚೌಕಟ್ಟಿನಲ್ಲಿ ಜಾತಿಯನ್ನು ಅರ್ಥಮಾಡಿಸಲು ಹೊರಡದೇ ಜಾತಿ ಪದ್ಧತಿಯನ್ನು ಅದರ ಅಸ್ತಿತ್ವದ ನೈಜ ರೂಪದಲ್ಲೇ ಮುಖಾ ಮುಖಿಯಾಗಿದ್ದರಲ್ಲಿ ಅವರ ಶ್ರೇಷ್ಠತೆಯಿದೆ. ಅವರ ದೃಷ್ಟಿಕೋನಕ್ಕೆ ಸಂಪೂರ್ಣ ವಿರುದ್ಧವಾಗಿದ್ದ ಜಾತಿಪದ್ಧತಿಯನ್ನು ಅದು ಕಿತ್ತೊಗೆಯಲೇಬೇಕಿತ್ತು. ಜಾತಿ ಕಾಯಿಲೆಯ ರೋಗಪ ಮತ್ತು ಅವರ ಚಿಕಿತ್ಸೆ ಸಂಪೂರ್ಣ ಯಶಸ್ವಿಯಾಗಿಲ್ಲದ ಇರಬಹುದು. ಅದು ಬೇರೆ ವಿಷಯ. ಈ ದೃಷ್ಟಿಯಿಂ ಪರಿಶೀಲಿಸಿದರೆ ಅವರು ಯಾವುದೇ ವ್ಯಕ್ತಿಗಿಂ ಎತ್ತರದವರಾಗಿ ಕಾಣಿಸುತ್ತಾರೆ. ಆದರೂ ಅವರನ್ನು ಅತಿಶ್ರೇ ಎಂದು ಶ್ರೇಣೀಕರಣಕ್ಕೊಳಪಡಿಸುವುದೇ ಸಂಕುಚಿ ಮನೋಭಾವವಾಗಿ ಹಾಗೂ ತಪ್ಪು ಗ್ರಹಿಕೆಯಾ ಕಾಣಿಸುತ್ತದೆ.

ನವ ಉದಾರವಾದದ ಅಜೆಂಡಾ

ಈ ಸ್ಪರ್ಧೆ ಶ್ರೇಷ್ಠತೆಯನ್ನು ಜನಪ್ರಿಯಗೊಳಿಸುವ ಒಂದ ಪ್ರಯತ್ನವಾಗಿದೆ. ಅದು ಸೂಕ್ಷ್ಮ ಅಂಶಗಳನ್ನು ಗಮನಿಸುವುದ ಇಲ್ಲ. ನಾವು ಶ್ರೇಷ್ಠರೆಂದುಕೊಂಡ ಎಷ್ಟೋ ಸ್ವಾತಂತ ಹೋರಾಟಗಾರರೂ ಸಹ ವಿಶ್ವಾತ್ಮಕ ದೃಷ್ಟಿಕೋನ ಹೊಂದಿ ಅವರ ಉದ್ದೇಶಗಳು ತಮ್ಮ ಜಾತಿ ಆಳ್ವಿಕೆಯನ್ನು ಪುನರ ಸ್ಥಾಪಿಸುವುದರಿಂದ ಹಿಡಿದು ವರ್ಗ ನಿಯಮಗಳನ ಹೊಸದಾಗಿ ಕಟ್ಟುವತನಕ ಹರಡಿಕೊಂಡಿದ್ದವು. ಬಹಳಷ ಜನ ಸಂಕುಚಿತ ರಾಷ್ಟ್ರೀಯತೆಯಿಂದ ಪ್ರೇರಿತರಾಗಿದ್ದರೆ ಹೊರತು ವಿಶ್ವಾತ್ಮಕ ಚಿಂತನೆಗಳನ್ನು ಹೊಂದಿರಲಿಲ್ಲ. ಭಗತ ಸಿಂಗ್‌ನಂತಹ ಎಲ್ಲೋ ಕೆಲ ವ್ಯಕ್ತಿಗಳಷ್ಟೇ ಇಂಥ ಕ್ಷುಲ್ಲ ವಿಷಯಗಳಿಂದಾಚೆ ಶೋಷಣೆಯಿಲ್ಲದ ಜಗತ್ತಿನ ಸ್ಥಾಪನೆಯ ತಮ್ಮ ದೃಷ್ಟಿಕೋನ ವಿಸ್ತರಿಸಿಕೊಂಡರು. ಸದ್ಯ ಭಗತ ಸಿಂಗ್ ಶ್ರೇಷ್ಠರ ಪಟ್ಟಿಯಲ್ಲಿ ಸೇರುವ ಅಗೌರವದಿಂದ ಪಾರಾಗಿದ್ದಾನೆ!

ಹೋಲಿಕೆ, ಸ್ಪರ್ಧೆ, ಚರ್ಚೆ ಇವೆಲ್ಲ ನವಉದಾರವಾದದಿಂದ ಉತ್ತೇಜಿತಗೊಂಡ ಮಾರುಕಟ್ಟೆ ಭಾಷೆಯ ಪದಗಳು. ಈ ಜಗತ್ತಿನ ಪ್ರತಿಯೊಂದನ್ನೂ ಸರಕಾಗಿಸಿ ಬೆಲೆ ಕಟ್ಟಿ, ಶ್ರೇಣೀಕರಣಗೊಳಿಸಬಹುದು ಎನ್ನುವುದು ಅದರ ಮೂಲಭೂತ ಧೋರಣೆ. ಈ ನವಉದಾರವಾದಿಗಳ ಸೌಂದರ್ಯದ ಮಾಪಕವನ್ನು ಸಿದ್ಧಗೊಳಿಸಿ, ಹೆಣ್ಣಿನ ಸೌಂದರ್ಯವನ್ನೇ ರೂಪದರ್ಶಿಯಾಗಿ ಬಳಸಿಕೊಂಡು ಸೌಂದರ್ಯ ಸ್ಪರ್ಧೆಗಳನ್ನು ಆಯೋಜಿಸಿದರು. ಕೊಳ್ಳುಬಾಕ ಸಂಸ್ಕೃತಿಯು ಹೆಣ್ಣಿನ ದೇಹವನ್ನು, ಅಷ್ಟೇ ಅಲ್ಲ ಪ್ರೀತಿ ಭಾವನೆಗಳು, ವಿರಾಮ ಮತ್ತು ಖಾಸಗಿತನವನ್ನೂ ಬಳಸಿಕೊಂಡು ಎಲ್ಲರೂ ಮಾರುಕಟ್ಟೆ ಅವಲಂಬಿಸುವಂತೆ ಮಾಡುತ್ತದೆ. ಭಾರತದ ಶ್ರೇಷ್ಠ ವ್ಯಕ್ತಿಯನ್ನು ಆರಿಸುವುದೂ ಇದರ ಒಂದು ಭಾಗವೇ. ಜನರ ಪ್ರೀತಿ, ದ್ವೇಷ, ಸಿಟ್ಟನ್ನೂ ಮನರಂಜನಾ ಮೌಲ್ಯವುಳ್ಳ ಸರಕಾಗಿಸಿ ಅವರ ಗಮನವನ್ನು ಮುಖ್ಯ ವಿಷಯಗಳಿಂದ ಬೇರೆಡೆ ಸೆಳೆದು ಗ್ರಾಹಕ ಸಂಸ್ಕೃತಿಯನ್ನು ಪ್ರೋತ್ಸಾಹಿಸಿ, ಅದೇ ವೇಳೆಗೆ ಅದರಲ್ಲಿ ಪಾಲ್ಗೊಂಡಿದ್ದ ವ್ಯಾಪಾರೀ ಸಮೂಹಗಳಿಗೆ ಲಾಭ ಗಿಟ್ಟಿಸುವುದು ಅದರ ಉದ್ದೇಶ. ಈ ಸ್ಪರ್ಧೆ ಅನವಶ ಚರ್ಚೆ, ವಿವಾದ ಹುಟ್ಟುಹಾಕಿ ಚಾನೆಲ್‌ಗಳ ರೇಟಿಂಗ್ ಪಾಯಿಂಟ್ ಹೆಚ್ಚಿಸಿದ್ದನ್ನು ನೋಡಬಹುದು. ಈ ಚರ್ಚೆ ಮತ್ತು ವಿವಾದವನ್ನು ಜೀವಂತವಾಗಿರಿಸಲೆಂದೇ ಲಕ್ಷಾಂತರ ಫೋನ್ ಕರೆ ಮತ್ತು ಎಸ್ಸೆಮ್ಮೆಸ್‌ಗಳನ್ನು ಉತ್ತೇಜಿಸಲಾಯಿತು. ಅವು ನೇರವಾಗಿ ಫೋನ್ ಕಂಪನಿಗಳ ಲಾಭ ಹೆಚ್ಚಿಸಿದವು. ಈ ಸ್ಪರ್ಧೆಯ ಪರೋಕ್ಷ ಪರಿಣಾಮವೆಂದರೆ ಮಾರುಕಟ್ಟೆ ಗುರುಗಳು ಮತ್ತು ಮಾಧ್ಯಮದವರಿಗೆ ದಲಿತ ಮಾರುಕಟ್ಟೆಯ ಆಳಗಲ ತಿಳಿದಿದ್ದು.

ನವ ಉದಾರವಾದವು ಜಾತಿವಿನಾಶಕ್ಕೆ ಯಾವ ಕ್ರಮ ಕೈಗೊಳ್ಳದಿದ್ದರೂ ಆ ವಿಷಯದ ಬಗೆಗೆ ಮಾತನಾಡಲು ಅದಕ್ಕೆ ಇರುಸುಮುರುಸು. ಜಾತಿ ಈಗ ಇಲ್ಲವೇ ಇಲ್ಲ ಎಂದು ಸಾಧಿಸುವುದು ಅದಕ್ಕೆ ಅನುಕೂಲಕರ. ಈ ಕ್ಷುಲ್ಲಕ ಸ್ಪರ್ಧೆಯು ಅದರ ಉದ್ದೇಶ ಏನೆಂಬುದನ್ನು ಸ್ಪಷ್ಟಗೊಳಿಸಿದೆ. ಅಂಬೇಡ್ಕರ್ ಗೆಲುವಿನೊಂದಿಗೆ ಭಾರತದ ನವ ಉದಾರವಾದಿ ಗಣ್ಯರು ಭಾರತಕ್ಕೆ ಜಾತಿ ಪೂರ್ವಗ್ರಹವೇ ಇಲ್ಲವೆಂದು ಘೋಷಿಸುತ್ತಿದ್ದಾರೆ. ಮಾರುಕಟ್ಟೆಯ ದೊಡ್ಡ ಕೊರತೆಯೊಂದು ಇದರಿಂದ ನಿವಾರಣೆಯಾದಂತಾಗಿದೆ. ನವ ಉದಾರವಾದವು ಜಾಗತೀಕರಣದ ಆರಂಭದ ದಿನಗಳಿಂದಲೂ ದಲಿತರಿಗೆ ಅದು ಹೇಗೆ ಲಾಭದಾಯಕ ಎಂದು ಮನವೊಲಿಸಿ ಹೇಳುತ್ತಲೇ ಬಂದಿದೆ. ದಲಿತ ಗಣ್ಯರನ್ನು, ದಲಿತ ಚೇಂಬರ್ಸ್ ಆಫ್ ಕಾಮರ್ಸ್ ಸಂಸ್ಥೆಗಳನ್ನು ಅದು ಪ್ರೋತ್ಸಾಹಿಸುತ್ತ ಬಂದಿದೆ. ಆದರೆ ಇಂಥ ಯೋಚನೆಗಳನ್ನು ಅದರ ಮುಖಬೆಲೆಯಂತೆ ಪರಿಗಣಿಸಲು ಬರುವುದಿಲ್ಲ. ಈಗ ನವ ಉದಾರವಾದದ ಪ್ರತಿಪಾದಕರು ತಮ್ಮ ಬತ್ತಳಿಕೆಯಲ್ಲಿ ದಲಿತ ಮಾರುಕಟ್ಟೆ ಎಂಬ ಹೊಸದೊಂದು ಅಸ್ತ್ರವನ್ನು ಸೇರಿಸಿಕೊಂಡಂತಾಗಿದೆ ಅಷ್ಟೇ.



ಕುಮಾರಸ್ವಾಮಿ ಕಾವೇರಿ ಸಮಸ್ಯೆ ಬಗೆಹರುಸ್ತನಂತೆ

ಬಯಲುಸೀಮೆ ಕಟ್ಟೆಪುರಾಣ

• ಬಿ.ಚಂದ್ರೇಗೌಡ

"ರೈತರು ಕನ್ನಂಬಾಡಿಗೇ ಮುತ್ತಿಗೆ ಹಾಕಿದ್ವರಂತೆ ಮಾವ" ಎಂದ ಉಗ್ರಿ.

"ನನಿಗೂ ಹೋಗಿ ಬರನ್ನ ಅನ್ನುಸ್ತಾ ಅದೆ. ಏನು ... ಸರೀಳ ಕೀಳದಿಲ್ಲ ಅದ್ಕೆ ಸುಮ್ಮನಿದ್ದಿನಿ."

"ಯಾರಾರ ಕಾರತಂದ್ರೆ ಹೋಯ್ತಿಯಾ?" ಎಂದಳು ...ಮ್ಮ.

"ಅಂತ ಮಾದೇಗೌಡನೆ ಹೋಗಬೇಕಾದ್ರೆ ನಾನು ...ನಿಗಿಂತ ಗಟ್ಟಿಯಾಗಿದ್ದಿನಿ ಕಂಡ್ಯ."

"ಮಾದೇಗೌಡ್ರು ಯಾಕೆ ಮೃತ್ತಗಾದ್ರು ಅಂದ್ರೆ ಅವರು ...ಕೆ ಭಾರಿ ಕುಡಿತಿದ್ರಂತೆ. ಇಲ್ಲ ಅಂದಿದ್ರೆ ಇನ್ನೂ ...ಯಾಗಿರೋರು. ಆದ್ರು ಕಣ್ಣುಯಂಗವೆ ಅಂತಿ. ಅಂಗೆ ...ನೆ ಕಣ್ಣಿದ್ದಂಗವೆ. ಕನ್ನಡಕ ಇಲ್ದೆಯಿದ್ರೂ ಓತ್ತರೆ."

"ಅವುನಿಲ್ದೆಯಿದ್ರೆ ಮಂಡೇವುದಲ್ಲಿ ಕಾವೇರಿ ಹೋರಾಟ ...ಜೋರೆ ಇರಲಿಲ್ಲ ಕಂಡ್ಯ" ಎಂದ ಸೀರ.

"ಯಾಕೆ, ಅಂಬರೀಸ ಇಲವೇನೊ ಮಾವ?" ಎಂದಳು ...ಮ್ಮ.

"ಅಂಬರೀಸನಿಗೆ ಇಂತ ಹೋರಾಟ ಗೊತ್ತಿಲ್ಲ ಕಣೆ. ...ಷ್ಟು ಭಾಸಣ ಮಾಡಿದ ಮ್ಯಾಲೆ 'ಬತ್ತಿನಿ ಕಣ್ರಯ್ಯ ...ಯ್ತು' ಅಂತನೆ. ಅದೇ ಮಾದೇಗೌಡ ಅಂಗಂದನೆ? ...ಮಠ ಬುಟ್ಟು ಕುಂತವುನೆ."

"ಲೆ ಉಗ್ರಿ, ಚಲುವರಾಯ ಸ್ವಾಮಿ ರಾಜಿನಾಮೆ ...ಟ್ಟಿವುನಂತೆ ನಿಜವ?"

"ಕುಮಾರಸ್ವಾಮಿ ಕೈಲಿ ಕೊಟ್ಟಿದ್ದನಂತೆ ... ಅಂತೂ ಕಾವೇರಿ ನೀರಿನಿಂದ ಯಲ್ರೂ ...ದ್ರುಗಳಾಯ್ತಾ ಅವುರೆ. ಜಯರಾಮನ ಮಗ ... ಬುಡಬ್ಯಾಡಿ ಅಂತ ಅರ್ಜಿ ಬರಕಂಡು ...ಪಾಲನತ್ರಕೋಗಿದ್ನಂತೆ."

"ಜಯರಾಮನಿಗೆ ಮಗಿದ್ನೆ?"

"ಊ ಕಣೆ, ಆಗ್ಲೆ ಮೈಜಾರಿಟಿಗೆ ಬಂದವುನೆ. ಅವುನ್ನ ...ಎಸ್ ಯಮ್ಮೆಲ್ಲೆ ಮಾಡಬೇಕು ಅಂತ ಕುಮಾರಸ್ವಾಮಿ ...ದನಂತೆ. ಸರಿ ಇನ್ನ ರಾಜಕೀಯಕ್ಕೆ ಬರಬೇಕಾದ್ರೆ ...ಸುಮ್ಮನೆ ಬರಕ್ಯಾದತೇ. ಸದ್ದು ಮಾಡಬೇಕು ತಾನೆ. ... ಮಂಡ್ಯದಿಂದ ಬೆಂಗಳೂರಿಗಂಟ ನ್ಯಡಕಂಡೋಗಿ ... ಕೊಟ್ಟನಂತೆ."


"ಅವುನರ್ಜಿ ಕೊಟ್ಟು, ಇವುನು ರಾಜೀನಾಮೆ ಕೊಟ್ರೂ ...ಯು ನಿಲ್ಸಕ್ಯಾಗಿಲ್ಲ ನೋಡು" ಎಂದ ಸೀರ.

"ಊ, ರೈತರಿಗೆ ಬೆಳೆ ಸಮಸ್ಯೆ ಆದ್ರೆ, ರಾಜಕಾರಣಿಗಳು ...ರ್ಚಿ ಬ್ಯಳಸದ್ಯಂಗೆ ಅಂತ ಕಾವೇರಮ್ಮನ ಹಿಂದೆ ಬಿದ್ದವುರೆ. ... ನಡುವೆ ಕುಮಾರಸ್ವಾಮಿ 'ಕಾವೇರಿ ಸಮಸ್ಯೆ ನಾನು ...ಹರುಸ್ತಿನಿ' ಅಂದವುನೆ. ಅಂಗಂದ್ರೆ ನನಿಗೆ ಓಟು ಕೊಡಿ ...ಕ ತಾನೆ?"

"ಅಂತ ದ್ಯಾವೇಗೌಡುನ ಕೈಲೇ ಆಗದ್ದು ಇವುನ ...ಆದತೆ?"

"ಆಗದಿಲ್ಲ ಅಂತ ಅವುನಿಗೂ ಗೊತ್ತು ಕಣೊ ಮಾವ. ಸುಳ್ಳೀಲಿ ಓಟು ಕೇಳಕ್ಕೇನಂತೆ. ಇದೇ ದ್ಯಾವೇಗೌಡ್ರು, ಹದಿನೆಂಟು ತಿಂಗಳು ಮುಖ್ಯಮಂತ್ರಿ ಆಗಿದ್ರು. ಆಗ್ಲು ಇದೇ ಶೆಟ್ಟು ತರ ನೀರು ಬುಟ್ಟು ಬಚಾವಾದ್ರು. ಆಮ್ಯಾಲೆ ಹನ್ನೊಂದು ತಿಂಗಳು ಪ್ರಧಾನಿಯಾದ್ರು. ಆಗ್ಲಾರ ಸರಿಮಾಡಬವುದಿತ್ತಲವೆ."

"ಊ ಕಂಡ್ಯ, ಅದೊಂದು ಕ್ಯಲಸವಾರ ಮಾಡಿದ್ರೆ ಇವತ್ತು ಇಂಥಾ ಗಲಾಟೆಗೆ ಅವುಕಾಸಿತ್ತಿರಲಿಲ್ಲಾ" ಎಂದ ಕಾಳಮಾವ.



"ಮಳೆ ವಡದ್ರೆ ಯಲ್ಲ ಸರಿಯಾಯ್ತದೆ" ಎಂದ ಸೀರ.

"ನಿಜ ಚಿಗಪ್ಪ, ಮಳೆಗೆ ಮಾತ್ರ ನಮ್ಮ ಪ್ರಾಬ್ಲಂ, ಅಂದ್ರೆ ತಮುಳನಾಡು, ನಮ್ಮ ಪ್ರಾಬ್ಲಂ ಸಾಲೂ ಮಾಡೊ ಶಕ್ತಿ ಅದೆ. ಆಗ ಗಲಾಟೆ ಮಾಡಿದೋರು, ಸ್ಟ್ರೈಕ್ ಮಾಡಿದೋರಲ್ಲ ಸೈಲೆಂಟಾಯ್ತರೆ" ಎಂದು ವಾಟಿಸ್ದ ಬಂದ.

"ಸುಮಸುಮನೆ ಗಲಾಟ ಮಾಡಿದ್ರಲ್ರ?" ಎಂದಳು ಜುಮ್ಮಿ.

"ಸುಮ್ಮಸುಮ್ಮನೆ ಗಲಾಟ ಮಾಡೋರು ಕುದುಕು ಕಣಕ್ಕ. ಆದ್ರೆ ಈಗ ಗಲಾಟ ಮಾಡ್ದ ಇರೋರು ಬರಿ ನೀರು ಕುದುಕು. ಈಗಿನ ಸಿಚುಯೇಶನ್ ನೋಡಿದ್ರೆ ನಮ್ಮ ಬೆಸಗರಳ್ಳಿ ರಾಮಣ್ಣ ಬರದಿದ್ದ ಕತೆ ನ್ಯನಪಾಯ್ತಾ ಅದೆ ಕಣಕ್ಕ."

"ಅದ್ಯಾವು ಕತೆನಪ್ಪ?"

"ಅದು ಗದ್ದೆ ಬಯಲಿನ ಕತೆ. ಏನಪ್ಪಾ ಅಂದ್ರೆ, ಮಡಬಾಯಿಂದ ನೀರು ಬಟ್ಟುಗೊಳ್ಳುವ ವಿಷಯದಲ್ಲಿ ಇಬ್ರಿಗೆ ಜಗಳಾಯ್ತದೆ. ಚಿಕ್ಕಣ್ಣ ಮಾತಾಡ್ತರೆ. ಆಷ್ಟೊತ್ತಿಗೆ ಸರಿಯಾದ ಮಳೆ ಬತ್ತದೆ. ಗದ್ದೆಲೆಲ್ಲ ನೀರು ತುಂಬಿ ಬದೀ ಮೇಲಾಸಿ ಹರಿತದೆ. ಆಗ ಇಬ್ರಿಗೂ ಅಯ್ಯೋ ಯಂಥಾ ಜಗಳ ಮಾಡಿಕಂಡುವಲ್ಲಾ ಅಂತ ನಾಚಿಗಾಯ್ತದೆ. ಅಂಗೆ ಒಂದು ಸರಿಯಾದ ಮಳೆಯಾದ್ರೆ, ಜಯಲಲಿತನೂ ತಣ್ಣಗಾಯ್ತಳೆ. ಅಂಬರೀಸನೂ ಸುಮ್ಮನಾಯ್ತನೆ ಕಣಕ್ಕ" ಎಂದ ವಾಟಿಸ್ದ.

"ಮಂತ್ರಿಯಾಗಿದ್ರು ರಾಜೀನಾಮೆ ಕೊಟ್ಟನಲವೆ. ಅವುನಂಗೆ ಯಾರು ನಡಕಂಡಿದ್ದರೂ?"

"ರಾಜೀನಾಮೆ ಕೊಟ್ಟದ್ಕೆ ಜನ ಸರಿಯಾದ ಬವುಮಾನ ಕೊಟ್ಟವೆ. ಯಲೆಕ್ಸನ್ನಲ್ಲೆ ಸೋಲಿಸಿದ್ವಲ್ಲ."

"ಅದಕವುನೇನು ಕೇರ್ ಮಾಡಲಿಲ್ಲ ಕಣೊ. ಇಷ್ಟಾದಕ್ಕೆ ಟೈಂ ಸಿಕ್ತು ಅನ್ಕಂಡು ಆರಾಮಾದ. ಅವುನ ಬದ್ಗಿಗೆ ಬಂದೋನಿಗೂ ಅದೇ ಸ್ಥಿತಿ ಬಂದದೆ ನೋಡು" ಎಂದ ಉಗ್ರಿ.

"ಅವುನ ಕತೆ ಇರ್ಲಿ, ನಮ್ಮ ಎಡೂರಪ್ಪನ ಕತೆ ಹೇಳೊ. ಬಿಜೆಪಿನೆ ಬುಟ್ಟು ಹ್ವಂಟವುನೇ."

"ಎಲ್ಲಿಗೋದನ್ನ?"

"ಅದಿನ್ನೂ ಹೇಳ್ಯಯಿಲ್ಲ ಕಣಕ್ಕ, ಜನಗಳ ಕೇಳಿ ಹೇಳ್ತನಂತೆ."

"ಯಾವ ಜನಗಳ?"

"ಇನ್ನಾರು ಲಿಂಗಾಯಿತ್ರ ಕೇಳ್ತನೆ. ಆಮ್ಯಾಲೆ ಸುತ್ತೂರು, ಸಿದ್ದಗಂಗೆ ಜಗದ್ಗುರು ಕೇಳ್ತನೆ. ಸಿರಿಗೆರೆ ಜಗದ್ಗುರು ಕೇಳಂಗಿಲವಲ್ಲ."

"ಅದ್ಯಾಕ್ ಕೇಳಂಗಿಲ್ಲ?"

"ಪಾಪ ಅವುರ ಪೀಠತ್ಯಾಗ ಮಾಡಿ ನಿವೃತ್ತಿ ಘೋಷಣೆ ಮಾಡಿಬುಟ್ಟವುರೆ."

"ಅಂಗರ ವಳ್ಳೆ ಸ್ವಾಮಿ ಬುಡ್ತ. ಯಲ್ಲಾ ಸ್ವಾಮಿಗಳೂ ಸಾಯಗಂಟ ಇರುವಾಗ, ಇವುರು ಮದ್ದೆ ಹೋಯ್ತರೆ ಅಂದ್ರೆ ಮೆಚ್ಚಗಬೇಕು."

"ಏ, ಅವುರು ಹೋಯ್ತಿರಲಿಲ್ಲ ದೊಡಪ್ಪಾ, ಹಿಂದಿನ ಸ್ವಾಮಿಗಳು ವಿಲ್ ಮಾಡಿಹೋಗಿದ್ದರಂತೆ. ಅದ್ಕೆ ಪಾಪ ಅತ್ತು ಕರದು ಪೀಠ ಬುಟ್ರು. ಅದೂ ಎಡೂರಪ್ಪನ ಎದುರಿಗೇ ಆಳ್ತರೆ ಅಂದ್ರೆ, ಪಾಪ ಎಡೂರಪ್ಪನಿಗೆ ಏನಾಗಿರಬಾ? ಅಂತ ಸರ್ವಸಂಘ ಪರಿತ್ಯಾಗಿ ಸ್ವಾಮಿನೆ ಕುರ್ಚಿ ಬುಡುವಾಗ ಆಳ್ತರೆ ಅಂದ್ರೆ ಇನ್ನ ನಾನು ಬುಡುವಾಗ ಅತ್ತಿದ್ರು ಯಾವ ಲಕ್ಕ ಅಂತ ಸಮಾಧಾನ ಮಾಡಿಕಂಡನಂತೆ."

"ಅಂತೂ ಎಡೂರಪ್ಪ ಬಿಜೆಪಿ ಮನಿಂದ ಹ್ವರಕೊಯ್ತನೆ ಅನ್ನು."

"ಊ ದೊಡಪ್ಪ ಪಾಪ ಅವುನ ಸಂಪುಟದ ಮಂತ್ರಿಗಳ್ಗೆಲ್ಲ ಕೋಟಿಕೋಟಿ ಹಣ ಮಾಡಿಕಳ್ಳಕ್ಕೆ ಅವುಕಾಸ ಕೊಟ್ಟು, ತಾನೂ ಮಾಡಿ ಕಂಡು, ಒಟ್ಟಿನಲ್ಲಿ ಕರ್ನಾಟಕನ ಯಕ್ಕ ಹುಟ್ಟಿಸಿ ಹೋಯ್ತಾ ಅವುನೆ."

"ಅಂಗಾದ್ರೆ ಬಿಜೆಪಿಲಿ ದುಡಿದಿರೊ ದುಡ್ಡ ಬಿಜೆಪಿ ಮುಗುಸಕ್ಕೆ ಬಳುಸ್ತನೆ ಅಲವೇನೊ?"

"ಧ್ಯಪನೆಟ್ಟ ಕಣೊ ಉಗ್ರಿ. ಆಗ ನಮ್ಮ ಗುರು ಬಂಗಾರಿ ಯರದು ವರ್ಷ ಬಾಚಿ ಬಳದು ಗುಡ್ಡೆ ಹಾಯ್ತಂಡಿದ್ದ, ಅದನ್ನೇ ಕಾಂಗ್ರೆಸ್ ಮುಗಸಕ್ಕೆ ಬಳಸಿ, ಕಡಿಗೆ ಬರಿಕೈಯಾಗಿ, ದ್ಯಾವೇಗೌಡ್ರ ಹಟ್ಟಿಲಿ ತೀರಿಕಂಡ. ಅಂಗೆ ಎಡೂರಪ್ಪನೂ ಈಗ ದುಡಿದಿರೊ ದುಡ್ಡ ಬಿಜೆಪಿ ಹಾಳು ಮಾಡಕ್ಕೆ ಬಳಸ್ತನೆ. ಈ ಟೈಮಲ್ಲಿ ತೊಂದ್ರೆಲಿರೊ ಎಡೂರಪ್ಪನಿಗೆ ಸಪೋರ್ಟ್ ಮಾಡದು ನಮ್ಮ ಧರ್ಮ."

"ನೋಡೀ ಮನಿಯಾಳನ ಮಾತ. ಹೋಗಿ ಎಡೂರಪ್ಪನಿಗೆ ಸಹಾಯ ಮಾಡ್ತನಂತೆ. ಅದ್ಯಾಕ್ಕ?"

"ನೋಡಕ್ಕ, ಎಡೂರಪ್ಪ ಈಶ್ವರಪ್ಪನಿಗಿಂತ್ಲೂ ಬೆಟರ್ ಪರಸನ್ನು. ಯಾರ ಮಾತನೂ ಕೇಳದಿಲ್ಲ, ಸ್ವತಂತ್ರ ವ್ಯಕ್ತಿ, ಆದ್ರೆ ಈಶ್ವರಪ್ಪ ಪೇಜಾವರನ ಪಟಾಲಂ ಮಾತು ಕೇಳ್ತನೆ. ಆದ್ಕೆ ಬಿಜೆಪಿ ಬಲ್ಲಿಂಗ್ ಕೆಡಗಕ್ಕೆ ಎಡೂರಪ್ಪ ತರಬವುದಾದ ಜೆಪಿಬಿಗೆ ನನ್ನ ಸಪೋರ್ಟು."

"ಎಡೂರಪ್ಪನೂ ಒಂದು ಪಾರ್ಟಿ ಕಟ್ಟಿದ್ರೆ ಮುಂದಿನ ಕತೆಯೇನೊ?"


"ಮುಂದಿನ ಕತೆ ಮಜವಾಗಿರತದೆ. ಸರಿಯಾಗಿ ಐದು ಪಾರ್ಟಿ ಯಲಕ್ಷನ್ಗೆ ಬತ್ತವೆ. ಕ್ಷೇತ್ರದ ಯಲ್ಲಾ ಯುವಕರಿಗೂ ಕನಿಷ್ಠ ಇಪ್ಪತ್ತು ದಿನ ಕ್ಯಲಸ ಸಿಕ್ತದೆ. ಆಮ್ಯಾಲೆ ಓಟರ್ಸ್‌ಗೆ ಐದು ಪಾರ್ಟಿನೂ ದುಡ್ಡು ಕೊಡ್ತವೆ. ಜಾಸ್ತಿ ಯಾರು ಕೊಟ್ರೊ ಅವುರಿಗೆ ಕೆಲವುರು ಓಟು ಮಾಡ್ತರೆ. ಇನ್ನು ಕೆಲವುರು ಯಲ್ಲಾರ ಕಡಿಂದ್ಲೂ ಈಸ್ಕೊಂಡು ತಾವು ಮಾಡದ್ನೆ ಮಾಡ್ತರೆ. ಅಂತ ಟೇಮಲಿ ಯಾರು ಗೆಲ್ತರೆ, ಯಾರು ಸೋಲ್ತರೆ ಅನ್ನದ ಯಾರೂ ಹೇಳಕ್ಯಾಗದಿಲ್ಲ. ಹೆಚ್ಚರವನ್ನಕಂಡು ತಲೆಕೆಟ್ಟೊಯ್ತದೆ. ಅದೇನು ಮಾಡ್ತವೆ ಅಂದ್ರೆ ಜಾತಿ ಲಿಸ್ಟ್ ತಗಂಡು ಡಿವೈಡ್ ಮಾಡಿ ಕಡಿಗೆ ತಮಗ್ಯಾರು ಇಷ್ಟನೂ ಅವುರು ಗೆಲ್ತನೆ ಅಂದುಬುಡ್ತವೆ."

"ಅಂಗೂ ಮಾಡ್ತರೆ?"

"ಊ ಮತ್ತೆ, ಇವತ್ತಿನವರಿಗೂ ಪೇಪರ್‌ನವ್ರು ಪಾರಶಾಲಿಟಿನೆ ಮಾಡ್ತ ಬಂದವೆ. ನೋಡು ಆಗ್ಲೆ ಕನ್ನಡಪ್ರಭ ಪೇಪರ್ ಲಾಂಚಿನ ಬದ್ಲು ಮಾಡ್ತದೆ. ಅಂಗೆ ಪೇಜಾವರ ಸ್ವಾಮಿ ಬುರುಡೆ ಕಂಡಂಗೆ ಕಾಣ್ತದೆ. ಭಟ್ಟನಿಗೊಂದು ಥ್ಯಾಂಕ್ಸ್ ಹೇಳಬೇಕು."

●

ಸ್ಟಾರ್ ತನ್ನ ಹೊಳಪು ಕಳೆದುಕೊಂಡರೆ



ಆತ ಈಗ ಸೂಪರ್‌ಸ್ಟಾರ್. ಆ ಸಂಜೆ ನೇರವಾಗಿ ನನ್ನ ಕೋಣೆ ಪ್ರವೇಶಿಸಿದ. 'ಹೇಗಿದ್ದೀರಿ ಸಾರ್?' ...ನು ನೋಡುತ್ತಾ ನಿಂತ. ಕಣ್ಣು ಕದಲಿಸದೆ ನೋಡಿ, 'ನಿಮ್ಮನ್ನು ನೋಡ್ಬೇಕು ಇರಬೇಕು ಅನ್ನುತ್ತೆ' ಅಂದ. ...ದಿಂದ ನನಗೆ ಖುಷಿಯಾಗುತ್ತದೆ ಎಂದು ತಿಳಿದಿದ್ದ. 'ಸುಮ್ಮ ಕೂತ್ಕೊ ಮರಿ. ಹ್ಯಾಗಿದ್ದೀ. ನಿನ್ನ ಸಿನಿಮಾಗಳನ್ನು ...ಮ ನೋಡಿಲ್ಲ. ಸಾರಿ. ನೋಡಬೇಕು ಅಂತ ಆಸೆಯಾಗುತ್ತೆ, ಅಲ್ಲ, ನೀನು ಸ್ವಲ್ಪ ದಪ್ಪ ಆಗಿದ್ದೀ, ಆದರೆ ...ದಲು ಮುಂಚೆಗಿಂತ ಚೆನ್ನಾಗಿದ್ದೀ. ನಿನ್ನ ಯಶಸ್ಸು ತುಂಬ ಖುಷಿ ತಂದಿರಬೇಕಲ್ಲವೇ?' ಅಂದೆ.



'ನಾನೀಗ ಅಮೆರಿಕಾಕ್ಕೆ ಹೊರಟಿದ್ದೇನೆ. ಅಲ್ಲಿ ನನ್ನದೊಂದು ಚಿತ್ರವನ್ನು ವಿಮರ್ಶಕರು ತುಂಬ ಇಷ್ಟಪಟ್ಟಿದ್ದಾರೆ. ಸಿನಿಮಾರಂಗದಲ್ಲಿ ತುಂಬ ಹಣವಿದೆ, ಹೊಗಳುಭಟ್ಟರಿದ್ದಾರೆ. ಆದರೆ ಅಲ್ಲಿ ಅಸಹ್ಯ ಹುಟ್ಟಿಸುವ ವಿಷಯಗಳೂ ಇವೆ. ನಾನು ಸಾಹಿತ್ಯ ತುಂಬ ಓದ್ತೇನೆ.'

'ಸಂತೋಷ' ಅಂದೆ. ಆದರೆ ಆತ ಶೇಕ್ಸ್‌ಪಿಯರ್, ಮಾರ್ಕ್ವೆಸ್ ಎಲ್ಲರ ಬಗ್ಗೆ ಏನೇನೋ ಮಾತಾಡುತ್ತಲೇ ಇದ್ದ. ಕೇಳುತ್ತಿದ್ದವರು ಪೆದ್ದುಗಳು ಎನ್ನುವಂತೆ ವಿಸ್ತಾರವಾಗಿ ವಿವರಿಸುತ್ತಲೇ ...ದ, ನನ್ನ ಛೇಂಬರ್‌ನಲ್ಲಿದ್ದ ಕೆಲವರು ಎದ್ದುಹೋದರು, ಕೆಲವರು ಚಡಪಡಿಸುತ್ತಿದ್ದರು. ನಾನು 'ಸಂಗ್ರಹವಾಗಿ ಹೇಳು, ...ಭಾಷೆಯಲ್ಲಿ ಎರಡು ವಿಷಯ ಮುಖ್ಯ: ಕೇಳುವುದು, ಹೇಳುವುದನ್ನು ಚುಟುಕವಾಗಿ ಹೇಳುವುದು.....' ಅಂದೆ. ಆತ ವಿವರವಾಗಿ ಹೇಳುತ್ತಲೇ ಹೋದ. ಆದರೆ ಅವನಿಗೆ ಗೊತ್ತಿರಲಿಲ್ಲ. ಪ್ರತಿಯೊಬ್ಬ ಪ್ರಸಿದ್ಧ ಹರಟೆಮಲ್ಲನಲ್ಲೂ ...ಬೆಳ್ಳ ಸರಕುಗಳಿರುತ್ತವೆ; ಚಟಾಕಿ, ಮಾತುಪ್ರಸಂಗಗಳಿರುತ್ತವೆ; ಪುಟ್ಟ ಕತೆಗಳಿರುತ್ತವೆ, ಎದುರಿಗೆ ಇರುವವರ ಮಾತಾಡುವುದನ್ನು ...ಸಿಕೊಂಡು ನಲಿಯುವ ಸಹಾನುಭೂತಿ ಇರುತ್ತದೆ. ಹಕ್ಕಿಗಳು ಹೇಗೋ ಗೊತ್ತಿಲ್ಲ; ಮನುಷ್ಯ ಮಾತ್ರ ಆಡುವ ...ತನ್ನು ಯಕ್ಷಿಣಿ ಮಟ್ಟಕ್ಕೆ, ಒಮ್ಮೊಮ್ಮೆ ಅದ್ಭುತ ನಾಟಕವಾಗಿಸಬಲ್ಲ, ಎಲ್ಲ ಆಟದಂತಿದ್ದರೂ ಗಂಭೀರವಾಗಿ ...ಸುವ ಹರಟೆಯ ಚಾಳಿ ಮಹಾನ್ ಕಲೆಯಾಗಬಲ್ಲದು.

'ಹೋದಯ್ಯ ಮಿತ್ರ' ಎಂದು ಸೂಪರ್‌ಸ್ಟಾರ್‌ಗೆ ಹೇಳಿದೆ. 'ನೀನು ತುಂಬ ಒಳ್ಳೆಯವನು, ಈಗ ಹೋಗು. ನೀನು ...ದಿಂದ ಬಂದಮೇಲೆ ಭೇಟಿಯಾಗೋಣ. ಅಲ್ಲಿಂದ ಭಾರತಕ್ಕೆ ಬಂದೊಡನೆ ನನಗೆ ಫೋನ್ ಮಾಡು. ಇಂಥ ...ಬಾ' ಎಂದು ತಿಳಿಸ್ತೇನೆ' ಅಂದೆ.

'ನೀವು ಸಿಟ್ಟಾಗಿಲ್ಲ...' ಅಂದ.

...ನಾನು ಸುಮ್ಮನೆ ಕೂತೆ. ಸುಳ್ಳು ಹೇಳಲು ಇಷ್ಟವಿರಲಿಲ್ಲ. ಆದರೆ ಆತ ವಿಚಲಿತನಂತೆ ಕಾಣಲಿಲ್ಲ. ಆತನ ...ಕೊಡುವುದಕ್ಕೂ ಇಷ್ಟವಿರಲಿಲ್ಲ. 'ಬಂದೊಡನೆ ನೇರ ಬಂದುಬಿಡು. ಒಂದು ಪದ್ಯ ಬರೆದುಕೊಂಡು ಬಾ. ...ನಿನ್ನ ಅಮೆರಿಕನ್ ಅನುಭವ ಕುರಿತು ಮಾತಾಡಬಹುದು, ಈಗ ಹೋಗು' ಅಂದೆ. ಆತ ಹೊರಟುಹೋದ. ...ನನ್ನ ಕಟುವಾಕ್ಕಕ್ಕೆ ನನಗೆ ಬೇಸರವಾಗಿತ್ತು, ಪ್ರಾಯಶಃ. ಸೂಪರ್‌ಸ್ಟಾರ್‌ಗಳು ಹೇಗೆ ಒಳಗಡೆ ಬಾಡಿಯಾಗಿರುತ್ತಾರೆ ...ಕಲು ಚಿಂತಿಸತೊಡಗಿದೆ. ಒಬ್ಬ ನಟ ಪ್ರೇಕ್ಷಕರೆದುರು ಸಿಂಹಾಸನದ ಕರ್ಪೂರದಂತೆ ಉರಿಯತೊಡಗುತ್ತಾನೆ. ಆತ ...ನ ಹಾಗೇ ಇರಬಹುದು.

ಇನ್ನೊಬ್ಬನ ತಾಳಕ್ಕೆ ತಕ್ಕಂತೆ

ಮೇಲಿನದನ್ನು ಹೇಳುವಾಗಲೇ ಇದಕ್ಕೆ ಸಂಬಂಧಿಸಿದ ವಿಷಯದ ಬಗ್ಗೆ ಹೇಳಿಬಿಡಬಹುದು. ಆದು ಜನರನ್ನು ನೋಡುವುದನ್ನು ಕುರಿತದ್ದು. ಮೊನ್ನೆ ಒಬ್ಬ ಶ್ರೀಮಂತ ವ್ಯಕ್ತಿ ನನ್ನನ್ನು ತನ್ನ ಮಗನ ಮದುವೆಗೆ ಆಹ್ವಾನಿಸಿದ. ಆಹ್ವಾನ ಪತ್ರಿಕೆಯನ್ನು ತಂದ ಹುಡುಗ ಆ ಪತ್ರಿಕೆಯ ಜೊತೆಗೆ ಒಂದು ಪ್ಯಾಕೆಟ್ ತಂದಿದ್ದ. ಆ ಪ್ಯಾಕೆಟನ್ನು ತಿರಸ್ಕರಿಸಿ ಆಹ್ವಾನ ಪತ್ರಿಕೆ ನೋಡಿದೆ. ನಾನೂ ಗಣ್ಯ ವ್ಯಕ್ತಿಯಾಗುತ್ತಿರಬಹುದು ಎಂದು ಭಯ ಶುರುವಾಯಿತು. ಆ ಮದುವೆಗೆ ಹೋಗಲಿಲ್ಲ. ಆ ಪ್ಯಾಕೆಟ್‌ನಲ್ಲಿ ಬೆಳ್ಳಿಯ ತಟ್ಟೆ ಇದ್ದುದಾಗಿ ಆಮೇಲೆ ಯಾರೋ ಹೇಳಿದರು. ಬಾಂಬ್‌ನಿಂದ ತಪ್ಪಿಸಿಕೊಂಡ ವ್ಯಕ್ತಿಯಂತೆ ಕೂತೆ.



ನೀವು ಸ್ವಲ್ಪ ಹೆಸರು ಗಳಿಸಿದೊಡನೆ 'ದೊಡ್ಡವರ' ಗಮನ ನಿಮ್ಮ ಮೇಲೆ ಬೀಳುತ್ತದೆ. ಅಂಥ ದೊಡ್ಡವರು ಬಂದರೆ ಅವರನ್ನು ಭೇಟಿಯಾಗಬಾರದು ಎಂದು ಹೇಳಲಾಗುವುದಿಲ್ಲ. ಅವರು ಫೋನ್ ಮಾಡಿದರೆ ಅದನ್ನು ಸ್ವೀಕರಿಸದಿರುವುದು ಕಷ್ಟ. ನನ್ನ ಗೆಳೆಯರೊಬ್ಬರಿಗೆ ಮುಂಬೈನ ಪ್ರಸಿದ್ಧ ಉದ್ಯಮಿಯೊಬ್ಬರ ಮಗನ ಮದುವೆಗೆ ಆಹ್ವಾನ ಬಂತು. ಅವರು ಮದುವೆಗೆ ಎಂಥ ಬಟ್ಟೆ ಹಾಕಿಕೊಳ್ಳುವುದು, ಮುಂಬೈಗೆ ವಿಮಾನದಲ್ಲಿ ಹೋಗುವುದೋ, ರೈಲಿನಲ್ಲಿ ಹೋಗುವುದೋ, ಉಡುಗೊರೆಯಾಗಿ ಏನು ತೆಗೆದುಕೊಳ್ಳಬೇಕು ಎಂದು ಪರದಾಡುತ್ತಿದ್ದರು. ನಾನು ಸರಳವಾಗಿ, 'ಮದುವೆಗೆ ಹೋಗಬೇಡಿ' ಅಂದೆ. 'ಅಂಥ ದೊಡ್ಡವರ ಮಗನ ಮದುವೆ, ನಾನು ಅವರ ಕ್ಲಬ್ಬಿನ ಸದಸ್ಯ, ಹೋಗದಿರಲು ಹೇಗೆ ಸಾಧ್ಯ?' ಅಂದರು.

'ನೋಡಿ, ನನ್ನ ನಂಬಿಕೆಗೆ ತಕ್ಕಂತೆ ಹೇಳುತ್ತಿದ್ದೇನೆ, ಕೇಳಿ. ಅನೇಕ ಸಂಗೀತಗಾರರು, ಸಾಹಿತಿಗಳು, ಚಿತ್ರಕಲಾವಿದರು ಯಾಕೆ eccentric (ತಿಕ್ಕಲು)ಗಳಾಗಿ ಕಾಣುತ್ತಾರೆ ಗೊತ್ತೆ. ಅವರಿಗೆ ತಮ್ಮ ಜೀವನಕ್ಕೆ ಅಂತರಂಗದ ಸಂಪತ್ತು ಮುಖ್ಯವಾಗಿರುತ್ತದೆ; ಮೌನ ಮತ್ತು ಏಕಾಗ್ರತೆ ಅನಿವಾರ್ಯವಾಗಿರುತ್ತದೆ. ಆದ್ದರಿಂದ ಅವರು ಕಂಡವರ ಕೈಕುಲುಕಿ, ಇಷ್ಟವಿಲ್ಲದಿದ್ದರೂ ಮುಗುಳ್ನಕ್ಕು, ಅಸಹ್ಯವಾದರೂ ಹೋಗಳಿ ತಮ್ಮ ಒಳತೋಟಿಯನ್ನು ಸೊರಗಿಸಿಕೊಳ್ಳುವುದಿಲ್ಲ; ತಮ್ಮ ನರಮಂಡಲ ಕುಸಿಯುವಂತೆ ಮಾಡಿಕೊಳ್ಳುವುದಿಲ್ಲ. ಬೇಕಿಂದಾಗ ಮಾತ್ರ ಮಾತಾಡುತ್ತಾರೆ; ತಮ್ಮ ಇಷ್ಟಕ್ಕೆ ತಕ್ಕಂತೆ ವರ್ತಿಸುತ್ತಾರೆ. ಇದು ಪ್ರತಿಭಾವಂತರ ಮಟ್ಟಿಗೆ ಮಾತ್ರ ನಿಜವಲ್ಲ; ಎಲ್ಲ ಮನುಷ್ಯರಿಗೂ ಅನ್ವಯಿಸುವ ವಿಷಯ. ನಮ್ಮ ಖಾಸಗಿ, ಸಾಮಾಜಿಕ ಕೆಲಸಗಳು ಅರ್ಥಪೂರ್ಣವಾಗಬೇಕಾದರೆ ಮೌನ, ಚಿಂತನೆ ಮುಖ್ಯ. ವಿವೇಚನೆ ಮುಖ್ಯ. ಮೌನದಲ್ಲಿ ನಮ್ಮ ಮನಸ್ಸು ನಮ್ಮನ್ನು ಮೀರಿದ ಅದ್ಭುತವನ್ನು ಸಾಧಿಸುತ್ತದೆ. ಅದಕ್ಕೆ ಬದಲು ದಿನವಿಡೀ ಇಷ್ಟವಿಲ್ಲದ್ದನ್ನು ಮಾಡುತ, ಇನ್ನೊಬ್ಬರ ತಾಳಕ್ಕೆ ತಕ್ಕಂತೆ ಕುಣಿಯುವ ವ್ಯಕ್ತಿ ಅಂತರಂಗವಾದ ದಿವಾಳಿಯಾಗುತ್ತಾನೆ...'

● ಫೆಬ್ರವರಿ 11, 1998

ಜೈಲು ಸೇರಿದ್ದರೆ ಜನನಾಯಕ

ಮಾಧ್ಯಮಗೋಷ್ಠಿ.

ಅದೂ ಯಾರಿಂದ?

ಮಾಜಿ ಮುಖ್ಯಮಂತ್ರಿ ಯಡ್ಯೂರಪ್ಪನವರಿಂದ!

ಸಮಯವೇ ಹಾಗಿತ್ತು. ಸ್ಫೋಟಕ ಸುದ್ದಿ ಹೊರಬೀಳಬಹುದು. ರೋಚಕ ವರದಿ ನೀಡಬಹುದು. ಮಾಧ್ಯಮದವರಿಗೆ ಪುಳಕ. ಕಿಕ್ಕಿರಿದುನೆರೆದರು ಅವರು.

ಆದರೆ ಆದದ್ದು ಏನು?

'ಠುಸ್!'

ಹಾಡಿದ್ದೇ ಹಾಡಿದ್ದ ಕಿಸುಬಾಯಿದಾಸ.

ಎಲ್ಲರಿಗೂ ನಿರಾಸೆ. ತಂಗಳ ಸುದ್ದಿ. ನೂರಾರು ಸಲ ಹೇಳಿದ್ದನ್ನೇ ಅವತ್ತೂ ಹೇಳಿದ್ದರು, ನಿಜ. ಆದರೆ ಹೇಳಿರುವವರು ಪ್ರತಿಷ್ಠಿತ ವ್ಯಕ್ತಿ! ಮುಖಪುಟದ ಸುದ್ದಿ ಆಗಲೇಬೇಕು!

ಕೆಲವರಿಗೆ ಇದು ಋಣಭಾರ! ಹಲವರಿಗೆ ಅನಿವಾರ್ಯ ಅನಿಷ್ಟ!

ಯಡ್ಡಿ ಮಾಡಿದ್ದಾದರೂ ಏನು?

ಭಾಜಪ ಕೇಂದ್ರ ನಾಯಕರ ಖಂಡನೆ; ಕಾಂಗ್ರೆಸ್ ನಾಯಕರ ಭಜನೆ!

ತಮ್ಮ ಪಕ್ಷದವರನ್ನೆ ಯಾಕೆ ಹೀಯಾಳಿಸಿದರು?

(ಭ್ರಷ್ಟಾಚಾರ ಆರೋಪ ಹೊತ್ತ ಇವರನ್ನು ಮುಖ್ಯಮಂತ್ರಿ ಸ್ಥಾನದಿಂದ ಇಳಿಸಿದ್ದರು. ಶುದ್ಧಹಸ್ತರೇ ಇವರು? ಬಡಿಸಿದ ಎಲೆಯನ್ನೂ ಬಿಡದಂತೆ ತಿಂದು ತೇಗಿದ್ದರು. ಫಲಾನುಭವಿಗಳು ಇವರು ಒಬ್ಬರೇ ಆಗಿರಲಿಲ್ಲ. ಅದರ ಪಾಲು ಅವರಿಗೂ ದಕ್ಕಿತ್ತು, ಆದರೆ ಗೂಬೆ ಕುಳ್ಳಿರಿಸಿದ್ದು ಮಾತ್ರ ಇವರೊಬ್ಬರ ಮೇಲೆ! ಇದು ಒಂದು ರೀತಿಯಲ್ಲಿ ಕದ್ದು ಬಸುರಾದ ಸಮಾಚಾರ. ಹೇಳುವಂತಿಲ್ಲ, ಹೇಳದೆ ಇರುವಂತಿಲ್ಲ, ಇದು ಇವರ ಒಳಗುದಿ,

ಮಾತಿಗೆ ತಪ್ಪಿದ್ದರಂತೆ! ರಾಜ್ಯಾಧ್ಯಕ್ಷ ಸ್ಥಾನದ ಭರವಸೆ ನೀಡಿ ವಂಚಿಸಿದ್ದರಂತೆ!

(ಯಡ್ಯೂರಪ್ಪನವರಿಗೂ ವಂಚನೆಗೂ ಯಾವುದೋ ನಂಟು. ಅವರ ಜಾತಕದಲ್ಲೇ ಹೀಗೆ ಬರೆದಿರಬೇಕು. ಕುಮಾರಸ್ವಾಮಿ ಮುಖ್ಯಮಂತ್ರಿ ಸ್ಥಾನ ವರ್ಗಾಯಿಸುತ್ತೇನೆ ಎಂದು ಹೇಳಿ ವಂಚಿಸಿದ್ದರು. ಈಗ ಇವರ ಪಕ್ಷದ ಅಧ್ಯಕ್ಷರೇ ಹಾಗೆ ಮಾಡಿದ್ದಾರೆ!)

ಇದರ ಪರಿಣಾಮ ಏನು?

ಒಂದು: ಯಡ್ಡಿಗೆ ಉಸಿರುಗಟ್ಟುತ್ತಿದೆಯಂತೆ!

ಯಾವಾಗಲೂ ಹೀಗೆ ಆಗುತ್ತಿತ್ತೆ ಅವರಿಗೆ?

ಹಿಂದೆ ಹೀಗಿರಲಿಲ್ಲವಂತೆ. ವಾಜಪೇಯಿ, ಲಾಲ್‌ಕೃಷ್ಣ ಆಡ್ವಾಣಿ ಅವರ ನಾಯಕತ್ವದಲ್ಲಿ ಎಲ್ಲವೂ ಹಿತಕರವಾಗಿತ್ತಂತೆ.


ಎಲ್ಲರಿಗೂ ಈ ಭಾವನೆ ಇತ್ತೆ?

ಇಲ್ಲದಿರಬಹುದು. ಬಂಗಾರಪ್ಪನವರಿಗೆ ಭಾಜಪ ಹೀಗೇ ಉಸಿರುಗಟ್ಟಿಸಿತ್ತು, ಗರ್ಭಗುಡಿ ಸಂಸ್ಕೃತಿ ನಂಜೇಗೌಡರಿಗೆ ಹಾಗೆ ಮಾಡಿತ್ತು, ಇವರು ಮಾತ್ರ ನಿರಾಳವಾಗಿದ್ದರು. ಯಾಕೆಂದರೆ ಅವರೆಲ್ಲ ವಲಸಿಗರು, ಇವರಾದರೋ ಮೂಲದವರು!

ಎರಡು: ಇವರ ಸ್ವಾಭಿಮಾನಕ್ಕೆ ಧಕ್ಕೆ ತಂದಿತ್ತು,

ಎಂಜಲ ಕಾಸಿಗೆ ಕೈ ಒಡ್ಡುವಾಗ ಎಲ್ಲಿ ಅಡಗಿತ್ತು ಈ ಸ್ವಾಭಿಮಾನ?

ಸಾಂದರ್ಭಿಕ ರಜೆ ಪಡೆದಿರಬೇಕು!



ಈ ರಜಾ ಅವಧಿ ಮುಗಿದಿರಬೇಕು. ಬುಸ್ಸೆಂದು ಬುಸುಗುಟ್ಟುತ್ತಿದೆ!

ಅದನ್ನು ತಣಿಸುವ ಬಗೆ ಹೇಗೆ?

ರಾಜ್ಯಾಧ್ಯಕ್ಷರ ಸ್ಥಾನ ನೀಡಿ!

ಹಸಿ ಸುಳ್ಳು! ಯಡ್ಡಿಗೆ ಅದರ ಮೇಲೆ ಯಾವುದೇ ವ್ಯಾಮೋಹ ಇಲ್ಲವಂತೆ. ಗಡ್ಕರಿ ಕೊಟ್ಟರೂ ಬೇಡವಂತೆ!

ಅಲ್ಲಾ ಗಡ್ಕರಿ ಅಧ್ಯಕ್ಷಸ್ಥಾನ ನೀಡದೆ ವಂಚಿಸಿ ವಚನಭ್ರಷ್ಟರಾದರು ಅಂದಿದ್ದರು. ಈಗ ಹೀಗೆನ್ನುತ್ತಿದ್ದಾರೆ. ಇದೇನು ಅಭಾವ ವೈರಾಗ್ಯವೆ ಯಾಕೊಲ್ಲೆ ಸುಬ್ಬಿ ಅಂದ್ರೆ ಇಲ್ಲದ್ದಕ್ಕೆ ಒಲ್ಲೆ ಅಂದ ಸಮಾಚಾರ ಆಯಿತಲ್ಲಾ, ಹೀಗೆಲ್ಲ ಅನ್ನಿಸಬಹುದು. ಹಿಂದೆ ಯಡ್ಯೂರಪ್ಪನವರು ಹಾಗೆ ಅಂದಿದ್ದರು. ಸಂದರ್ಭ ಹಾಗಿತ್ತು, ಆದರೆ ಈಗ ಹೇಳುತ್ತಿರುವುದು ಸತ್ಯ, ಇದು ಇವರ ದೃಢ ನಿರ್ಧಾರವಂತೆ!

ಈಗಿನ ವರಾತನ್ನೇ ಸಂಬೋಣವಂತೆ. ಸೂರಜ್‌ಖಂಡ್‌ನಲ್ಲಿ ಭಾಜಪ ಕಾರ್ಯಕಾರಿಣಿ ಸಭೆ ನಡೆಯುತ್ತಿದೆ. ರಾಜ್ಯ ಅಧ್ಯಕ್ಷರ ಸ್ಥಾನದ ವಿಷಯ ಪ್ರಸ್ತಾಪಕ್ಕೆ ಬರುತ್ತದೆ. ವರಿಷ್ಠರಿಗೆ ಈ ಸುದ್ದಿ ರವಾನಿಸಿದರೆ ಆಗಿತ್ತು, ಅದನ್ನು ಮಾಡುವುದನ್ನು ಬಿಟ್ಟು 'ಲಾಬಿ' ಪ್ರಾರಂಭಿಸಿದ್ದಾರಲ್ಲ, ಇವರ ಚೇಲಾಗಳು ಸಭೆ ಸೇರಿ, ಅದ್ಯಾವುದೋ ಮುದುಕಿ ನನ್ನ ಹುಂಜ ಕೂಗದೆ ಇದ್ದರೆ ಬೆಳಕು ಹರಿಯುವುದೇ ಇಲ್ಲ ಅಂತ ಹೇಳ್ತಿದ್ದಳಂತಲ್ಲ ಹಂಗೇ 'ಯಡ್ಯೂರಪ್ಪ ಅಧ್ಯಕ್ಷ ಆಗದೇ ಇದ್ದರೆ ರಾಜ್ಯ ಮುಳುಗೇ ಹೋಯ್ತದೆ' ಅಂತೆಲ್ಲ ಹೇಳ್ತಾಬಿದ್ದವಲ್ಲಾ, 'ಇದೇನ್ರಿ ಹಿಂಗೇಳ್ತಿದೀರಿ' ಅಂದ್ರೆ ಅವು 'ಇದು ನಮ್ಮ ಅಭಿಪ್ರಾಯ ಮಾತ್ರ ಅಲ್ಲ, ಕರ್ನಾಟಕದ ಆರು ಕೋಟಿ ಜನರ ಆಶಯ' ಅಂತಾರೆ. 'ಅದೆಂಗ್ರಿ ಆರು ಕೋಟಿ ಆಯ್ತದೆ. ಹೇಳಿಕೇಳಿ ಇವರು ಲಿಂಗಾಯತರ ನಾಯಕ. ಲಿಂಗಾಯತರೆಲ್ಲರೂ ಭ್ರಷ್ಟಾಚಾರೀನೇ ನಮ್ಮ ನಾಯಕ ಅಂತ ಒಪ್ಪಿಕೊಂಡರೂ ಒಂದು ಒಂದೂವರೆ ಕೋಟಿ ಆಯ್ತದಲ್ರಿ' ಅಂದ್ರೆ ಅವರು 'ಯಡ್ಯೂರಪ್ಪನವರು ಕೇವಲ ಲಿಂಗಾಯತರ ನಾಯಕರಲ್ಲ, ಸರ್ವಜನಾಂಗಗಳ ನಾಯಕರು' ಅಂತಾರೆ! ತಮ್ಮ ನಾಯಕನ ಒಂದಾನೆ ತೀರ್ಥ, ಎರಡುನೇ ಪ್ರಸಾದ ಅನ್ನೊ ಗುಲಾಮಿ ಜನರ ಮಾತ ಬದಿಗಿರಿಸಿ ಯಡ್ಯೂರಪ್ಪನವರನ್ನೇ 'ಇದೇನ್ರಿ ಇದು ನೀವು ಅಧ್ಯಕ್ಷಗಿರಿ ಕೊಟ್ಟರೂ ಬ್ಯಾಡ ಅಂತ ಕುಂತಿದ್ದೀರಿ. ನಿಮ್ಮ ಚೇಲಾಗಳು ನೋಡಿದ್ರೆ ನೀವು ಅಧ್ಯಕ್ಷರಾಗದೇ ಹೋದ್ರೆ ಪ್ರಳಯಾನೆ ಆಯ್ತದೆ ಅಂತವೆ. ಇದು ಯಾವ ಸೀಮೆ ನ್ಯಾಯಾರೀ. ಮಗೂನೂ ಒಂದು ಕಡೆ ಜಿಗುಟ್ತೀರಿ, ಇನ್ನೊಂದ್ಕಡೆ ತೊಟ್ಟಿಲ್ನೂ ತೂಗ್ತೀರಿ' ಅಂದ್ರೆ 'ಅವರಿಗೆ ಒತ್ತಡ ಹೇರದಂತೆ ತಿಳುಸ್ತೀನಿ' ಅಂತಾರೆ. ಅಂದ್ರೆ ಜನರು ಮೂರ್ಖರು ಅಂತ ಯಾವತ್ತೋ ಅವರು ನಿರ್ಧರಿಸಿದ್ದಾರೆ ಅಂದ ಹಾಗಾಯಿತು!

ಗೋಷ್ಠಿಯಲ್ಲಿ ಕಾಂಗ್ರೆಸ್ ನಾಯಕರನ್ನು ಅವರಿಗೇ ನಾಚಿಕೆಯಾಗುವಂತೆ ಹಾಡಿ ಹೊಗಳಿದರಲ್ಲಾ ಯಡ್ಯೂರಪ್ಪನವರು. ಅದಕ್ಕೇನು ಕಾರಣ ಇರಬಹುದು? ಭಾಜಪ ತ್ಯಜಿಸ್ತಾರಾ? ಕಾಂಗ್ರೆಸ್ ಸೇರ್ತಾರಾ? ಬೇರೆ ಪಕ್ಷ ಕಟ್ಟಿ ಚುನಾವಣೆ ನಂತರ ಕಾಂಗ್ರೆಸ್‌ನೊಂದಿಗೆ ಕೂಡಾವಳಿ ಮಾಡಿಕೊಳ್ತಾರಾ? ಯಾವುದನ್ನೂ ಈಗಲೇ ಹೇಳುವುದಿಲ್ಲವಂತೆ. ಕನಿಷ್ಠ ನೂರು ಜಿಲ್ಲೆ ಕ್ಷೇತ್ರಗಳ ಪ್ರವಾಸ ಮಾಡಿ ಜನಾಭಿಪ್ರಾಯ ಸಂಗ್ರಹಿಸುತ್ತಾರಂತೆ. ಸಂಗ್ರಹಿಸಲಿ ಪಾಪ. ಅಲ್ಲಿ ಯಾರಾದರೂ 'ನೀನೇ ಮುಖ್ಯಮಂತ್ರಿ ಆಗಬೇಕು ಮಗ' ಅಂದ್ರೆ ಯಡ್ಯೂರಪ್ಪನವರು ಬಲೂನಿನ ಹಾಗೆ ಊದಿ ಹೋಗ್ತಾರೆ. 'ನಿನ್ನ ಆಶೀರ್ವಾದ ತಾಯಿ' ಅಂತಾರೆ. 'ಆದರೆ ಒಂದು ಮಗ' ಅಂದ್ರೆ 'ಏನು ಹೇಳು ತಾಯಿ. ನೀನು ಏನು ಹೇಳಿದ್ರೂ ನಡೆಸಿಕೊಡ್ತೀನಿ. ನೀನು ನನ್ನ ಹೆತ್ತವ್ವ ಇದ್ದಂಗೆ' ಅಂತಾರೆ. 'ಏನು ಇಲ್ಲ ಮಗ. ನಿನ್ನ ಜನಾದ ಜನ ಎಲ್ಲ ಅನ್ಯಾಯಕಾರ ಅಂತದೆ. ಅದೇನೊ ಗಂಟೆ ಹೊಡ್ದು ಮಡಗಿದೀಯಂತಲ್ಲ ಅದ ದೇಸಕ್ಕೆ ಕೊಟ್[ಟು] ಕೈ ತೊಳ್ಕೊ ಮಗ' ಅಂದ್ರೇ ಯಡ್ಯೂರಪ್ಪನವರು....!

ಅಣಕ



• ಎಚ್.ಎಲ್.ಕೇಶವಮೂರ್ತಿ

******

ಜೈಲಿಗೆ ಹೋಗಿ ಬಂದವರೆಲ್ಲ ಜನನಾಯಕರಾ?

ಹೌದು ಎನ್ನುತ್ತಿದೆ ಇತ್ತೀಚಿನ ಘಟನೆಗಳು.

ಹೆಂಡತಿ ಪೀಡಕ ದರ್ಶನ್ ಜೈಲಿಗೆ ಹೋಗಿಬಂದ

'ಸಾರಥಿ' ಚಿತ್ರ ಜಯಭೇರಿ ಹೊಡೆಯಿತು!

ಗುಜರಾತಿನಲ್ಲಿ ನಕಲಿ ಎನ್‌ಕೌಂಟರ್ ನಡೆಯಿತು ಅಲ್ಲಿನ ಮಂತ್ರಿ ಷಾ ಜೈಲು ಸೇರಿದ. ಜಾಮೀನಿನ ಮೇ[ಲೆ] ಹೊರಬಂದ.

ಭಾಜಪ ಕಾರ್ಯಕಾರಿಣಿ ಸಭೆಯಲ್ಲಿ ಈ ಪಾಪಿ[ಗೆ] ಅದ್ದೂರಿ ಸ್ವಾಗತ!

ಯಡ್ಡಿ ನೂರಾರು ಆರೋಪಗಳ ಗಣಿ. ಒಂದ[ು] ಆರೋಪದಲ್ಲಿ ಜೈಲು ಸೇರಿದ. ಹೈಕೋರ್ಟಿನ ಕೃ[ಪೆ] ಜಾಮೀನು ಸಿಕ್ಕಿತು.

ಈಗ ಯಡ್ಯೂರಪ್ಪ ಜನನಾಯಕ!

ಯುವರಾಜಕಾರಣಿಗಳಿಗೆ ಒಂದು ಸಲಹೆ. ನೀವ[ು] ಜನನಾಯಕರಾಗಬೇಕೆ?

ಜೈಲು ಸೇರಿ, ಜಾಮೀನು ಪಡೆಯಿರಿ!

ಬಯಸದೆ ಬಂದ ಭಾಗ್ಯ!

ಬರ, ಕಾವೇರಿ ನೀರಿನ ತಗಾದೆ, ಬೆಲೆ ಏರಿಕೆ ಹಾಳುಮೂಳು ಅಂತ ಗಲಾಟೆ ನಡೆಯುತ್ತಿದ್ದರೂ ಕೆಲವರಿಗೆ ಅದು ಬಯಸದೆ ಬಂದ ಭಾಗ್ಯ ಆಗಿದೆ. ಯಾರು ಈ ಕೆಲವರು ಅಂದರೆ ಬರ ಬಂದು ಜನ ಸಾಯುತ್ತಿದ್ದರೂ ದಿಮ್‌ರಂಗ ಅಂತ 'ಅಧ್ಯಯನ' ಹೆಸರಲ್ಲಿ ವಿದೇಶಗಳಲ್ಲಿ ಮೋಜು ಮಸ್ತಿ ಮಾಡಿಬಂದರಲ್ಲ ಆ ನಮ್ ಶಾಸಕರು. ಅವರು ಪ್ರವಾಸಕ್ಕೆ ಹೊರಟು ನಿಂತಾಗಲೇ ಗುಲ್ಲೆದ್ದಿತ್ತು. ಅದೇನೋ ಹೇಳ್ತಾರಲ್ಲ ಉರಿಯೋ ಮನೇಲಿ ಬೀಡಿ ಹಚ್ಕೊಂಡ ಅಂತ, ಹಂಗೆ ಇವರಿಗೆ ಈಗಲೇ ವಿದೇಶದ ತೆವಲು ಹತ್ತಿಕೊಂಡದೆ ಅಂತ ಅಲ್ಲಲ್ಲಿ ಕೇಳಿಬಂದಿತ್ತು ಶಾಸಕರ ಕಿವಿಗೂ ಬಿದ್ದಿತ್ತು, ಅವರು ಎಷ್ಟೇ ಆಗಲಿ ಅನುಭವಸ್ಥರು. ಇಂತೋವ ಸಾವಿರ ಸಾವಿರ ಮಾತ[ು] ಕೇಳಿರೋರು. 'ಬರ ಬಂದದೆ ಅಂತಾವ ಉಣ್ಣೋದ[ು] ಉಡೋದ ಬುಟ್ಬುದ್ದೀರಾ' ಅಂತ ಹೇಳಿ ಬಾಯಿ ಮುಚ್ಚಿಸಿದ್ರು. ಅಂತ ದೇಶದ್ರೋಹ ಮಾಡಿದ ಕಸಬ್‌ಗೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡ್ತಾಕುಂತವಲ್ಲಾ. ಎಲ್ಲೋ ಹೊಟ್ಟೆ ಉರಿಜನ ಇರಬೇಕು ಅಂದುಕೊಂಡರು ಈ ನಾಯಿಗಳು ಬೊಗಳಿದ್ರೊ ಅಂತ ವಿದೇಶಿ ಪ್ರವಾಸ ಕೈ ಬುಡಕ್ಕಾಯ್ತದ ಅಂತಾವ ಹೋದರು ಅನ್ನಿ. ಅದೇನೋ ಹಂಗೆ ಹೋಗೋದು ಅವರು 'ಪ್ರಿವಿಲೇಜ್' ಅಂತೆ!


ರಾವಣೇಶ್ವರ ಹಾಗು 'ಅವೈಜ್ಞಾನಿಕತೆ'

ವೈಜ್ಞಾನಿಕ ಜ್ಯೋತಿಷಿ ಎಂಬ ಬಿರುದಿನ ಸಚ್ಚಿದಾನಂದ ಬಾಬುರವರು ರಾವಣೇಶ್ವರನ ಕುರಿತು ಮಾಡಿರುವ ವ್ಯಾಖ್ಯಾನ (ವಿಜಯ್ ಕುಮಾರ್ ಎಂ. ರವರ ಪತ್ರ) ಏಕಪಕ್ಷೀಯವಾದುದು. ದೇವರು ಅಥವಾ 'ಅತೀತಶಕ್ತಿ'ಗಳ ಮೇಲೆ ಮಾನವ ನಂಬಿಕೆಯಿರಿಸುವುದು ಸರಿಯೋ ತಪ್ಪೋ ಎಂಬ ವಿಚಾರ ಬೇರೆ. ಆದರೆ ನಂಬಿಕೆಗಳ ಒಟ್ಟಾರೆ ವಿಚಾರ ಬರುವಾಗ ಅದು ಮೇಲೆ, ಇದು ಕೀಳು ಎಂಬಂತಹ ಭಾವನೆ ಬಿತ್ತುವುದು ಸರಿಯಲ್ಲ,



ವಿಜ್ಞಾನ ಅಂದರೆ ನಿರಂತರವಾದುದು. ಅದು ಬದಲಾವಣೆಗೆ ತೆರೆದುಕೊಂಡಿರುವಂತಾದ್ದು, ವೈಜ್ಞಾನಿಕತೆಯಲ್ಲಿ ಮುಕ್ತತೆ ಇರದೇ ಜಿಗುಟುತನ ಇದ್ದಿದ್ದರೆ ಯಾವ ವೈಜ್ಞಾನಿಕ ಸಾಧನೆಗಳೂ ಆಗುತ್ತಿರಲಿಲ್ಲ, ಮಹಾನ್ ವಿಜ್ಞಾನಿಗಳೆನಿಸಿದವರೇ ವಿಮಾನಗಳ ಹಾರಾಟವನ್ನು ಸಂಶಯಿಸಿದ್ದರು. ಆದರೆ ಈಗ ಶಬ್ದದ ವೇಗವನ್ನೂ ಮೀರಿ ಹಾರಬಲ್ಲ ಕಂಕಾರ್ಡ್ ವಿಮಾನಗಳಿವೆ. ಅಸಾಧ್ಯ ಎಂದೇ ಪರಿಗಣಿಸಲ್ಪಟ್ಟ ಪರಮಾಣು ವಿಭಜನೆ ಸಿದ್ಧಾಂತವು ಅದಕ್ಕೂ ಮುಂದೆ ಸಾಗಿ ಎಷ್ಟೋ ಕಾಲವಾಗಿದೆ. ಹಿಂದೆ ಮಂಗಳನಲ್ಲಿ ನಮ್ಮಂತೆಯೇ ಜೀವಿಗಳಿದ್ದಾರೆ ಎಂದು ಸಾಧಿಸಿದ್ದ (ಅಲ್ಲಿನ ಕಾಲುವೆಯಂತಹ ರಚನೆಗಳನ್ನು ದೂರದರ್ಶಕದಲ್ಲಿ ನೋಡಿ) ವಿಜ್ಞಾನಿಗಳಿದ್ದರು. ವಿಜ್ಞಾನದ ಸಿದ್ಧಾಂತಗಳು ಬದಲಾಗಬಹುದು ಅಥವಾ ಇನ್ನೂ ಪರಿಷ್ಕೃತ ರೂಪವನ್ನು ಪಡೆದುಕೊಳ್ಳಬಹುದು ಇದೇ ವಿಜ್ಞಾನದ ಹೆಗ್ಗಳಿಕೆ. ಇಂತಹ ವೈಜ್ಞಾನಿಕತೆಯ ಬಿರುದನ್ನು ಇಟ್ಟುಕೊಂಡಿರುವ (ಹಳೆಯ ಡೇಟಾ ಸಂಗ್ರಹಿಸಿಟ್ಟುಕೊಂಡ ಮಾತ್ರಕ್ಕೆ ಅದನ್ನೇ ವೈಜ್ಞಾನಿಕತೆ ಎನ್ನಲಾಗದು) ಜ್ಯೋತಿಷಿ ಬಾಬುರವರಿಗೆ ವಿಚಾರಗಳನ್ನು ಈ ರೀತಿ ತೆರೆದ ಮನಸ್ಸಿನಿಂದ ಸ್ವೀಕರಿಸಿ ನೋಡುವ ಮನಸ್ಥಿತಿಯಿಲ್ಲದ್ದು ಅವರ ಈ 'ವೈಜ್ಞಾನಿಕ' ಎಂಬ ಬಿರುದಿಗೇ ತಕ್ಕುದಾಗಿ ತೋರದು.

ಕೆಲವರ್ಷಗಳ ಹಿಂದೆ ನಿಧನರಾದ ದಾರ್ಶನಿಕ ಜೆ.ಕೃಷ್ಣಮೂರ್ತಿಯವರು ರಾಮಾಯಣದ ಕುರಿತು ಹೇಳಿದ್ದ ಮಾತೊಂದು ಇಲ್ಲಿ ಉಲ್ಲೇಖಾರ್ಹ. "ರಾಮ, ರಾವಣ ಅಥವಾ ರಾಮಾಯಣದ ಬಗ್ಗೆ ಕಿಂಚಿತ್ತೂ ಗೊತ್ತಿಲ್ಲದ ವ್ಯಕ್ತಿಯು (ಆತನಿಗೆ ರಾಮ ಯಾ ರಾವಣರ ಕುರಿತಾದ ಒಳ್ಳೆ-ಕೆಟ್ಟ ಎಂಬ ಪೂರ್ವಾಗ್ರಹಗಳಿರದು) ಬಳಿ ರಾಮಾಯಣದ ಕಥೆ ಹೇಳಿದರೆ ಆತನಿಗೆ ಇದರಲ್ಲಿ ನಾಯಕ ಯಾರು ಖಳ ಯಾರು ಎಂಬ ಗೊಂದಲ ಖಂಡಿತಾ ಬರುತ್ತದೆ" ಎಂದಿದ್ದರು. ತನ್ನನ್ನು ಪ್ರೀತಿಸು ಎಂದು (ಪ್ರೀತಿಸಿ ಮದುವೆಯಾಗುವ ಗಾಂಧರ್ವ ವಿವಾಹ ಹಾಗೂ ಬಹುಪತ್ನಿತ್ವಕ್ಕೆ ಮಾನ್ಯತೆ ಇದ್ದ ಕಾಲದಲ್ಲಿ) ಬೇಡಿ ಬಂದವಳ ಮೂಗು-ಸ್ತನಗಳನ್ನು ಕೊಯ್ಯಿಸಿದವ, ಗರ್ಭಿಣಿ ಪತ್ನಿಯನ್ನ ಯಾರೋ ಮೂರನೇ ದಾರಿಹೋಕನ ಮಾತನ್ನು ಕೇಳಿ ಕ್ರೂರ ಪ್ರಾಣಿಗಳಿರುವ ಕಾಡಿಗಟ್ಟಿದಾತ ಹೇಗೆ ತಾನೆ ನಾಯಕನಾದಾನು?



ಕಥೆಯು ಪ್ರಕಾರ ಮಹಾನ್ ಹುಂಬನೇ ಇದ್ದರೂ ಸಹ ತನ್ನ ತಂಗಿಯ ಮೇಲಾದ ದೌರ್ಜನ್ಯದ ಸಿಟ್ಟಿಗೆ ಅಪಹರಿಸಿ ತಂದ ಹೆಣ್ಣನ್ನು ಸಂಪೂರ್ಣ ತನ್ನದೇ ಆಶ್ರಯದಲ್ಲಿಟ್ಟಿದ್ದರೂ ಕೂಡ ಮೈಮುಟ್ಟದ, ಬಳಿಕ ಯುದ್ಧದಲ್ಲಿ ತನ್ನ ಮಕ್ಕಳು, ಸಹೋದರರು ಸತ್ತು ಹೋದ ಕೋಪದ ಸೇಡಿಗಾದರೂ ಸೀತೆಯೆಂಬ ಅಸಹಾಯಕ ಹೆಣ್ಣಿಗೆ ಅವಮಾನಿಸಿ ಹಿಂಸಿಸಲು ಹೋಗದಾತ ಖಳನೇ?

ಸಚ್ಚಿದಾನಂದ ಬಾಬುರವರು ಅನ್ನುವಂತೆ ಈತನಲ್ಲಿ ಒಳ್ಳೆಯ ಗುಣಗಳು ಸ್ವಲ್ಪವೂ ಇರಲಿಲ್ಲವೇ? ಅಥವಾ ನಾವುಗಳು ಹಾಕಿರುವಂತ ಪೂರ್ವಾಗ್ರಹದ ಆ ಕನ್ನಡಕದ ದೋಷವೇ? ಬಹುಶಃ ವಿಭೀಷಣ ರಾಮನ ಇನ್ನೊಬ್ಬ ತಮ್ಮನಾಗಿದ್ದು ಆತ ರಾವಣನ ಪಕ್ಷ ಸೇರಿದ್ದರೆ ಆತ ಖಂಡಿತ ವಿಶ್ವಾಸಘಾತುಕ ಖಳನೆನಿಸಿಕೊಳ್ಳುತ್ತಿದ್ದ, ಆದರೆ ರಾವಣ ಮತ್ತು ಕುಂಭಕರ್ಣರಿಗೆ ದ್ರೋಹ ಮಾಡಿದ ಈ ಮನೆಮುರುಕ ನಮ್ಮೆದುರು ಧರ್ಮಾತ್ಮನೆನಿಸಿಕೊಂಡ.

ವ್ಯಕ್ತಿಗತವಾಗಿ ಈ ನಂಬಿಕೆ ಇತ್ಯಾದಿಗಳ ಮೇಲೆ ನನಗೆ ಅಂತಹ ಒಲವೇನೂ ಇಲ್ಲ, ಆದರೂ ಒಬ್ಬರ ನಂಬಿಕೆ ಕೀಳು ನಮ್ಮದು ಮೇಲು ಎನ್ನುವಂತಹ ಭಾವನೆ ಯಾವತ್ತಿಗೂ ಒಳ್ಳೆಯದಲ್ಲ, ದೇವರು ಅಥವಾ ಅತೀತಶಕ್ತಿ ಒಂದು ವೇಳೆ ಇದ್ದದ್ದೇ ಆದರೆ ಅದನ್ನು ಯಾವ ರೀತಿಯಲ್ಲಿ ಪೂಜಿಸಿದರೂ ಅದು ಅವನನ್ನ ತಲುಪುತ್ತದೆ. ಇಲ್ಲಿ ಭಕ್[ತಿ] ಎಷ್ಟು ಪ್ರಾಂಜಲವಾದದ್ದು ಎಂಬುದಷ್ಟೇ ಮುಖ್ಯವೇ[ ] ಹೊರತು ಬೇರೇನಲ್ಲ, ಇದಕ್ಕೆ ಬೇಡರ ಕಣ್ಣಪ್ಪನಂತವರನ್ನು ಉದಾಹರಿಸಬಹುದು. ಕಥೆಯಂತೆ ರಾಮರಾವಣರಿಬ್ಬರೂ ಧರೆಯಲ್ಲಿ ಹುಟ್ಟಿ ಬೆಳೆದವರು. ಒಬ್ಬ ದೇವತಾ ಸ್ಥಾನಕ್ಕೆ ಹೋದರೆ ತೀರಾ ಕೆಟ್ಟವನಲ್ಲದ ಮತ್ತೊಬ್ಬ ಹೋಗಲೇ ಬಾರದೆಂದೇನೂ ಇಲ್ಲ ತಾನೆ?

ನಮ್ಮ ದೇಶದಲ್ಲಿ ಕೇವಲ ರಾವಣೇಶ್ವರ[ ]ನಿಗಷ್ಟೇ ಅಲ್ಲ, ದುರ್ಯೋಧನನಿಗೂ ದೇಗುಲವಿದೆ. ನಮಗೆ ಕೆಡುಕನ್ನೇ ಮಾಡು[ ]ವವ ಎಂದುಕೊಳ್ಳುವ ಶನೀಶ್ವರನಿಗಂತೂ ಅಸಂಖ್ಯಾತ ದೇಗುಲಗಳಿವೆ. ತಮಾಷೆ[ ]ಯೆಂದರೆ ವಿಘ್ನಗಳ ಒಡೆಯ ವಿಘ್ನೇಶನನ್ನು ಮೂಲತಃ ವಿಘ್ನಗಳನ್ನು ಒಡ್ಡದಿರಪ್ಪಾ ಎಂದು ಒಲಿಸಿಕೊಳ್ಳುವ ಸಲುವಾಗಿಯೇ ಕೆಲಸದ ಆರಂಭದಲ್ಲಿ ಪೂಜೆಗೊಳ್ಳುವಂತಹ ಸಂಪ್ರದಾಯ ಬೆಳೆದು ಬಂದಿದ್ದು, ನಂಬಿಕೆಗಳನ್ನು ಪ್ರೋತ್ಸಾಹಿಸುವ ಮಂದಿಯೇ ನಂಬಿಕೆಗಳ ನಡುವೆ ಭೇದವನ್ನು ತಂದೊಡ್ಡುತ್ತಿರುವುದು ಒಪ್ಪುವಂತಾ ಮಾತಲ್ಲ,

ದೇವರು ಯಾ ನಂಬಿಕೆಗಳ ನಡುವೆಯೇ ಉಚ್ಚ-ನೀಚತ್ವ ತರುವವರನ್ನು ನೋಡಿದಾಗ ಧರ್ಮಸ್ಥಳ ದೇವಳದ ಕುರಿತಾಗಿ ಆಗಿನ ಹೆಗ್ಗಡೆಯವರ ಮೇಲೆ ಬೆಂಗಳೂರು ಹೈಕೋರ್ಟಿನಲ್ಲಿ ಮಾಡಿದ ಅಪೀಲ್ (RA ನಂ 165-1957) ಗೆ ಸಂಬಂಧಿಸಿದಂತೆ 11ನೇ ಸಾಕ್ಷಿಯಾದ ಉಡುಪಿಯ ಸೋದೆ ಸ್ವಾಮಿ ವಿಶ್ವೋತ್ತಮ ತೀರ್ಥರು 30-8-1968ರಲ್ಲಿ ಕೊಟ್ಟ ಹೇಳಿಕೆ ನೆನಪಾಗುತ್ತದೆ. ವಿಶ್ವೋತ್ತಮ ತೀರ್ಥರು ಅವತ್ತು "ವಿಷ್ಣು ಮತ್ತು ಶಿವರು ಸಮಾನರಲ್ಲ, ಶಿವನು ವಿಷ್ಣುವಿಗೂ 9ನೇ ತಂತದ ಕೆಳಗಿನ 'ದಾಸ'" ಎಂದು ಹೇಳಿಕೆ ನೀಡಿದ್ದರು.

(R.W. 11. Vishvotthama thirtha swami of sode mutt Udupi has stated


ಅವರೇನೋ ಹೋಗುವವರು ಹೋದರು. ಈ ಹೋರಾಟ ಟಿವಿಯವರಿಗೆ ಕ್ಯಾಣ ತು. ಅವರು ಹಿಂಗೆ ಹೋಗಿರೋದು ಸುತರಾಂ ಲ್ಲ; ಅವರನ್ನು ಅರ್ಧದಲ್ಲೇ ವಾಪಸ್ಸು ಕರ್ಸಿ; ಮಾಡಿರೋ ದುಡ್ಡ ಹಿಂಪಡೀರಿ ಹಂಗೆಹಿಂಗೆ ಹಾರಾಡಿದ್ದೊ; ಪಾಪ ಮುಖ್ಯಮಂತ್ರಿಯವರಿಗೆ ಗಿಟ್ಟುಕೊಂಡಿತು. ಯಾಕಂದ್ರೆ 'ಸುಖವಾಗಿ ಬನ್ನಿ' ಅಂತ ಅವರೇ ಆಶೀರ್ವಾದ ಮಾಡಿ ದ್ದರು. ನಮ್ ಶಾಸನ ಸಭಾಧ್ಯಕ್ಷರಂತೂ ಹವಕ್ಕೆಲ್ಲ ಯಾವತ್ತೂ ಇಲ್ಲ ಅಂದವರೇ ಅಲ್ಲ. ರದ ಹೂದಲ್ಲಲ್ಲವಾ. ಅದಿರೋದೆ ಇಂತಹದ್ದಕ್ಕೆ. ಾಗಿ ಹೋಗಿಬನ್ನಿ' ಅಂದಿದ್ದರು. ಹಿಂಗೆ ಮಗಳ ಪ್ರಕಾರವೇ ಹೋಗಿದ್ದ ಅವರನ್ನು ಸ್ಸು ಬನ್ನಿ' ಅನ್ನೋದು ಕಷ್ಟನೇಯ. ಆದರೂ ುವರ ಕಾಲ ನೋಡಿ. ಅವರ ಹಿಂಸೆ ಾರದೆ 'ಪ್ರವಾಸ ಮೊಟಕುಗೊಳಿಸಿ ಹಿಂತಿರುಗಿ' ತಿಳಿಸಿದ್ರಂತೆ. ಎಷ್ಟೇ ಆಗಲಿ ಮುಖ್ಯಮಂತ್ರಿ ಲ್ಲವಾ. ಅವರೂ ಹಿಂತಿರುಗಿದರು. ಪ್ರವಾಸದ ಮುಗಿದನಂತರ!

ಮುಖ್ಯಮಂತ್ರಿಗಳು ಹಿಂತಿರುಗಿ ಅಂತ ದ್ರಲ್ಲಾ, ಇದಕ್ಕೆ ನಾವು ಕಾರಣ, ತಾವು ಕಾರಣ ಎಲ್ಲಾ ಟಿವಿಯೋವ್ರೂ ಬಡಾಯಿ ಕೊಂಡೊ. ಪಾಪ ಕೊಚ್ಚಿಕೊಳ್ಳಲಿ. ಅದಲ್ಲ ು. ಆದರೆ 'ಶಾಸಕರನ್ನು ವಾಪಸ್ಸು ಕರೆಸಿ, ಹಿಂಪಡೆಯಿರಿ' ಅಂತ ಅರುಚಾಡಿದ ಲ್‌ಗಳು ಈಗ ಮಚ್ಚೆ ಕಂಡ ನಾಗರಹಾವಿನ ಮುದುರಿಕೊಂಡಿವೆಯಲ್ಲ ಯಾಕೆ ಅನ್ನೋದೇ ವಾಗುತ್ತಿಲ್ಲ. ಇರಲಿ. ಯಾರೊಬ್ಬರು 'ಅಲ್ಲ ಕಣ್ರಿ ರೆ, ಮುಖ್ಯಮಂತ್ರಿ ಬನ್ನಿ ಅಂದ್ರೂ ಬರದೆ ಗಿದ್ದೀರಲ್ಲ, ಅವರ ಮಾತು ಅಂದ್ರೆ ಕಾಲ ಕಸ ಯ್ತು' ಅಂತ ಕೇಳಿದ್ದಕ್ಕೆ ಶಾಸಕ ಮಹಾಶಯರು ಗೆ ಆ ರೀತಿ ಯಾರೂ ತಿಳಿಸಲೇ ಇಲ್ಲ' ರಂತೆ!

ಯಾರ ಮಾತು ನಂಬೋದು? ್ಯಮಂತ್ರಿಗಳೇ ಹಿಂದಕ್ಕೆ ಕರಸುವ ನಾಟಕ ರಾ? ಇಲ್ಲ ಶಾಸಕರೇ ಸುಳ್ಳು ಹೇಳ್ತಿದ್ದಾರಾ? ಸಿಎಮ್ಮಿನ ಮಾತಿನ ಬೆಲೆ ಇಷ್ಟೇನಾ.....

ಇದು ಹಾಗಿರಲಿ. ಈ ಗಲಾಟೆ ನಡುವೆಯೂ ನ್ಯದಾದರೂ ವಾಹಿನಿಯವರು 'ಅಧ್ಯಯನ ಸ ಮಾಡಿಬಂದಿದ್ದೀರಲ್ಲ ಅದರ ವರದಿ ನೀಡಿ' ಕೇಳಿಯಾರು ಅನ್ನೊ ಆತಂಕ ಅವರಿಗೇನೂ ಆದರೂ ಬಿಳಿ ಹಾಳೆ ಮೇಲೆ ಕರಿಕಸ ಆಗಲೇ ತಂದಿದ್ದಾರಂತೆ! ಅಷ್ಟಕ್ಕೂ 'ಅಧ್ಯಯನ ಪ್ರವಾಸ' ನ್ನೋದು ಇರೋದೆ ಮೋಜು ಮಸ್ತಿ ಕೊಂಡು ಬರೋಕೆ ಅನ್ನೋದ ತಿಳೀದ ಹೆಡ್ಡರು ು ಇದ್ದಾರೆ ಅಂತೀನಿ....

ವಿಜಯ್‌ಕುಮಾರ್‌ರ ವಿಜಯಪತಾಕೆ



ಭಾರೀ ಪೈಪೋಟಿಯೊಂದಿಗೆ ನಡೆದ ಚಲನಚಿತ್ರ ಛೇಂಬರ್ ಚುನಾವಣೆಯ ಫಲಿತಾಂಶ ಗಾಂಧಿನಗರದಲ್ಲಿ ಹಲವಾರು ಚರ್ಚೆಗಳಿಗೆ ಅವಕಾಶ ಮಾಡಿಕೊಟ್ಟಿದೆ.

ವಿಜಯ್‌ಕುಮಾರ್ ಅವರು ಚುನಾವಣೆಯಲ್ಲಿ ತನ್ನ ಹತ್ತಿರದ ಪ್ರಬಲವಾದ ಪ್ರತಿಸ್ಪರ್ಧಿ ಬಿ.ಎನ್.ಗಂಗಾಧರ್ ಅವರನ್ನು ಸುಮಾರು 150 ಮತಗಳ ಅಂತರದಿಂದ ಸೋಲಿಸಿರುವುದೇ ಚರ್ಚಾವಸ್ತುವಾಗಿದೆ. ವಿಜಯ್‌ಕುಮಾರ್ ಮೂಲತಃ ಬಿಜೆಪಿಯ ಸಕ್ರಿಯ ಕಾರ್ಯಕರ್ತ. ಅಷ್ಟೇ ಅಲ್ಲ, ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನ ಪಟ್ಟಾ ಶಿಷ್ಯನಾದ ಈತ ಈಗಾಗಲೇ ರೇಷ್ಮೆ ಮಂಡಳಿಯ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರ ಪ್ರತಿಸ್ಪರ್ಧಿ ಗಂಗಾಧರ್ ಕಾಂಗ್ರೆಸ್ ಪರ ಒಲವಿರುವವರು. ಜೊತೆಗೆ ಕಾಂಗ್ರೆ ಸಹಾನುಭೂತಿಯನ್ನು ಹೊಂದಿರುವ ಸಾ.ರಾ.ಗೋವಿಂದು ಅವರ ಬೆಂಬಲವನ್ನು ಪಡೆದಿದ್ದ ಅಭ್ಯರ್ಥಿಯಾಗಿದ್ದರು. ಹೀಗಾಗಿ ವಿಜಯ್‌ಕುಮಾರ್ ಗೆಲುವನ್ನು ಮೊದಲ ಬಾರಿಗೆ ಛೇಂಬರ್ ಬಿಜೆಪಿ ತೆಕ್ಕೆಗೆ ಹೋಗಿದೆ ಎಂದು ಹೇಳುವವರೂ ಇದ್ದಾರೆ.

ಚರ್ಚೆಯ ಇನ್ನೊಂದು ಅಂಶವೆಂದರೆ, ಗಂಗಾಧರ್ ಅವರನ್ನು ಅವರ ಸ್ವಜಾತಿ ಬಂಧುಗಳಾದ ಸಾ.ರಾ.ಗೋವಿಂದು, ಕೆ.ಸಿ.ಎನ್.ಚಂದ್ರು, ಹಾಲಿ ಅಧ್ಯಕ್ಷ ಚಂದ್ರಶೇಖರ್, ಜಗ್ಗೇಶ್ ಮುಂತಾದವರು ಬೆಂಬಲಿಸಿದ್ದರು. ಇವರೆಲ್ಲರೂ ಒಕ್ಕಲಿಕ ಸಮುದಾಯಕ್ಕೆ ಸೇರಿದವರು. ಆದರೆ ಶೆಟ್ಟಿ ಸಮಾಜಕ್ಕೆ ಸೇರಿದ ವಿಜಯ್‌ಕುಮಾರ್ ಅವರನ್ನು ಬಹುತೇಕ ಎಲ್ಲ ಜಾತಿಯವರೂ ಬೆಂಬಲಿಸಿದ್ದರು. ಉದಾಹರಣೆಗೆ ಸೂರಪ್ಪ ಬಾಬು, ರಾಕ್‌ಲೈನ್ ವೆಂಕಟೇಶ್, ಮುನಿರತ್ನಂ ನಾಯ್ಡು ಉಮೇಶ್ ಬಣಕಾರ್, ಕೆ.ಸಿ.ಎನ್.ಕುಮಾರ್, ಸುರೇಶ್ ಗೌಡರು, ಮಾಣಿಕ್‌ಚಂದ್, ಕುಟ್ಟಿ, ನಾಗೇಶ್‌ಕುಮಾರ್ ಹೀಗೆ ಜಾತಿ-ಭಾಷೆ ಮೀರಿ ಎಲ್ಲ ವರ್ಗದ ಜನ ವಿಜಯ್‌ಕುಮಾರ್ ಅವರನ್ನು ಬೆಂಬಲಿಸಿದ್ದರು. ಚಿತ್ರೋದ್ಯಮದ ಇಷ್ಟು ಜನ ಹಿರಿಯರನ್ನು ಒಂದು ಕಡೆ ಸೇರಿಸುವಲ್ಲಿ ಪ್ರಮುಖವಾದ ಪಾತ್ರ ವಹಿಸಿದವರು, ಆ ಮೂಲಕ ಕಿಂಗ್‌ಮೇಕರ್ ಎನಿಸಿಕೊಂಡವರು ಸೂರಪ್ಪ ಬಾಬು. ವಿಜಯ್‌ಕುಮಾರ್ ಅವರ ಗೆಲುವನ್ನು ಜಾತೀಯ ಶಕ್ತಿಗಳನ್ನು ಜಾತ್ಯತೀತ ಶಕ್ತಿಗಳು ಸೋಲಿಸಿವೆ ಎಂದು ಈಗ ತರ್ಕಿಸುತ್ತಿರುವವರೂ ಇದ್ದಾರೆ.

ಹಾಗೆಯೇ ಕೆಲವರು ವಿಜಯ್‌ಕುಮಾರ್ ಅವರು ವಿಷ್ಣುವರ್ಧನ್ ಅವರ ಭಕ್ತರಾಗಿರುವುದರಿಂದ ಇದೇ ಮೊದಲ ಬಾರಿಗೆ ವಿಷ್ಣು ಅಭಿಮಾನಿಯೊಬ್ಬರು ಛೇಂಬರ್ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದಾರೆ ಎಂದೂ ಹೇಳುತ್ತಿದ್ದಾರೆ.

ಅದೇನೇ ಇದ್ದರೂ ಈ ಬಾರಿಯ ಚುನಾವಣೆ ಬಗ್ಗೆ ಬಹುತೇಕ ನಾಯಕನಟರು ಮತ್ತು ಹಿರಿಯರು ಉದಾಸೀನ ತೋರಿದ್ದು ಅಚ್ಚರಿ ಮೂಡಿಸುವಂತಿತ್ತು, ಶಿವರಾಜ್‌ಕುಮಾರ್, ರಾಘವೇಂದ್ರ ರಾಜ್‌ಕುಮಾರ್, ಪುನೀತ್ ರಾಜ್‌ಕುಮಾರ್, ಪಾರ್ವತಮ್ಮ ರಾಜ್‌ಕುಮಾರ್, ಸುದೀಪ್, ದರ್ಶನ್, ರವಿಚಂದ್ರನ್, ಉಪೇಂದ್ರ, ಅನಂತನಾಗ್..... ಹೀಗೆ ಪ್ರಮುಖರೆಲ್ಲ ಗೈರುಹಾಜರಾಗಿದ್ದರು. ಮುಂಬರುವ ದಿನಗಳಲ್ಲಿ ಉದ್ಯಮದ ಅನೇಕ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಈ ಪ್ರಮುಖ ಸಹಕಾರ ಛೇಂಬರ್‌ಗೆ ತೀರಾ ಅಗತ್ಯವಾದುದು. ಹೀಗಾಗಿ ಇಂತಹ ಹಿರಿಯರ ವಿಶ್ವಾಸವನ್ನು ವಿಜಯ್‌ಕುಮಾರ್ ಹೇಗೆ ಗಳಿಸುತ್ತಾರೆ ಎಂಬುದರ ಮೇಲೆ ಅವರ ಮುಂದಿನ ದಿನಗಳ ಕಾರ್ಯಾಚರಣೆ ಮತ್ತು ಯಶಸ್ಸು ಅವಲಂಬಿತವಾಗಿದೆ ಎಂದು ಹೇಳಿದರೂ ತಪ್ಪಾಗಲಾರದು.

• ಶೆಣೈ

ಅರುಣ್ ಸಾಗರ್‌ಗೆ ಪ್ರಮೋಷನ್

ಅರುಣ್ ಸಾಗರ್ ಎಂಬ ಬಹುಮುಖ ಪ್ರತಿಭೆಯ ಕಲಾವಿದ ಇನ್ನೇನು ನಿರ್ದೇಶಕ ಆಗುವುದು ಬಹುತೇಕ ಖಚಿತವಾಗಿದೆ.

ಬಿ.ವಿ.ಕಾರಂತರ ಗರಡಿ ಮತ್ತು ಸುಬ್ಬಣ್ಣನವರ ನೀನಾಸಂನಲ್ಲಿ ಬೆಳೆದ ಅರುಣ್ ಸಾಗರ್ ಚಿತ್ರರಂಗಕ್ಕೆ ಬಂದನಂತರ ಕಲಾ ನಿರ್ದೇಶಕ, ಹಾಸ್ಯ ನಟ, ಪೋಷಕ ನಟ, ಖಳನಟ-ಹೀಗೆ ಎಲ್ಲ ವಿಭಾಗಗಳಲ್ಲೂ ವಿಜೃಂಭಿಸಿ ತನ್ನ ಪ್ರತಿಭೆಯನ್ನು ಮೆರೆದವರು. ಅಷ್ಟೇ ಅಲ್ಲ, ಕಿರುತೆರೆಯಲ್ಲೂ ತನ್ನದೇ ಆದ ಕಾರ್ಯಕ್ರಮವನ್ನು ಆರಂಭಿಸಿ ಅದರ ಮುಖಾಂತರವೂ ಅರುಣ್ ಸಾಗರ್ ತಾನು ಎಷ್ಟು ಒಳ್ಳೆಯ ಕಥೆ ಚಿತ್ರಕಥೆಯನ್ನು ಬರೆಯಬಲ್ಲವನು ಎಂಬುದನ್ನು ತೋರಿಸಿಕೊಟ್ಟವರು.




ಮೂಲತಃ ನಾಟಕದ ಹಿನ್ನೆಲೆಯಿಂದ ಬಂದವರಾಗಿದ್ದರಿಂದ ಅರುಣ್ ಸಾಗರ್ ಒಂದಿಲ್ಲೊಂದು ದಿನ ನಿರ್ದೇಶಕ ಆಗೇಆಗ್ತಾರೆ ಎಂದೇ ಎಲ್ಲರ ನಿರೀಕ್ಷೆಯಾಗಿತ್ತು. ಅರುಣ್ ಕೂಡ ಕಲಾ ನಿರ್ದೇಶನಕ್ಕಿಂತಲೂ ಹೆಚ್ಚಾಗಿ ನಟನೆ, ಹಾಗೆಯೇ ನಟನೆಗಿಂತ ಹೆಚ್ಚು ನಿರ್ದೇಶನದ ಬಗ್ಗೆಯೂ ತನ್ನ ಒಲವನ್ನು ವ್ಯಕ್ತಪಡಿಸುತ್ತಿದ್ದರು.

ವಾಸ್ತವವಾಗಿ ಎರಡು ವರ್ಷದ ಹಿಂದೆ ಅವರು ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಅವರಿಗಾಗಿ 'ಮಲ್ಲಗಂಬ' ಎಂಬ ಚಿತ್ರವನ್ನು ನಿರ್ದೇಶಿಸಬೇಕಿತ್ತು. ಆ ಚಿತ್ರದಲ್ಲಿ ನಾಯಕ ನಟ ವಿಜಿ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳುವುದೆಂದೂ ಫಿಕ್ಸ್ ಆಗಿತ್ತು. ಆದರೆ ಆ ಚಿತ್ರ ಯಾಕೋ ಪ್ರಾರಂಭವಾಗಲೇ ಇಲ್ಲ.

ನಿರ್ದೇಶಕನಾಗಬೇಕೆಂಬ ಅರುಣ್ ಸಾಗರ್ ಅವರ ಇಂಗಿತಕ್ಕೆ ಗಾಂಧಿನಗರದ ನಿರ್ಮಾಪಕರು ಸ್ಪಂದಿಸದಿದ್ದಾಗ ಅವರ ಸಹೋದ್ಯೋಗಿಗಳೇ ಅವರ ಬೆನ್ನ ಹಿಂದೆ ನಿಂತಿದ್ದಾರೆ. ಅರುಣ್ ಸಾಗರ್ ಜೊತೆ ಕೆಲಸ ಮಾಡುವ ಸುಮಾರು 10 ತಂತ್ರಜ್ಞರು ಸೇರಿಸಿಕೊಂಡು ಒಂದು ನಿರ್ಮಾಣ ಸಂಸ್ಥೆಯನ್ನು ಹುಟ್ಟುಹಾಕಿದ್ದಾರೆ. ಅವರೆಲ್ಲ ಈಗ ಈ ಸಿನಿಮಾವನ್ನು ನಿರ್ಮಿಸಲು ಮುಂದಾಗಿದ್ದರೆ ಅರುಣ್ ಸಾಗರ್ ನಿರ್ದೇಶಕನಾಗುತ್ತಿದ್ದಾರೆ. ಮಾತ್ರವಲ್ಲ, ಈ ಚಿತ್ರದಲ್ಲಿ ಸ್ವತಃ ಅವರೇ ನಾಯಕನಟನಾಗಿ ನಟಿಸುತ್ತಿದ್ದಾರೆ. ಅಂದರೆ, ನಿರ್ದೇಶಕ ಮತ್ತು ನಾಯಕನಟನಾಗುವ ಅರುಣ್ ಸಾಗರ್ ಅವರ ಕನಸು ಈಗ ಏಕಕಾಲಕ್ಕೆ ಕೂಡಿಬಂದಿದೆ.

ಅಂದಹಾಗೆ, ಈ ಚಿತ್ರದ ಹೆಸರು 'ಜೋಕರ್'. •

ಸುದ್ದಿ ಮಾಡಿದ ಪತ್ರಕರ್ತರು





ಇಬ್ಬರು ಸಿನಿಮಾ ಪತ್ರಕರ್ತರು ಈ ವಾರ ಸುದ್ದಿಯಲ್ಲಿದ್ದಾರೆ. ಮೊದಲನೆಯದಾಗಿ, 'ಚಿತ್ರಲೋಕ ಡಾಟ್ ಕಾಂ'ನ ಕೆ.ಎನ್.ವೀರೇಶ್ ಚಲನಚಿತ್ರ ವಾಣಿಜ್ಯ ಮಂಡಳಿಯ ಚುನಾವಣೆಗೆ ಸ್ಪರ್ಧಿಸಿ ಜಯಗಳಿಸಿದ್ದಾರೆ. ಪತ್ರಕರ್ತನೊಬ್ಬ ಈ ಮೂಲಕ ಇದೇ ಮೊದಲ ಬಾರಿಗೆ ಚಲನಚಿತ್ರ ವಾಣಿಜ್ಯ ಮಂಡಳಿಯ ಆವರಣವನ್ನು ಪ್ರವೇಶಿಸಿದಂತಾಗಿದೆ. ಅಂತಹ ಅಪರೂಪದ ಸಾಧನೆ ಮಾಡಿದ ಕೀರ್ತಿ ವೀರೇಶ್ ಪಾಲಾಗಿದೆ.

ಎರಡನೆಯದಾಗಿ, ಯಾವಾಗಲೂ ಮೌನಿಯಾಗಿರುವ ಸಿನಿಮಾ ಪತ್ರಕರ್ತ ನಂದಕುಮಾರ್ ಅಷ್ಟೇ ಸದ್ದುಗದ್ದಲವಿಲ್ಲದೆ ತನ್ನ ನಿರ್ದೇಶನದ ಎರಡನೆಯ ಚಿತ್ರ 'ಐ ಆ್ಯಮ್ ಇನ್ ಲವ್' ಚಿತ್ರವನ್ನು ಮುಗಿಸಿದ್ದಾರೆ. ಮುಂದಿನ ತಿಂಗಳು ಈ ಚಿತ್ರವನ್ನು ಬಿಡುಗಡೆ ಮಾಡುವ ಹುಮ್ಮಸ್ಸಿನಲ್ಲಿರುವ ನಂದಕುಮಾರ್ ಅತ್ಯಂತ ಉತ್ಸಾಹದಲ್ಲಿದ್ದಾರೆ. ಕಾರಣ ಇಷ್ಟೆ, ಈ ಚಿತ್ರವನ್ನು ಕರ್ನಾಟಕದಾದ್ಯಂತ ಬಿಡುಗಡೆ ಮಾಡಲು ಹಂಚಿಕೆದಾರರಾದ ಕೆ.ಮಂಜು ಮತ್ತು ಮೋಹನ್‌ದಾಸ್ ಪೈ ಮುಂದೆ ಬಂದಿದ್ದಾರೆ. ಈ ಹಿಂದೆ ಇವರ ನಿರ್ದೇಶನದ 'ಗುಡ್‌ಲಕ್' ಚಿತ್ರವನ್ನೂ ಮಂಜು ಮತ್ತು ಮೋಹನ್‌ದಾಸ್ ಪೈ ಬಿಡುಗಡೆ ಮಾಡಿದ್ದರು.

ವೀರೇಶ್ ಮತ್ತು ನಂದಕುಮಾರ್ ಇಬ್ಬರಿಗೂ ನಮ್ಮ ಅಭಿನಂದನೆಗಳು.

'ಪರಾರಿ' ಸಿದ್ಧತೆಯಲ್ಲಿ ಚೈತನ್ಯ



'ಆ ದಿನಗಳು' ಖ್ಯಾತಿಯ ಚೈತನ್ಯ ಬಹಳ ಸಮಯದ ನಂತರ ಮತ್ತೊಂದು ಚಿತ್ರವನ್ನು ಕೈಗೆತ್ತಿಕೊಂಡಿದ್ದಾರೆ. ಚಿತ್ರದ ಹೆಸರು 'ಪರಾರಿ'. ಶುಭಾ ಪೂಂಜಾ ಮುಖ್ಯ ನಾಯಕಿ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಾರಂತೆ. ಉಳಿದಂತೆ ಹೆಚ್ಚಿನ ಕಲಾವಿದರೆಲ್ಲರೂ ಹಾಸ್ಯಕಲಾವಿದರಂತೆ.

ರೌಡಿಸಂ ಹಿನ್ನೆಲೆ ಹೊಂದಿದ್ದ ಚೈತನ್ಯ ಅವರ ಮೊದಲ ಸಿನಿಮಾ 'ಆ ದಿನಗಳು' ಗೆದ್ದಿದ್ದರೂ ಅವರ ಎರಡನೆ ಚಿತ್ರ 'ಸೂರ್ಯಕಾಂತಿ' ಮುಗ್ಗರಿಸಿದಾಗ ಚೈತನ್ಯರ ಚೈತನ್ಯವೇ ಮುದುರಿಹೋಗಿತ್ತು. ಈಗ 'ಪರಾರಿ' ಚಿತ್ರದಲ್ಲಿ ಹಾಸ್ಯ ಕಲಾವಿದರನ್ನು ಹಾಕಿಕೊಂಡು ಚೈತನ್ಯ ಅಪ್ಪಟ ಮನರಂಜನೆಯ ಚಿತ್ರವನ್ನು ಕೊಡುವ ಸಾಹಸಕ್ಕೆ ಇಳಿದಿದ್ದಾರೆ. •

t according to the Dwaitha osophy, Shiva or Rudra occupies 9th place from Vishnu. The Shiva is al in status to Garuda & Shesha who upy the 7th & 8th place and that va is worshiped by Vaishnavas as a SA or Subordinate deity of Vishnu - ು ಮಾಜಿ ಧರ್ಮದರ್ಶಿ ಡಾ.ಮ.ಸು.ಅಚ್ಯುತ ಶರ್ಮರ ಸುಬ್ರಹ್ಮಣ್ಯ ಕ್ಷೇತ್ರದ ಸಂಶೋಧನಾತ್ಮಕ ಇತಿಹಾಸ ಮರೆಯಾದ ವಿನಾಯಕ ದೇವರು" ಪುಸ್ತಕದಿಂದ -31.)

- ರವಿ ಪುತ್ತೂರ್, ದಕ

ದರ್ಶನ್‌ನನ್ನು ಟಾರ್ಗೆಟ್ ಮಾಡಲು ಯಶ್ ಪರ ನಿಲುವು?

ನಟ ಯಶ್ ಪರ ತಾವೂ ನಿಲ್ಲುವಿರಿ ಎಂದು ನಾನು ಮೊದಲೇ ಊಹಿಸಿದ್ದೆ. ಮಾತ್ರವಲ್ಲ ದರ್ಶನ್‌ನನ್ನು ಟಾರ್ಗೆಟ್ ಮಾಡುವಿರೆಂದೂ ಗೊತ್ತಿತ್ತು. ಯಾಕೆಂದರೆ 'ಸಂಗೊಳ್ಳಿ ರಾಯಣ್ಣ'ನನ್ನು ಫ್ಲಾಪ್ ಮಾಡಿಸಬೇಕಲ್ಲ ಅದಕ್ಕೆ.

- ಮೋಹನ್, ತುಮಕೂರು

ಕರ್ನಾಟಕದಲ್ಲಿ ವಿಜ್ಞಾನಕ್ಕೆ 'ನಂಬರ್ 1 ಎನಿಮಿ'ಇದ್ದರೆ ಅದು ಆರೆಸ್ಸೆಸ್ಸಿನ ಕಟ್ಟಾ ಅಭಿಮಾನಿ ಕಾಗೇರಿ. ಈತ ಭಗವದ್ಗೀತೆ ನೆಪದಲ್ಲಿ ದುಡ್ಡು ಮಾಡಲು ಹೊರಟಾಗಲೇ ಇನ್ನು ಕನ್ನಡ ಮಕ್ಕಳಿಗೆ ಮೂಢನಂಬಿಕೆಗಳೇ ಪಠ್ಯಪುಸ್ತಕ ಆಗುವುದು ಎಂದು ಖಚಿತವಾಗಿತ್ತು.

- ರವಿಕುಮಾರ್, ಹಾಸನ

ಸಾಕಷ್ಟು ದಿನಗಳಿಂದ ನಾವು ನಿಮ್ಮ ಪತ್ರಿಕೆಯನ್ನು ಓದುತ್ತಿದ್ದೇವೆ. ಯಾವತ್ತೂ ನಿಮ್ಮ ದೃಢವಾದ ನಿಲುವು, ನಿಮ್ಮ ಧೋರಣೆ ಬದಲಾಗಿಲ್ಲ. ಅಂತಹ ಗಟ್ಟಿಗಿತ್ತಿ ನೀವು. ಸಾಕು, ಇನ್ನು ಹೊಗಳಿಕೆ ಬೇಡ ಅಂತೀರಾ! ನೇರವಾಗಿ ವಿಚಾರ ಪ್ರಸ್ತಾಪಿಸುತ್ತೇವೆ. 1012ರ ಅಕ್ಟೋಬರ್ 3ರ ನಿಮ್ಮ ಪತ್ರಿಕೆಯ 'ಮೀಡಿಯಾ ಮಸಾಲ' ಕಾಲಂನಲ್ಲಿ 'ತುಮಕೂರು ಟಿವಿ ಪತ್ರಕರ್ತ ಮಂಜುನಾಥ್ ಪಾಟೀಲ್ ನಾಪತ್ತೆ' ಎಂಬ ವರದಿ ಪ್ರಕಟಗೊಂಡಿತ್ತು, ನಿಮ್ಮ ಪತ್ರಿಕಾ ವರದಿ ಶ್ಲಾಘನೀಯ.

ಪತ್ರಿಕೋದ್ಯಮದ ಓನಾಮ ಗೊತ್ತಿಲ್ಲದವರೆಲ್ಲಾ ಇಂದು ಎಲೆಕ್ಟ್ರಾನಿಕ್ ಮಾಧ್ಯಮಕ್ಕೆ ಕಾಲಿಟ್ಟು ಪತ್ರಿಕೋದ್ಯಮದ ನೀತಿನಿಯಮಗಳಿಗೆ ತಿಲಾಂಜಲಿ ಇಡುತ್ತಿದ್ದಾರೆ. ಅಂತಹವರ ಎದೆ ಸೀಳಿದರೂ ನಾಲ್ಕಕ್ಷರದ ಜ್ಞಾನ ಇರಲ್ಲ. ಕೈಗೆ ಲೋಗೋ ಸಿಕ್ಕರೆ ಸಾಕು, ಲೋಕವೇ ತನ್ನ ಕೈಯಲ್ಲಿದೆ ಎಂದು ಬೀಗುತ್ತಾರೆ. ಅಂತಹವರು ನೀಚ ಕೆಲಸಕ್ಕೆ ಕೈಹಾಕುವುದು ನಿಜಕ್ಕೂ ನೈಜ ಪತ್ರಕರ್ತರಿಗೆ ಮಾಡಿದ ಅಪಮಾನವೇ ಸರಿ.

ಚಾನೆಲ್‌ನ ಮುಖ್ಯಸ್ಥರು ಜನರನ್ನು ಕೆಲಸಕ್ಕೆ ತೆಗೆದುಕೊಳ್ಳುವಾಗ ಯಾವ ಮಾನದಂಡದ ಮೇಲೆ ಮಂಜುನಾಥ್ ಪಾಟೀಲನಂಥವನನ್ನು ಆಯ್ಕೆ ಮಾಡುತ್ತಾರೆ ಎಂದು ಅವರೇ ವಿವರಿಸಬೇಕು. ಅಂದಹಾಗೆ, ಈ ಮಂಜುನಾಥನ ಲೀಲೆಗಳು ಇನ್ನೂ ಹೆಚ್ಚು ಇದ್ದಾವೆ. ಆತನನ್ನು ಕುರಿತು ಪರಿಪೂರ್ಣ ವರದಿ ಬಂದಿದ್ದರೆ ಇನ್ನು ಚೆನ್ನಾಗಿರುತ್ತಿತ್ತು. ಇನ್ನಾದರೂ ಪತ್ರಕರ್ತರು ಇಂತಹ ಸಮಾಜಘಾತುಕ ಕೆಲಸಗಳಿಂದ ದೂರ ಉಳಿದು ಮಾಧ್ಯಮದ ಘನತೆ ಮತ್ತು ಗೌರವವನ್ನು ಕಾಪಾಡಲಿ ಎಂಬುದು ನಮ್ಮೆಲ್ಲರ ಆಶಯ. ಇಂತಹ ಹದ್ದುಮೀರಿದ ಖನಾತಿಗಳ ಮೇಲೆ ನಿಮ್ಮದೊಂದು ಕಣ್ಣಿರಲಿ ಅನ್ನೋದು ನಮ್ಮ ಒತ್ತಾಯ.

- ತುಮಕೂರಿನ ನಾಗರಿಕರು, ಇ ಮೇಲ್ ಮೂಲಕ

ಈ ಬಾರಿಯ ಬರೆಯುವ ಮುನ್ನ ಖುಷಿ ನೀಡಿತು. ಥ್ಯಾಂಕ್ಸ್.

-ಓದುಗ, ಎಸ್‌ಎಂಎಸ್ ಮೂಲಕ

ಾನ್ಯರೆ,

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ಈ ಮೂಲಕ ಮ್ಮ ಗಮನಕ್ಕೆ ತರುವುದೇನೆಂದರೆ ಶ್ರೀಮತಿ ಸುಚಿತ್ರ ಮತ್ತು ಶ್ರೀಮತಿ ಚೈತ್ರ ಬ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗಿದೆ ಎಂಬ ಬಗ್ಗೆ ತಮ್ಮ ಪತ್ರಿಕೆಯಲ್ಲಿ ಟವಾಗಿರುವ ವರದಿಯು ಸತ್ಯಕ್ಕೆ ದೂರವಾದುದಾಗಿರುತ್ತದೆ. ಈ ಇಬ್ಬರು ಪನ್ಯಾಸಕರು ಸ್ನಾತಕೋತ್ತರ ಪದವಿಯಲ್ಲಿ ಉತ್ತೀರ್ಣರಾಗಿಲ್ಲವೆಂದು ಪತ್ರಿಕೆಯಲ್ಲಿ ರದಿಯಾಗಿರುವುದೂ ಕೂಡ ಸುಳ್ಳು ವರದಿಯಾಗಿರುತ್ತದೆ. ಆದರೆ ಇವರ ಅಂತಿಮ ರೀಕ್ಷೆಯ ಫಲಿತಾಂಶವು ಹೊರಬೀಳದಿರುವ ಕಾರಣ ಇವರ ನೇಮಕಾತಿ ಪ್ರಕ್ರಿಯೆಯನ್ನು ತಡೆಹಿಡಿಯಲಾಗಿತ್ತು, ಇತ್ತೀಚೆಗೆ ಅಂದರೆ ತಮ್ಮ ಪತ್ರಿಕೆಯಲ್ಲಿ ವರದಿಯಾಗಿರುವ ದಿನಾಂಕಕ್ಕೆ ಮುಂಚಿತವಾಗಿ (ಅಂದರೆ ದಿನಾಂಕ 12.9.2012) ಇವರ ಅಂತಿಮ ಕಾಂ ಪರೀಕ್ಷೆಯ ಫಲಿತಾಂಶ ಹೊರಬಂದಿದ್ದು ಇಬ್ಬರೂ ಸಹ ಪ್ರಥಮ ದರ್ಜೆಯಲ್ಲಿ ಾಗಿರುತ್ತಾರೆ ಎಂಬ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಾ ನಮ್ಮ ವರದಿಯು ಶಕ್ಷೀಯ ರೀತಿಯಲ್ಲಿರುತ್ತದೆ. ಸದರಿ ವಿಷಯದ ಬಗ್ಗೆ ಪ್ರಾಂಶುಪಾಲರಾದ ನನ್ನನ್ನು ಪ್ಪು ವಿವರಗಳನ್ನು ಪಡೆದುಕೊಂಡು ಸತ್ಯಾಸತ್ಯತೆಗಳನ್ನು ಪರಿಶೀಲಿಸಿ ವರದಿಯನ್ನು ಕಟಿಸಬೇಕಿತ್ತಾಗಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಸದರಿ ವಿಷಯದಲ್ಲಿ ಸಂಬಂಧಪಟ್ಟ ಾ, ಅಧಿಕಾರಿಗಳೊಂದಿಗೆ ಚರ್ಚಿಸಿರುವುದಾಗಿ ತಮಗೆ ಮನವರಿಕೆ ಮಾಡಿಕೊಡುತ್ತಿದ್ದೇನೆ. ಆದುದರಿಂದ ತಮ್ಮ ವರದಿಗೆ ತಿದ್ದುಪಡಿಯ ವರದಿಯನ್ನು ತಮ್ಮ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಬೇಕಾಗಿ ಕೋರುತ್ತಿದ್ದೇನೆ.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ,

ಎಂ.ಜಿ. ನಮಿತಾ

'ಲಂಕೇಶ್' ಉತ್ತರ

ಮಾನ್ಯ ನಮಿತಾರವರೆ,

ತಮ್ಮ ಶಿಕ್ಷಣ ಸಂಸ್ಥೆಯ ಗೌರವಕ್ಕೆ ಕುಂದು ತರಲು ಈ ವರದಿಯನ್ನು ಪ್ರಕಟಿಸಿದ್ದಲ್ಲ. ಶ್ರೀಮತಿ ಸುಚಿತ್ರ ಹಾಗೂ ಚೈತ್ರ ಎಂಬುವರು ಎಂ.ಕಾಂ. ಪೂರ್ಣಗೊಳಿಸದೆ ಇದ್ದಾಗಲೂ ತಾವು ಅವರಿಗೆ ಪಾಠ ಮಾಡಲು ಅವಕಾಶ ನೀಡಿರುವ ಬಗ್ಗೆ ಪತ್ರಿಕೆಯ ಬಳಿ ಸಾಕಷ್ಟು ದಾಖಲೆಗಳಿವೆ. ಕಾಲೇಜೊಂದರ ಅಕಾಡೆಮಿಕ್ ವಾತಾವರಣ ಹಾಗೂ ಗುಣಮಟ್ಟ ಕುಸಿಯಬಾರದೆಂಬ ಕಾಳಜಿಯನ್ನು ಮಾತ್ರ ಈ ವರದಿ ಹೊಂದಿತ್ತು, ಇದನ್ನು ಸಹ ತಾವು ತಪ್ಪು ಎನ್ನುವುದಾದರೆ ನಮ್ಮ ಬಳಿ ಇರುವ ದಾಖಲೆಗಳನ್ನು ವಿವಿಯ ರಿಜಿಸ್ಟ್ರಾರ್‌ರವರಿಗೆ ನೀಡಲು ನಾವು ಸಿದ್ಧ.

ತಾವು ಈ ವರದಿಯ ಹಿಂದಿನ ಸದುದ್ದೇಶವನ್ನು ಗ್ರಹಿಸಿ ತಮ್ಮ ಮುಂದಾಳತ್ವದಲ್ಲಿ ಕಾಲೇಜನ್ನು ಇನ್ನಷ್ಟು ಉನ್ನತ ಹಂತಕ್ಕೆ ಒಯ್ಯುತ್ತೀರೆಂದು ಆಶಿಸುತ್ತೇವೆ. -ಸಂ

ವಿ.ಸೂ : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ... ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪತ್ರಿಕೆಯಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.

Registered No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 17-10-2012

ಸುದೀಪ್ ಕಾಲ್‌ಶೀಟ್ ಕುಮಾರ್‌ಗೆ



ಸುದೀಪ್ ಹೊಸ ಚಿತ್ರ ಯಾವಾಗ ಆರಂಭವಾಗುತ್ತದೆ, ಆ ಚಿತ್ರವನ್ನು ಯಾರು ನಿರ್ಮಿಸುತ್ತಾರೆ, ಚಿತ್ರದ ನಿರ್ದೇಶಕ ಯಾರು... ಇಂತಹ ಈ ಎಲ್ಲ ಪ್ರಶ್ನೆಗಳಿಗೆ ಇದೀಗ ತೆರೆಬಿದ್ದಿದೆ.

ಕನ್ನಡ ಚಿತ್ರರಂಗದಲ್ಲಿ ಸದ್ಯಕ್ಕೆ ಒಳ್ಳೆಯ ಹಂಚಿಕೆದಾರ ಮತ್ತು ಪ್ರದರ್ಶಕ ಎನಿಸಿಕೊಂಡಿರುವ ಕೆ.ಸಿ.ಎನ್.ಕುಮಾರ್ ಅವರು ಸುದೀಪ್‌ರ ಮುಂದಿನ ಚಿತ್ರವನ್ನು ನಿರ್ಮಿಸುವುದು ಗ್ಯಾರಂಟಿಯಾಗಿದೆ. ಈ ಚಿತ್ರವನ್ನು ಏಕಕಾಲದಲ್ಲಿ ಕನ್ನಡ, ತಮಿಳು, ತೆಲುಗು ಮತ್ತು ಹಿಂದಿ ಭಾಷೆಗಳಲ್ಲಿ ನಿರ್ಮಿಸುವ ಮಹತ್ವಾಕಾಂಕ್ಷೆಯನ್ನು ಕುಮಾರ್ ಹೊಂದಿದ್ದಾರೆ. ಅದಕ್ಕೆ ಸುದೀಪ್ ಕೂಡ ಸ್ಪಂದಿಸಿದ್ದಾರೆ. ಇದರರ್ಥ ಸುದೀಪ್ ನಟಿಸಿದ್ದ 'ಈಗ' ಚಿತ್ರ ಯಶಸ್ಸು ಗಳಿಸಿದ ನಂತರ ಅವರಿಗೆ ದೊರೆತಿರುವ ರಾಷ್ಟ್ರಮಟ್ಟದ ಮಾರುಕಟ್ಟೆಯನ್ನು ಕೆ.ಸಿ.ಎನ್.ಕುಮಾರ್ ಎನ್‌ಕ್ಯಾಶ್ ಮಾಡಿಕೊಳ್ಳಲು ಹೊರಟಿದ್ದಾರೆ.

ಈ ಚಿತ್ರವನ್ನು ನೃತ್ಯ ನಿರ್ದೇಶಕ ಹರ್ಷ ಅವರು ನಿರ್ದೇಶಿಸಲಿದ್ದಾರೆ ಎಂದು ಆರಂಭದಲ್ಲಿ ಸುದ್ದಿಯಾಗಿತ್ತು, ಆದರೆ ಇಷ್ಟು ದೊಡ್ಡ ಚಿತ್ರದ ಜವಾಬ್ದಾರಿಯನ್ನು ಆತ ಸಮರ್ಥವಾಗಿ ನಿಭಾಯಿಸಲಾರ ಎಂಬ ಮಾತು ಅಲ್ಲಿ ಇಲ್ಲಿ ಕೇಳಿಬಂದಿತ್ತು, ಈಗ ಹರ್ಷನ ಸ್ಥಾನವನ್ನು ಪ್ರೇಮ್ ಆಕ್ರಮಿಸಿಕೊಂಡಿದ್ದಾರೆ. ಈಗಾಗಲೇ ಪ್ರೇಮ್ ಮತ್ತು ಸುದೀಪ್ ಚಿತ್ರದ ಕಥೆಯ ಸ್ವರೂಪದ ಬಗ್ಗೆ ಐದಾರು ಸುತ್ತಿನ ಮಾತುಕತೆಯನ್ನು ಮುಗಿಸಿದ್ದಾರೆ.

ಅದೇನೇ ಇರಲಿ, ಈ ಚಿತ್ರ ನಾಲ್ಕು ಭಾಷೆಗಳಲ್ಲಿ ಏಕಕಾಲದಲ್ಲಿ ನಿರ್ಮಾಣವಾಗುತ್ತಿರುವುದು ಕನ್ನಡಿಗರಿಗೆ ಥ್ರಿಲ್ ಕೊಡುವಂಥಹದ್ದಾಗಿದೆ. ಅದರ ಜೊತೆಗೆ ಸುದೀಪ್ ಮತ್ತು ಪ್ರೇಮ್ ಇದೇ ಮೊದಲ ಬಾರಿಗೆ ಒಂದೇ ಚಿತ್ರದಲ್ಲಿ ಕಾಣಿಸಿಕೊಳ್ಳುವುದೂ ಅವರವರ ಅಭಿಮಾನಿಗಳಿಗೆ ಸಂತೋಷ ಕೊಡಬಹುದು. ಒಟ್ಟಾರೆಯಾಗಿ 2013 ರಲ್ಲಿ ಕನ್ನಡ ಚಿತ್ರರಂಗದಲ್ಲಿ ಒಂದು ಬಾರೀ ಬಜೆಟ್‌ನ ಚಿತ್ರವನ್ನು ನಾವು-ನೀವೆಲ್ಲ ನಿರೀಕ್ಷಿಸಬಹುದು.



ಸುದ್ದಿ ಸುಬ್ಬ ಪ್ರೇಮ್‌ನ ಎರಡು ವಿವಾದ[illegible]



ಪ್ರೇಮ್ ಚಿತ್ರ ಅಂದಮೇಲೆ ಅಲ್ಲಿ ಕಾಂಟ್ರೋವರ್ಸಿ, ವಿವಾದಗಳು, ಚರ್ಚೆಗಳು ಇರಲೇಬೇಕಲ್ಲವೇ? ಈಗಾಗಲೇ ಅನೇಕ ವಿವಾದಗಳಲ್ಲಿ ಸಿಲುಕಿರುವ 'ಪ್ರೇಮ್ ಅಡ್ಡ' ಚಿತ್ರ ಈಗ ಇನ್ನೆರಡು ವಿವಾದಗಳನ್ನು ಹುಟ್ಟುಹಾಕಿದೆ. ವಿಶೇಷವೆಂದರೆ ಇವೆರಡೂ ವಿವಾದಗಳು ಐಟಂ ಸಾಂಗ್‌ಗೆ ಸಂಬಂಧಪಟ್ಟದ್ದು.

ಈ ಹಿಂದೆ 'ಪ್ರೇಮ್ ಅಡ್ಡ' ಚಿತ್ರದಲ್ಲಿ ರಾಗಿಣಿ ಐಟಂ ಸಾಂಗ್‌ವೊಂದರಲ್ಲಿ ಕಾಣಿಸಿಕೊಳ್ಳುವುದಾಗಿ ಪ್ರಚಾರವಾಗಿತ್ತು, ಅದನ್ನು ಸ್ವತಃ ರಾಗಿಣಿ ಮತ್ತು ನಾಯಕ ನಟ ಪ್ರೇಮ್ ಇಬ್ಬರೂ ದೃಢಪಡಿಸಿದ್ದರು. ಆದರೆ ಇದೀಗ ಬಂದ ಸುದ್ದಿಯ ಪ್ರಕಾರ ರಾಗಿಣಿ 'ಪ್ರೇಮ್ ಅಡ್ಡ' ತಂಡಕ್ಕೆ ಕೈಕೊಟ್ಟಿದ್ದಾಳೆ. ಆಕೆಯ [illegible] ಕನ್ನಡದ ಮತ್ತೊಬ್ಬ ನಾಯಕಿ ಐಂದ್ರಿತಾ ರೈ ತುಂಬಿದ್ದಾಳೆ.


ಈ ಬಗ್ಗೆ ರಾಗಿಣಿ ಹೇಳುವುದಿಷ್ಟೆ: "ನಾನು ಆ ಐಟಂ ಸಾಂಗ್‌ನಲ್ಲಿ [illegible] ಒಪ್ಪಿದ್ದು ನಿಜ. ಆದರೆ ಈಗ ಮಲಯಾಳಂ ಚಿತ್ರರಂಗದಲ್ಲಿ ನಟಿಸುತ್ತಿರುವ[illegible] ಡೇಟ್ ಹೊಂದಾಣಿಕೆ ಮಾಡಲು ಕಷ್ಟವಾಗುತ್ತಿದೆಯೇ ವಿನಃ ಬೇರೆ [illegible] ಕಾರಣವಿಲ್ಲ." ಆದರೆ ಬಲ್ಲ ಮೂಲಗಳ ಪ್ರಕಾರ ರಾಗಿಣಿ ಅತ್ಯಂತ [illegible] ಸಂಭಾವನೆಯನ್ನು ಹೇಳಿದ್ದರಿಂದಲೇ 'ಪ್ರೇಮ್ ಅಡ್ಡ'ದ ನಿರ್ದೇಶಕ ಮಹೇಶ[illegible] ರಾಗಿಣಿಗೆ ಟಾಟಾ ಹೇಳಿದರಂತೆ. ಎಷ್ಟೆಂದರೂ ಕನ್ನಡದಲ್ಲಿ ಈಗ ಐಟಂ ಸಾಂ[illegible] ನರ್ತಿಸಲು ಹುಡುಗಿಯರ ಬರವಿಲ್ಲ ಎಂಬುದು ಮಹೇಶ್‌ಬಾಬುಗೆ ಗೊ[illegible] ವಿಷಯ ತಾನೆ?

ಈಗ 'ಪ್ರೇಮ್ ಅಡ್ಡ' ಚಿತ್ರದ ಮತ್ತೊಂದು ಐಟಂ ಸಾಂಗ್ ಕೂಡ ವಿವಾ[illegible] ಮಳವಳ್ಳಿ ಸಾಯಿಕೃಷ್ಣ ಬರೆದ ಹಾಡೊಂದನ್ನು ನಿರ್ದೇಶಕ ಮಹೇಶ್‌ಬಾಬು ಮೇಲುಕೋ[illegible] ಚಿತ್ರೀಕರಿಸಿದ್ದರು. ಆ ಹಾಡಿನಲ್ಲಿ ಮೇಲುಕೋಟೆಯ ಹೆಣ್ಣನ್ನು ವರ್ಣಿಸಿದ ಬಗ್ಗೆ ಅಲ್ಲಿ[illegible] ತೀವ್ರವಾಗಿ ವಿರೋಧಿಸುತ್ತಿದ್ದಾರೆ. ಈ ವಿರೋಧಕ್ಕೆ ಸ್ಪಂದಿಸಿದ ಪ್ರೇಮ್ 'ಈ ಹಾ[illegible] ನಿಜವಾಗಿಯೂ ಮೇಲುಕೋಟೆ ಜನರ ಭಾವನೆಗೆ ನೋವುಂಟಾಗಿದ್ದರೆ ಅದರ ಸಾಹಿ[illegible] ಬದಲಾಯಿಸುತ್ತೇನೆ' ಎಂದು ತಪ್ಪೊಪ್ಪಿಕೊಂಡಿದ್ದಾರೆ. ಸಾಧಾರಣವಾಗಿ, ಸುಲಭವಾಗಿ ತಪ್ಪೊಪ್ಪಿ[illegible] ಪ್ರೇಮ್ ಯಾವುದೇ ವಿವಾದ ಬಂದರೂ ಅದನ್ನು ಚ್ಯುಯಿಂಗ್ ಗಮ್‌ನಂತೆ ಎಳೆ[illegible] ಮನೋಭಾವದವರೆಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಆದರೆ ಈ ಬಾರಿ ಯಾಕೋ[illegible] ಪ್ರೇಮ್ ಒಂದೇ ಏಟಿಗೆ ಬೋಲ್ಡ್ ಆಗಿಬಿಟ್ಟಿದ್ದಾರೆ.



'ಡರ್ಟಿ ಪಿಕ್ಚರ್' ತಂಡದ ವಿದೇಶಾಂಗ ನೀತಿ

'ಡರ್ಟಿ ಪಿಕ್ಚರ್' ತಂಡಕ್ಕೆ ಮತ್ತೋರ್ವ ವಿದೇಶಿ ನಟಿ ಆಗಮಿಸುತ್ತಿರುವ ಸುದ್ದಿ ಕೇಳಿಬಂದಿದೆ. ಈಗಾಗಲೇ ಈ ಚಿತ್ರಕ್ಕೆ ನಿರ್ದೇಶಕ ತ್ರಿಶೂಲ್ ಪಾಕಿಸ್ತಾನದಿಂದ ವೀಣಾ ಮಲ್ಲಿಕ್ ಎಂಬ ಬಿಚ್ಚಮ್ಮಳನ್ನು ಕರೆತಂದು ಭಾರೀ ಸುದ್ದಿ ಮಾಡಿದ್ದರು. ಈ ಚಿತ್ರದ ಐಟಂ ಸಾಂಗ್‌ನಲ್ಲಿ ಪೂನಂ ಪಾಂಡೆ ಎಂಬ 'ನಗ್ನ' ಸುದ್ದಿ ಸುಬ್ಬಕ್ಕ ಕಾಣಿಸಿಕೊಳ್ಳುವ ಸಾಧ್ಯತೆ ಇದೆ ಎಂಬ ಸುದ್ದಿಯೂ ಇತ್ತು, ಈ ಪೂನಂ ಪಾಂಡೆ 'ಭಾರತೀಯ ಕ್ರಿಕೆಟ್ ತಂಡ ವಿಶ್ವಕಪ್ ಗೆದ್ದರೆ ಸ್ಟೇಡಿಯಂನಲ್ಲಿ ನಾನು ನಗ್ನಳಾಗಿ ಓಡುತ್ತೇನೆ' ಎಂದು ಹೇಳಿ ಪ್ರಚಾರ ಗಿಟ್ಟಿಸಿದ್ದಾರೆ. ಅಂತಹ ಹುಡುಗಿಯನ್ನು ಕರೆತರುವಲ್ಲಿ 'ಡರ್ಟಿ' ಚಿತ್ರತಂಡ ವಿಫಲವಾಗಿದೆ. ಕಾರಣವಿಷ್ಟೆ, ಆಕೆ ತನ್ನ ದುಬಾರಿ ಸಂಭಾವನೆಯಾದ 35 ಲಕ್ಷ ರೂಪಾಯಿಗಳನ್ನು ಮೊದಲೇ ಫುಲ್ ಕೊಟ್ಟರೆ ಮಾತ್ರ ಬರುತ್ತೇನೆ ಎಂದು ಕಂಡೀಷನ್ ಹಾಕಿದಳಂತೆ. ಈಕೆಯ ಕಂಡೀಷನ್ ನೋಡಿ ಬೇಸ್ತುಬಿದ್ದ ನಿರ್ದೇಶಕ ತ್ರಿಶೂಲ್ ಈಗ ಐಟಂ ಸಾಂಗ್‌ಗೆ ಶ್ರೀಲಂಕಾದಿಂದ ಕೌಸಲ್ಯ ಎಂಬ ಕಲಾವಿದೆಯನ್ನು ಕರೆತಂದಿದ್ದಾರೆ.





ಅಂದಹಾಗೆ, ಇದು ಕನ್ನಡ ಚಿತ್ರದಲ್ಲಿ ಶ್ರೀಲಂಕಾ ಮತ್ತು ಪಾಕಿಸ್ತಾನದ ಕಲಾವಿದೆಯರು ನಟಿಸುತ್ತಿರುವುದು ಇದೇ ಮೊದಲ ಬಾರಿ. ಕೊನೆಗೆ 'ಡರ್ಟಿ ಪಿಕ್ಚರ್' ಹೇಗೆ ಮೂಡಿಬರುತ್ತದೋ ಗೊತ್ತಿಲ್ಲ, ಆದರೆ ಇಂತಹ ಸುದ್ದಿಯಿಂದಲೇ ಆ ಸಿನಿಮಾ ಜನರ ಗಮನ ಸೆಳೆಯುತ್ತಿರುವುದು ಮಾತ್ರ ಸುಳ್ಳಲ್ಲ.

ಕೂದಲು, ಮೀಸೆ ಬೋಳಿಸಿದ ಪ್ರೇ[illegible]



'ಲವ್ಲಿ ಸ್ಟಾರ್' ಪ್ರೇಮ್‌ಗೆ ಇಲ್ಲಿಯತನಕ ಅಂತಹ ದೊಡ್ಡ ಯಶಸ್ಸು ಸಿಕ್ಕದೇ ಇರಬ[illegible] ಆದರೆ ಆತ ಒಂದು ಚಿತ್ರಕ್ಕಾಗಿ ತನ್ನನ್ನು ತೊಡಗಿಸಿಕೊಳ್ಳುವ ರೀತಿ ಮಾತ್ರ ನಿಜಕ್ಕೂ ಮೆಚ್ಚುವ[illegible] ಉದಾಹರಣೆಗೆ 'ಶತ್ರು' ಎಂಬ ಚಿತ್ರಕ್ಕಾಗಿ ಪ್ರೇಮ್ ಸುಮಾರು ಆರೇಳು ತಿಂಗಳು [illegible] ಮಾಡಿ, ವ್ಯಾಯಾಮ ಮಾಡಿ, ಬೆವರಿಳಿಸಿಕೊಂಡು ನಿರ್ದೇಶಕ ಆದೇಶಿಸಿದ್ದಂತೆ ಸಿಕ್ಸ್[illegible] ಬಾಡಿಯನ್ನು ಪಡೆದಿದ್ದರು. ಈ ಸಿಕ್ಸ್ ಪ್ಯಾಕ್‌ನಿಂದಾಗಿ ಆ ಸಿನಿಮಾ ಹಿಟ್ ಆಗಲಿಲ್ಲ ಎ[illegible] ಬೇರೆ ಮಾತು.

ಅದೇ ಪ್ರೇಮ್ ಆನಂತರ ರೂಪಾ ಅಯ್ಯರ್ ನಿರ್ದೇಶನದ 'ಚಂದ್ರು' ಚಿತ್ರಕ್ಕಾಗಿ [illegible] ಕಳರಿಪಯಟ್ ಕಲೆಯನ್ನು ತಿಂಗಳಾನುಗಟ್ಟಲೆ ಅಭ್ಯಾಸ ಮಾಡಿದರು. 'ಚಂದ್ರು' [illegible] ಕಳರಿಪಯಟ್ ಹೊಡೆದಾಟದಲ್ಲಿ ಪ್ರೇಮ್ ತುಂಬಾ ಸಹಜವಾಗಿ ನಟಿಸಿದ್ದಾರೆ ಎ[illegible] ಚಿತ್ರತಂಡದವರ ಮೆಚ್ಚುಗೆಯ ಮಾತು.

ಇದೀಗ ಆರ್. ಚಂದ್ರು ನಿರ್ದೇಶನದ 'ಚಾರ್‌ಮಿನಾರ್' ಚಿತ್ರದಲ್ಲಿ ಪಿ.ಯು.ಸಿ ಹುಡುಗನಂತೆ ಕಾಣಿಸುವ ಉದ್ದೇಶದಿಂದ ಪ್ರೇಮ್ ತನ್ನ ಮೈಭಾರವನ್ನು ಇಳಿಸಿಕೊಂಡಿದ್ದಾರೆ. ಅಷ್ಟೇ ಅಲ್ಲ, ಆ ಚಿತ್ರದ ಪಾತ್ರಕ್ಕೆ ಜೀವ ತುಂಬಲು ತನ್ನ ಮಾಮೂಲು ಹೇರ್‌ಸ್ಟೈಲನ್ನು ಬದಲಾಯಿಸಿ ಮೀಸೆಯನ್ನೂ ಸಂಪೂರ್ಣವಾಗಿ ಬೋಳಿಸಿಕೊಂಡಿದ್ದಾರೆ.



ಕನ್ನಡ ಚಿತ್ರರಂಗದಲ್ಲಿ ಇನ್ಸ್‌ಪೆಕ್ಟರ್ ಆದರೂ, ಐಎಎಸ್ ಆಫೀಸರ್ ಆದರೂ, ಮಿಲಿಟರಿ ಆಫೀಸರ್ ಆದರೂ, ಹಳ್ಳಿ ಹೈದನಾದರೂ ತನ್ನ ಹೇರ್‌ಸ್ಟೈಲನ್ನು ಬದಲಾಯಿಸಿಕೊಳ್ಳಲು ಒಪ್ಪಿಕೊಳ್ಳದ ನಾಯಕನಟರ ನಡುವೆ ಪ್ರೇಮ್‌ನ ಶ್ರಮವನ್ನು ಮೆಚ್ಚಲೇಬೇಕು.

ಅದ್ದೂರಿ ಜಗಳ



'ಅದ್ದೂರಿ' ಚಿತ್ರ ಶತದಿನೋತ್ಸವ ಆಚರಿಸಿದರೂ ಆ ಚಿತ್ರತಂಡದಲ್ಲಿ ಯಾವುದೇ ಸಂಭ್ರಮ ಕಾಣಿಸುತ್ತಿಲ್ಲ, ಅದಕ್ಕೆ ಕಾರಣ ನಿರ್ದೇಶಕ ಅರ್ಜುನ್ ಮತ್ತು ನಿರ್ಮಾಪಕ ಶಂಕರ ರೆಡ್ಡಿ ನಡುವೆ ಲಾಭವನ್ನು ಹಂಚಿಕೊಳ್ಳುವ ವಿಷಯದಲ್ಲಿ ಉಂಟಾದ ಭಿನ್ನಾಭಿಪ್ರಾಯ.

"ಈ ಚಿತ್ರದ ಲಾಭದಲ್ಲಿ ನನಗೆ ಪಾಲು ಬರಬೇಕು. ಸುಮಾರು ಒಂದು ಕೋಟಿ ರೂಪಾಯಿಗಳನ್ನು ನೀವು ನನಗೆ ನೀಡಬೇಕು" ಎಂದು ನಿರ್ದೇಶಕ ಅರ್ಜುನ್ ನಿರ್ಮಾಪಕರಿಗೆ ಹೇಳಿದರೆ, "ಅಂತಹ ಪ್ರಶ್ನೆಯೇ ಉದ್ಭವಿಸುವುದಿಲ್ಲ, ನಾನು ಅವರ ನಿರ್ದೇಶನ ಮಾಡಿದ್ದಕ್ಕೆ ಸಂಭಾವನೆಯನ್ನು ನೀಡಿದ್ದೇನೆ. ಈಗ ಲಾಭದಲ್ಲಿ ಪಾಲು ಏಕೆ ನೀಡಬೇಕು?" ಎಂದು ನಿರ್ಮಾಪಕ ಶಂಕರ ರೆಡ್ಡಿ ಮರುಪ್ರಶ್ನೆ ಹಾಕುತ್ತಿದ್ದಾರೆ.

ಈ ಚಿತ್ರ ಆರಂಭವಾದಾಗ ಅವರಿಬ್ಬರ ನಡುವೆ ಏನೇನು ಮಾತುಕತೆ ನಡೆದಿತ್ತು ಎಂಬುದು ಯಾರಿಗೂ ಗೊತ್ತಿಲ್ಲ, ಚಿತ್ರ ಇಷ್ಟೊಂದು ಯಶಸ್ಸನ್ನು ಗಳಿಸುತ್ತದೆ ಎಂದೂ ಯಾರೂ ಭಾವಿ[illegible] ಅಷ್ಟೇ ಏಕೆ, ಇದರ ಚಿತ್ರೀಕರಣ ಸಂದರ್ಭದಲ್ಲಿ ಹಣದ ತೊಂದರೆಯಿಂದಾಗಿ ಅನೇ[illegible] ಚಿತ್ರೀಕರಣ ಅರ್ಧಕ್ಕೇ ನಿಂತುಹೋದದ್ದೂ ಇದೆ. ಅಂತಹ ಚಿತ್ರವನ್ನು ಪ್ರೇಕ್ಷಕ ಮ[illegible] ಗೆಲ್ಲಿಸಿದ್ದರೂ ಅದನ್ನು ಆನಂದಿಸುವ ಸ್ಥಿತಿಯಲ್ಲಿ ಇವರಿಲ್ಲದಿರುವುದು ನಿಜಕ್ಕೂ [illegible] ದುರಂತ. ಇದಕ್ಕೇ ಹೇಳುವುದು 'ಯಶಸ್ಸಿಗೆ ಹ[illegible] ಅಪ್ಪಂದಿರಿರುತ್ತಾರೆ' ಎಂದು.



ಸದ್ಯ ಈ ಸಮಸ್ಯೆಗೆ ರಾಕ್‌ಲೈನ್ ವೆಂ[illegible] ಅವರ ಮಧ್ಯಸ್ಥಿಕೆಯಲ್ಲಿ ಪರಿಹಾರ ಕಂಡುಕ[illegible] ಪ್ರಯತ್ನದ ಬಗ್ಗೆ ಮಾತು ಕೇಳಿಬರುತ್ತಿದೆ. ನಿರ್ದೇಶಕ ಅರ್ಜುನ್ ಅವರ ದುರಾಶೆ[illegible] ಬ್ಲ್ಯಾಕ್‌ಮೇಲ್ ತಂತ್ರವನ್ನು ಉದ್ಯಮದ [illegible] ತೀವ್ರವಾಗಿ ಖಂಡಿಸುತ್ತಿದ್ದಾರೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com